ಒಬಿಸಿ ಪ್ರಭಾವಿ ನಾಯಕ, ಸಚಿವ ಮೌರ್ಯ, ಮೂವರು ಶಾಸಕರು ಸಮಾಜವಾದಿ ಪಕ್ಷಕ್ಕೆ ಸೇರ್ಪಡೆ

# ಉತ್ತರ ಪ್ರದೇಶ: ಬಿಜೆಪಿಗೆ 'ವಲಸೆ' ಬಿಸಿ

• ಸಂಜಯ್ ಪಾಂಡೆ

ಲಖನೌ: ತಿಂಗಳಲ್ಲಿ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಭಾರಿ ಆಘಾತ ಎದುರಾಗಿದೆ. ಹಿರಿಯ ಸಚಿವ ಮತ್ತು ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಪ್ರಭಾವಿ ನಾಯಕ ಸ್ವಾಮಿ ಪ್ರಸಾದ್ ಮೌರ್ಯ ಅವರು ಬಿಜೆಪಿ ತೊರೆದು ಸಮಾಜವಾದಿ ಪಕ್ಷಕ್ಕೆ ಮಂಗಳವಾರ (ಎಸ್‌ಪಿ) ಸೇರಿದ್ದಾರೆ. ಶಾಸಕರಾದ ರೋಶನ್ ಲಾಲ್ ವರ್ಮಾ, ಭಗವತಿ ಸಾಗರ್ ಮತ್ತು ಬ್ರಿಜೇಶ್ ಪ್ರಜಾಪತಿ ಅವರೂ ಬಿಜೆಪಿ ಬಿಟ್ಟು ಎಸ್‌ಪಿ ಸೇರ್ಪಡೆ ಆಗಿದ್ದಾರೆ.

ಮೌರ್ಯ ಅವರ ನಿಕಟವರ್ತಿ ಮೂಲಗಳ ಪ್ರಕಾರ, ಬಿಜೆಪಿಯ ಇನ್ನೂ ಕೆಲವು ಶಾಸಕರು, ಒಬಿಸಿ ಸಮುದಾಯದ ಇಬ್ಬರು ಸಚಿವರು ಬಿಜೆಪಿಗೆ ರಾಜೀನಾಮೆ ನೀಡಿ, ಎಸ್‌ಪಿ ಸೇರಲಿದ್ದಾರೆ.

ರೈತರು, ಯುವ ಜನರು, ದಲಿತರು, ಹಿಂದುಳಿದ ವರ್ಗಗಳು, ಸಣ್ಣ ಮತ್ತು ಮಧ್ಯಮ ವರ್ತಕರ ಬಗ್ಗೆ ಸರ್ಕಾರವು ಹೊಂದಿರುವ ಅಸಡ್ಡೆಯನ್ನು ಖಂಡಿಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾಗಿ ರಾಜ್ಯಪಾಲರಿಗೆ ಕಳುಹಿಸಿರುವ ಪತ್ರದಲ್ಲಿ ಮೌರ್ಯ ಅವರು ಹೇಳಿದ್ದಾರೆ.

ಭಿನ್ನ ಸಿದ್ಧಾಂತ ಇದ್ದಾಗಲೂ ಸಚಿವ ಸ್ಥಾನದಲ್ಲಿ ಮುಂದುವರಿದಿದ್ದಾಗಿ ಅವರು ಹೇಳಿದ್ದಾರೆ. ಆದರೆ, ದಲಿತರು ಒಬಿಸಿ, ಯುವ ಜರನು ಮತ್ತು ಸಣ್ಣ ವರ್ತಕರ ಸಂಕಷ್ಟವನ್ನು ತಮಗೆ ನೋಡಲಾಗುತ್ತಿಲ್ಲ ಎಂದಿದ್ದಾರೆ. ಅವರು ಕಾರ್ಮಿಕ ಸಚಿವ-



ಉತ್ತರ ಪ್ರದೇಶದ ಮಾಜಿ ಸಚಿವ ಸ್ವಾಮಿ ಪ್ರಸಾದ್ ಮೌರ್ಯ ಅವರು ಅಖಿಲೇಶ್ ಯಾದವ್ ಅವರ ಸಮ್ಮುಖದಲ್ಲಿ ಎಸ್‌ಪಿ ಸೇರಿದರು

ರಾಗಿದ್ದರು.

ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಮೌರ್ಯ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಮೌರ್ಯ ಅವರು ಜನಪ್ರಿಯ ನಾಯಕ. ಸಾಮಾಜಿಕ ನ್ಯಾಯ ಮತ್ತು ಸಮಾನತೆಗಾಗಿ ಅವರು ಸದಾ ಹೋರಾಡಿದ್ದಾರೆ. ಸಾಮಾಜಿಕ ನ್ಯಾಯವು ಗೆಲ್ಲಲಿದೆ. 2022ನೇ ವರ್ಷವು ಬದಲಾವಣೆಗೆ ಸಾಕ್ಷಿಯಾಗಲಿದೆ ಎಂದು ಅಖಿಲೇಶ್ ಹೇಳಿದ್ದಾರೆ.

ಉತ್ತರ ಪ್ರದೇಶದ ಪೂರ್ವಾಂಚಲ ಪ್ರದೇಶದ ಒಬಿಸಿ ಸಮುದಾಯದಲ್ಲಿ ಮೌರ್ಯ ಅವರು ಪ್ರಭಾವಿ. ಹಲವು ಬಾರಿ ಅವರು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಅವರ ಮಗಳು ಸಂಘಮಿತ್ರ ಮೌರ್ಯ ಅವರು ಬದಾಯೂಂ ಕ್ಷೇತ್ರದ ಬಿಜೆಪಿ ಸಂಸದೆ.

ಇನ್ನೇನು ಚುನಾವಣೆ ನಡೆಯಲಿದೆ ಎಂಬ ಸಂದರ್ಭದಲ್ಲಿ ಮೌರ್ಯ ಅವರು ಪಕ್ಷ ಬಿಟ್ಟಿದ್ದು ಬಿಜೆಪಿಗೆ ದೊಡ್ಡ ನಷ್ಟ. 2017ರ ಫಲಿತಾಂಶವನ್ನು ಪುನರಾವರ್ತಿಸಬೇಕು ಎಂದು ಬಿಜೆಪಿ ಬಯಸುತ್ತಿದೆ. ಪೂರ್ವಾಂಚಲದ 156 ಕ್ಷೇತ್ರಗಳ ಪೈಕಿ 115ರಲ್ಲಿ ಬಿಜೆಪಿ ಕಳೆದ ಬಾರಿ ಗೆದ್ದಿತ್ತು. ಆದರೆ, ಮೌರ್ಯ ಅವರಂತಹ ಪ್ರಭಾವಿ ನಾಯಕನ ಅನುಪಸ್ಥಿತಿಯಲ್ಲಿ ಕಳೆದ ಬಾರಿಯ ಫಲಿತಾಂಶ ಮರುಕಳಿಸುವಂತೆ ಮಾಡುವುದು ಸುಲಭವಲ್ಲ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಕಾರ್ಯಶೈಲಿಯ ಬಗ್ಗೆ ಮೌರ್ಯ ಅವರು ಈ ಹಿಂದೆಯೂ ಹಲವು ಬಾರಿ ಅಸಮಾಧಾನ ವ್ಯಕ್ತಪಡಿಸಿದ್ದರು ಎಂದು ಮೂಲಗಳು ಹೇಳಿವೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿ ಬಿಜೆಪಿಯ ಹಲವು ನಾಯಕರಿಗೆ ಮೌರ್ಯ ಅವರು ತಮ್ಮ ಅಸಮಾಧಾನವನ್ನು ತಿಳಿಸಿದ್ದರು. ದರೆ, ಅದನ್ನು ಪಕ್ಷದ ನಾಯಕರು ನಿರ್ಲಕ್ಷಿಸಿದ್ದರು ಎನ್ನಲಾಗಿದೆ.

10ರಿಂದ 12 ಶಾಸಕರು ಎಸ್‌ಪಿಗೆ ಸೇರಲಿದ್ದಾರೆ ಎಂದು ಮೌರ್ಯ ಅವರು ಹೇಳಿದ್ದಾರೆ.

## ಅಖಿಲೇಶ್ ಕಾರ್ಯತಂತ್ರಕ್ಕೆ ಗೆಲುವು

ಎಸ್‌ಪಿಯ ಬೆಂಬಲ ನೆಲೆಯನ್ನು ವಿಸ್ತರಿಸಲು ಅಖಿಲೇಶ್ ಅವರು ಯತ್ನಿಸುತ್ತಿದ್ದಾರೆ. ಯಾದವ ಮತ್ತು ಮುಸ್ಲಿಂ ಸಮುದಾಯದ ಬೆಂಬಲ ಮಾತ್ರ ಎಸ್‌ಪಿಗೆ ಇದೆ ಎಂಬ ಭಾವನೆ ಜನರಲ್ಲಿ ಇದೆ. ಅದನ್ನು ಬದಲಿಸುವುದು ಅಖಿಲೇಶ್ ಅವರ ಗುರಿ. ಅದಕ್ಕಾಗಿ ಅವರು ಯಾದವೇತರ ಇತರ ಹಿಂದುಳಿದ ವರ್ಗಗಳ ನಾಯಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಕಾರ್ಯತಂತ್ರ ಅನುಸರಿಸುತ್ತಿದ್ದಾರೆ. ಈ ಕಾರ್ಯತಂತ್ರದಲ್ಲಿ ಅವರಿಗೆ ಗಮನಾರ್ಹವಾದ ಗೆಲುವು ಸಿಕ್ಕಿದೆ.

ಸುಹೇಲ್‌ದೇವ್ ಭಾರತೀಯ ಸಮಾಜ ಪಾರ್ಟಿಯ ಅಧ್ಯಕ್ಷ ಓಂ ಪ್ರಕಾಶ್ ರಾಜ್‌ಭರ್ ಅವರು ಅಖಿಲೇಶ್ ಜತೆಗೆ ಮೈತ್ರಿ ಮಾಡಿಕೊಂಡಿದ್ದಾರೆ. ರಾಜ್‌ಭರ್ ಅವರು ಉತ್ತರ ಪ್ರದೇಶದ ಪೂರ್ವ ಭಾಗದಲ್ಲಿ ಪ್ರಭಾವಿಯಾಗಿದ್ದಾರೆ. ರಾಜ್‌ಭರ್ ಅವರು ಈ ಹಿಂದೆ ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಂಡಿದ್ದರು.

'ಇದು (ಮೌರ್ಯ ಅವರ ರಾಜೀನಾಮೆ) ಪಕ್ಷಕ್ಕೆ ದೊಡ್ಡ ಹಿನ್ನಡೆ. ಮೌರ್ಯ ಅವರು ಒಬಿಸಿಯ ಪ್ರಭಾವಿ ನಾಯಕ. ರಾಜ್ಯದ ಪೂರ್ವ ಭಾಗದ ಹಲವು ಕ್ಷೇತ್ರಗಳಲ್ಲಿ ಫಲಿತಾಂಶದ ಮೇಲೆ ಪರಿಣಾಮ ಬೀರಲಿದೆ' ಎಂದು ಬಿಜೆಪಿಯ ಹಿರಿಯ ಮುಖಂಡರೊಬ್ಬರು ಹೇಳಿದ್ದಾರೆ.

## ಅತೃಪ್ತಿ ಶಮನಕ್ಕೆ ಯತ್ನ

ಒಬಿಸಿ ಮುಖಂಡರಲ್ಲಿ ಹಲವರು ಪಕ್ಷ ತೊರೆದಿರುವುದು ಬಿಜೆಪಿಯ ಕಳವಳಕ್ಕೆ ಕಾರಣವಾಗಿದೆ. ಹಾಗಾಗಿ 'ಅತೃಪ್ತ' ಶಾಸಕರ ಮನವೊಲಿಸುವ ಕೆಲಸಕ್ಕೆ ಬಿಜೆಪಿ ಮುಂದಾಗಿದೆ. ಅದಕ್ಕಾಗಿ ಹಿರಿಯ ಮುಖಂಡರನ್ನು ನಿಯೋಜಿಸಲಾಗಿದೆ. ಸ್ವಾಮಿ ಪ್ರಸಾದ್ ಮೌರ್ಯ ಅವರನ್ನು ಪಕ್ಷಕ್ಕೆ ಮರಳಿ ಕರೆತರುವ ಪ್ರಯತ್ನವೂ ನಡೆದಿದೆ.

'ಯಾವುದೇ ನಿರ್ಧಾರವನ್ನು ಆತುರದಲ್ಲಿ ತೆಗೆದುಕೊಳ್ಳಬೇಡಿ. ಎಲ್ಲ ವಿಚಾರಗಳ ಬಗ್ಗೆ ಕುಳಿತು ಮಾತನಾಡೋಣ' ಎಂದು ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರು ಸ್ವಾಮಿ ಪ್ರಸಾದ್ ಮೌರ್ಯ ರಾಜೀನಾಮೆಯ ಬಳಿಕ ಟ್ವೀಟ್ ಮಾಡಿದ್ದರು.

ಆದರೆ, ಸ್ವಾಮಿ ಪ್ರಸಾದ್ ಮೌರ್ಯ ಅವರು ತಿರುಗೇಟು ನೀಡಿದ್ದಾರೆ. 'ಅವರು ಏಕೆ ಈ ಹಿಂದೆಯೇ ಮಾತನಾಡಲು ಬರಲಿಲ್ಲ. ಹಲವು ಬಾರಿ ಸಮಸ್ಯೆಗಳನ್ನು ಪ್ರಸ್ತಾಪಿಸಿದ್ದೇನೆ. ಆಗ ಅವರು ನಿರ್ಲಕ್ಷಿಸಿದ್ದರು' ಎಂದು ಹೇಳಿದ್ದಾರೆ.

ಹಲವು ಶಾಸಕರ ರಾಜೀನಾಮೆಯು ಬಿಜೆಪಿಗೆ ಮಾತ್ರವಲ್ಲ, ವಿರೋಧ ಪಕ್ಷಗಳಿಗೂ ಅಚ್ಚರಿ ಉಂಟು ಮಾಡಿದೆ.

ಶಾಸಕರು ಮತ್ತು ಸಚಿವರ ಅತೃಪ್ತಿ ಹೋಗಲಾಡಿಸುವ ಹೊಣೆಯನ್ನು ಕೇಶವ ಪ್ರಸಾದ್ ಮೌರ್ಯ ಮತ್ತು ಪಕ್ಷದ ಮುಖಂಡ ಸುನಿಲ್ ಬನ್ಸಲ್ ಅವರಿಗೆ ಬಿಜೆಪಿ ವಹಿಸಿದೆ. ಯೋಗಿ ಅವರ ಆಡಳಿತ ಶೈಲಿಯ ಬಗ್ಗೆ ಕೆಲವು ಶಾಸಕರು ಮತ್ತು ಸಚಿವರು ಕೆಲವು ತಿಂಗಳ ಹಿಂದೆ ಅಸಮಾಧಾನ ವ್ಯಕ್ತಪಡಿಸಿದ್ದರು. ಮುಖ್ಯಮಂತ್ರಿ ಬದಲಾವಣೆಯ ಮಾತೂ ಕೇಳಿ ಬಂದಿತ್ತು. ಆದರೆ, ಅದು ಕಾರ್ಯರೂಪಕ್ಕೆ ಬರಲಿಲ್ಲ.

## ನುಡಿ-ಕಿಡಿ



ಚುನಾವಣೆಗೋಸ್ಕರ ಉತ್ತರ ಪ್ರದೇಶದಲ್ಲಿ ಕೋಮು ಧ್ರುವೀಕರಣ ಮಾಡುತ್ತಿರುವವರಿಗೆ ಜನರು ಮತದಾನದ ಮೂಲಕ ಸರಿಯಾದ ಪಾಠ ಕಲಿಸಲಿದ್ದಾರೆ

**ಶರದ್ ಪವಾರ್,** ಎನ್‌ಸಿಪಿ ಮುಖ್ಯಸ್ಥ



ಎಎಪಿಯ ಉಚಿತ ವಿದ್ಯುತ್ ಕಾರ್ಯಕ್ರಮವನ್ನು ತುಚ್ಛವಾಗಿ ಟೀಕಿಸಲಾಗುತ್ತಿದೆ. ಆದರೆ ಇದು ಆರ್ಥಿಕತೆಗೆ ಮರುಚಾಲನೆ ನೀಡುವ ಬಹುದೊಡ್ಡ ಸಾಧನ

**ಅಕ್ಷಯ್ ಮರಾಠೆ,** ಎಎಪಿ ವಕ್ತಾರ



ಈ ಬಾರಿ ಎಲ್ಲಾ ಶೋಷಿತರು, ಶ್ರಮಿಕರು, ವಂಚಿತರು ಒಟ್ಟಾಗಲಿದ್ದಾರೆ. ಎಲ್ಲರನ್ನೂ ಅವಮಾನಿಸುವ ಬಿಜೆಪಿಯ ರಾಜನೀತಿಯ ಬದಲಿಗೆ, ಎಲ್ಲರಿಗೂ ಸಮಾನ ಗೌರವ ಸಲ್ಲಿಸುವ ರಾಜನೀತಿಗೆ ಜನರು ಮಣೆ ಹಾಕಲಿದ್ದಾರೆ. ಬಿಜೆಪಿಗೆ ಐತಿಹಾಸಿಕ ಸೋಲಾಗಲಿದೆ

**ಅಖಿಲೇಶ್ ಯಾದವ್,** ಸಮಾಜವಾದಿ ಪಕ್ಷದ ಮುಖ್ಯಸ್ಥ

## ಚುನಾವಣಾ ಕಣದಲ್ಲಿ

- ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷದ ಜತೆಗೆ ಎನ್‌ಸಿಪಿ ಮೈತ್ರಿ ಮಾಡಿಕೊಳ್ಳಲಿದೆ ಎಂದು ಪಕ್ಷದ ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ. ಮಣಿಪುರದಲ್ಲಿ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಳ್ಳಲು ಮಾತುಕತೆ ನಡೆಯುತ್ತಿದೆ. ಗೋವಾದಲ್ಲಿ ಕಾಂಗ್ರೆಸ್ ಅಥವಾ ಟಿಎಂಸಿ ಜತೆಗೆ ಮೈತ್ರಿಯ ಮಾತುಕತೆ ನಡೆಯಲಿದೆ ಎಂದು ಅವರು ಹೇಳಿದ್ದಾರೆ
- ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಸ್ಪರ್ಧಿಸುವುದಿಲ್ಲ. ಐದು ರಾಜ್ಯಗಳಲ್ಲಿ ಪಕ್ಷವು ಕಣಕ್ಕೆ ಇಳಿಯಲಿದೆ. ಆ ಚುನಾವಣೆಗಳತ್ತ ಗಮನ ನೀಡುವ ಸಲುವಾಗಿ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಮಿಶ್ರಾ ಹೇಳಿದ್ದಾರೆ
- ವಿದೇಶ ಪ್ರವಾಸದಿಂದ ವಾಪಸಾಗಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ಸೋಮವಾರ ತಡರಾತ್ರಿ ಗೋವಾ ಕಾಂಗ್ರೆಸ್ ನಾಯಕರ ಜತೆ ಸಭೆ ನಡೆಸಿದ್ದಾರೆ. ಚುನಾವಣೆಗೆ ರಾಜ್ಯದಲ್ಲಿ ಪಕ್ಷದ ಸಿದ್ಧತೆ ಮತ್ತು ತಂತ್ರಗಾರಿಕೆ ಬಗ್ಗೆ ಅವರು ಚರ್ಚಿಸಿದ್ದಾರೆ ಎಂದು ಮೂಲಗಳು ಹೇಳಿವೆ
- ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರ ಪಂಜಾಬ್ ಲೋಕ ಕಾಂಗ್ರೆಸ್‌ಗೆ ಚುನಾವಣಾ ಆಯೋಗವು ಚಿಹ್ನೆಯನ್ನು ನೀಡಿದೆ. ಹಾಕಿಸ್ಟಿಕ್ ಮತ್ತು ಹಾಕಿ ಚೆಂಡಿನ ಚಿತ್ರವಿರುವ ಚಿಹ್ನೆಯೊಂದಿಗೆ ಪಕ್ಷವು ಚುನಾವಣೆ ಎದುರಿಸಲಿದೆ

# ನೂರಕ್ಕೂ ಹೆಚ್ಚು ಬಿಜೆಪಿ ಶಾಸಕರಿಗೆ ಟಿಕೆಟ್ ಇಲ್ಲ?

ಲಖನೌ: ಉತ್ತರ ಪ್ರದೇಶ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಹಾಲಿ ಶಾಸಕರ ಪೈಕಿ ಶೇ 25ಕ್ಕೂ ಹೆಚ್ಚು ಮಂದಿಗೆ ಬಿಜೆಪಿ ಟಿಕೆಟ್ ನಿರಾಕರಿಸುವ ಸಾಧ್ಯತೆ ಇದೆ. ಆಡಳಿತ ವಿರೋಧಿ ಅಲೆ ಮತ್ತು ತಳಮಟ್ಟದ ಕಾರ್ಯಕರ್ತರು ಕೊಟ್ಟ ನಕಾರಾತ್ಮಕ ಮಾಹಿತಿಯ ಆಧಾರದಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮೊದಲ ಎರಡು ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಕೆಲವೇ ದಿನಗಳಲ್ಲಿ ಅಂತಿಮಗೊಳಿಸಲಿದೆ. ಬಿಜೆಪಿಯ ಚುನಾವಣಾ ಸಮಿತಿಯ ಸಭೆಯು ಸೋಮವಾರ ಸಂಜೆ ನಡೆದಿದೆ. ಮೊದಲ ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿರುವ ಕ್ಷೇತ್ರಗಳ ಅಭ್ಯರ್ಥಿಗಳ ಬಗ್ಗೆ ಚರ್ಚೆ ನಡೆದಿದೆ.

'ರಾಜ್ಯ ಚುನಾವಣಾ ಸಮಿತಿಯು ಶಿಫಾರಸು ಮಾಡಿದ ಹೆಸರುಗಳನ್ನು ಪಕ್ಷದ ವರಿಷ್ಠರಿಗೆ ಕಳುಹಿಸಲಾಗುವುದು. ವರಿಷ್ಠರೇ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದು ಬಿಜೆಪಿಯ ಮುಖಂಡರೊಬ್ಬರು ತಿಳಿಸಿದ್ದಾರೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ರಾಜ್ಯದ ಹಿರಿಯ ಮುಖಂಡರು ಪಕ್ಷದ ವರಿಷ್ಠರ ಜತೆಗೆ ದೆಹಲಿಯಲ್ಲಿ ಸಭೆ ನಡೆಸಿ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಲಿದ್ದಾರೆ. ಅಭ್ಯರ್ಥಿಗಳ ಮೊದಲ ಪಟ್ಟಿಯು ಈ ವಾರದಲ್ಲಿಯೇ ಪ್ರಕಟವಾಗುವ ನಿರೀಕ್ಷೆ ಇದೆ.

'ಹಾಲಿ ಶಾಸಕರಲ್ಲಿ ನೂರಕ್ಕೂ ಹೆಚ್ಚು ಮಂದಿಗೆ ಟಿಕೆಟ್ ಸಿಗುವ ಸಾಧ್ಯತೆ ಇಲ್ಲ. ವಿವಿಧ ಕ್ಷೇತ್ರಗಳ ಕಾರ್ಯಕರ್ತರಿಂದ ಮಾಹಿತಿ ಪಡೆದುಕೊಳ್ಳಲಾಗಿದೆ. ನೂರಕ್ಕೂ ಹೆಚ್ಚು ಶಾಸಕರ ಬಗ್ಗೆ ಒಳ್ಳೆಯ ಅಭಿಪ್ರಾಯ ವ್ಯಕ್ತವಾಗಿಲ್ಲ. ಅವರಿಗೆ ಟಿಕೆಟ್ ಸಿಗದೇ ಇರಬಹುದು' ಎಂದು ಟಿಕೆಟ್ ಹಂಚಿಕೆಯ ಬಗ್ಗೆ ಮಾಹಿತಿ ಇರುವ ಮುಖಂಡರೊಬ್ಬರು ತಿಳಿಸಿದ್ದಾರೆ.

ಟಿಕೆಟ್ ನಿರಾಕರಿಸಿದರೆ ಹಲವು ಶಾಸಕರು ಪಕ್ಷ ತೊರೆದು ಬೇರೆ ಪಕ್ಷಕ್ಕೆ ಸೇರ್ಪಡೆ ಆಗಬಹುದು ಎಂಬ ಬಗ್ಗೆಯೂ ಬಿಜೆಪಿಯಲ್ಲಿ ಕಳವಳ ಇದೆ. ಬಿಜೆಪಿಯ 25ಕ್ಕೂ ಹೆಚ್ಚು ಶಾಸಕರು ಸಂಪರ್ಕದಲ್ಲಿದ್ದಾರೆ ಎಂದು ಸಮಾಜವಾದಿ ಪಕ್ಷವು (ಎಸ್‌ಪಿ) ಮಂಗಳವಾರ ಹೇಳಿಕೊಂಡಿದೆ. 'ಹಲವು ಶಾಸಕರು ಸಂಪರ್ಕಿಸಿದ್ದಾರೆ. ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕೇಳಿದ್ದಾರೆ. ಪಕ್ಷದ ನಾಯಕತ್ವವು ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲಿದೆ' ಎಂದು ಎಸ್‌ಪಿ ಮುಖಂಡರೊಬ್ಬರು ಹೇಳಿದ್ದಾರೆ.

## ಶೇ 80ರ ವಿರುದ್ಧ ಶೇ 20: ಯೋಗಿ ಹೇಳಿಕೆಗೆ ಪ್ರಿಯಾಂಕಾ ಖಂಡನೆ

ನವದೆಹಲಿ (ಪಿಟಿಐ): ಈ ಚುನಾವಣೆಯು ಶೇ 80ರ ವಿರುದ್ಧ ಶೇ 20ರ ಹೋರಾಟ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಖಂಡಿಸಿದ್ದಾರೆ.

ವಾಸ್ತವ ಏನೆಂದರೆ, ಬಿಜೆಪಿ ಆಳ್ವಿಕೆಯಲ್ಲಿ ನೂರರಲ್ಲಿ 68 ಮಂದಿಗೆ ಉದ್ಯೋಗ ಇಲ್ಲ. ಹಾಗಾಗಿ ಯುವ ಜನರು ಈ ವಿಚಾರಗಳನ್ನು ಮುಂದಿಟ್ಟುಕೊಂಡೇ ಮತ ಚಲಾಯಿಸಬೇಕು ಎಂದು ಪ್ರಿಯಾಂಕಾ ಹೇಳಿದ್ಧಾರೆ.

ಶೇ 80ರ ವಿರುದ್ಧ ಶೇ 20ರ ಹೋರಾಟ ಎಂದು ಯೋಗಿ ಅವರು ಹೇಳಿದ್ದನ್ನು ವಿರೋಧ ಪಕ್ಷಗಳ ಹಲವು ಮುಖಂಡರು ಟೀಕಿಸಿದ್ದಾರೆ.

## ಮನೆ ಮನೆ ಭೇಟಿಗೆ ಬಿಜೆಪಿ ಚಾಲನೆ

ಲಖನೌ (ಪಿಟಿಐ): ರ‍್ಯಾಲಿ ಮತ್ತು ಸಾರ್ವಜನಿಕ ಸಮಾವೇಶ ಏರ್ಪಡಿಸುವುದಕ್ಕೆ ಚುನಾವಣಾ ಆಯೋಗವು ನಿಷೇಧ ಹೇರಿದೆ. ಹಾಗಾಗಿ, ಉತ್ತರ ಪ್ರದೇಶದಲ್ಲಿ ಚುನಾವಣಾ ಪ್ರಚಾರಕ್ಕೆ ಮನೆ ಮನೆ ಭೇಟಿ ಅಭಿಯಾನಕ್ಕೆ ಬಿಜೆಪಿ ಚಾಲನೆ ನೀಡಿದೆ.

ಉತ್ತರ ಪ್ರದೇಶ ಬಿಜೆಪಿ ಘಟಕದ ಅಧ್ಯಕ್ಷ ಸ್ವತಂತ್ರ ದೇವ್ ಸಿಂಗ್ ಅವರು ಬಲ್ಲು ಅಡ್ಡಾ ಪ್ರದೇಶದ ಮನೆಗಳಿಗೆ ಭೇಟಿ ನೀಡಿ ಅಭಿಯಾನವನ್ನು ಉದ್ಘಾಟಿಸಿದರು. ಅವರು ಮನೆಗಳ ಹೊರಗೆ ಸ್ಟಿಕರ್ ಅಂಟಿಸಿದರು. ಕೆಲವರ ಹಣೆಗೆ ತಿಲಕ ಇರಿಸಿದರು.

'ಆಕಾಂಕ್ಷೆಗಳನ್ನು ಈಡೇರಿಸಲಾಗಿದೆ, ಅಭಿವೃದ್ಧಿಯು ಮನೆ ಮನೆಗೂ ತಲುಪಿದೆ' ಎಂದು ಸ್ಟಿಕರ್‌ನಲ್ಲಿ ಮುದ್ರಿಸಲಾಗಿದೆ.

'ಚುನಾವಣಾ ಆಯೋಗದ ಮಾರ್ಗಸೂಚಿಯನ್ನು ಅನುಸರಿಸುತ್ತಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಭೇಟಿ ಮಾಡುತ್ತಿದ್ದೇವೆ. ಪ್ರಗತಿ ವರದಿಯನ್ನು ಜನರ ಮುಂದೆ ಇರಿಸುತ್ತಿದ್ದೇವೆ. ಜನರ ಸಲಹೆಗಳನ್ನೂ ಪಡೆದುಕೊಳ್ಳುತ್ತಿದ್ದೇವೆ. ಮನೆ ಮನೆಗೆ ಹೋಗುತ್ತಿರುವ ಮೊದಲ ಸರ್ಕಾರ ನಮ್ಮದು' ಎಂದು ಸಿಂಗ್ ಹೇಳಿದ್ದಾರೆ.

ಎಲ್ಲ 403 ಕ್ಷೇತ್ರಗಳಲ್ಲಿಯೂ ಅಭಿಯಾನ ಆರಂಭವಾಗಿದೆ. ಸಚಿವರು, ಶಾಸಕರು ಭಾಗಿಯಾಗಿದ್ದಾರೆ ಎಂದು ಬಿಜೆಪಿ ವಕ್ತಾರ ರಾಕೇಶ್ ತ್ರಿಪಾಠಿ ಹೇಳಿದ್ದಾರೆ.

# 'ಸಿ.ಎಂ ಯಾರಾಗಬೇಕು ಎಂಬುದನ್ನು ಪಂಜಾಬ್ ಜನ ನಿರ್ಧರಿಸಲಿದ್ದಾರೆ'

ಚಂಡೀಗಡ (ಪಿಟಿಐ): 'ಪಂಜಾಬ್‌ನ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಪಂಜಾಬ್ ಜನರೇ ನಿರ್ಧರಿಸಲಿದ್ದಾರೆ. ಹೈಕಮಾಂಡ್ ಅಲ್ಲ' ಎಂದು ಕಾಂಗ್ರೆಸ್ ಪಂಜಾಬ್ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಹೇಳಿದ್ದಾರೆ.

ಇಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಅವರು ಈ ಮಾತು ಹೇಳಿದ್ದಾರೆ. ಕಾಂಗ್ರೆಸ್‌ನಿಂದ ಯಾರು ಮುಖ್ಯಮಂತ್ರಿಯಾಗುತ್ತಾರೆ ಎಂಬುದಬನ್ನು ಹೈಕಮಾಂಡ್ ನಿರ್ಧರಿಸುತ್ತದೆಯೇ ಎಂದು ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಅವರು ಈ ರೀತಿ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

'ಪಂಜಾಬ್‌ನ ಮುಖ್ಯಮಂತ್ರಿಯನ್ನು ಹೈಕಮಾಂಡ್ ನಿರ್ಧರಿಸುತ್ತದೆ ಎಂದು ನಿಮಗೆ ಯಾರು ಹೇಳಿದ್ದು? ಅಂತಹ ತಪ್ಪು ಕಲ್ಪನೆಗಳನ್ನೆಲ್ಲಾ ಇಟ್ಟುಕೊಳ್ಳಬೇಡಿ. ಪಂಜಾಬ್‌ನ ಜನರು ಶಾಸಕರನ್ನು ಆಯ್ಕೆ ಮಾಡುತ್ತಾರೆ. ಹಾಗೇ ಮುಖ್ಯಮಂತ್ರಿಯನ್ನೂ ಆಯ್ಕೆ ಮಾಡುತ್ತಾರೆ. ಆ ಅಧಿಕಾರ ಇರುವುದು ಜನರಿಗೆ ಮಾತ್ರ' ಎಂದು ಅವರು ಹೇಳಿದ್ದಾರೆ.



ಚಂಡೀಗಡದಲ್ಲಿ ನಡೆದ ಮಾಧ್ಯಮ ಗೋಷ್ಠಿಯಲ್ಲಿ ಸಿಧು

**ಕಾಂಗ್ರೆಸ್ ಪ್ರಣಾಳಿಕೆ, ಪ್ರಚಾರ ಸಮಿತಿ ರಚನೆ:** ಪಂಜಾಬ್ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪ್ರಚಾರ ಸಮಿತಿ ಮತ್ತು ಪ್ರಣಾಳಿಕೆ ಸಮಿತಿಯನ್ನು ರಚಿಸಿದೆ. ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ಸಮಿತಿಗಳನ್ನು ರಚಿಸಲಾಗಿದೆ.

20 ಸದಸ್ಯರಿರುವ ಪ್ರಣಾಳಿಕೆ ಸಮಿತಿಯ ನೇತೃತ್ವವನ್ನು ಪಕ್ಷದ ಸಂಸದ ಪ್ರತಾಪ್ ಸಿಂಗ್ ಬಾಜ್ವಾ ಅವರಿಗೆ ವಹಿಸಲಾಗಿದೆ. ಮನಪ್ರೀತ್ ಬಾದಲ್ ಅವರನ್ನು ಸಮಿತಿಯ ಉಪಾಧ್ಯಕ್ಷ ಮತ್ತು ಅಮರ್ ಸಿಂಗ್ ಅವರನ್ನು ಸಮನ್ವಯಕಾರನನ್ನಾಗಿ ನೇಮಕ ಮಾಡಲಾಗಿದೆ. ಉಪಮುಖ್ಯಮಂತ್ರಿ ಒ.ಪಿ ಸೋನಿ, ರಾಣಾ ಗುರ್ಜೀತ್, ಜೈವೀರ್ ಶೇರ್ಗಿಲ್ ಈ ಸಮಿತಿಯಲ್ಲಿ ಇದ್ದಾರೆ.

ಪ್ರಣಾಳಿಕೆ ಸಮಿತಿಗೆ 25 ಜನರನ್ನು ನೇಮಕ ಮಾಡಲಾಗಿದೆ. ಪಕ್ಷದ ಹಿರಿಯ ನಾಯಕ ಸುನಿಲ್ ಜಾಖಡ್ ಈ ಸಮಿತಿಯನ್ನು ಮುನ್ನಡೆಸಲಿದ್ದಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು, ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಈ ಎರಡೂ ಸಮಿತಿಗಳ ಶಾಶ್ವತ ಆಹ್ವಾನಿತರಾಗಿ ಕೆಲಸ ಮಾಡಲಿದ್ದಾರೆ.

## ಗೋವಾ: ಸಚಿವ ಗೌಡೆ ಬಿಜೆಪಿಗೆ

ಪಣಜಿ (ಪಿಟಿಐ): ಗೋವಾ ಸಚಿವ ಮತ್ತು ಪಕ್ಷೇತರ ಶಾಸಕ ಗೋವಿಂದ್ ಗೌಡೆ ಅವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿಗೆ ಸೇರಿದ್ದಾರೆ. ಪ್ರಿಯೋಳ್ ಕ್ಷೇತ್ರದಿಂದ ಅವರು 2017ರಲ್ಲಿ ಗೆದ್ದಿದ್ದರು. 2017ರಲ್ಲಿ ಅವರು ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಬೆಂಬಲ ನೀಡಿದ್ದರು.

'ಬಿಜೆಪಿ ಆಹ್ವಾನ ಗೌರವಿಸಿ ಪಕ್ಷಕ್ಕೆ ಸೇರುತ್ತಿದ್ದೇನೆ. ಈ ಪಕ್ಷದ ಜತೆಗೆ ನಾನು ಐದು ವರ್ಷಗಳಿಂದ ಇದ್ದೇನೆ. ಬಿಜೆಪಿ ಜತೆಗೆ ನಿಕಟವಾಗಿ ಕೆಲಸ ಮಾಡಿದ್ದೇನೆ' ಎಂದು ಗೌಡೆ ಹೇಳಿದ್ದಾರೆ.

ಶಾಸಕರಾಗಿದ್ದ ರವಿ ನಾಯಕ್ (ಕಾಂಗ್ರೆಸ್), ಜಯೇಶ್ ಸಲಗಾಂವ್ಕರ್ (ಗೋವಾ ಫಾರ್ವರ್ಡ್ ಪಾರ್ಟಿ) ಮತ್ತು ರೋಹನ್ ಖೌಂಟೆ (ಪಕ್ಷೇತರ) ಅವರು ಬಿಜೆಪಿಗೆ ಕಳೆದ ತಿಂಗಳು ಸೇರಿದ್ದಾರೆ.

## ಟಿಎಂಸಿ–ಎಂಜಿಪಿ ಮೈತ್ರಿಕೂಟದ ಘೋಷಣೆ

# 'ಮೂಲ ಗೋವನ್ನರಿಗೆ ಮನೆ, ಹಕ್ಕುಪತ್ರ'

ಪ್ರಜಾವಾಣಿ ವಾರ್ತೆ

ಪಣಜಿ: ಗೋವಾ ವಿಧಾನಸಭಾ ಚುನಾವಣೆಯ ಪ್ರಣಾಳಿಕೆಗೆ ಟಿಎಂಸಿ ಮತ್ತು ಎಂಜಿಪಿ ಮೈತ್ರಿಕೂಟವು ಮತ್ತಷ್ಟು ಜನಪ್ರಿಯ ಕಾರ್ಯಕ್ರಮಗಳನ್ನು ಸೇರಿಸಿದೆ. 'ಪಕ್ಕಾ ಮನೆಯಿಲ್ಲದ ಗೋವಾದ ಮೂಲ ನಿವಾಸಿ ಕುಟುಂಬಗಳಿಗೆ 50,000 ಮನೆಗಳನ್ನು ಸಹಾಯಧನದ ಮೂಲಕ ನೀಡಲಾಗುತ್ತದೆ. ಅಲ್ಲದೆ ಗೋವಾದ ಮೂಲ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ವಿತರಿಸಲಾಗುತ್ತದೆ' ಎಂದು ಮೈತ್ರಿಕೂಟವು ಘೋಷಿಸಿದೆ.

'ನಮ್ಮ ಮೈತ್ರಿಕೂಟವು ಅಧಿಕಾರಕ್ಕೆ ಬಂದ 250 ದಿನಗಳ ಒಳಗೆ ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತೇವೆ. ಇದರಿಂದ ರಾಜ್ಯದ 2.1 ಲಕ್ಷ ಕುಟುಂಬಗಳಿಗೆ ಪ್ರಯೋಜನ ಸಿಗಲಿದೆ. ರಾಜ್ಯದ ಒಟ್ಟು ಜನಸಂಖ್ಯೆಯ ಶೇ 60ರಷ್ಟು ಜನರಿಗೆ ಯೋಜನೆಯ ಲಾಭ ದೊರೆಯಲಿದೆ. ಆದರೆ ರಾಜ್ಯ ಬಜೆಟ್‌ನಲ್ಲಿ ಈ ಯೋಜನೆಯ ವೆಚ್ಚದ ಪ್ರಮಾಣ ಶೇ 0.6ರಷ್ಟು ಮಾತ್ರ' ಎಂದು ಮೈತ್ರಿಕೂಟವು ವಿವರಿಸಿದೆ.

'ಮೈತ್ರಿಕೂಟವು ಘೋಷಿಸಿರುವ ವಿವಿಧ ಜನಪ್ರಿಯ ಯೋಜನೆಗಳಿಂದ ಸರ್ಕಾರಕ್ಕೆ ಹೆಚ್ಚಿನ ಹೊರೆಯೇನೂ ಆಗುವುದಿಲ್ಲ. ಕುಟುಂಬದ ಮಹಿಳಾ ಮುಖ್ಯಸ್ಥೆಗೆ ₹5,000 ನೀಡುವ ಗೃಹಲಕ್ಷ್ಮಿ ಕಾರ್ಡ್ ಕಾರ್ಯಕ್ರಮದ ವೆಚ್ಚವು, ರಾಜ್ಯ ಬಜೆಟ್‌ನ ಶೇ 8ರಷ್ಟು ಮಾತ್ರ. ಉದ್ದಿಮೆ ಆರಂಭಿಸಲು ಕಡಿಮೆ ಬಡ್ಡಿ ದರದಲ್ಲಿ ಯುವಜನರಿಗೆ ಸಾಲ ನೀಡುವ ಕಾರ್ಯಕ್ರಮದ ವೆಚ್ಚವು, ಬಜೆಟ್‌ನ ಶೇ 4ರಷ್ಟಾಗುತ್ತದೆ. ನಮ್ಮ ಎಲ್ಲಾ ಯೋಜನೆಗಳ ವೆಚ್ಚವು ವಾರ್ಷಿಕ ಬಜೆಟ್‌ನ ಶೇ 13.2ರಷ್ಟಾಗುತ್ತದೆ. ಆದರೆ ರಾಜ್ಯದ ಅರ್ಧಕ್ಕೂ ಹೆಚ್ಚು ಜನರಿಗೆ ಇದರ ಲಾಭ ದೊರೆಯಲಿದೆ' ಎಂದು ಮೈತ್ರಿಕೂಟವು ಘೋಷಿಸಿದೆ.

ಟಿಎಂಸಿ–ಎಂಜಿಪಿ ಮೈತ್ರಿಕೂಟವು ಘೋಷಿಸಿರುವ ವಿವಿಧ ಜನಪ್ರಿಯ ಕಾರ್ಯಕ್ರಮಗಳು ಕಾರ್ಯಸಾಧುವಲ್ಲ. ರಾಜ್ಯ ಬಜೆಟ್‌ಗೆ ಇದರಿಂದ ಭಾರಿ ಹೊರೆಯಾಗಲಿದೆ ಎಂದು ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್ ಟೀಕಿಸಿದ್ದವು.

## ರಸ್ತೆಯಲ್ಲಿ ಯುವಕನ ಬೆತ್ತಲೆ ಮೆರವಣಿಗೆ

ಹಾಸನ: ನಗರದ ಮಹಾರಾಜ ಉದ್ಯಾನದಲ್ಲಿ ಕುಡಿದ ಮತ್ತಿನಲ್ಲಿ ಕಾಲೇಜು ಹುಡುಗಿಯ ಕೈ ಹಿಡಿದು ಎಳೆದಾಡಿದ ಎಂಬ ಆರೋಪದ ಕಾರಣಕ್ಕೆ ಯುವಕನ ಮೇಲೆ ಹಲ್ಲೆ ನಡೆಸಿ, ಬೆತ್ತಲೆ ಮೆರವಣಿಗೆ ಮಾಡಲಾಗಿದೆ.

ಮಂಗಳವಾರ ಸಂಜೆ ಉದ್ಯಾನದಲ್ಲಿ ವಿದ್ಯಾರ್ಥಿನಿ ಕುಳಿತಿದ್ದಾಗ ವಿಜಯಪುರದ ಕೂಲಿ ಕಾರ್ಮಿಕ ಕೈ ಹಿಡಿದು ಎಳೆದಾಡಿದ್ದಾನೆ ಎಂದು ಆರೋಪಿಸಿ ಕರ್ನಾಟಕ ಪ್ರಜಾಶಕ್ತಿ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷ ಪ್ರವೀಣ್ ಗೌಡ ಸೇರಿದಂತೆ ಯುವಕರ ಗುಂಪು ಆತನನ್ನು ಥಳಿಸಿತು. ನಂತರ ವಿವಸ್ತ್ರಗೊಳಿಸಿ, ನಡುರಸ್ತೆಯಲ್ಲಿಯೇ ನಡೆಸಿಕೊಂಡು ಪೊಲೀಸ್ ಠಾಣೆಗೆ ಕರೆದೊಯ್ಯುತ್ತಿದ್ದರು.

ಅದನ್ನು ಸಾರ್ವಜನಿಕರು ಆಕ್ಷೇಪಿಸಿ, ಬಟ್ಟೆ ನೀಡುವಂತೆ ಹೇಳಿದರೂ ಯುವಕರ ಗುಂಪು ಕೇಳಲಿಲ್ಲ.

# ಬೊಮ್ಮಾಯಿ ಆರೋಗ್ಯ ವಿಚಾರಿಸಿದ ಮೋದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರಾಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮಂಗಳವಾರ ದೂರವಾಣಿ ಕರೆ ಮಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಆರೋಗ್ಯ ವಿಚಾರಿಸಿದರು.

ಪ್ರಧಾನಿಯವರು ಬೊಮ್ಮಾಯಿ ಜತೆ ಸುಮಾರು ಐದು ನಿಮಿಷಗಳ ಕಾಲ ಮಾತನಾಡಿದರು. ತಮ್ಮ ಜತೆಗೆ ಕುಟುಂಬದ ಇಬ್ಬರು ಸದಸ್ಯರಿಗೂ ಕೋವಿಡ್ ತಗುಲಿದ ಬಗ್ಗೆ ಬೊಮ್ಮಾಯಿ ವಿವರಣೆ ನೀಡಿದರು. ಎಲ್ಲರೂ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಳ್ಳುವಂತೆ ಪ್ರಧಾನಿ ಸಲಹೆ ನೀಡಿದರು ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ಹೇಳಿವೆ.

ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿಯ ಬಗ್ಗೆಯೂ ಪ್ರಧಾನಿಯವರಿಗೆ ಮಾಹಿತಿ ನೀಡಿದ ಬೊಮ್ಮಾಯಿ, ರಾಜ್ಯದಲ್ಲಿ ಲಸಿಕೆ ಅಭಿಯಾನ ತೀವ್ರಗೊಳಿಸಲಾಗಿದೆ. ತಜ್ಞರ ಅಭಿಪ್ರಾಯದಂತೆ ಕಾಲ ಕಾಲಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದೂ ವಿವರ ನೀಡಿದರು.

ಸೋಮಶೇಖರ್, ಮಾಧುಸ್ವಾಮಿಗೆ ಕೋವಿಡ್: ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಮತ್ತು ಕಾನೂನು ಮತ್ತು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಅವರಿಗೆ ಕೋವಿಡ್ ದೃಢಪಟ್ಟಿದೆ.

ಆರೋಗ್ಯ ಸಚಿವ ಕೆ. ಸುಧಾಕರ್ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದು, ನೆಗೆಟಿವ್ ಬಂದಿದೆ. ಆದರೆ, ಸುಧಾಕರ್ ಅವರು ಮುಖ್ಯಮಂತ್ರಿ ಬೊಮ್ಮಾಯಿ ಜತೆ ಹಲವು ಸಭೆಗಳಲ್ಲಿ ಪಾಲ್ಗೊಂಡ ಹಿನ್ನೆಲೆಯಲ್ಲಿ ಪ್ರತ್ಯೇಕವಾಸಕ್ಕೆ ಒಳಗಾಗಿದ್ದಾರೆ.

ಕಾಂಗ್ರೆಸ್ ಮುಖಂಡರಾದ ಎಚ್.ಎಂ. ರೇವಣ್ಣ ಮತ್ತು ಸಿ.ಎಂ. ಇಬ್ರಾಹಿಂ ಅವರಿಗೂ ಕೋವಿಡ್ ದೃಢಪಟ್ಟಿದೆ. ಇಬ್ಬರಿಗೂ ಸೋಂಕಿನ ಅಲ್ಪಸ್ವಲ್ಪ ಲಕ್ಷಣಗಳಷ್ಟೆ ಕಾಣಿಸಿಕೊಂಡಿದೆ. ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ರೇವಣ್ಣ ಚಿಕಿತ್ಸೆ ಪಡೆಯುತ್ತಿದ್ದು, ಅವರು ಮೇಕೆದಾಟು ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

ಸಿ.ಎಂ. ಇಬ್ರಾಹಿಂ ಅವರು ತಮ್ಮ ಮನೆಯಲ್ಲಿಯೇ ವಿಶ್ರಾಂತಿ ಪಡೆಯುತ್ತಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ತಿಳಿಸಿವೆ.

## ಕೋವಿಡ್ ಆರೈಕೆ: ಸಾಮಾನ್ಯ ಹೋಟೆಲ್‌ಗೆ ಗರಿಷ್ಠ ₹4 ಸಾವಿರ

ಬೆಂಗಳೂರು: ಹೋಟೆಲ್‌ಗಳ ಸಹಯೋಗದಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ಪ್ರಾರಂಭಿಸಲು ಖಾಸಗಿ ಆಸ್ಪತ್ರೆಗಳಿಗೆ ಅವಕಾಶ ನೀಡಿರುವ ಸರ್ಕಾರ, ಎಲ್ಲ ಸೌಲಭ್ಯಗಳ ಸೇರಿ ವಿಧಿಸಬಹುದಾದ ಗರಿಷ್ಠ ಶುಲ್ಕವನ್ನು ನಿಗದಿ ಮಾಡಿದೆ.

ಈ ಬಗ್ಗೆ ಆರೋಗ್ಯ ಇಲಾಖೆಯ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. ಸಾಮಾನ್ಯ ಹೋಟೆಲ್‌ಗೆ ದಿನವೊಂದಕ್ಕೆ ಗರಿಷ್ಠ ₹ 4 ಸಾವಿರ, ಮೂರು ಸ್ಟಾರ್ ಹೋಟೆಲ್‌ಗೆ ಗರಿಷ್ಠ ₹ 8 ಸಾವಿರ ಹಾಗೂ ಪಂಚತಾರಾ ಹೋಟೆಲ್‌ಗೆ ಗರಿಷ್ಠ ₹ 10 ಸಾವಿರ ನಿಗದಿಪಡಿಸಲಾಗಿದೆ.

ಕೋವಿಡ್ ಪೀಡಿತರ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಕೆಪಿಎಂಇ ಕಾಯ್ದೆಯಡಿ ಆರೈಕೆ ಕೇಂದ್ರಗಳನ್ನು ನಡೆಸಲು ಖಾಸಗಿ ಆಸ್ಪತ್ರೆಗಳಿಗೆ ಅವಕಾಶ ನೀಡಲಾಗಿದೆ. ಹೋಟೆಲ್‌ನ ದರ್ಜೆಯ ಅನುಸಾರ ದರ ನಿಗದಿ ಮಾಡಲಾಗಿದೆ. ಸೋಂಕಿನ ಸೌಮ್ಯ ಹಾಗೂ ಮಧ್ಯಮ ಸ್ವರೂಪದ ಲಕ್ಷಣಗಳು ಕಾಣಿಸಿಕೊಂಡವರಿಗೆ ಚಿಕಿತ್ಸೆಯನ್ನು ಒದಗಿಸಬಹುದಾಗಿದೆ. ಅಲ್ಲಿ ದಾಖಲಿಸಿಕೊಂಡವರ ಮಾಹಿತಿಯನ್ನು ಆರೋಗ್ಯ ಇಲಾಖೆ ಅಥವಾ ಬಿಬಿಎಂಪಿ ಅಧಿಕಾರಿಗಳಿಗೆ ಪ್ರತಿನಿತ್ಯ ಒದಗಿಸಬೇಕು ಎಂದು ಸೂಚಿಸಲಾಗಿದೆ.

ಕೋವಿಡ್ ಆರೈಕೆ ಕೇಂದ್ರಗಳು ಸರ್ಕಾರದ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ತರಬೇತಿ ಹೊಂದಿದ ಸಿಬ್ಬಂದಿಯನ್ನು ಆರೈಕೆಗೆ ನೇಮಿಸಬೇಕು. ಕಾಲ ಕಾಲಕ್ಕೆ ಸೋಂಕಿತರ ಆರೋಗ್ಯದ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿರಬೇಕು. ದಿನದ ಎಲ್ಲ ಅವಧಿಯಲ್ಲಿಯೂ ಆಂಬುಲೆನ್ಸ್ ಲಭ್ಯವಿರಬೇಕು. ಸೋಂಕಿತ ವ್ಯಕ್ತಿ ಚೇತರಿಸಿಕೊಂಡ ಬಳಿಕ ಮನೆಗೆ ಕಳುಹಿಸುವಾಗ ಸರ್ಕಾರದ ಮಾರ್ಗಸೂಚಿಯನ್ನೇ ಅನುಸರಿಸಬೇಕು ಎಂದು ತಿಳಿಸಲಾಗಿದೆ.

## ದೃಢ ಪ್ರಮಾಣ ಶೇ 10ಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 14,473 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಶೇ 10.30ಕ್ಕೆ ಏರಿಕೆಯಾಗಿದೆ.

ಏಳೂವರೆ ತಿಂಗಳಲ್ಲಿ ವರದಿಯಾದ ಗರಿಷ್ಠ ದೃಢ ಪ್ರಮಾಣ ಹಾಗೂ ಪ್ರಕರಣಗಳು ಇವಾಗಿವೆ.

ಒಂದು ದಿನದ ಅವಧಿಯಲ್ಲಿ 1.40 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಈ ತಿಂಗಳು 11 ದಿನಗಳಲ್ಲಿ 70,792 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.78 ಲಕ್ಷ ದಾಟಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗಿವೆ. 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರಂಕಿಗೆ ಏರಿಕೆಯಾಗಿದೆ. 13 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಬೆಂಗಳೂರಿನಲ್ಲಿ 10,800 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

# ಸ್ವಾಮಿ ವಿವೇಕಾನಂದ: ಋಷಿಪರಂಪರೆಯ ವಾರಸಿಕೆ

• ರಾಧಾಕೃಷ್ಣ ಹೊಳ್ಳ

ಒಬ್ಬ ಮನುಷ್ಯ ತನ್ನ ಜೀವನದಲ್ಲಿ ಎಷ್ಟು ಅಧ್ಯಯನ ಮಾಡಬಹುದು; ಎಷ್ಟು ಮಾತನಾಡಬಹುದು ಎಂದು ಲೆಕ್ಕ ಹಾಕಿ ಒಂದು ನಿಷ್ಕರ್ಶೆಗೆ ಬಂದರೆ, ಆ ಎಲ್ಲ ಲೆಕ್ಕಾಚಾರಗಳನ್ನು ಮೀರಿ ನಿಲ್ಲುವವರು ಸ್ವಾಮಿ ವಿವೇಕಾನಂದರು. ಅವರ ವಿಚಾರಗಳು ಅಷ್ಟು ಆಳ, ಅಷ್ಟು ವಿಸ್ತಾರವಾದವು. ಬದುಕಿದ್ದು ಕೇವಲ 39 ವರ್ಷಗಳಾದರೂ, ವಿಶ್ವದ ಮೇಲೆ ಅವರ ಪ್ರಭಾವ ಮಾತ್ರ ಅನನ್ಯ. ತಲೆಮಾರಿನಿಂದ ತಲೆಮಾರಿಗೆ ಅವರು ಪ್ರೇರಣೆಯ ಸ್ರೋತವಾಗಿಯೇ ಇದ್ದಾರೆ; ಮುಂದೆಯೂ ಇರುವುದರಲ್ಲಿ ಯಾವ ಸಂಶಯವೂ ಇಲ್ಲ. ಸಾಧಾರಣವಾಗಿ, ಯಾವುದೇ ಮಹಾಪುರುಷರೊಬ್ಬರ ವಿಚಾರಗಳು ದೀರ್ಘಕಾಲ ನಿಲ್ಲುವುದರಿಂದ, ಅಂತಹವರ ವಿಚಾರಗಳ ಬಗ್ಗೆ ನೂರಾರು ವರ್ಷಗಳ ಬಳಿಕವೂ ಚರ್ಚೆಗಳು ನಡೆಯುವುದು ಸಾಮಾನ್ಯ. ಸ್ವಾಮಿ ವಿವೇಕಾನಂದರು ಇಂತಹ ಸಾಲಿಗೆ ಸೇರುವವರು.

'ನಮ್ಮ ಪೂರ್ವಜರ ಬಗ್ಗೆ ಎಂದಿಗೂ ಲಜ್ಜೆ ಪಡಬಾರದೆಂಬುದೇ ನನ್ನ ಜೀವನದ ಒಂದು ಮುಖ್ಯ ಸಿದ್ಧಾಂತ. ಈ ಲೋಕದಲ್ಲಿ ಜನಿಸಿದ ಅತ್ಯಂತ ಸ್ವಾಭಿಮಾನಿ ಪುರುಷರ ಪೈಕಿ ನಾನೊಬ್ಬ. ಆದರೆ, ಅದು ನನ್ನ ಕಾರಣದಿಂದ ಅಲ್ಲ, ನನ್ನ ಪೂರ್ವಜರ ಕಾರಣದಿಂದಾಗಿ. ನಾನು ಹಿಂದೆ ತಿರುಗಿ ನೋಡಿದಷ್ಟೂ ಹಿಂದಿನದನ್ನು ಅಭ್ಯಸಿಸಿದಷ್ಟೂ ಅಧಿಕಾಧಿಕವಾಗಿ ಈ ಸ್ವಾಭಿಮಾನ ನನ್ನೆದೆಯನ್ನು ತುಂಬಿದೆ' – ಎಂದು ಒಂದೆಡೆ ಹೇಳುವ ವಿವೇಕಾನಂದರು, ಮತ್ತೊಂದೆಡೆ ಭಾರತದ ಮೇಲ್ವರ್ಗದವರನ್ನು ಹೇಗೆ ತಿವಿಯುತ್ತಾರೆ ನೋಡಿ: 'ನೀವು ಆರ್ಯವಂಶದವರೆಂದು ಎಷ್ಟೇ ಮೆರೆದಾಡಿರಿ, ಭಾರತದ ಗತವೈಭವದ ಬಗ್ಗೆ ಎಷ್ಟೇ ಗುಣಗಾನ ಮಾಡಿರಿ; ನಿಮ್ಮ ಜನ್ಮಜಾತ ಗರಿಮೆಯ ಬಗ್ಗೆ ನೀವು ಎಷ್ಟೇ ಬಡಾಯಿ ಕೊಚ್ಚಿರಿ, ಆದರೆ ಭಾರತದಲ್ಲಿನ ಉಚ್ಚವರ್ಗೀಯರಾದ ನೀವು ಈಗ ಬದುಕಿರುವವೆಂದು ತಿಳಿದಿರುವಿರೇನು? ಹತ್ತು ಸಾವಿರ ವರ್ಷಗಳ ಹಿಂದಿನ ಮಮ್ಮಿಗಳಂತೆ ನೀವಿದ್ದೀರಿ..... ನಿಮ್ಮ ಮನೆ, ನಿಮ್ಮ ಸಲಕರಣೆಗಳು ಪ್ರಾಚೀನ ವಸ್ತುಸಂಗ್ರಹಾಲಯದಲ್ಲಿ ಇಡಲು ಲಾಯಕ್ಕಾದವು. ಅಷ್ಟು ನಿರ್ಜೀವತೆ, ಅಷ್ಟು ಹಳೆತನ. ...... ರೈತರ ಗುಡಿಸಲಿಂದ ನೇಗಿಲು ಹಿಡಿದು ಭಾರತಿಯು ಮೇಲೇಳಲಿ. ಬೆಸ್ತರ ಚಮ್ಮಾರರ ಜಲಗಾರರ ಜೋಪಡಿಗಳಿಂದ ಅವಳು ಹೊರಬೀಳಲಿ. ಮಳಿಗೆಗಳಿಂದ, ಕುಂಬಾರರ ಭಟ್ಟಿಗಳಿಂದ, ಕಾರ್ಖಾನೆಗಳಿಂದ, ಅಂಗಡಿಗಳಿಂದ, ಪೇಟೆಗಳಿಂದ ಅವಳು ಮೂಡಿಬರಲಿ..... ಈ ಎಲ್ಲ ಜನಸಾಮಾನ್ಯರು ಸಾವಿರಾರು ವರ್ಷಗಳ ದಬ್ಬಾಳಿಕೆಯಲ್ಲಿ ನರಳಿದ್ದಾರೆ. 'ಚ'ಕಾರ ಸಹ ಎತ್ತದೇ ಎಲ್ಲವನ್ನೂ ಸಹಿಸಿದ್ದಾರೆ. ಅದರಿಂದಾಗಿ ಅವರಿಗೆ ಅದ್ಭುತ ಸಹನಶಕ್ತಿ ಬಂದಿದೆ. ಅವರು ಅನುಭವಿಸಿರುವ ಅಪಾರ ಕಷ್ಟ-ಸಂಕಟಗಳಿಂದಾಗಿ ದುರ್ದಮ್ಯ ಜೀವನಶಕ್ತಿ ಅವರಲ್ಲಿ ಬೆಳೆದಿದೆ. ಒಂದು ತುತ್ತು ಅನ್ನ ಅವರಿಗೆ ಹಾಕಿ. ಇಡೀ ಜಗತ್ತನ್ನೇ ಅವರು ಅಲ್ಲೋಲಕಲ್ಲೋಲ ಮಾಡಿಯಾರು. ತುಂಡು ರೊಟ್ಟಿ ಕೊಡಿ ಸಾಕು. ಅವರ ಪರಾಕ್ರಮಕ್ಕೆ ಇಡೀ ಜಗತ್ತು ಸಾಲದಾದೀತು...' ಹೀಗೆ ಸಾಗುತ್ತದೆ, ಅವರ ಮಾತು.



### ಇಂದು ರಾಷ್ಟ್ರೀಯ ಯುವದಿನ

ಭಗವದ್ಗೀತೆಯನ್ನು ಓದುವುದಕ್ಕಿಂತ ಯುವಕರು ಫುಟ್ಬಾಲ್ ಆಟವಾಡಿ, ಶಾರೀರಿಕ ದೃಢತೆ ಬೆಳೆಸಿಕೊಳ್ಳಬೇಕು ಎಂಬ ಅವರ ಮಾತಾಗಲೀ, ಆಧುನಿಕ ವಿಜ್ಞಾನಕ್ಕೆ ಅವರು ಕೊಟ್ಟ ಮಹತ್ತ್ವವಾಗಲೀ ನಾವು ಗಮನಿಸಬೇಕಾದವು. 'ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ' ಎಂಬಂತೆ, ಅದು ಪಶ್ಚಿಮದ್ದು, ಇದು ಪೂರ್ವದ್ದು ಎಂಬ ಭೇದವನ್ನು ಅವರು ಗಣಿಸಲಿಲ್ಲ. ಪಶ್ಚಿಮದ ಆಧುನಿಕ ವಿದ್ಯೆಯನ್ನೂ ಕೈಗಾರಿಕೆಗಳನ್ನೂ ಸ್ವಾಗತಿಸಿದ ಅವರು, ಧರ್ಮವೇ ಭಾರತದ ಆತ್ಮ, ಅದಿಲ್ಲದೇ ಭಾರತವೆಂಬ ರಾಷ್ಟ್ರಕ್ಕೆ ಅಸ್ತಿತ್ವವಿಲ್ಲ; ಅದನ್ನು ಬಿಟ್ಟು ನಮ್ಮ ರಾಷ್ಟ್ರದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದವರು. ಅವರ ಒಂದೆರಡು ಭಾಷಣವನ್ನು ಮಾತ್ರ ಓದಿ, ಅವರು ಇಂತಹವರು ಎಂದು ಹೇಳಲು ಸಾಧ್ಯವಿಲ್ಲ. ಅವರನ್ನು ತಿಳಿಯುತ್ತಾ ಹೋದಂತೆ, ಅವರೊಬ್ಬ ಭಾರತೀಯ ಋಷಿಪರಂಪರೆಯಲ್ಲಿ ಬಂದ ಮಾನವಧರ್ಮದ ಪ್ರತಿಪಾದಕರಾಗಿದ್ದವರು; ಲೋಕಹಿತವಲ್ಲದೇ ಬೇರಾವುದೂ ಅವರ ವಿಚಾರದಲ್ಲಿಲ್ಲ ಎಂಬುದು ನಮ್ಮ ಅರಿವಿಗೆ ಬರುತ್ತದೆ. ಇಂತಹ ಮಹಾಪುರುಷರನ್ನು ಒಂದು 'ಇಸಂ' ಅನ್ನು ಪ್ರತಿಪಾದಿಸುವವರು ಅಥವಾ ಇನ್ನೊಂದನ್ನು ವಿರೋಧಿಸುವವರು ಎಂಬ ದೃಷ್ಟಿಯಲ್ಲಿ ನೋಡುವುದು; ಅವರು ಯಾವ ಆಹಾರ ಸೇವಿಸುತ್ತಿದ್ದರು ಎಂಬುದರ ಮೇಲೆ ಅವರು ಇಂತಹವರು ಎಂದು ನಿರ್ಣಯ ಮಾಡುವುದು, ನಮ್ಮ ಬುದ್ಧಿಯ ದಾರಿದ್ರ್ಯವನ್ನು ತೋರಿಸುತ್ತದೆ ಅಷ್ಟೇ.

ಸ್ವಾಮಿ ವಿವೇಕಾನಂದರನ್ನು ಸರಿಯಾಗಿ ತಿಳಿಯಲು ಅವರ ಜೀವನ ಹಾಗೂ ವಿಚಾರಗಳ ಸಮಗ್ರ ಅಧ್ಯಯನವೊಂದೇ ದಾರಿ. ಆ ದಾರಿ ನಮ್ಮದಾಗಲಿ.

ಬುಧವಾರ, ಜನವರಿ 12, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 12 | ಪುಟ 16

www.prajavani.net


/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ತಂತ್ರಜ್ಞಾನ**

ಬಹುತೇಕ ಎಲ್ಲ ಜೀವಿಗಳು ಕೆಲವು ಪ್ರತಿರಕ್ಷಣಾ ವ್ಯವಸ್ಥೆಯನ್ನು ಹೊಂದಿವೆ. ಬ್ಯಾಕ್ಟೀರಿಯಾಗಳು ಸಹ ಕಿಣ್ವಗಳ ರೂಪದಲ್ಲಿ ಪ್ರತಿರಕ್ಷಣಾ ವ್ಯವಸ್ಥೆಯನ್ನು ಹೊಂದಿರುತ್ತವೆ





| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 60,616 ▲ | 18,055 ▲ | 73.94 ▲ |

### ವಸತಿ ಶಾಲೆ, ಹಾಸ್ಟೆಲ್‌ಗಳಲ್ಲಿ ಹೆಚ್ಚುತ್ತಿರುವ ಕೋವಿಡ್

# ಶಾಲೆ ಬಂದ್: ಡಿ.ಸಿಗೆ ಅಧಿಕಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿರುವ ಶಾಲೆ, ವಸತಿ ಶಾಲೆಗಳು ಮತ್ತು ಹಾಸ್ಟೆಲ್‌ಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಿದಲ್ಲಿ ಅವುಗಳನ್ನು ಮುಚ್ಚುವ ಅಥವಾ ಪರ್ಯಾಯ ವ್ಯವಸ್ಥೆ ಮಾಡುವ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಮಂಗಳವಾರ ಸಂಜೆ ನಡೆದ ಹಿರಿಯ ಅಧಿಕಾರಿಗಳ ವರ್ಚುವಲ್ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಬೇಕು. ಅದನ್ನು ಆಧರಿಸಿ ಆರೋಗ್ಯ ಹಾಗೂ ಶಿಕ್ಷಣ ಇಲಾಖೆ ಜತೆ ಸಮಾಲೋಚನೆ ನಡೆಸಿದ ಬಳಿಕ ಜಿಲ್ಲಾಧಿಕಾರಿಗಳು ತೀರ್ಮಾನ ಕೈಗೊಳ್ಳಬಹುದು ಎಂದೂ ಅವರು ಹೇಳಿದರು.

ಬೆಂಗಳೂರಿನಲ್ಲಿ ಕೋವಿಡ್ ಪರೀಕ್ಷೆಗಳ ಪ್ರಮಾಣವನ್ನು ದಿನಕ್ಕೆ 1.50 ಲಕ್ಷಕ್ಕೆ ಏರಿಕೆ ಮಾಡಲು ನಿರ್ಧರಿಸಲಾಗಿದೆ. ಇತರ ಜಿಲ್ಲೆಗಳಲ್ಲೂ ಪರೀಕ್ಷೆಯ ಪ್ರಮಾಣ ಹೆಚ್ಚಿಸಲಾಗುವುದು ಎಂದರು.

ಮಕ್ಕಳಲ್ಲಿ ಕೋವಿಡ್ ಹೆಚ್ಚುತ್ತಿರುವ ಕಾರಣ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಮಕ್ಕಳಿಗೆ ಚಿಕಿತ್ಸೆ ನೀಡಲು ಮಕ್ಕಳ ವಾರ್ಡ್, ಐಸಿಯುಗಳನ್ನು ಮೀಸಲಿರಿಸಬೇಕು. ಕೋವಿಡ್ ಸೋಂಕಿತ ಮಕ್ಕಳಿಗೆ ಅಗತ್ಯವಿರುವ ಔಷಧಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಮಾಡಿಕೊಳ್ಳುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಲು ನಿರ್ಧರಿಸಲಾಯಿತು ಎಂದು ಜ್ಞಾನೇಂದ್ರ ಹೇಳಿದರು.

ಅಲ್ಲದೇ, ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳು ಜಂಟಿಯಾಗಿ ಎಲ್ಲ ಶಾಲೆಗಳಲ್ಲಿ 15 ದಿನಗಳಿಗೊಮ್ಮೆ ಮಕ್ಕಳ ಸಾಮಾನ್ಯ ಆರೋಗ್ಯ ತಪಾಸಣೆ ಮಾಡುವಂತೆಯೂ ಮುಖ್ಯಮಂತ್ರಿಯವರು ಸಭೆಯಲ್ಲಿ ಸಲಹೆ ನೀಡಿದರು.

7ನೇ ಪುಟ ನೋಡಿ

## ವೈಕುಂಠ ಏಕಾದಶಿ, ಸಂಕ್ರಾಂತಿಗೆ ಕಟ್ಟುನಿಟ್ಟು

ವೈಕುಂಠ ಏಕಾದಶಿ ಮತ್ತು ಸಂಕ್ರಾಂತಿ ಹಬ್ಬಗಳಿಗೆ ಪ್ರತ್ಯೇಕ ಆದೇಶ ಹೊರಡಿಸಲಾಗಿದ್ದು, ಇವೆರಡೂ ಹಬ್ಬಗಳ ಪ್ರಯುಕ್ತ ಶಾಸ್ತ್ರ- ಸಂಪ್ರದಾಯಗಳ ಪ್ರಕಾರ, ದೇವಾಲಯಗಳ ಒಳ ಆವರಣದಲ್ಲಿ ಮಾತ್ರ ದೈನಂದಿನ ಪೂಜಾ ಕೈಂಕರ್ಯ ನಡೆಸಲು ಅನುಮತಿ ನೀಡಲಾಗಿದೆ.

ವೈಕುಂಠ ಏಕಾದಶಿ ದಿನದಂದು ಈಗಾಗಲೇ ನಿಗದಿಪಡಿಸಿರುವಂತೆ ಪೂರ್ಣ ಪ್ರಮಾಣದ ಕೋವಿಡ್-19 ಲಸಿಕೆ ಎರಡು ಡೋಸ್‌ಗಳನ್ನು ಪಡೆದ 50 ಜನರಿಗೆ ಮಾತ್ರ ಒಂದು ಬಾರಿಗೆ ದರ್ಶನಕ್ಕೆ ಅವಕಾಶ ನೀಡಬೇಕು. ಯಾವುದೇ ಸೇವೆಗಳಿಗೆ ಅವಕಾಶವಿಲ್ಲ. ಹಬ್ಬಗಳ ಆಚರಣೆಯ ಸಲುವಾಗಿ ಯಾವುದೇ ರೀತಿಯ ಮೆರವಣಿಗೆ, ಮನೋರಂಜನಾ ಕಾರ್ಯಕ್ರಮಗಳನ್ನು ಆಯೋಜಿಸುವಂತೆಯೂ ಇಲ್ಲ. ಬಿಬಿಎಂಪಿ ಮತ್ತು ಜಿಲ್ಲಾ ವ್ಯಾಪ್ತಿಯಲ್ಲಿ ಕೋವಿಡ್ ಪರಿಸ್ಥಿತಿ ಅವಲೋಕಿಸಿ ಇನ್ನೂ ಹೆಚ್ಚಿನ ನಿರ್ಬಂಧಗಳನ್ನು ವಿಧಿಸಬಹುದು ಎಂದು ಸರ್ಕಾರದ ಮುಖ್ಯಕಾರ್ಯದರ್ಶಿ ಪಿ.ರವಿಕುಮಾರ್ ತಿಳಿಸಿದ್ದಾರೆ.

## ದೆಹಲಿ: ಖಾಸಗಿ ಕಚೇರಿಗಳು ಪೂರ್ಣ ಬಂದ್

**ನವದೆಹಲಿ (ಪಿಟಿಐ):** ದೇಶದ ರಾಜಧಾನಿಯಲ್ಲಿ ಕೋವಿಡ್-19ರ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ಖಾಸಗಿ ಕಚೇರಿಗಳನ್ನು ಮುಚ್ಚುವಂತೆ ದೆಹಲಿ ಸರ್ಕಾರ ಮಂಗಳವಾರ ನಿರ್ದೇಶನ ನೀಡಿದೆ. ತುರ್ತು ಸೇವೆ ಮತ್ತು ಇತರ ಕೆಲ ವಿನಾಯಿತಿ ಪಡೆದಿರುವ ವರ್ಗಗಳನ್ನು ಹೊರತುಪಡಿಸಿ ಉಳಿದ ಎಲ್ಲ ಖಾಸಗಿ ಕಚೇರಿಗಳಿಗೆ ಈ ಆದೇಶ ಅನ್ವಯವಾಗಲಿದೆ.

ಇದುವರೆಗೆ ಶೇ 50ರಷ್ಟು ಸಿಬ್ಬಂದಿ ಜೊತೆಗೆ ಕಾರ್ಯನಿರ್ವಹಿಸುತ್ತಿದ್ದ ಖಾಸಗಿ ಕಚೇರಿಗಳು, ಇನ್ನು ಮುಂದೆ ಪೂರ್ಣ ಪ್ರಮಾಣದಲ್ಲಿ ಮನೆಯಿಂದಲೇ ಕೆಲಸ ಮಾಡುವ ಪದ್ಧತಿಯನ್ನು ಅನುಸರಿಸಬೇಕು ಎಂದು ಸರ್ಕಾರ ತಿಳಿಸಿದೆ.

ವಿವರ 10

**ಜ.11ರ ಕೋವಿಡ್ ಮಾಹಿತಿ**

| | |
|---|---|
| 14,473 | ರಾಜ್ಯದ ಹೊಸ ಪ್ರಕರಣ |
| 10,800 | ಬೆಂಗಳೂರಿನ ಹೊಸ ಪ್ರಕರಣ |
| 10.30% | ರಾಜ್ಯದ ಸೋಂಕು ದೃಢ ಪ್ರಮಾಣ |
| 73,260 | ಸಕ್ರಿಯ ಪ್ರಕರಣ |
| 05 | ದೃಢಪಟ್ಟ ಮರಣ ಪ್ರಕರಣ |
| 1,40,452 | ನಡೆಸಲಾದ ಪರೀಕ್ಷೆ |

## ಮೈಸೂರಿನಲ್ಲಿ ಶಾಲೆ ಬಂದ್

**ಮೈಸೂರು/ಬೆಂಗಳೂರು:** ಹೆಚ್ಚಿನ ಮಕ್ಕಳು ಕೊರೊನಾ ಸೋಂಕಿಗೆ ಒಳಗಾಗುತ್ತಿರುವುದರಿಂದ ಮೈಸೂರು ನಗರ ಮತ್ತು ತಾಲ್ಲೂಕಿನಲ್ಲಿ ಅಂಗನವಾಡಿಯಿಂದ 10ನೇ ತರಗತಿಯವರೆಗಿನ ಭೌತಿಕ ತರಗತಿಗಳನ್ನು ಜ.12ರ ಬುಧವಾರದಿಂದ ಸ್ಥಗಿತಗೊಳಿಸಲು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಆದೇಶಿಸಿದ್ದಾರೆ.

ಈ ಅವಧಿಯಲ್ಲಿ ಆನ್‌ಲೈನ್ ತರಗತಿಗಳು ನಡೆಯಲಿವೆ. ಕಳೆದ ಮೂರು ದಿನಗಳಿಂದ ಒಟ್ಟು 138 ಮಕ್ಕಳು ಸೋಂಕಿತರಾಗಿದ್ದಾರೆ. ಮಂಗಳವಾರ 562 ಮಂದಿಗೆ ಸೋಂಕು ತಗುಲಿದ್ದು, ಒಟ್ಟಾರೆ ಸಕ್ರಿಯ ಪ್ರಕರಣಗಳ ಸಂಖ್ಯೆ ಮೈಸೂರಿನಲ್ಲಿ 1,868ಕ್ಕೆ ಹೆಚ್ಚಿದೆ.

ಈಗಾಗಲೇ ಬೆಂಗಳೂರಿನಲ್ಲಿ ಶಾಲೆಗಳನ್ನು ಬಂದ್ ಮಾಡಲಾಗಿದೆ. ಬೆಳಗಾವಿಯಲ್ಲಿ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ 80 ಮಕ್ಕಳು ಮತ್ತು ಸುಮಾರು 10 ಶಿಕ್ಷಕ- ಶಿಕ್ಷೇತರ ಸಿಬ್ಬಂದಿಯಲ್ಲಿ ಕೋವಿಡ್ ದೃಢಪಟ್ಟ ಕಾರಣಕ್ಕೆ ಈ ವಸತಿ ಶಾಲೆ ಬಂದ್ ಮಾಡಲಾಗಿದೆ.

ಶಾಲೆ ಬಂದ್ ಬಗ್ಗೆ ಬೆಂಗಳೂರಿನಲ್ಲಿ ಮಾತನಾಡಿದ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್, 'ಬೆಂಗಳೂರು, ಬೆಳಗಾವಿ ಬಿಟ್ಟು ಬೇರೆಡೆ ಶಾಲಾ ತರಗತಿಗಳನ್ನು ಬಂದ್ ಮಾಡುವ ಪ್ರಸ್ತಾವ ಸದ್ಯಕ್ಕೆ ಇಲ್ಲ. ಅಲ್ಲದೆ, ಬೆಂಗಳೂರಿನಲ್ಲಿ ಶಾಲೆಗಳ ರಜೆ ವಿಸ್ತರಿಸುವ ಕುರಿತು ಶೀಘ್ರದಲ್ಲಿ ನಿರ್ಧರಿಸಲಾಗುವುದು' ಎಂದಿದ್ದಾರೆ.

### ಪಾದಯಾತ್ರೆ ಮೂರನೇ ದಿನ ಡಿಕೆಶಿ ಮೌನ

# ಮೈಸೂರಿಗರ ಜೊತೆ ಸಿದ್ದರಾಮಯ್ಯ ಹೆಜ್ಜೆ

• ಆರ್. ಜಿತೇಂದ್ರ

**ರಾಮನಗರ:** ಮೇಕೆದಾಟು ಪಾದಯಾತ್ರೆಯ ಮೂರನೇ ದಿನವಾದ ಮಂಗಳವಾರ ಮೈಸೂರು ಭಾಗದ ಸಾವಿರಾರು ಜನರು ಪಾಲ್ಗೊಂಡಿದ್ದು, ತವರೂರಿನ ಕಾರ್ಯಕರ್ತರ ಜೊತೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಉತ್ಸಾಹದಿಂದ ಹೆಜ್ಜೆ ಹಾಕಿದರು.

ಪಾದಯಾತ್ರೆಯ ಮೊದಲ ದಿನವಾದ ಭಾನುವಾರ ಅನಾರೋಗ್ಯದ ಕಾರಣ ಅರ್ಧಕ್ಕೆ ವಾಪಸ್ ಆಗಿದ್ದ ಸಿದ್ದರಾಮಯ್ಯ ಸೋಮವಾರ ಇಲ್ಲಿ ಕಾಣಿಸಿಕೊಳ್ಳಲಿಲ್ಲ. ಮಂಗಳವಾರ ಬೆಳಿಗ್ಗೆ ಕನಕಪುರಕ್ಕೆ ಬಂದ ಅವರು ಸುದ್ದಿಗೋಷ್ಠಿ ನಡೆಸಿ ನಡಿಗೆ ಆರಂಭಿಸುವ ಹೊತ್ತಿಗೆ ಬೆಳಿಗ್ಗೆ 11 ಆಗಿತ್ತು. ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ನಗರದಲ್ಲಿ ತೆರೆದ ಜೀಪಿನಲ್ಲಿ ಮೆರವಣಿಗೆ ಮಾಡಲಾಯಿತು.

5ನೇ ಪುಟ ನೋಡಿ

## 41 ಜನರ ವಿರುದ್ಧ ಎಫ್‌ಐಆರ್

ಎರಡನೇ ದಿನ ದೊಡ್ಡಾಲಹಳ್ಳಿಯಿಂದ ಕನಕಪುರ ಪಟ್ಟಣದವರೆಗೆ ನಡೆದ ಪಾದಯಾತ್ರೆಯಲ್ಲಿ ಪಾಲ್ಗೊಂಡ 41 ಜನರ ವಿರುದ್ಧ ಸಾತನೂರು ಪೊಲೀಸರು 'ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ'ದ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಡಿ.ಕೆ. ಶಿವಕುಮಾರ್, ಡಿ.ಕೆ. ಸುರೇಶ್ ಅವರನ್ನು ಪ್ರಮುಖ ಆರೋಪಿಗಳನ್ನಾಗಿಸಲಾಗಿದೆ. ಉಳಿದಂತೆ ಕೃಷ್ಣ ಬೈರೇಗೌಡ, ಎಚ್. ಆಂಜನೇಯ, ನಾರಾಯಣ ಸ್ವಾಮಿ, ಮೋಟಮ್ಮ, ಪಿ.ಟಿ. ಪರಮೇಶ್ವರ ನಾಯ್ಕ, ಧ್ರುವನಾರಾಯಣ, ಆರ್. ನರೇಂದ್ರ ಸ್ವಾಮಿ, ಪುಟ್ಟರಂಗಶೆಟ್ಟಿ, ವೀಣಾ ಅಚ್ಚಯ್ಯ, ಲಕ್ಷ್ಮಿ ಹೆಬ್ಬಾಳ್ಕರ್, ಮಧು ಬಂಗಾರಪ್ಪ, ಪ್ರಿಯಕೃಷ್ಣ, ಎಂ.ಬಿ. ಪಾಟೀಲ, ಸಲೀಂ ಅಹಮ್ಮದ್, ಶರತ್ ಬಚ್ಚೇಗೌಡ, ಪ್ರಿಯಾಂಕ್ ಖರ್ಗೆ, ಉಮಾಶ್ರೀ, ಬಿ.ಕೆ. ಹರಿಪ್ರಸಾದ್, ಪದ್ಮಾವತಿ, ಎಚ್.ಡಿ. ರಂಗನಾಥ್, ಟಿ.ಬಿ. ಜಯಚಂದ್ರ ಮತ್ತಿತರ ಕಾಂಗ್ರೆಸ್ ಮುಖಂಡರನ್ನು ಪ್ರಕರಣದಲ್ಲಿ ಆರೋಪಿಗಳನ್ನಾಗಿಸಲಾಗಿದೆ.

ಇನ್ನಷ್ಟು ಸುದ್ದಿಗಳು 5

ಕಾಂಗ್ರೆಸ್ ಇಡೀ ರಾಜ್ಯದ ಜನರನ್ನು ರಾಮನಗರಕ್ಕೆ ಕರೆತಂದು ಪಾದಯಾತ್ರೆ ಮೂಲಕ ಕೋವಿಡ್ ಹಂಚುತ್ತಿದೆ. ಇದು ಜಾಮೀನು ರಹಿತ ಅಪರಾಧವಾದರೂ ಕಾನೂನು ಸುವ್ಯವಸ್ಥೆ ಕಾರಣಕ್ಕೆ ಯಾರನ್ನೂ ಬಂಧಿಸಿಲ್ಲ. ಪರಿಸ್ಥಿತಿ ಕೈ ಮೀರಿದರೆ ಕಠಿಣ ಕ್ರಮ ಅನಿವಾರ್ಯ

**ಡಾ. ಸಿ.ಎನ್. ಅಶ್ವತ್ಥನಾರಾಯಣ,** ಉನ್ನತ ಶಿಕ್ಷಣ ಸಚಿವ

## ವಿಐಎಲ್‌ನ ಅತಿದೊಡ್ಡ ಷೇರುಪಾಲು ಕೇಂದ್ರಕ್ಕೆ

**ನವದೆಹಲಿ (ಪಿಟಿಐ):** ಕೇಂದ್ರ ಸರ್ಕಾರಕ್ಕೆ ತಾನು ಬಡ್ಡಿಯ ರೂಪದಲ್ಲಿ ಪಾವತಿ ಮಾಡಬೇಕಿರುವ ಅಂದಾಜು ₹ 16 ಸಾವಿರ ಕೋಟಿ ಮೊತ್ತವನ್ನು ಕಂಪನಿಯ ಷೇರುಗಳನ್ನಾಗಿ ಪರಿವರ್ತಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ನೀಡಲು ವೊಡಾಫೋನ್ ಐಡಿಯಾ ಲಿಮಿಟೆಡ್ (ವಿಐಎಲ್) ತೀರ್ಮಾನಿಸಿದೆ.

11



**ಚಿನಕುರಳಿ**

ಪ್ರಕಾಶ್ ಶೆಟ್ಟಿ









## 'ಕನ್ನಡ ಗೀತೆ ರಚನಾ ಕಮ್ಮಟ' 29ರಿಂದ

ಬೆಂಗಳೂರು: ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟವು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಆದಿಚುಂಚನಗಿರಿ ಸಂಸ್ಥಾನ ಮಠದ ಸಹಯೋಗದಲ್ಲಿ 'ರಾಜ್ಯಮಟ್ಟದ ಕನ್ನಡ ಗೀತೆಗಳ ರಚನಾ ಕಮ್ಮಟ'ವನ್ನು ಇದೇ 29 ಮತ್ತು 30ರಂದು ವಿಜಯನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ, 'ಎರಡೂ ದಿನಗಳಲ್ಲಿ ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಕಮ್ಮಟ ನಡೆಯಲಿದೆ. ಕವಿಗಳಾದ ಡಾ.ದೊಡ್ಡರಂಗೇಗೌಡ, ಬಿ.ಆರ್.ಲಕ್ಷ್ಮಣ ರಾವ್, ಜಯಶ್ರೀ ಅರವಿಂದ್, ಕಾ.ವೆಂ.ಶ್ರೀನಿವಾಸಮೂರ್ತಿ, ಸಪ್ತಾಹ ಚಂದ್ರಗುತ್ತಿ, ಸಂತೋಷ್ ಚೊಕ್ಕಾಡಿ ಸೇರಿದಂತೆ ವಿವಿಧ ಕವಿಗಳು ಹಾಗೂ ವಿದ್ವಾಂಸರು ಉಪನ್ಯಾಸ ನೀಡಲಿದ್ದಾರೆ' ಎಂದರು.

**ಅರ್ಜಿ ಆಹ್ವಾನ:** ಕಮ್ಮಟಕ್ಕೆ ಕವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ಐದು ಕವನಗಳೊಂದಿಗೆ ಕೈಬರಹದ ಅರ್ಜಿ ಸಲ್ಲಿಸಬಹುದು. ಬೇರೆ ಜಿಲ್ಲೆಗಳಿಂದ ಬರುವ ಶಿಬಿರಾರ್ಥಿಗಳಿಗೆ ರೈಲು ಪ್ರಯಾಣ ಅಥವಾ ಬಸ್ ಪ್ರಯಾಣ ವೆಚ್ಚ ಭರಿಸಲಾಗುವುದು. ಶಿಬಿರಾರ್ಥಿಗಳಿಗೆ ಉಚಿತವಾಗಿ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಲಾಗುವುದು. ಅರ್ಜಿ ಸಲ್ಲಿಸಲು ಜನವರಿ 21 ಕೊನೆಯ ದಿನ.

ಅರ್ಜಿ ಕಳುಹಿಸಬೇಕಾದ ವಿಳಾಸ: ಮುರಳೀಧರ್, ಕಮ್ಮಟದ ಸಂಚಾಲಕರು, ವಿಸ್ಮಯ, ನಂ.941, 16ನೇ ಅಡ್ಡರಸ್ತೆ, ಚಂದ್ರಾ ಬಡಾವಣೆ 1ನೇಹಂತ, ಬೆಂಗಳೂರು, ಸಂಪರ್ಕ: 9448093409

### ಬಿಬಿಎಂಪಿ: ದಿನದಲ್ಲಿ 1 ಲಕ್ಷಕ್ಕೂ ಹೆಚ್ಚು ಜನರಿಗೆ ಕೋವಿಡ್ ಪರೀಕ್ಷೆ

# ಕೋವಿಡ್ ಪತ್ತೆ ದರ ಶೇ 15ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪತ್ತೆ ಪರೀಕ್ಷೆ ಸಂಖ್ಯೆ 1 ಲಕ್ಷ ದಾಟಿದೆ. ರಾಜ್ಯದ ಒಟ್ಟು ಕೋವಿಡ್ ಪ್ರಕರಣಗಳಲ್ಲಿ ಶೇ 75ರಷ್ಟು ನಗರದಲ್ಲೇ ಪತ್ತೆಯಾಗಿವೆ.

ಕೋವಿಡ್ ಸೋಂಕು ಪತ್ತೆ ದರವು ನಗರದಲ್ಲಿ ಮಂಗಳವಾರ ಶೇ 17ಕ್ಕೆ ಹೆಚ್ಚಳವಾಗಿದೆ ಎಂದು ಆರೋಗ್ಯ ಸಚಿವ ಡಾ. ಕೆ.ಸುಧಾಕರ್ ಟ್ವೀಟ್ ಮಾಡಿದ್ದಾರೆ.

ಬಿಬಿಎಂಪಿ ಮಂಗಳವಾರ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ, ನಗರದಲ್ಲಿ ಸೋಮವಾರ 1,03,753 ಜನರನ್ನು ಪರೀಕ್ಷೆ ಒಳಪಡಿಸಲಾಗಿತ್ತು. ಅವರಲ್ಲಿ 10,800 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದೆ. ಅಂದರೆ ಪರೀಕ್ಷೆಗೊಳಗಾದವರಲ್ಲಿ ಸೋಂಕು ಪತ್ತೆ ದರವು ಶೇ 15ರಷ್ಟು ಇತ್ತು.

**ದುಪ್ಪಟ್ಟು ಪರೀಕ್ಷೆ:** ಡಿಸೆಂಬರ್ ಕೊನೆಯ ವಾರದಲ್ಲಿ ಕೋವಿಡ್ ಪರೀಕ್ಷೆ ಸಂಖ್ಯೆಯನ್ನು 50 ಸಾವಿರ ತನಕ ಹೆಚ್ಚಿಸಲಾಗಿತ್ತು. ಜ.3ರಂದು 72,121ಕ್ಕೆ ಹೆಚ್ಚಳ ಮಾಡಲಾಗಿತ್ತು. 4ರಂದು 78,933, 5ರಂದು 86,710, 6ರಂದು 90,286ಕ್ಕೆ ಹೆಚ್ಚಿಸಲಾಗಿತ್ತು. ಬಳಿಕ ಮೂರು ದಿನ ಪರೀಕ್ಷೆ ಪ್ರಮಾಣವನ್ನು ಕಡಿಮೆ ಬಿಬಿಎಂಪಿ ತುಸು ಕಡಿಮೆ ಮಾಡಿತ್ತು. ಪರೀಕ್ಷೆ ಸಂಖ್ಯೆ ಸೋಮವಾರ 1 ಲಕ್ಷವನ್ನು ದಾಟಿದೆ.


'ನಗರದಲ್ಲಿ ಲಾಕ್‌ಡೌನ್ ಅಗತ್ಯ ಇದೆಯೋ ಇಲ್ಲವೋ ಎಂಬುದನ್ನು ತಜ್ಞರ ಅಭಿಪ್ರಾಯ ಆಧರಿಸಿ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ. ಕೋವಿಡ್ ಹರಡುವುದನ್ನು ನಿಯಂತ್ರಿಸುವ, ಲಸಿಕೆ ನೀಡುವ ಮತ್ತು ಪರೀಕ್ಷೆ ಹೆಚ್ಚಿಸುವ ಕೆಲಸವನ್ನು ಪಾಲಿಕೆ ಮಾಡುತ್ತಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ರೋಗ ಲಕ್ಷಣ ಇದ್ದರೆ ಕೂಡಲೇ ಪರೀಕ್ಷೆ ಮಾಡಿಸಿಕೊಳ್ಳಬೇಕು. ಸೋಂಕು ದೃಢಪಟ್ಟರೆ ಟ್ರಯಾಜ್ ಕೇಂದ್ರದಲ್ಲಿ ಮತ್ತೊಮ್ಮೆ ತಪಾಸಣೆಗೆ ಒಳಪಡಿಸಲಾಗುವುದು. ಅಗತ್ಯ ಇದ್ದರೆ ಆಸ್ಪತ್ರೆಗೆ ದಾಖಲಿಸಲಾಗುವುದು. ಟ್ರಯಾಜ್ ಕೇಂದ್ರದಿಂದಲೇ 5 ನಿಮಿಷದಲ್ಲಿ ತಪಾಸಣೆ ನಡೆಸಿ ನೇರವಾಗಿ ಆಸ್ಪತ್ರೆಗೆ ಕಳುಹಿಸಲಾಗುವುದು. ವಿಳಂಬ ಆಗಿ ಪ್ರಾಣಕ್ಕೆ ತೊಂದರೆ ಆಗಲು ಬಿಡುವುದಿಲ್ಲ' ಎಂದು ಅವರು ವಿವರಿಸಿದರು.

'ಟ್ರಯಾಜ್ ಕೇಂದ್ರಕ್ಕೆ ಬಂದವರಲ್ಲಿ ಶೇ 90ರಷ್ಟು ಜನರಿಗೆ ಆಸ್ಪತ್ರೆಯಲ್ಲಿ ದಾಖಲಾಗುವ ಅಗತ್ಯ ಇರುವುದಿಲ್ಲ. ಬಹಳ ಕಡಿಮೆ ಜನರಿಗೆ ಆಮ್ಲಜನಕದ ಅಗತ್ಯ ಕಾಣಿಸುತ್ತಿದೆ. ಎರಡನೇ ಅಲೆಯಲ್ಲಿ ಆದಂತೆ ಆಮ್ಲಜನಕದ ಕೊರತೆ ಎದುರಾಗದು' ಎಂದು ಸ್ಪಷ್ಟಪಡಿಸಿದರು.



ಶೇಷಾದ್ರಿಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಪರೀಕ್ಷೆಗೆ ಗಂಟಲು ದ್ರವದ ಮಾದರಿ ಸಂಗ್ರಹಿಸುತ್ತಿರುವ ವೈದ್ಯಕೀಯ ಸಿಬ್ಬಂದಿ –ಪ್ರಜಾವಾಣಿ ಚಿತ್ರ




### 'ಮಕ್ಕಳಲ್ಲಿ ಸೋಂಕು ಹೆಚ್ಚಳವಾಗಿಲ್ಲ'

ಮಕ್ಕಳಿಗೆ ಸೋಂಕು ಹೆಚ್ಚಳವಾಗಿದೆ ಎಂಬ ಆತಂಕ ಇಲ್ಲ. ಈ ಹಿಂದಿನಂತೆ ಶೇ 10ರಷ್ಟು ಮಕ್ಕಳಲ್ಲಿ ಮಾತ್ರ ಸೋಂಕು ದೃಢಪಡುತ್ತಿದೆ ಎಂದು ಗೌರವ್ ಗುಪ್ತ ತಿಳಿಸಿದರು. '10 ದಿನಗಳ ಅಂಕಿ–ಅಂಶ ಗಮನಿಸಿದರೆ ಹೆಚ್ಚಳ ಕಾಣಿಸಿಲ್ಲ. ಮಕ್ಕಳ ತಜ್ಞರ ಸಮಿತಿಯೊಂದಿಗೆ ನಿರಂತರ ಸಂಪರ್ಕ ಹೊಂದಿದ್ದೇವೆ. ನಾಗರಿಕರು ಭಯಪಡದೆ ಮುನ್ನೆಚ್ಚರಿಕೆ ವಹಿಸುವುದು ಸೂಕ್ತ' ಎಂದು ಹೇಳಿದರು.

## ಸುದ್ದಿ 2 ನಿಮಿಷ

### ಸರ್ಕಾರದ ವೈಫಲ್ಯದಿಂದ ಸೋಂಕು ಹೆಚ್ಚಳ: ಎಚ್.ಸಿ. ಮಹದೇವಪ್ಪ

ಬೆಂಗಳೂರು: 'ಕೊರೊನಾ ಸೋಂಕು ಹರಡುವಿಕೆಗೆ ಕಾರಣವಾಗಿರುವ ರಾಜ್ಯ ಬಿಜೆಪಿ ಸರ್ಕಾರ, ಅದನ್ನು ಕಾಂಗ್ರೆಸ್ ಪಾದಯಾತ್ರೆಗೆ ಜೋಡಿಸುವ ಸಣ್ಣತನದ ಕೆಲಸ ಮಾಡುತ್ತಿದೆ. ಜನಸಾಮಾನ್ಯರ ಬದುಕಿಗೆ ತೊಂದರೆ ಕೊಟ್ಟ ಈ ಸರ್ಕಾರ, ತನ್ನ ಬೇಜವಾಬ್ದಾರಿತನ ಹಾಗೂ ವೈಫಲ್ಯಗಳಿಗೆ ಕ್ಷಮೆ ಯಾಚಿಸಬೇಕು' ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಒತ್ತಾಯಿಸಿದ್ದಾರೆ.

ಟ್ವೀಟ್ ಮಾಡಿರುವ ಅವರು, 'ಪಾದಯಾತ್ರೆ ಕುರಿತು ಮೊದಲೇ ಮಾಹಿತಿ ಇದ್ದರೂ ಅನುವು ಮಾಡಿಕೊಟ್ಟು ಕೋವಿಡ್ ನಿಯಂತ್ರಣ ವೈಫಲ್ಯಕ್ಕೆ ವಿರೋಧ ಪಕ್ಷಗಳ ಮೇಲೆ ಗೂಬೆ ಕೂರಿಸುವುದು ಸರ್ಕಾರದ ವೈಫಲ್ಯದ ಸಂಕೇತ' ಎಂದಿದ್ದಾರೆ.

'ಸೋಂಕು ನಿಯಂತ್ರಣಕ್ಕೆ ಏನು ಮಾಡಬೇಕೆಂದು ತಜ್ಞರ ಜತೆ ಚರ್ಚಿಸಿ, ಸ್ವಯಂ ಪ್ರೇರಣೆಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಜನರ ಪರಿಹಾರ ಕ್ರಮ ಕೈಗೊಳ್ಳಬಹುದೆಂದು ನಾವು ತಿಳಿಸಿದ್ದೇವೆ. ಜನರ ಆರೋಗ್ಯದ ವಿಷಯದಲ್ಲಿ ಯಾವ ಪಕ್ಷಗಳೂ ರಾಜಕೀಯ ಮಾಡಬಾರದೆಂಬ ಬದ್ಧತೆಯೇ ಇದಕ್ಕೆ ಕಾರಣ' ಎಂದೂ ಹೇಳಿದ್ದಾರೆ.

'ವಿರೋಧ ಪಕ್ಷಗಳಿಂದ ಸಲಹೆ ಪಡೆಯುವ, ಪರಿಹಾರ ಕ್ರಮಗಳ ಕುರಿತು ಚರ್ಚಿಸುವ ಕೆಲಸವನ್ನು ಸರ್ಕಾರ ಮಾಡಿಲ್ಲ. ಇದರ ಜೊತೆ ಜನರಿಗೆ ಲಸಿಕೆ ಸರಿಯಾಗಿ ನೀಡಿದ ಇದರ, ನಾನಾ ಪತ್ರ ಬರೆದು ನೀಡಿದ್ದ ಅನುಭವಾತ್ಮಕ ಸಲಹೆಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಬಹಳಷ್ಟು ಮುನ್ನವೇ ಮೂರನೇ ಅಲೆ ಬಗ್ಗೆ ಮಾಹಿತಿ ಇದ್ದರೂ ಸರ್ಕಾರದ ಹಲವು ಸಮಾವೇಶಗಳನ್ನು ಮಾಡಿದೆ. ಹೀಗಿರುವಾಗ ವಿರೋಧ ಪಕ್ಷವನ್ನು ಟೀಕಿಸಲು ಯಾವ ನೈತಿಕ ಹಕ್ಕಿದೆ' ಎಂದೂ ಪ್ರಶ್ನಿಸಿದ್ದಾರೆ.



## ರಾಜ್ಯದ ಮೂವರಿಗೆ 'ಯುವ ರಾಯಭಾರಿ' ಪ್ರಶಸ್ತಿ

ಬೆಂಗಳೂರು: ರಾಜ್ಯದ ಮೂವರು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಇಂಡಿಯನ್ ವಾಟರ್ ವರ್ಕ್ಸ್ ಅಸೋಸಿಯೇಷನ್ (ಐಡಬ್ಲ್ಯುಡಬ್ಲ್ಯುಎ) ನೀಡುವ 2021–22ನೇ ಸಾಲಿನ ರಾಷ್ಟ್ರೀಯ ಯುವ ರಾಯಭಾರಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ನಗರದ ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಸ್ನೇಹಾ ಕೆ.ಗೌಡ ಮತ್ತು ಕೆ.ಟಿ.ವಿಕಾಸ್ ಹಾಗೂ ನ್ಯೂ ಹೊರೈಜಾನ್ ಕಾಲೇಜಿನ ಗಾಯತ್ರಿ ನಿವೇಧಾ ಅವರು ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

'ನೀರಿನ ಸಂರಕ್ಷಣೆ ಹಾಗೂ ನೈರ್ಮಲ್ಯ ವಲಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರತಿ ವರ್ಷವೂ ಈ ಗೌರವ ನೀಡಲಾಗುತ್ತದೆ. ಈ ಬಾರಿ ಮೂರೂ ಪ್ರಶಸ್ತಿಗಳನ್ನೂ ಬೆಂಗಳೂರಿನ ವಿದ್ಯಾರ್ಥಿಗಳೇ ಪಡೆದುಕೊಂಡಿದ್ದು ಹೆಮ್ಮೆಯ ಸಂಗತಿ. ಉತ್ತರಪ್ರದೇಶದ ಲಖನೌದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರಶಸ್ತಿ ವಿತರಿಸಲಾಯಿತು' ಎಂದು ಐಡಬ್ಲ್ಯುಡಬ್ಲ್ಯುಎ (ಅಂತರರಾಷ್ಟ್ರೀಯ) ನಿರ್ದೇಶಕ ಎಚ್.ಕೆ.ರಾಮರಾಜು ಹೇಳಿದ್ದಾರೆ.

# ಮೈದಾನಗಳಿಗೆ ಮಾರುಕಟ್ಟೆ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ನಗರದಲ್ಲಿರುವ ಮಾರುಕಟ್ಟೆಗಳನ್ನು ವಿಕೇಂದ್ರೀಕರಿಸಲು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಮಾರುಕಟ್ಟೆಗಳಿಗೆ ಸಮೀಪದಲ್ಲಿರುವ ಮೈದಾನ ಅಥವಾ ಖಾಲಿ ಜಾಗಗಳಲ್ಲಿ ವ್ಯವಸ್ಥೆ ಮಾಡಬೇಕು. ಇದರಿಂದ ಜನಸಂದಣಿ ಆಗುವುದನ್ನು ತಪ್ಪಿಸಲು ಸಾಧ್ಯ. ಈ ಹಿಂದೆ ಎರಡನೇ ಅಲೆಯ ಸಂದರ್ಭದಲ್ಲಿ ಇದೇ ರೀತಿ ವ್ಯವಸ್ಥೆ ಮಾಡಲಾಗಿತ್ತು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ತಿಳಿಸಿದರು.

ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಜನಸಂದಣಿ ಕಡಿಮೆ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದೂ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

- ಮೆಟ್ರೊ ರೈಲು ಮತ್ತು ಬಿಎಂಟಿಸಿ ಬಸ್ಸುಗಳಲ್ಲಿ ಆಸನ ಸಾಮರ್ಥ್ಯದಷ್ಟೇ ಪ್ರಯಾಣಿಕರಿಗೆ ಅವಕಾಶ.
- ನಗರದಲ್ಲಿ ಕೂಡಲೇ 27 ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸಲು ಸೂಚನೆ.
- ಮನೆಗಳಲ್ಲಿ ಕೊರೊನಾ ಸೋಂಕಿತರ ಪ್ರತ್ಯೇಕ ವಾಸದಲ್ಲಿರುವ ನಿಗಾ ಮತ್ತು ಟ್ರಯಾಜಿಂಗ್ ಪ್ರಕ್ರಿಯೆಯಲ್ಲಿ ಹೌಸ್ ಸರ್ಜನ್ ವೈದ್ಯರು ಹಾಗೂ ಅಂತಿಮ ವರ್ಷದ ನರ್ಸಿಂಗ್ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾಗುವುದು.

**ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ**

13,19,340 ಒಟ್ಟು ಸೋಂಕಿತರು (13,08,540 ನಿನ್ನೆಯ ವಿವರ)

| ಸಕ್ರಿಯ ಪ್ರಕರಣ | ಗುಣಮುಖ ಆದವರು | ಒಟ್ಟು ಸಾವು |
|---|---|---|
| 58,917 | 12,43,995 | 16,427 |

ದಿನದ ಏರಿಕೆ

| | |
|---|---|
| ಹೊಸ ಪ್ರಕರಣ | 10,800 |
| ಗುಣಮುಖ | 840 |
| ಸಾವು | 03 |

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

### ಕೋವಿಡ್ ಆಸ್ಪತ್ರೆಯೆಂದು ಘೋಷಿಸಿದ್ದ ಸರ್ಕಾರ

# ಐಜಿಐಸಿಎಚ್: ಕೋವಿಡೇತರ ಚಿಕಿತ್ಸೆಗೆ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಆಸ್ಪತ್ರೆಯೆಂದು ಗುರುತಿಸಲ್ಪಟ್ಟಿರುವ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ (ಐಜಿಐಸಿಎಚ್) ಕೋವಿಡೇತರ ರೋಗಗಳಿಗೂ ಎಲ್ಲ ಚಿಕಿತ್ಸೆಗಳು ಈ ಮೊದಲಿನಂತೆ ದೊರೆಯಲಿವೆ.

ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವುದರಿಂದ ಐಜಿಐಸಿಎಚ್ ಸಂಸ್ಥೆಯನ್ನು ಸರ್ಕಾರ ಕೋವಿಡ್ ಆಸ್ಪತ್ರೆಯೆಂದು ಘೋಷಿಸಿ, ಆದೇಶ ಹೊರಡಿಸಿತ್ತು. ಇದರಿಂದ ಅಲ್ಲಿ ಕೋವಿಡೇತರ ಚಿಕಿತ್ಸೆಗಳ ಲಭ್ಯತೆ ಬಗ್ಗೆ ಜನರಿಗೆ ಗೊಂದಲ ಸೃಷ್ಟಿಯಾಗಿತ್ತು. ಈ ಬಗ್ಗೆ ಸಂಸ್ಥೆಯು ಸ್ಪಷ್ಟನೆ ನೀಡಿದ್ದು, 'ಕೋವಿಡ್ ಚಿಕಿತ್ಸೆಗೆ 90 ಹಾಸಿಗೆಗಳ ಪ್ರತ್ಯೇಕ ವಾರ್ಡ್ ಮೀಸಲಿಡಲಾಗಿದೆ. ಕೋವಿಡೇತರ ಚಿಕಿತ್ಸೆಯಲ್ಲಿ ಯಾವುದೇ ವ್ಯತ್ಯಯವಾಗುವುದಿಲ್ಲ' ಎಂದು ತಿಳಿಸಿದೆ.



ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ


ಸಂಸ್ಥೆಯಲ್ಲಿ 430 ಹಾಸಿಗೆಗಳಿದ್ದು, 340 ಹಾಸಿಗೆಗಳು ಕೋವಿಡೇತರ ಚಿಕಿತ್ಸೆಗೆ ಸದ್ಯ ಲಭ್ಯ ಇವೆ. ಕೋವಿಡ್ ಚಿಕಿತ್ಸೆಗೆ ಗುರುತಿಸಲಾದ ಹಾಸಿಗೆಗಳಲ್ಲಿ 40 ಹಾಸಿಗೆಗಳು ಈಗಾಗಲೇ ಪೂರ್ಣ ಪ್ರಮಾಣದಲ್ಲಿ ಸಜ್ಜಾಗಿವೆ. ಅಲ್ಲಿ 10 ಕೋವಿಡ್ ಪೀಡಿತ ಮಕ್ಕಳು ಚಿಕಿತ್ಸೆ ಪಡೆಯುತ್ತಿದ್ದಾರೆ. ತೀವ್ರ ಸ್ವರೂಪದಲ್ಲಿ ಅಸ್ವಸ್ಥರಾದ ಮಕ್ಕಳನ್ನು ದಾಖಲಿಸಿಕೊಂಡು, ಚಿಕಿತ್ಸೆ ನೀಡಲಾಗುತ್ತದೆ. ಕೆ.ಸಿ. ಜನರಲ್, ಜಯನಗರದ ಸಾರ್ವಜನಿಕ ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿಯೂ ಮಕ್ಕಳನ್ನು ದಾಖಲಿಸಿಕೊಂಡು, ಚಿಕಿತ್ಸೆ ಒದಗಿಸಲಾಗುತ್ತಿದೆ.

'ಸಂಸ್ಥೆಯನ್ನು ಕೋವಿಡ್ ಆಸ್ಪತ್ರೆಯೆಂದು ಸರ್ಕಾರ ಘೋಷಿಸಿದ ಬಳಿಕ ಕೆಲವರಿಗೆ ಗೊಂದಲ ಉಂಟಾಗಿತ್ತು. ಕೋವಿಡ್ ಚಿಕಿತ್ಸೆಗೆ ಪ್ರತ್ಯೇಕ ಹಾಸಿಗೆಗಳನ್ನು ಗುರುತಿಸಲಾಗಿದೆ. ಈಗಾಗಲೇ 10 ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳು ಹಾಗೂ 10 ಎನ್‌ಐಸಿಯು ಹಾಸಿಗೆ ಲಭ್ಯ ಇವೆ. 60 ಎಚ್‌ಡಿಯು ಹಾಸಿಗೆಗಳು ಇವೆ' ಎಂದು ಐಜಿಐಸಿಎಚ್ ನಿರ್ದೇಶಕ ಡಾ.ಸಂಜಯ್ ಕೆ.ಎಸ್ ತಿಳಿಸಿದರು.

'ಕೋವಿಡೇತರ ಚಿಕಿತ್ಸೆಯನ್ನು ಈ ಮೊದಲಿನಂತೆ ಒದಗಿಸಲಾಗುವುದು. ಮಕ್ಕಳಲ್ಲಿ ಕಾಣಿಸಿಕೊಳ್ಳುವ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆಯನ್ನು ಮುಂದೂಡಲು ಸಾಧ್ಯವಿಲ್ಲ' ಎಂದು ಸ್ಪಷ್ಟಪಡಿಸಿದರು.

## ನಿಧನ ವಾರ್ತೆ

### ಗೋವಿಂದಯ್ಯ



ಬೆಂಗಳೂರು: ನಗರದ ಮಹಾಲಕ್ಷ್ಮಿ ಲೇಔಟ್‌ನಲ್ಲಿ ವಾಸವಿದ್ದ ಗೋವಿಂದಯ್ಯ (69) ಮಂಗಳವಾರ ನಿಧನರಾದರು. ಇವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ತಿಪಟೂರಿನ ಪಿಚ್ಚೇನಹಳ್ಳಿಯಲ್ಲಿ ಜನಿಸಿದ್ದ ಗೋವಿಂದಯ್ಯನವರು ವಿವೇಕಾನಂದ ಪದವಿ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದರು. ನ್ಯಾಕ್ ಸಮಿತಿಯ ಮುಖ್ಯಸ್ಥರಾಗಿಯೂ ಕರ್ತವ್ಯ ನಿರ್ವಹಿಸಿದ್ದರು.

ಹಾಸನದ ಗಂಡಸಿ ಬಳಿಯ ಕೊಂಡೇನಾಳು ಗ್ರಾಮದಲ್ಲಿ ಬುಧವಾರ ಬೆಳಿಗ್ಗೆ 11 ಗಂಟೆಗೆ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುತ್ತದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

## ನಗರದಲ್ಲಿ ಇಂದು

**ರಾಜ್ಯ ಸಾಲ ವಿಚಾರಗೋಷ್ಠಿ:** ಆಯೋಜನೆ–ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್), ಸ್ಥಳ–ರಾಡಿಸನ್ ಬ್ಲೂ ಏಟ್ರಿಯ ಹೋಟೆಲ್, ಅರಮನೆ ರಸ್ತೆ, ಬೆಳಿಗ್ಗೆ 10.30

**ಸ್ವಾಮಿ ವಿವೇಕಾನಂದ ಜಯಂತಿ ಹಾಗೂ ರಾಷ್ಟ್ರೀಯ ಯುವದಿನ:** ಅತಿಥಿಗಳು–ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಎಂ.ಜಯಪ್ರಕಾಶ್, ಅಧ್ಯಕ್ಷತೆ–ಲಿಂಗರಾಜ ಗಾಂಧಿ, ಆಯೋಜನೆ–ಸಮರ್ಥ ಭಾರತ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ–ಜ್ಞಾನಜ್ಯೋತಿ ಸಭಾಂಗಣ, ಬೆಳಿಗ್ಗೆ 11


**ಸ್ವಾಮಿ ವಿವೇಕಾನಂದರ ಜನ್ಮದಿನ ಹಾಗೂ ಯುವ ಸಪ್ತಾಹ:** ಚಾಲನೆ–ಸಚಿವರಾದ ನಾರಾಯಣಗೌಡ ಮತ್ತು ಸಿ.ಎನ್.ಅಶ್ವತ್ಥನಾರಾಯಣ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಮಧ್ಯಾಹ್ನ 12

**ಆಯವ್ಯಯ ಪೂರ್ವಭಾವಿ ಸಭೆ:** ಉದ್ಘಾಟನೆ–ಶಾಸಕ ಎಂ.ಪಿ. ಕುಮಾರಸ್ವಾಮಿ, ಅಧ್ಯಕ್ಷತೆ–ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ಆಯೋಜನೆ–ಕರ್ನಾಟಕ ದಲಿತ ಉದ್ದಿಮೆದಾರರ ಸಂಘ, ಸ್ಥಳ–ಬಾಪೂಜಿ ಸಭಾಂಗಣ, ಗಾಂಧಿಭವನ, ಮಧ್ಯಾಹ್ನ 3

**ಸ್ವಾಮಿ ವಿವೇಕಾನಂದ ಜಯಂತಿ ಹಾಗೂ ವಿವೇಕ ದರ್ಶನ ವಿಶೇಷಾಂಕ ಲೋಕಾರ್ಪಣೆ:** ಅಧ್ಯಕ್ಷತೆ–ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಅತಿಥಿಗಳು– ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಸಿ.ಎನ್. ಅಶ್ವತ್ಥನಾರಾಯಣ, ಸ್ಥಳ–ಕೊಂಡಜ್ಜಿ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಪ್ರಾಂಗಣ, ಅರಮನೆ ರಸ್ತೆ, ಮಧ್ಯಾಹ್ನ 3

**ವಿವೇಕಾನಂದ ಜಯಂತಿ ಹಾಗೂ ಕೋವಿಡ್ ಸಂತ್ರಸ್ತ ಕುಟುಂಬಗಳಿಗೆ ನೆರವು ಕಾರ್ಯಕ್ರಮ:** ಅತಿಥಿಗಳು–ಆರ್. ಶೇಷಶಾಸ್ತ್ರಿ, ಟಿ.ಎಸ್.ಫಣಿಕುಮಾರ್, ಭಾರ್ಗವಿ ಹೇಮಂತ್, ಆಯೋಜನೆ–ಕರ್ನಾಟಕ ಕಾರ್ಮಿಕ ಲೋಕ, ಸ್ಥಳ–ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ ಸಭಾಂಗಣ, ಎಸ್‌ಬಿಐ ಹಳೆಯ ಕಟ್ಟಡ, ಸುರಂಜನದಾಸ್ ರಸ್ತೆ, ವಿಮಾನಪುರ, ಮಧ್ಯಾಹ್ನ 3.15

**ಭರತನಾಟ್ಯ ರಂಗಪ್ರವೇಶ:** ಯಶಸ್ವಿನಿ ಗುರುಪ್ರಸಾದ್, ಅತಿಥಿಗಳು–ಎಸ್. ರಂಗಪ್ಪ, ಸುಗ್ಗನಹಳ್ಳಿ ಷಡಕ್ಷರಿ, ಕುಮುದಾ ಅಭಯಂಕರ್, ಸ್ಥಳ–ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 5



ಯಶಸ್ವಿನಿ ಗುರುಪ್ರಸಾದ್

**ಸಿಜಿಕೆ ರಾಷ್ಟ್ರೀಯ ರಂಗೋತ್ಸವ:** 'ನೂರಮ್ಮ ಬಿರಿಯಾನಿ ದರ್ಬಾರ್' ನಾಟಕ ಪ್ರದರ್ಶನ, ನಿರ್ದೇಶನ–ಶ್ರೀಜಿತ್ ಸುಂದರಂ, ತಂಡ–ಕಟ್ಟಿಯಕ್ಕಾರಿ ಥಿಯೇಟರ್ ಗ್ರೂಪ್, ಆಯೋಜನೆ–ರಂಗನಿರಂತರ, ಸ್ಥಳ–ವಿ.ಚನ್ನಪ್ಪ ವೇದಿಕೆ, ನಯನ ಸಭಾಂಗಣ, ಸಂಜೆ 7

## ಬಹು ಮಾಧ್ಯಮ ಪ್ರಜಾವಾಣಿ

www.prajavani.net LIVE

Prajavani.net | Prajavani | Prajavani

ತಾಜಾ ಸುದ್ದಿಗಾಗಿ ಪ್ರಜಾವಾಣಿ ಆ್ಯಪ್ ಬಳಸಿ https://bit.ly/PrajavaniApp

**ಇಂದು**

**ಪಾಡ್‌ಕಾಸ್ಟ್:** ಪ್ರಚಲಿತ: ಬೆಳಿಗ್ಗೆ 9, **ಸಂಪಾದಕೀಯ:** ಬೆಳಿಗ್ಗೆ 9.30, ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಪ್ರಜಾವಾಣಿ ಕನ್ನಡ ಧ್ವನಿ

**ನಾಳೆ**



ಮಕ್ಕಳಿಗೆ ಕೋವಿಡ್ ಲಸಿಕೆ ಕುರಿತು ಮಾಹಿತಿ ನೀಡಲಿದ್ದಾರೆ ಡಾ.ಪ್ರೀತ್ ಶೆಟ್ಟಿ, ಮಕ್ಕಳ ತಜ್ಞರು, ಫೋರ್ಟಿಸ್ ಆಸ್ಪತ್ರೆ

ಡಾಕ್ಟರ್ಸ್ ಲೈವ್ ಸಂಜೆ 4 ಗಂಟೆಗೆ


**ರಾಮನಗರ ಜಿಲ್ಲಾ ಪಂಚಾಯತ್**

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ರಾಮನಗರ ವಿಭಾಗ, ರಾಮನಗರ.

ಸಂಖ್ಯೆ: 26/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ಸ.ಇಂ–1/2076–2086/2021–22 (CALL-4) ದಿನಾಂಕ: 10.01.2022

**ಇ–ಪ್ರೊಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ **JJM ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ರಾಮನಗರ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.** ಕಾಮಗಾರಿಗಳನ್ನು ನಿರ್ವಹಿಸಲು ವಿವರಗಳು ಈ ಕೆಳಕಂಡಂತಿವೆ.

(1) ಟೆಂಡರ್‌ಗಿಟ್ಟ ಮೊತ್ತ: **ರೂ. 33.18 ಲಕ್ಷಗಳು**. ಇ.ಎಂ.ಡಿ: **ಮೊತ್ತ ರೂ. 66360.00**. (2) ಕಾಲಾವಧಿ: **03 ತಿಂಗಳು**.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ: 10.01.2022ರ ಸಂಜೆ 5:30 ಗಂಟೆಯವರೆಗೆ. ಸ್ವೀಕೃತವಾದ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅನ್ನು ತೆರೆಯುವ **ದಿನಾಂಕ: 20.01.2022ರ ಬೆಳಿಗ್ಗೆ 11:00 ಗಂಟೆಯ ನಂತರ.**

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ / ವೆಬ್‌ಸೈಟ್ **www.eproc.karnataka.gov.in** ರಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು

ಗ್ರಾ.ಕು.ನೀ&ನೈ ಇಲಾಖೆ, ರಾಮನಗರ ವಿಭಾಗ, ರಾಮನಗರ

ವಾಸಾಸಂಇ/ರಾನ/ಬ್ರಾಂಜ್/405/2021–22

**ನಗರಸಭೆ ಕಾರ್ಯಾಲಯ, ಚಿಕ್ಕಬಳ್ಳಾಪುರ**

ದೂ.ಸಂ. & ಫ್ಯಾಕ್ಸ್: 08156–275557

ಇ–ಮೇಲ್ : itstaff_ulb_chickballapur@yahoo.co.in

ವೆಬ್‌ಸೈಟ್: www.chikkaballapurcity.mrc.gov.in

ಸಂ: ನ.ಸ.ಚಿ/ಸಿಬ್ಬಂದಿ/ಸಿ.ಆರ್/59/2021–22 ದಿನಾಂಕ: 30.12.2021

**ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)**

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಚಿಕ್ಕಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ 2021–22ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಈ ಕೆಳಗೆ ನಮೂದಿಸಿರುವ ಸೇವೆಯನ್ನು ಒದಗಿಸಲು ಅಧಿಕೃತ ಮಾನ್ಯತೆ ಪಡೆದ ಚಾಲನೆಯಲ್ಲಿರುವ ಮತ್ತು ಕಾರ್ಮಿಕ ಇಲಾಖೆಯಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ /ಸಂಸ್ಥೆಯಿಂದ/ಎನ್.ಜಿ.ಓ ಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು **www.eproc.karnataka.gov.in** ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಈ ಕಾರ್ಯಾಲಯದಿಂದ ಅಥವಾ ಈ ಕಛೇರಿಯ ವೆಬ್‌ಸೈಟ್ **www.chickballapurcity.mrc.gov.in** ನಲ್ಲಿ ಪಡೆಯಬಹುದು. **(1)** ಭರ್ತಿ ಮಾಡಿದ ಟೆಂಡರ್‌ಗಳನ್ನು ಅಂತರ್ಜಾಲದ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **24.01.2022 ರಂದು ಸಂಜೆ 430 ಗಂಟೆಯವರೆಗೆ. (2)** ಸ್ವೀಕೃತವಾದ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27.01.2022 ರಂದು ಬೆಳಿಗ್ಗೆ 11.00 ಗಂಟೆಗೆ. (3)** ಸ್ವೀಕೃತವಾದ ಟೆಂಡರ್‌ಗಳ ಆರ್ಥಿಕ ಟೆಂಡರ್‌ಗಳ ಬಿಡ್ ತೆರೆಯುವ ದಿನಾಂಕ: **29.01.2022ರಂದು ಬೆಳಿಗ್ಗೆ 11.00 ಗಂಟೆಗೆ. ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಗಳನ್ನು ಪರಿಗಣಿಸಲಾಗುವುದು. (1) ಕಾಮಗಾರಿಯ ಹೆಸರು:** ಚಿಕ್ಕಬಳ್ಳಾಪುರ ನಗರಸಭೆಯ ಕಛೇರಿ ಕೆಲಸಗಳಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನಿಯೋಜನೆ ಮಾಡುವುದು. (CMC/EST/CR/59/2021-220). ಅಂದಾಜು ಮೊತ್ತ: **ರೂ. 20.25 ಲಕ್ಷಗಳು.** ಲೆಕ್ಕ ಶೀರ್ಷಿಕೆ: ನಗರಸಭಾ ನಿಧಿ 2021–22. ಇ.ಎಂ.ಡಿ ಮೊತ್ತ: ರೂ.0/–.

ಸಹಿ/–(ಡಿ.ಎಸ್.ಆನಂದರೆಡ್ಡಿ(ಬಾಬು)) ಅಧ್ಯಕ್ಷರು ನಗರಸಭೆ, ಚಿಕ್ಕಬಳ್ಳಾಪುರ

ಸಹಿ/–(ಡಾ.ಎನ್. ಮಹಾಂತೇಶ್) ಪೌರಾಯುಕ್ತರು ನಗರಸಭೆ, ಚಿಕ್ಕಬಳ್ಳಾಪುರ

ವಾ.ಸಾ.ಸಂ.ಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ286/ಎಂಸಿಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

**ಜಿಲ್ಲಾ ಪಂಚಾಯತ್, ಕೋಲಾರ,**

ಸಂ: ಜಿ.ಪಂ.ಕೋ/ಮ.ಉ.ಯೋ/ಆ.ದಾ.ಸಾ.ಟೆ/2021–22 ದಿನಾಂಕ: 07.01.2022

**ಇ–ಟೆಂಡರ್ ಪ್ರಕಟಣೆ**

**(ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ)**

2021–22ನೇ ಸಾಲಿನಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಒಂದು ವರ್ಷದ ಅವಧಿಗೆ ಕೋಲಾರ ಜಿಲ್ಲೆಯ 5 ತಾಲ್ಲೂಕುಗಳ ಕೆ.ಎಫ್.ಸಿ.ಎಸ್.ಸಿ ಸಗಟು ಮಳಿಗೆಗಳಿಂದ ಆಯಾ ತಾಲ್ಲೂಕು ಶಾಲಾ ಅಡುಗೆ ಕೇಂದ್ರಗಳಿಗೆ ಆಹಾರ ಸಾಮಾಗ್ರಿಗಳನ್ನು ಸಾಗಾಣಿಕೆ ಮಾಡಲು ತಾಲ್ಲೂಕುವಾರು 5 ಪ್ರತ್ಯೇಕ ಇ–ಟೆಂಡರ್‌ಗಳನ್ನು ಈ ಕಛೇರಿ ಪತ್ರ ಸಂಖ್ಯೆ: **ಜಿ.ಪಂ.ಕೋ/ಮ.ಉ.ಯೋ/ಆ.ದಾ.ಸಾ.ಟೆ /2021–22 ದಿನಾಂಕ : 03.01.2022 ರಂತೆ** ಕರೆಯಲಾಗಿರುತ್ತದೆ. ಸದರಿ ಟೆಂಡರ್‌ಗಳ ವಿವರಗಳನ್ನು **https://eproc.karnataka.gov.in**ನಲ್ಲಿ ಪಡೆಯಬಹುದಾಗಿರುತ್ತದೆ. ಸದರಿ 5 ಟೆಂಡರ್‌ಗಳ ಅಂದಾಜು ಮೌಲ್ಯ 54.00 ಲಕ್ಷಗಳು ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **31.01.2022 ಸಂಜೆ 4.30 ಗಂಟೆ.** ಹೆಚ್ಚಿನ ವಿವರಗಳಿಗಾಗಿ 08152–241477 ಮತ್ತು +91 6360267404 ನಲ್ಲಿ ಸಂಪರ್ಕಿಸಬಹುದು.

ಸಹಿ/–ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 324/ಎಂ.ಸಿ.ಎ/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಸಲು ದಾವೆ ಪ್ರಕರಣ ಸಂಖ್ಯೆ–53/2021

**ಮಾನ್ಯ ದಿವಾಣಿ ನ್ಯಾಯಾಧೀಶರ ಲಕ್ಷ್ಮೇಶ್ವರ ಇವರ ನ್ಯಾಯಾಲಯದಲ್ಲಿ**

ವಾದಿ : ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಿಭಾಗ ಗದಗ. ಪ್ರತಿನಿಧಿಸುವ ವಿಭಾಗೀಯ ನಿಯಂತ್ರಣಾಧಿಕಾರಿ, ವಾ.ಕ.ರ.ಸಾ.ಸಂಸ್ಥೆ ಗದಗ ವಿಭಾಗ, ಗದಗ

ವಿರುದ್ಧ

ಪ್ರತಿವಾದಿ : 1) ಶ್ರೀ ಚಂದ್ರಶೇಖರ ಆರ್. @ ಚಂದ್ರು, ವಯಸ್ಕರು. ಸಂಸ್ಥಾಪರ ರಾಜಾದ್ಯಕ್ಷ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ (ರಿ) # 149, 5 ನೇ ಕ್ರಾಸ್ ನಂದಾ ಹೋಟೆಲ್ ಬಿಲ್ಡಿಂಗ್, ಗಾಂಧಿ ಪಾರ್ಕ ಎದರು, ಗಾಂಧಿನಗರ ಬೆಂಗಳೂರ–580009. ಹಾಗೂ ಇತರರು

**ದಿವಾಣಿ ಪ್ರಕ್ರಿಯಾ ಸಂಹಿತೆಯ ಆದೇಶ 5 ನಿಯಮ 20(1ಎ) ರಡಿ ಸಮನ್ಸ**

ಮೇಲ್ಕಾಣಿಸಿದ ಪ್ರಕರಣವನ್ನು ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಕರಾರಿನ ನಿರ್ದಿಷ್ಠ ಅನುಷ್ಠಾನಕ್ಕಾಗಿ ಕೋರಿ ದಾಖಲಿಸಿದ್ದು. ವಾದಿಯು ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಗಾಗಿ ಕೋರಿ ದಾಖಲಿಸಿದ್ದು, ಇದರಲ್ಲಿನ 1 ಮತ್ತು 2 ನೇ ಪ್ರತಿವಾದಿಯರು

1) ಶ್ರೀ ಚಂದ್ರಶೇಖರ ಆರ್. @ ಚಂದ್ರು, ವಯಸ್ಕರು. ಸಂಸ್ಥಾಪರ ರಾಜಾದ್ಯಕ್ಷ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ (ರಿ) # 149, 5 ನೇ ಕ್ರಾಸ್ ನಂದಾ ಹೋಟೆಲ್ ಬಿಲ್ಡಿಂಗ್, ಗಾಂಧಿ ಪಾರ್ಕ ಎದರು, ಗಾಂಧಿನಗರ ಬೆಂಗಳೂರ–580009

2) ಶ್ರೀ ತಿಪ್ಪೇಸ್ವಾಮಿ ಕೆ. ವಯಸ್ಕರು. ರಾಜ್ಯ ಪ್ರಧಾನ ಕಾರ್ಯದರ್ಶಿ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ (ರಿ) # 149, 5 ನೇ ಕ್ರಾಸ್ ನಂದಾ ಹೋಟೆಲ್ ಬಿಲ್ಡಿಂಗ್, ಗಾಂಧಿ ಪಾರ್ಕ ಎದರು, ಗಾಂಧಿನಗರ ಬೆಂಗಳೂರ–580009

ಇವರು ಮಾನ್ಯ ನ್ಯಾಯಾಲಯದಿಂದ ಹ್ಯಾಂಡ ಸಮನ್ಸ್ ಕಳಿಸಿದರೂ ಸಹಿತ ಸ್ವೀಕರಿಸಲು ಇನಕಾರ ಮಾಡಿರುತ್ತಾರೆ.

ಈ ಪ್ರಕರಣವು ವಿಚಾರಣೆಗೆ ಅಂತಾ ದಿನಾಂಕ : 25–01–2022 ರಂದು ನಿಗದಿಯಾಗಿದ್ದು. ಕಾರಣ 1 ಮತ್ತು 2 ನೇ ಪ್ರತಿವಾದಿಯಾಗಿರುವ ನೀವು ಅಂದು ಮುಂಜಾನೆ 10:30 ಘಂಟೆಗೆ ನೀವಾಗಲು ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸತಕ್ಕದ್ದು ತಪ್ಪಿದಲ್ಲಿ ಮುಂದಿನ ಹುಕುಂ ಮಾಡಲು ಬರಲಾಗುವುದು ಅಂತಾ ಕೊಟ್ಟ ಸಮನ್ಸ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಈ ದಿನ : 30–12–2021 ನ್ಯಾಯಾಲಯದ ಮೊಹರು ಮತ್ತು ನನ್ನ ಸಹಿಯೊಂದಿಗೆ ನೀಡಲಾಗಿದೆ.

ಲಕ್ಷ್ಮೇಶ್ವರ 21–12–2021

ನ್ಯಾಯಾಲಯದ ಆಜ್ಞೆಯ ಮೇರೆಗೆ –ಸಹಿ ಇದೆ– ಆಡಳಿತ ಶಿರಸ್ತೇದಾರರು ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಲಕ್ಷ್ಮೇಶ್ವರ

ಕರ್ನಾಟಕ ಸರ್ಕಾರ

**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ**

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101

ದೂರವಾಣಿ ಸಂಖ್ಯೆ: ಕಛೇರಿ: 08156–270427

ಫ್ಯಾಕ್ಸ್: 08156 – 270427 ಇಮೇಲ್:– eemidcbpura@gmail.com

4702 ನಬಾರ್ಡ್ ಆರ್.ಐ.ಡಿ.ಎಫ್ 26 ಯೋಜನೆ ಅಡಿಯಲ್ಲಿನ ಟೆಂಡರ್ ಪ್ರಕಟಣೆ ಸಂಖ್ಯೆ : 11/2021–22 ದಿನಾಂಕ : 30/12/2021

**ಭಾಗ–1: ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನ– ಕೆ.ಡಬ್ಲ್ಯು –3**

1.ಇ–ಪ್ರೊಕ್ಯೂರ್‌ಮೆಂಟ್ ಅನ್ವಯ ಕಾಮಗಾರಿಗೆ ಟೆಂಡರ್ ಅನ್ನು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಚಿಕ್ಕಬಳ್ಳಾಪುರ ರವರು ಟೆಂಡರ್ ಕರೆಯಲಾಗಿದ್ದು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz.,http://eproc.karnataka.gov.in) ರಲ್ಲಿ ಟೆಂಡರ್‌ಗಳನ್ನು ಒಂದು ಮತ್ತು ಎರಡು ಕವರ್ ಪದ್ಧತಿಯಲ್ಲಿ (1) ಲೋಕೋಪಯೋಗಿ ಕಛೇರಿಯಲ್ಲಿ ನೋಂದಣಿ ಮಾಡಿದ ವಿವರದ ಪ್ರತಿ (2) ಇ.ಎಂ.ಡಿ. ಬಗ್ಗೆ (3) ಆದಾಯ ತೆರಿಗೆ ತೀರುವಳಿ ಬಗ್ಗೆ, (4) ಲೈನ್ ಆಫ್ ಕ್ರೆಡಿಟ್, (5) ಯಂತ್ರೋಪಕರಣಗಳು (ಡಾಕ್ಯೂಮೆಂಟ್ ಬಿಡ್‌ನಲ್ಲಿ ತೋರಿಸಿರುವಂತೆ. 6) ಟೆಂಡರ್‌ನಲ್ಲಿ ಕರೆದಿರುವ ಅದೇ ಮಾದರಿಯ ಒಂದು ಕಾಮಗಾರಿ ನಿರ್ವಹಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು. ಗುತ್ತಿಗೆದಾರರು ಸದರಿ ಕಾಮಗಾರಿಗೆ ಬೇಕಾಗಿರುವ ಪೂರ್ವಾರ್ಹತೆಗಳ ಬಗ್ಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ 3 ರಂತೆ (Instructions to Tenders to award the contract) ಪರಿಶೀಲಿಸಿ ಅದರಂತೆ ಭಾಗವಹಿಸಬಹುದು.

| ಕ್ರ ಸಂ | ಕಾಮಗಾರಿಯ ಹೆಸರು | ಟೆಂಡರ್ ಫಾರಂನ ಮಾದರಿ | ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷ ಗಳಲ್ಲಿ) | ಟೆಂಡರ್ ಫಾರಂ ಬೆಲೆ | ಕಾಲಾವಧಿ (ಮಳೆಗಾಲವು ಸೇರಿ) | ಗುತ್ತಿಗೆದಾರರ ದರ್ಜೆ |
|---|---|---|---|---|---|---|
| 4702 ನಬಾರ್ಡ್ ಆರ್.ಐ.ಡಿ.ಎಫ್ 26 | | | | | | |
| 1 | ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಮಂಚೇನಹಳ್ಳಿ ಹೋಬಳಿ ದೇವರಕೊಂಡಹಳ್ಳಿ ಗ್ರಾಮದ ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ. | ಕೆಡಬ್ಲ್ಯೂ3 | 100.00 | ಇ–ಪ್ರೊಕ್ಯೂರ್ ಮೆಂಟ್ ದರದಂತೆ | 6 ತಿಂಗಳು | 1 ನೇ ದರ್ಜೆ ಮೇಲ್ಪಟ್ಟು |

1) ಸದರಿ ಟೆಂಡರ್‌ನಲ್ಲಿ ಕರೆದಿರುವ ಕಾಮಗಾರಿಗೆ ಸಂಬಂಧಿಸಿದ ಇಎಂಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವ ಯಾವುದಾದರೊಂದು ರೂಪದಲ್ಲಿ ಟೆಂಡರ್ ಊರ್ಜಿತ ಅವಧಿಯನ್ನು ಬಿಟ್ಟು ಹೆಚ್ಚುವರಿಯಾಗಿ 45 ದಿನಗಳನ್ನು ಒಳಗೊಂಡಂತೆ ಸಲ್ಲಿಸಬೇಕಾಗಿರುತ್ತದೆ.

2) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz., http://eproc.karnataka.gov.in) ಗೆ ದಿನಾಂಕ: 19/01/2022 ರಂದು ಸಂಜೆ 16.00 ಗಂಟೆವರೆಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಕೆಲಸ ನಿರ್ವಹಿಸಿದ ಬಗ್ಗೆ ಅನುಭವ ಕೆಲಸ ಅರ್ಹತೆ ಬಗ್ಗೆ ಇತ್ಯಾದಿ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಟೆಂಡರ್ ಮೌಲ್ಯಮಾಪನ ಸಮಯದಲ್ಲಿ ಪರಿಶಿಲನೆಗೆ ಸಲ್ಲಿಸತಕ್ಕದ್ದು.

3) ಭರ್ತಿ ಮಾಡಿದ ತಾಂತ್ರಿಕ ಬಿಡ್‌ನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 24/01/2022 ರಂದು ತೆರೆಯಲಾಗುವುದು.

4) ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–23010900, 080–23010901 ಮತ್ತು 080–38013000 ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

### ವಾರಾಂತ್ಯ ಕರ್ಫ್ಯೂ ದಿನವೇ ಸಂಕ್ರಾಂತಿ ಹಬ್ಬ– ವ್ಯಾಪಾರಿಗಳಿಗೆ ಚಿಂತೆ

# ಮನೆಗಳಲ್ಲೇ ಸುಗ್ಗಿಗೆ ಸಜ್ಜು: ಖರೀದಿ ಜೋರು

ಪ್ರಜಾವಾಣಿ ವಾರ್ತೆ



ಸಂಕ್ರಾಂತಿಗಾಗಿ ಕೆ.ಆರ್‌.ಮಾರುಕಟ್ಟೆಗೆ ತಂದಿರುವ ಕಬ್ಬಿನ ಜಲ್ಲೆಗಳನ್ನು ಕಾರ್ಮಿಕರು ಕೆಳಗಿಳಿಸುತ್ತಿದ್ದ ದೃಶ್ಯ ಮಂಗಳವಾರ ಕಂಡು ಬಂತು –ಪ್ರಜಾವಾಣಿ ಚಿತ್ರ




ಗಾಂಧಿಬಜಾರ್‌ನ ಮಳಿಗೆಗಳಲ್ಲಿ ಸಂಕ್ರಾಂತಿ ಪ್ರಯುಕ್ತ ಎಳ್ಳು–ಬೆಲ್ಲ ಖರೀದಿಯಲ್ಲಿ ತೊಡಗಿದ್ದ ಗ್ರಾಹಕರು –ಪ್ರಜಾವಾಣಿ ಚಿತ್ರ/ಅನೂಪ್ ರಾಘ್‌ ಟಿ.

**ಬೆಂಗಳೂರು:** ಮಕರ ಸಂಕ್ರಾಂತಿ ಆಚರಣೆಗೆ ವಾರಾಂತ್ಯ ಕರ್ಫ್ಯೂ ಅಡ್ಡಿಯಾಗಿದೆ. ಆದರೂ, ಹಬ್ಬಕ್ಕೆ ಬೇಕಾದ ಅಗತ್ಯ ಸಾಮಗ್ರಿಗಳ ಖರೀದಿ ಭರಾಟೆ ಮಂಗಳವಾರದಿಂದಲೇ ಶುರುವಾಗಿದೆ.

ಶನಿವಾರ (ಜ.15) ಮಕರ ಸಂಕ್ರಾಂತಿ ಹಬ್ಬವಿದೆ. ಕೋವಿಡ್ ನಿಯಂತ್ರಣಕ್ಕಾಗಿ ವಾರಾಂತ್ಯ ಕರ್ಫ್ಯೂ ಜಾರಿಯಲ್ಲಿರುವ ಕಾರಣ ಹಬ್ಬದ ಅದ್ದೂರಿ ಆಚರಣೆಗೆ ಅವಕಾಶ ಇಲ್ಲ. ಬೆಂಗಳೂರಿನ ಜನ ಮನೆಗಳಲ್ಲೇ ಸುಗ್ಗಿಯನ್ನು ಸಂಭ್ರಮದಿಂದ ಆಚರಿಸಲು ತಯಾರಿ ನಡೆಸುತ್ತಿದ್ದಾರೆ.

ಕೆ.ಆರ್.ಮಾರುಕಟ್ಟೆ ಆವರಣದಲ್ಲಿ ಸಂಕ್ರಾಂತಿಗಾಗಿ ಟನ್‌ಗಟ್ಟಲೆ ಕಬ್ಬಿನ ಜಲ್ಲೆಗಳನ್ನು ಮಾರಾಟಕ್ಕೆ ಇಡಲಾಗಿದೆ. ಯಶವಂತಪುರ, ಗಾಂಧಿ ಬಜಾರ್, ಮಲ್ಲೇಶ್ವರ, ಬಸವನಗುಡಿ, ಜಯನಗರ, ವಿಜಯನಗರ, ಮಡಿವಾಳ, ಕೆ.ಆರ್.ಪುರ, ಯಲಹಂಕ, ಕೆಂಗೇರಿ ಸೇರಿದಂತೆ ನಗರದ ಪ್ರಮುಖ ಬಡಾವಣೆಗಳಲ್ಲೂ ಕಬ್ಬು, ಕಡಲೆಕಾಯಿ, ಅವರೆಕಾಯಿ, ಗೆಣಸು ರಾಶಿ ಹಾಕಲಾಗಿದೆ. ಎಳ್ಳು-ಬೆಲ್ಲ, ಸಕ್ಕರೆ ಅಚ್ಚುಗಳ ಮಾರಾಟ ಮಾರುಕಟ್ಟೆಗಳಲ್ಲಿ ಕಳೆಗಟ್ಟಿದೆ.

ಬಿಳಿ ಕಬ್ಬಿನ ಒಂದು ಜಲ್ಲೆಯ ಸಗಟು ದರ ₹50ವರೆಗೆ ಇದೆ. ಕಪ್ಪು ಬಣ್ಣದ ಕಬ್ಬಿನ ಜಲ್ಲೆ ₹70ರವರೆಗೆ ಮಾರಾಟವಾಗುತ್ತಿದೆ. ಚಿಲ್ಲರೆ ವ್ಯಾಪಾರಿಗಳು ಜಲ್ಲೆಗಳನ್ನು ತುಂಡರಿಸಿ, ಒಂದನ್ನು ₹10ರಿಂದ ₹20ರವರೆಗೆ ಮಾರಾಟ ಮಾಡುತ್ತಿದ್ದಾರೆ.

ಅಧಿಕ ಮಳೆಯಿಂದ ಈ ಬಾರಿ ಕಡಲೆಕಾಯಿ, ಅವರೆಕಾಯಿ ಬೆಳೆಗಳು ಹಾನಿಗೆ ಒಳಗಾಗಿದ್ದರಿಂದ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಬಂದಿಲ್ಲ. ಹಾಗಾಗಿ ದರಗಳೂ ತುಸು ಹೆಚ್ಚೇ ಇವೆ. ಗಾಂಧಿ ಬಜಾರ್‌ನ ಮಳಿಗೆಗಳಲ್ಲಿ ಎಳ್ಳು- ಬೆಲ್ಲ, ಒಣ ಕೊಬ್ಬರಿ, ಕಡಲೆ ಬೀಜ, ಹುರಿಗಡಲೆ ಮಿಶ್ರಣ, ಸಕ್ಕರೆ ಅಚ್ಚು ಮಿಶ್ರಣದ ಮಾರಾಟ ಗರಿಗೆದರಿದೆ. ಎಳ್ಳು-ಬೆಲ್ಲ ಮಿಶ್ರಣದ 1 ಕೆ.ಜಿ. ಪೊಟ್ಟಣ ₹250ರಿಂದ ₹300ರವರೆಗೆ ಮಾರಾಟವಾಗುತ್ತಿದೆ.

‘ಹಬ್ಬಕ್ಕೆ ಉತ್ತಮವಾದ ಕಬ್ಬು ಬಂದಿದೆ. ಆದರೆ, ಸಂಕ್ರಾಂತಿಯಂದೇ ಕರ್ಫ್ಯೂ ಇರುವುದರಿಂದ ವ್ಯಾಪಾರ ನಡೆಯುವುದು ಅನುಮಾನ. ಇರುವ ಮೂರು ದಿನಗಳಲ್ಲಾದರೂ ಆದಷ್ಟು ವ್ಯಾಪಾರ ಆಗಲಿ ಎಂದು ಈಗಿನಿಂದಲೇ ಕಬ್ಬಿನ ವ್ಯಾಪಾರ ಆರಂಭಿಸಿದ್ದೇವೆ. ಗ್ರಾಹಕರ ಸಂಖ್ಯೆ ಸದ್ಯ ಕಡಿಮೆ ಇದೆ. ಶುಕ್ರವಾರದ ವೇಳೆಗೆ ವ್ಯಾಪಾರ ತುಸು ಚೇತರಿಸುವ ನಿರೀಕ್ಷೆಯಿದೆ’ ಎಂದು ಕೆ.ಆರ್.ಮಾರುಕಟ್ಟೆ ಬಳಿ ಕಬ್ಬು ಮಾರಾಟ ಮಾಡುತ್ತಿರುವ ಮುನಿಯಪ್ಪ ಹೇಳಿದರು.

## ಗಗನಕ್ಕೇರಿದ ಹೂವುಗಳ ದರ

ಬಸವನಗುಡಿ, ಗಾಂಧಿಬಜಾರ್, ಮಲ್ಲೇಶ್ವರ, ಜಯನಗರ, ಜೆ.ಪಿ.ನಗರ, ಹೆಬ್ಬಾಳ, ಯಶವಂತಪುರ, ಇಂದಿರಾನಗರ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಹಬ್ಬಕ್ಕಾಗಿ ಕಿರು ಮಾರುಕಟ್ಟೆಗಳು ತಲೆ ಎತ್ತಿವೆ. ಬಟ್ಟೆಗಳ ಮಾರಾಟವೂ ಕಳೆಗಟ್ಟಿದೆ. ತಿಂಗಳುಗಳಿಂದ ಗ್ರಾಹಕರಿಲ್ಲದೇ ಭಣಗುಡುತ್ತಿದ್ದ ಬಟ್ಟೆ ಮಳಿಗೆಗಳಲ್ಲೂ ಗ್ರಾಹಕರ ಸಂಖ್ಯೆ ಹೆಚ್ಚಾಗಿದೆ.

ಸಂಕ್ರಾಂತಿ ಹಬ್ಬದ ವಿಶೇಷವಾದ ‘ಎಳ್ಳು-ಬೆಲ್ಲ’ ತಯಾರಿಸಲು ಬೆಲ್ಲ, ಎಳ್ಳು, ಬಣ್ಣದ ಬತಾಸು, ಕೊಬ್ಬರಿ ಖರೀದಿಯಿಂದಾಗಿ ದಿನಸಿ ಮಾರಾಟ ಮಳಿಗೆಗಳಲ್ಲೂ ಗ್ರಾಹಕರ ಸಂಖ್ಯೆ ಹೆಚ್ಚು ಇತ್ತು.

**ದರಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)**

| ಸಂಕ್ರಾಂತಿ ವಿಶೇಷ | ಕೆ.ಆರ್. ಮಾರುಕಟ್ಟೆ ದರ | ಹಾಪ್‌ಕಾಮ್ಸ್ ದರ |
|---|---|---|
| ಕಡಲೆಕಾಯಿ | 80 | 90 |
| ಅವರೆಕಾಯಿ | 60 | 70 |
| ಕೆಂಪುಗೆಣಸು | 30 | 40 |
| ಮರಗೆಣಸು | 20 | 30 |

## ಕಾನ್‌ಸ್ಟೆಬಲ್ ಮೇಲೆ ಹಲ್ಲೆ; ರೌಡಿ ಕಾಲಿಗೆ ಗುಂಡೇಟು

**ಬೆಂಗಳೂರು:** ಬಂಧಿಸಲು ಬಂದಿದ್ದ ಪೊಲೀಸರ ಮೇಲೆಯೇ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದ್ದ ರೌಡಿ ನರಸಿಂಹ ಅಲಿಯಾಸ್ ರೆಡ್ಡಿ ಎಂಬಾತನನ್ನು ಕಾಲಿಗೆ ಗುಂಡು ಹೊಡೆದು ಸೆರೆ ಹಿಡಿಯಲಾಗಿದೆ.

‘ಕೊಲೆ, ದರೋಡೆ, ಅಪಹರಣ ಹಾಗೂ ಕಳ್ಳತನ ಸೇರಿದಂತೆ 30 ಪ್ರಕರಣಗಳು ನರಸಿಂಹ ವಿರುದ್ಧ ದಾಖಲಾಗಿದ್ದವು. ತಲೆಮರೆಸಿಕೊಂಡಿದ್ದ ಆತನನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಪದೇ ಪದೇ ಅಪರಾಧ ಕೃತ್ಯ ಎಸಗುತ್ತಿದ್ದ ರೌಡಿ, ಸಾರ್ವಜನಿಕರನ್ನು ಬೆದರಿಸುತ್ತಿದ್ದ. ರಸ್ತೆ ಬದಿಯಲ್ಲಿ ನಿಲ್ಲಿಸುತ್ತಿದ್ದ ಕಾರುಗಳಿಗೆ ಬೆಂಕಿ ಹಚ್ಚಿ ಹಾನಿಯನ್ನುಂಟು ಮಾಡುತ್ತಿದ್ದ. ಹಲವು ಪ್ರಕರಣಗಳ ವಿಚಾರಣೆಗೂ ಆತ ಹಾಜರಾಗುತ್ತಿರಲಿಲ್ಲ. ಹೀಗಾಗಿ, ಆತನ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿತ್ತು.’

‘ಹೊಸಕೆರೆಹಳ್ಳಿಯ ಕೆರೆ ಪ್ರದೇಶದಲ್ಲಿ ಆರೋಪಿ ಕಾಣಿಸಿಕೊಂಡಿದ್ದ. ಮಂಗಳವಾರ ಬೆಳಿಗ್ಗೆ ಸ್ಥಳಕ್ಕೆ ಹೋಗಿದ್ದ ಪೊಲೀಸರ ತಂಡ, ರೌಡಿಯನ್ನು ಬಂಧಿಸಲು ಮುಂದಾಗಿತ್ತು. ತಪ್ಪಿಸಿಕೊಳ್ಳಲು ಯತ್ನಿಸಿದ್ದ ಆತ ಕಾನ್‌ಸ್ಟೆಬಲ್ ಮೋಹನ್ ಮೇಲೆ ಚಾಕುವಿನಿಂದ ಹಲ್ಲೆ ಮಾಡಿದ್ದ. ಕಾನ್‌ಸ್ಟೆಬಲ್ ಅವರ ರಕ್ಷಣೆಗೆ ಧಾವಿಸಿದ ಸಬ್ ಇನ್‌ಸ್ಪೆಕ್ಟರ್ ಸುನೀಲ್, ರೌಡಿ ಕಾಲಿಗೆ ಗುಂಡು ಹೊಡೆದಿದ್ದರು’ ಎಂದುಮಾಹಿತಿ ನೀಡಿದರು.

‘ಗಾಯಾಳುಗಳಿಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದೂ ತಿಳಿಸಿದರು,




## ಕಳ್ಳತನ: ₹ 16 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

**ಬೆಂಗಳೂರು:** ಮನೆಗಳಿಗೆ ನುಗ್ಗಿ ಕಳ್ಳತನ ಮಾಡಿದ್ದ ಆರೋಪದಡಿ ಮೂವರನ್ನು ಮಾಗಡಿ ರಸ್ತೆ ಪೊಲೀಸರು ಬಂಧಿಸಿದ್ದಾರೆ.

‘ರಮೇಶ್, ಕೃಷ್ಣಮೂರ್ತಿ ಹಾಗೂ ವೆಂಕಟರಮಣ ಬಂಧಿತರು. ಅವರಿಂದ ₹ 16.65 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

|| Jai Sri Gurudev ||

**SRI ADICHUNCHANAGIRI SHIKSHANA TRUST®**

Estd. 1974

(ACU Campus) BG Nagara - 571 448.
Nagamangala Taluk, Mandya District, Karnataka State.

**Office of the Search Committee for the selection of the Vice Chancellor, ACU**

Adichunchanagiri University (ACU) - Estd 2018 is a multi-faculty, multidisciplinary State Private University consisting of six Constituent Colleges (Medical, Pharmacy, Nursing, Engineering, Education & Basic Sciences, Commerce and Management with strong Research Center activities).

**We are looking for the Vice Chancellor with following qualification and experience to his/her credit.**

1. Atleast 10 years' experience as professor in a University level institution and having worked in the statutory Academic and Administrative positions with qualifications in Health Sciences (PhD/MD/MS/MDS), PhD in Engineering/ Pharmacy/ Nursing with International reputed research publications.
2. Highly credible Administrative experience and capable of providing a dynamic and efficient leadership.
3. Age shall be within 67 years.
4. The position of VC is 3 years and renewable for another 3 years, if found satisfactory provided that the maximum age should not exceed 70 years.
5. Should be able to lead the university towards National and International recognitions with ability to apply these standards in solving local and societal needs (Economic, Social, cultural, Environmental, Industrial, Health, Moral, Ethical Values etc.)
6. Salary, allowances and other facilities will be the best in the academia, in consonance with the accomplishment and credibility of the applicant.

Application covering the above details with supporting documents in 03 (Three) sets shall be sent to the undersigned **"OFFICE OF THE CHIEF EXECUTIVE OFFICER, Sri Adichunchanagiri Shikshana Trust (R.), ACU Campus, B.G. Nagara - 571 448, Nagamangala Taluk, Mandya District, Karnataka"** on or before 24th Jan 2022 along with a brief note not exceeding 500 words on "why you consider yourself suitable for the position with a vision for next 5-10 years to develop the ACU to international standards".
The applications -cum- bio-data to be sent in the hard copy mode only.

(Member Convener)
**Search Committee for the selection of the Vice Chancellor, ACU**

www.acu.edu.in | Mobile: 96637 22111



ಸಂಕ್ರಾಂತಿ ಆಚರಣೆ ಪ್ರಯುಕ್ತ ಕಲಾಸಿಪಾಳ್ಯದಲ್ಲಿ ಮಂಗಳವಾರ ಪೊಂಗಲ್ ತಯಾರಿಸಲಾಯಿತು. ಬಿಬಿಎಂಪಿ ದಕ್ಷಿಣ ವಲಯ ಆಯುಕ್ತರಾದ ತುಳಸಿ ಮದ್ದಿನೇನಿ, ಸ್ಥಳೀಯ ಮುಖಂಡ ಧನರಾಜ್, ಗೌರವ್ ಗುಪ್ತ, ಉದಯ್ ಗರುಡಾಚಾರ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಸ್ಥಳೀಯ ಮುಖಂಡರಾದ ಪ್ರತಿಭಾ ಇದ್ದಾರೆ

# ಕಲಾಸಿಪಾಳ್ಯ: ಸಂಕ್ರಾಂತಿ ಸಂಭ್ರಮ

**ಬೆಂಗಳೂರು:** ಕಲಾಸಿಪಾಳ್ಯದ ಆಟೊ ಮೊಬೈಲ್ ವೃತ್ತದಲ್ಲಿ ಬಣ್ಣ ಬಣ್ಣದ ರಂಗೋಲಿಗಳನ್ನು ಬಿಡಿಸುವ ಮೂಲಕ ಮಹಿಳೆಯರು ಇಲ್ಲಿನ ರಸ್ತೆಗೆ ಹೊಸ ರಂಗು ನೀಡಿದ್ದರು. ರಸ್ತೆಯಲ್ಲೇ ಒಲೆ ನಿರ್ಮಿಸಿ, ಘಮಘಮಿಸುವ ಪೊಂಗಲ್ ತಯಾರಿಸಿ ಹಂಚಿದರು.

‘ಕಮ್ಯುನಿಟಿ ಸಂಕ್ರಾಂತಿ ಸಂಭ್ರಮ’ದ ವತಿಯಿಂದ ಕಲಾಸಿಪಾಳ್ಯದಲ್ಲಿ ಮಂಗಳವಾರ ಏರ್ಪಡಿಸಿದ್ದ ಸಂಕ್ರಾಂತಿ ಉತ್ಸವ ಇಲ್ಲಿ ಹಬ್ಬದ ವಾತಾವರಣವನ್ನೇ ಸೃಷ್ಟಿಸಿತ್ತು.

ಶಾಸಕ ಉದಯ್ ಬಿ. ಗರುಡಾಚಾರ್ ಮಾತನಾಡಿ, ‘ಚಿಕ್ಕಪೇಟೆ ಕ್ಷೇತ್ರವನ್ನು ಅಭಿವೃದ್ಧಿಪಡಿಸಿದಷ್ಟೂ ಇಲ್ಲಿ ವ್ಯಾಪಾರವೂ ಉಜ್ವಲಗೊಳ್ಳುತ್ತದೆ’ ಎಂದರು.

‘ಒಂದೂವರೆ ವರ್ಷದೊಳಗೆ ಈ ಕ್ಷೇತ್ರವು ನಗರದ ಸುಂದರ ಕ್ಷೇತ್ರಗಳಲ್ಲಿ ಒಂದಾಗಲಿದೆ. ಇಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದು, ಶೇ 65ರಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದೇವೆ. ಬಾಕಿ ಕೆಲಸಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸಲಿದ್ದೇವೆ’ ಎಂದರು.

‘ಬಡವರಿಗಾಗಿ 40 ವರ್ಷಗಳ ಹಿಂದೆ ಕ್ಷೇತ್ರದಲ್ಲಿ ನಿರ್ಮಿಸಿದ್ದ ಮನೆಗಳು ಬಿದ್ದು ಹೋಗಿದ್ದವು. ಕಲಾಸಿಪಾಳ್ಯದ ಮೋತಿನಗರದಲ್ಲಿ ನೂತನವಾಗಿ ಬಹುಮಹಡಿ ಕಟ್ಟಡದಲ್ಲಿ ಹೊಸ ಮನೆಗಳನ್ನು ನಿರ್ಮಿಸಲಾಗಿದೆ. ಇದನ್ನು ಮುಖ್ಯಮಂತ್ರಿ ಬೊಮ್ಮಾಯಿ ಅವರಿಂದ ಶೀಘ್ರವೇ ಲೋಕಾರ್ಪಣೆ ಮಾಡಿಸುವ ಆಶಯವಿದೆ’ ಎಂದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ‘ನಾಡಿನಲ್ಲಿ ಸಂಕ್ರಾಂತಿ ಹಬ್ಬಕ್ಕೆ ವಿಶೇಷ ಮಹತ್ವವಿದೆ. ಈ ಹಬ್ಬಗಳ ಆಚರಣೆಯೊಂದಿಗೆ ನಾಡಿನ ಸಂಸ್ಕೃತಿಯನ್ನು ಕಾಪಾಡುತ್ತಿದ್ದೇವೆ’ ಎಂದರು.

**ನಿಮ್ಮ ದೇಹದ ಆಕಾರವನ್ನು ಮರುಪಡೆಯಿರಿ. ತುಂಬಾ ಸುಲಭವಾಗಿ**

**ಕಠಿಣ ವ್ಯಾಯಾಮಗಳಿಲ್ಲದೆ ಮತ್ತು ಪಥ್ಯದ ಆಹಾರಕ್ರಮವಿಲ್ಲದೆ**

ಬೊಜ್ಜು ಮತ್ತು ಹೊಟ್ಟೆಯ ಕೊಬ್ಬಿಗೆ ಆಯುರ್ವೇದೀಯ ಪರಿಹಾರ

ಆಯು:ಕೇರ್

**ಲವಣ ತೈಲಂ**

ಆಯುರ್ವೇದಿಕ್ ಫಿಗರ್ ಕೇರ್




1999ರಿಂದಲೂ ಕೇರಳಾದ್ಯಂತ ಆರ್ಯುಕೇರ್ ಕೇಂದ್ರಗಳ ಮೂಲಕ ಬಹಳಷ್ಟು ಜನರಲ್ಲಿ ಇದು ಪರಿಣಾಮಕಾರಿ ಎಂದು ಸಾಬೀತಾಗಿದೆ.

ಲವಣ ತೈಲಂನಲ್ಲಿರುವ ಪ್ರಮುಖ ಪದಾರ್ಥವಾದ ಕಲ್ಲುಪ್ಪು, ಹೆಚ್ಚುವರಿ ಹೊರಾಂಗಣ ಜಲಾಂಶವನ್ನು ಹೀರಿಕೊಳ್ಳುತ್ತದೆ ಮತ್ತು ಸ್ನಾಯುಗಳನ್ನು ಬಲಪಡಿಸುತ್ತದೆ. ಅದರಲ್ಲಿನ ಇತರ ಔಷಧೀಯ ಪದಾರ್ಥಗಳು ಚರ್ಮದ ಕೆಳಗಿರುವ ಕೊಬ್ಬಿನ ಪದರವನ್ನು ತೆಳ್ಳಗಾಗಿಸುತ್ತದೆ ಮತ್ತು ಕಳೆದುಹೋದ ಆಕಾರವನ್ನು ಸಾಮಾನ್ಯ ಸಂದರ್ಭಗಳಲ್ಲಿ ಮೂರು ತಿಂಗಳಿಗೊಳಗೆ ಮರುಪಡೆಯಲು ಸಹಾಯ ಮಾಡುತ್ತದೆ. ಲವಣ ತೈಲಂ ಅನ್ನು ನಿಯಮಿತವಾಗಿ ಬಳಸುವುದರಿಂದ ಅಧಿಕ ಮೈಭಾರವನ್ನು ಇಳಿಸಿಕೊಳ್ಳಬಹುದು.

ಸಾಮಾನ್ಯವಾಗಿ 30 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರಲ್ಲಿ ತಮ್ಮ ಅತಿಯಾದ ಹೊಟ್ಟೆಯ ಆಕಾರ ಮತ್ತು ಸೌಂದರ್ಯ ಕಾಪಾಡಿಕೊಳ್ಳಲು ಸದಾ ಲವಣ ತೈಲದಿಂದ ಮಸಾಜ್ ಮಾಡಿ. ಅಲ್ಲದೆ ಹೆರಿಗೆ ನಂತರ ಮಹಿಳೆಯರ ಹೊಟ್ಟೆಯನ್ನು ತಗ್ಗಿಸಲು ಇದು ಉತ್ತಮವಾಗಿದೆ.

ಬೊಜ್ಜು ಮತ್ತು ಹೊಟ್ಟೆಯ ಕೊಬ್ಬಿಗೆ ಆಯುರ್ವೇದೀಯ ಪರಿಹಾರ

ಉಪಯೋಗ : ತೈಲವನ್ನು ಕೈಗೆ ಸುರಿದುಕೊಂಡು, ಕೊಬ್ಬಿನ ಜಾಗಗಳ ಮೇಲೆ ಕೋಮಲವಾಗಿ ತೀಡಿ ಮತ್ತು ಮಸ್ಸಾಜ್ ಮಾಡಿ. ಕನಿಷ್ಠ 15 ನಿಮಿಷಗಳಲ್ಲಿ ಬೆಚ್ಚಗಿನ ನೀರಿನ ಶಾಖ ಕೊಡಿ ಅಥವಾ ಬೆಚ್ಚಗಿನ ನೀರಿನಲ್ಲಿ ತೊಳೆಯಿರಿ. ಪುರುಷರು ಮತ್ತು ಮಹಿಳೆಯರಲ್ಲಿ ಸಮನಾಗಿ ಪರಿಣಾಮಕಾರಿ.

ಎಲ್ಲಾ ಇಂಗ್ಲೀಷ್–ಆಯುರ್ವೇದಿಕ್ ಮೆಡಿಕಲ್ ಸ್ಟೋರ್‌ಗಳಲ್ಲಿ, ಸೂಪರ್ ಮಾರ್ಕೆಟ್‌ಗಳಲ್ಲಿ ಮತ್ತು ಲೇಡೀಸ್ ಸ್ಟೋರ್‌ಗಳಲ್ಲಿ ಸಿಗುತ್ತದೆ.

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ:
**From the house of A & J Health Care, Bangalore**
*For a Healthy Society*
**Ph: 8762226000, 9243112373.**
Super Stockists: SRI RAMA STORES, Yellapur.

# ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

**ಬೆಂಗಳೂರು:** ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 12ರಂದು ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

**ವ್ಯತ್ಯಯ ಆಗಲಿರುವ ಸ್ಥಳಗಳು:** ಎಂ.ಸಿ. ಬಡಾವಣೆ, ಬಾಪೂಜಿ ಬಡಾವಣೆ, ವಿನಾಯಕ ಬಡಾವಣೆ, ಬಿನ್ನಿ ಬಡಾವಣೆ, ಸೆಂಟ್ರಲ್ ಎಕ್ಸೈಸ್ ಬಡಾವಣೆ, ಭಿಕ್ಷುಕರ ಕಾಲೊನಿ, ಹೆಗ್ಗನಹಳ್ಳಿ, ಲಕ್ಷ್ಮಣನಗರ, ಸಂಜೀವಿನಿ ನಗರ, ವಿಘ್ನೇಶ್ವರ ನಗರ, ಸುಂಕದಕಟ್ಟೆ, ರಾಜೀವ್‌ಗಾಂಧಿ ನಗರ, ಭೈರವೇಶ್ವರ ನಗರ, ಹನುಮಂತರಾಯನಪಾಳ್ಯ, ಆರ್.ಎಚ್.ಸಿ.ಎಸ್. ಬಡಾವಣೆ, ಅನ್ನಪೂರ್ಣೇಶ್ವರಿನಗರ, ಆರೋಗ್ಯ ಬಡಾವಣೆ, ಡಿ ಗ್ರೂಪ್ ಬಡಾವಣೆ, ಕೆ.ಜಿ.ಎಚ್.ಎಸ್. ಬಡಾವಣೆ, ಪಾಪರೆಡ್ಡಿ ಪಾಳ್ಯ, ಕೆ.ಕೆ. ಬಡಾವಣೆ, ಜಯಲಕ್ಷ್ಮಮ್ಮ ಬಡಾವಣೆ, ಕಾವೇರಿಪುರ, ಕಾಮಾಕ್ಷಿಪಾಳ್ಯ, ಬಿ.ಎಚ್.ಇ.ಎಲ್, ಹೊಸಹಳ್ಳಿ ರಸ್ತೆ, ಸರ್.ಎಂ.ವಿ. ಬಡಾವಣೆಯ 5 ನೇ ಹಂತ, ದುಬಾಸಿಪಾಳ್ಯ, ಉಲ್ಲಾಳನಗರ, ಮಾರುತಿನಗರ, ಭವಾನಿ ನಗರ, ಅಮ್ಮ ಆಶ್ರಮ ರಸ್ತೆ ಹಾಗೂ ಸುತ್ತಲಿನ ಪ್ರದೇಶಗಳು



ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರಿಗೆ ಭಾರತೀಯ ಕಿಸಾನ್ ಸಂಘದ ವತಿಯಿಂದ ಮನವಿ ಸಲ್ಲಿಸಲಾಯಿತು. ಸಂಘಟನೆ ಬೆಂಗಳೂರು ಘಟಕದ ಅಧ್ಯಕ್ಷ ಪಂಪಣ್ಣ, ರಾಜ್ಯ ಘಟಕದ ಉಪಾಧ್ಯಕ್ಷ ಸೋಮಶೇಖರ್, ಖಜಾಂಚಿ ಸತೀಶ್ ಇದ್ದಾರೆ

## ಲೀಟರ್ ಹಾಲಿಗೆ ₹ 40 ಕನಿಷ್ಠ ದರ: ಮನವಿ

**ಬೆಂಗಳೂರು:** ಕೃಷಿ ಉತ್ಪನ್ನಗಳಿಗೆ ಲಾಭದಾಯಕ ದರ ಹಾಗೂ ಪ್ರತಿ ಲೀಟರ್ ಹಾಲು ಖರೀದಿಗೆ ಕನಿಷ್ಠ ₹ 40 ದರ ನಿಗದಿಪಡಿಸುವುದೂ ಸೇರಿದಂತೆ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಭಾರತೀಯ ಕಿಸಾನ್ ಸಂಘವುಒತ್ತಾಯಿಸಿದೆ.

ಈ ಕುರಿತು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರಿಗೆ ಸಂಘದ ಪ್ರಮುಖರು ಮಂಗಳವಾರ ಮನವಿ ಸಲ್ಲಿಸಿದರು.

ಎಲ್ಲ ತಾಲ್ಲೂಕು ಕಚೇರಿಗಳ ಮುಂದೆ ಧರಣಿ ನಡೆಸಿ, ಜಿಲ್ಲಾಧಿಕಾರಿಗಳ ಮುಖಾಂತರ ರಾಷ್ಟ್ರಪತಿಗೆ ಮನವಿ ಸಲ್ಲಿಸುವ ಕಾರ್ಯಕ್ರಮವನ್ನು ಸಂಘಟನೆಯು ರಾಜ್ಯದಾದ್ಯಂತ ಹಮ್ಮಿಕೊಂಡಿತ್ತು.

‘ಮಳೆಯಿಂದ ಕೊಚ್ಚಿ ಹೋಗಿರುವ ಕೃಷಿ ಜಮೀನುಗಳಿಗೆ ಹೋಗುವ ದಾರಿಗಳನ್ನು ಸರಿಪಡಿಸಲು ಸರ್ಕಾರ ಹಣ ಮಂಜೂರು ಮಾಡಬೇಕು. 60 ವರ್ಷ ಮೇಲ್ಪಟ್ಟ ಎಲ್ಲ ರೈತರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ₹10 ಲಕ್ಷಗಳವರೆಗೆ ಉಚಿತ ವೈದ್ಯಕೀಯ ಸೌಲಭ್ಯ ನೀಡಬೇಕು’ ಎಂದು ಸಂಘದ ಬೆಂಗಳೂರು ಘಟಕದ ಅಧ್ಯಕ್ಷ ಪಂಪಣ್ಣ ಆಗ್ರಹಿಸಿದರು. ‘ಬಗರ್ ಹುಕುಂ ಸಾಗುವಳಿ ಸಕ್ರಮ ಯೋಜನೆಯಡಿ ಮಂಜೂರಾದ ಭೂಮಿಗೆ ಖಾತೆ ಮಾಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಸಮಸ್ಯೆ ನಿವಾರಿಸಬೇಕು. ರೈತರ ಮಕ್ಕಳಿಗೆ ಉಚಿತ ಉನ್ನತ ಶಿಕ್ಷಣ ನೀಡಬೇಕು. ಕೋವಿಡ್‌ನಿಂದ ನಷ್ಟಕ್ಕೆ ಸಿಲುಕಿರುವ ರೈತರಸಾಲ ಮನ್ನಾ ಮಾಡಬೇಕು’ ಎಂದು ಒತ್ತಾಯಿಸಿದರು.






## ‘ಟೆಲಿಗ್ರಾಂ’ನಲ್ಲಿ ‘ಬಿಟ್ ಕಾಯಿನ್’ ಗ್ರೂಪ್; ₹ 10 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಟೆಲಿಗ್ರಾಂ ಆ್ಯಪ್‌ನಲ್ಲಿ ‘ಬಿಟ್ ಕಾಯಿನ್’ ವ್ಯವಹಾರದ ಬಳಗ ರಚಿಸಿ ನಗರದ ನಿವಾಸಿಯೊಬ್ಬರಿಂದ ಹಣ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜೆ.ಪಿ. ನಗರದಲ್ಲಿ ವಾಸವಿರುವ 25 ವರ್ಷದ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಠಾಣೆ ಮೂಲಗಳು ಹೇಳಿವೆ.

‘ದೂರುದಾರ ಟೆಲಿಗ್ರಾಂ ಆ್ಯಪ್ ಬಳಸುತ್ತಿದ್ದಾರೆ. ಅವರ ಮೊಬೈಲ್ ಸಂಖ್ಯೆಯನ್ನು ಸೈಬರ್ ವಂಚಕರು, ಟೆಲಿಗ್ರಾಂ ಆ್ಯಪ್‌ನ ಬಳಗಕ್ಕೆ ಸೇರಿಸಿದ್ದರು. ಬಿಟ್ ಕಾಯಿನ್ ರೂಪದಲ್ಲಿ ಹಣ ಹೂಡಿಕೆ ಮಾಡಿದರೆ, ಕಡಿಮೆ ಸಮಯದಲ್ಲಿ ಲಕ್ಷ ಲಕ್ಷ ರೂಪಾಯಿ ಗಳಿಸಬಹುದೆಂದು ಸಂದೇಶ ಕಳುಹಿಸಿದ್ದರು.’

‘ಆರೋಪಿಗಳ ಸಂದೇಶ ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 10.17 ಲಕ್ಷ ಹೂಡಿಕೆ ಮಾಡಿದ್ದರು. ಅದಾದ ನಂತರ ದೂರುದಾರರಿಗೆ ಯಾವುದೇ ಲಾಭ ಬಂದಿಲ್ಲ. ಈ ಬಗ್ಗೆ ವಿಚಾರಿಸಿದಾಗ ಗ್ರೂಪ್ ಅಡ್ಮಿನ್ ಕಡೆಯಿಂದಲೂ ಪ್ರತಿಕ್ರಿಯೆ ಸಿಕ್ಕಿಲ್ಲ. ವಂಚನೆ ಗಮನಕ್ಕೆ ಬರುತ್ತಿದ್ದಂತೆ ದೂರುದಾರ ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಬಿಟ್ ಕಾಯಿನ್ ಹೂಡಿಕೆ ವ್ಯವಹಾರದ ನೆಪದಲ್ಲಿ ಜನರನ್ನು ವಂಚಿಸುತ್ತಿರುವ ಜಾಲ ಸಕ್ರಿಯವಾಗಿದೆ. ಈ ಬಗ್ಗೆ ಜನರು ಜಾಗೃತಿಯಿಂದ ಇರಬೇಕು. ಬಿಟ್ ಕಾಯಿನ್ ವ್ಯವಹಾರ ಹಾಗೂ ಅದಕ್ಕೆ ಸಂಬಂಧಪಟ್ಟ ಸಂದೇಶಗಳು ಬಂದರೆ ಪೊಲೀಸರ ಗಮನಕ್ಕೆ ತರಬೇಕು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪ್ರೆಷರ್ ಕುಕ್ಕರ್, ರಾಸಾಯನಿಕ ಜಪ್ತಿ; ನೈಜೀರಿಯಾ ಪ್ರಜೆ ಬಂಧನ

# ಡ್ರಗ್ಸ್: ಮನೆಯಲ್ಲೇ ಮಿನಿ ಲ್ಯಾಬ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಾಡಿಗೆ ಮನೆಯಲ್ಲಿ ಕಿರು ಪ್ರಯೋಗಾಲಯವನ್ನು (ಮಿನಿ ಲ್ಯಾಬ್) ಸ್ಥಾಪಿಸಿ ಡ್ರಗ್ಸ್ ತಯಾರಿಸಿ ಮಾರುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆಯೊಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಆರೋಪಿ ಡ್ರಗ್ಸ್ ತಯಾರಿಸುತ್ತಿದ್ದ ಮಾಹಿತಿ ಬಂದಿತ್ತು. ಮನೆ ಮೇಲೆ ದಾಳಿ ಮಾಡಿ ಆತನನ್ನು ಬಂಧಿಸಲಾಗಿದೆ. ₹ 50 ಲಕ್ಷ ಮೌಲ್ಯದ ಕೊಕೇನ್ ಹಾಗೂ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಬಂಧಿತ ಆರೋಪಿ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿದ್ದರು. ಅವರೆಲ್ಲ ತಲೆಮರೆಸಿಕೊಂಡಿದ್ದಾರೆ. ಹೀಗಾಗಿ, ಆರೋಪಿ ಹೆಸರು ಗೌಪ್ಯವಾಗಿರಿಸಲಾಗಿದೆ’ ಎಂದೂ ತಿಳಿಸಿದರು.

‘ವ್ಯಾಪಾರ ವೀಸಾದಡಿ 2019ರಲ್ಲಿ ದೇಶಕ್ಕೆ ಬಂದಿದ್ದ ಆರೋಪಿ, ಕೆಲ ತಿಂಗಳು ದೆಹಲಿಯಲ್ಲಿ ನೆಲೆಸಿದ್ದ. ಆರು ತಿಂಗಳ ಹಿಂದಷ್ಟೇ ಬೆಂಗಳೂರಿಗೆ ಬಂದು, ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ. ಅಕ್ರಮವಾಗಿ ಹಣ ಸಂಪಾದಿಸಲು ಡ್ರಗ್ಸ್ ಮಾರಾಟ ಮಾಡಲಾರಂಭಿಸಿದ್ದ.’

‘ಪರಿಚಯಸ್ಥರ ಮೂಲಕ ಡ್ರಗ್ಸ್ ಖರೀದಿಸಿ ಆರೋಪಿ ಮಾರುತ್ತಿದ್ದ. ಅದರಿಂದ ಬಂದ ಹಣ ಆತನಿಗೆ ಸಾಲುತ್ತಿರಲಿಲ್ಲ. ಹೀಗಾಗಿ, ಆತನೇ ಡ್ರಗ್ಸ್ ತಯಾರಿಸಲು ಮುಂದಾಗಿದ್ದ. ಅದಕ್ಕಾಗಿ ಬಾಡಿಗೆ ಮನೆಯಲ್ಲೇ ಮಿನಿ ಲ್ಯಾಬ್ ಸೃಷ್ಟಿಸಿದ್ದ. ರಾಸಾಯನಿಕ ಹಾಗೂ ಇತರೆ ವಸ್ತುಗಳನ್ನು ಬಳಸಿಕೊಂಡು, ಪ್ರೆಷರ್ ಕುಕ್ಕರ್‌ನಲ್ಲಿ ಡ್ರಗ್ಸ್ ತಯಾರಿಸುತ್ತಿದ್ದ. ತನ್ನದೇ ಜಾಲದ ಮೂಲಕ ನಗರದಲ್ಲಿ ಮಾರುತ್ತಿದ್ದ’ ಎಂದೂ ಅಧಿಕಾರಿ ವಿವರಿಸಿದರು.

‘10 ಲೀಟರ್ ಸಾಮರ್ಥ್ಯದ ಪ್ರೆಷರ್ ಕುಕ್ಕರ್, ಪ್ಲಾಸ್ಟಿಕ್ ಕೊಳವೆ, ಡ್ರಗ್ಸ್ ತಯಾರಿಗೆ ಬಳಸುತ್ತಿದ್ದ ಕಚ್ಚಾ ವಸ್ತುಗಳು, 2 ಮೊಬೈಲ್, ತಕ್ಕಡಿ ಹಾಗೂ ದ್ವಿಚಕ್ರ ವಾಹನವನ್ನೂ ಜಪ್ತಿ ಮಾಡಲಾಗಿದೆ’ ಎಂದೂ ಹೇಳಿದರು.




ಜಪ್ತಿ ಮಾಡಿರುವ ಪ್ರೆಷರ್ ಕುಕ್ಕರ್ ಹಾಗೂ ಡ್ರಗ್ಸ್

## ಕಾಲೇಜುಗಳಲ್ಲಿ ‘ಡ್ರಗ್ಸ್’ ಮಾರಾಟ: ಐವರ ಸೆರೆ

**ಬೆಂಗಳೂರು:** ನಗರದ ಪ್ರತಿಷ್ಠಿತ ಕಾಲೇಜುಗಳಲ್ಲಿ ಪ್ರವೇಶ ಪಡೆದು, ಅಲ್ಲಿಯ ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಐವರು ಆರೋಪಿಗಳನ್ನು ಅಬಕಾರಿ ಪೊಲೀಸರು ಬಂಧಿಸಿದ್ದಾರೆ.

‘ಕೇರಳದ ಆರೋಪಿಗಳು, ನಗರದ ಕಾಲೇಜುಗಳ ವಿದ್ಯಾರ್ಥಿಗಳು. ತಮ್ಮದೇ ತಂಡಗಳನ್ನು ಕಟ್ಟಿಕೊಂಡು ಡ್ರಗ್ಸ್ ಮಾರಿ ಹಣ ಗಳಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಅವರಿಂದ ₹ 4.50 ಲಕ್ಷ ಮೌಲ್ಯದ 90 ಗ್ರಾಂ ಡ್ರಗ್ಸ್ ಜಪ್ತಿ ಮಾಡಲಾಗಿದೆ’ ಎಂದು ಅಬಕಾರಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ನಿತ್ಯವೂ ಕಾಲೇಜಿಗೆ ಹೋಗಿ ಡ್ರಗ್ಸ್ ಮಾರಿದರೆ ಪೊಲೀಸರ ಕೈಗೆ ಸಿಕ್ಕಿ ಬೀಳುವ ಭಯ ಆರೋಪಿಗಳಲ್ಲಿತ್ತು. ಹೀಗಾಗಿ, ಆರೋಪಿಗಳು ವಿದ್ಯಾರ್ಥಿಗಳ ಸೋಗಿನಲ್ಲಿ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದರು. ಕಾಲೇಜು ಬ್ಯಾಗ್‌ನಲ್ಲಿ ಡ್ರಗ್ಸ್ ತಂದು ಮಾರುತ್ತಿದ್ದರು.’

‘ಆರೋಪಿಗಳ ಕೃತ್ಯದ ಬಗ್ಗೆ ಮಾಹಿತಿ ಬಂದಿತ್ತು. ಅದರನ್ವಯ ತನಿಖೆ ಆರಂಭಿಸಿದ್ದ ಬೆಂಗಳೂರು ಉಪ ವಿಭಾಗ-2ರ ಪೊಲೀಸರು, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ’ ಎಂದೂ ತಿಳಿಸಿದರು.

‘ಡ್ರಗ್ಸ್ ಮಾರಾಟದಿಂದ ಬರುತ್ತಿದ್ದ ಹಣವನ್ನು ಆರೋಪಿಗಳು ಹಂಚಿಕೊಳ್ಳುತ್ತಿದ್ದರು. ಅವರ ಎರಡು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಗಳಿಗೆ ಡ್ರಗ್ಸ್ ಪೂರೈಕೆ ಮಾಡುತ್ತಿದ್ದವರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ಅಧಿಕಾರಿ ಮಾಹಿತಿ ನೀಡಿದರು.

# ಏಜೆನ್ಸಿಯಿಂದ ಹಣ ವಸೂಲಿ: ‘ಆರೋಗ್ಯ ಕವಚ’ ಸಿಬ್ಬಂದಿ ಆರೋಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಆರೋಗ್ಯ ಕವಚ-108’ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಹೆಚ್ಚಳವಾದ ವಾರ್ಷಿಕ ವೇತನದಿಂದ ಶೇ 10ರಷ್ಟು ಹಣವನ್ನು ಏಜೆನ್ಸಿಯು ವಸೂಲಿ ಮಾಡುತ್ತಿದೆ’ ಎಂದು ರಾಜ್ಯ ಆರೋಗ್ಯ ಕವಚ 108 ನೌಕರರ ಸಂಘ ಆರೋಪಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಆರ್.ಶ್ರೀಧರ್,‘ಈ ಯೋಜನೆಯಡಿ ರಾಜ್ಯದಾದ್ಯಂತ ಸುಮಾರು 3,500ಕ್ಕೂ ಹೆಚ್ಚು ಸಿಬ್ಬಂದಿ ‘ಜಿವಿಕೆಇಎಂಆರ್ ಸಂಸ್ಥೆ’ಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ವರ್ಷಗಳಲ್ಲಿ ಸಿಬ್ಬಂದಿಗೆ ವೇತನ ಹೆಚ್ಚಳವಾಗಿತ್ತು. ಅದರಲ್ಲಿ ಶೇ 10ರಷ್ಟು ಹಣವನ್ನು ಸಿಬ್ಬಂದಿಯಿಂದ ಸಂಗ್ರಹಿಸಲಾಗಿದೆ. ಇದರಲ್ಲಿ ಸಂಸ್ಥೆಯ ಮುಖ್ಯಸ್ಥರು ಹಾಗೂ ಅಧಿಕಾರಿಗಳು ಶಾಮೀಲಾಗಿದ್ದಾರೆ’ ಎಂದು ಆರೋಪಿಸಿದರು.

‘ಇದನ್ನು ಪ್ರಶ್ನಿಸಿದಾಗ, ಆರೋಗ್ಯ ಇಲಾಖೆಯ ಮೇಲಧಿಕಾರಿಗಳಿಗೆ ಹಣ ತಲುಪಿಸಲಿಕ್ಕಿದೆ ಎಂದು ತಿಳಿಸಿದ್ದರು. ಆದರೆ, ಈ ಬಗ್ಗೆ ಸ್ಪಷ್ಟನೆ ನೀಡಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೇವೆಗಳ ಉಪನಿರ್ದೇಶಕರು (ಇಎಂಆರ್‌ಐ), ‘ಇಲಾಖೆ ಅಧಿಕಾರಿಗಳು ಸಿಬ್ಬಂದಿಯಿಂದ ಲಂಚ ಪಡೆದಿಲ್ಲ ಹಾಗೂ ಯಾವುದೇ ರೀತಿಯಲ್ಲಿ ಹಣ ಸಂಗ್ರಹಿಸುತ್ತಿಲ್ಲ. ಯಾರೂ ಹಣ ನೀಡಬೇಡಿ’ ಎಂದು ಸ್ಪಷ್ಟಪಡಿಸಿದ್ದಾರೆ’ ಎಂದರು.

‘ಸಂಸ್ಥೆಯ ಟೆಂಡರ್ ಅವಧಿ ಮುಗಿದಿದ್ದರೂ ಮುಂದುವರಿಸಿದ್ದಾರೆ. ಆಂಬುಲೆನ್ಸ್ ನಿರ್ವಹಣೆಗೆ ಹಣ ನೀಡುತ್ತಿಲ್ಲ. ಇದರಿಂದ ಆಂಬುಲೆನ್ಸ್‌ಗಳು ಅಲ್ಲಲ್ಲೇ ಕೆಟ್ಟು ನಿಲ್ಲುತ್ತವೆ. ಸಿಬ್ಬಂದಿಗೆ ವೇತನ ಪಾವತಿಯೂ ವಿಳಂಬವಾಗುತ್ತಿದೆ. ಏಜೆನ್ಸಿ ವಿರುದ್ಧ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು’ ಎಂದು ಮನವಿ ಮಾಡಿದರು.

‘18 ರಾಜ್ಯಗಳಲ್ಲಿ ಜಿವಿಕೆಇಎಂಆರ್ ಅಧೀನದಲ್ಲಿ ಸಾವಿರಾರು ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಸಿಬ್ಬಂದಿಯಿಂದ ನಾವು ಹಣ ಸಂಗ್ರಹ ಮಾಡಿಲ್ಲ. ಆರೋಪ ಮಾಡುತ್ತಿರುವವರು ಈಗ ನಮ್ಮ ಸಿಬ್ಬಂದಿಯೂ ಅಲ್ಲ. ಜನರನ್ನು ದಿಕ್ಕು ತಪ್ಪಿಸುವ ಉದ್ದೇಶದಿಂದ ಈ ರೀತಿ ಮಾಡಲಾಗುತ್ತಿದೆ. ಆರೋಪಗಳೆಲ್ಲ ಸುಳ್ಳು’ ಎಂದು ಜಿವಿಕೆಇಎಂಆರ್ ಸಂಸ್ಥೆಯ ರಾಜ್ಯ ಮುಖ್ಯಸ್ಥ ಆರ್.ಜೆ.ಹನುಮಂತಪ್ಪ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

## ಸುದ್ದಿ 2 ನಿಮಿಷ

### ಬಸ್‌ನಲ್ಲಿ ಚಿನ್ನಾಭರಣ ಕಳವು

**ಬೆಂಗಳೂರು:** ಬಸ್ ಪ್ರಯಾಣಿಕರ ಚಿನ್ನಾಭರಣ ಕಳವು ಮಾಡಿದ್ದ ಆರೋಪದಡಿ ಆನಂದ್ ಗಿರಿ ಎಂಬಾತನನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿಯಾದ ಆರೋಪಿ ಆನಂದ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 16 ಲಕ್ಷ ಮೌಲ್ಯದ 306 ಗ್ರಾಂ ಚಿನ್ನಾಭರಣ ಹಾಗೂ 1 ಕೆ.ಜಿ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಚಾಮರಾಜನಗರದ ನಿವಾಸಿಯೊಬ್ಬರು ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಜ. 5ರಂದು ಬೆಂಗಳೂರಿಗೆ ಬಂದಿದ್ದರು. ಬಸ್ಸಿನಿಂದ ಇಳಿಯುವಾಗ ನೂಕುನುಗ್ಗಲು ಉಂಟಾಗಿತ್ತು. ಅದೇ ಸಂದರ್ಭದಲ್ಲೇ ಅವರ ಬ್ಯಾಗ್‌ನಲ್ಲಿದ್ದ ಚಿನ್ನಾಭರಣಗಳನ್ನು ಆರೋಪಿ ಕಳವು ಮಾಡಿದ್ದ. ಈ ಬಗ್ಗೆ ಪ್ರಕರಣ ದಾಖಲಾಗಿತ್ತು’ ಎಂದೂ ತಿಳಿಸಿದರು.

‘ಬಸ್ ನಿಲ್ದಾಣ ಹಾಗೂ ಜನ ಸಂದಣಿ ಇರುವ ಸ್ಥಳಗಳಲ್ಲಿ ಆರೋಪಿ ಕೃತ್ಯ ಎಸಗುತ್ತಿದ್ದ. ಬೆಂಗಳೂರು ಹಾಗೂ ರಾಮನಗರದ ಹಲವೆಡೆ ಆತ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಪೊಲೀಸರು ಹೇಳಿದರು.

### ರಾಜ್ಯದ ಅಭ್ಯರ್ಥಿಗಳಿಗೆ 24 ಪದಕ




**ಬೆಂಗಳೂರು:** ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದಲ್ಲಿ ವಿಶೇಷ ತರಬೇತಿ ಪಡೆದಿದ್ದ ರಾಜ್ಯದ ಅಭ್ಯರ್ಥಿಗಳು 2021ನೇ ಸಾಲಿನ ಇಂಡಿಯಾ ಸ್ಕಿಲ್ಸ್ ಸ್ಪರ್ಧೆಯಲ್ಲಿ ಒಟ್ಟು 24 ಪದಕಗಳನ್ನು ಜಯಿಸಿದ್ದಾರೆ.

‘ರಾಜ್ಯದ ಅಭ್ಯರ್ಥಿಗಳು ತಲಾ 8 ಚಿನ್ನ ಮತ್ತು ಬೆಳ್ಳಿ, 4 ಕಂಚು ಹಾಗೂ ಶ್ರೇಷ್ಠ ಸಾಮರ್ಥ್ಯ ತೋರುವವರಿಗೆ ನೀಡಲಾಗುವ 4 ಪದಕಗಳನ್ನೂ ಪಡೆದಿದ್ದಾರೆ. ರಾಜ್ಯದ ಅಭ್ಯರ್ಥಿಗಳಿಂದ ಮೂಡಿಬಂದ ಈವರೆಗಿನ ಉತ್ತಮ ಸಾಧನೆ ಇದಾಗಿದೆ’ ಎಂದು ಪ್ರಕಟಣೆ ತಿಳಿಸಿದೆ.

‘ನವದೆಹಲಿಯಲ್ಲಿ ಇದೇ 7ರಿಂದ 9ರವರೆಗೆ ನಡೆದಿದ್ದ ಸ್ಪರ್ಧೆಯಲ್ಲಿ ರಾಜ್ಯದ 35 ಅಭ್ಯರ್ಥಿಗಳು ಪಾಲ್ಗೊಂಡಿದ್ದರು. ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮವು ಜಿಲ್ಲಾ, ಪ್ರಾಂತೀಯ ಹಾಗೂ ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸಿ ಅದರಲ್ಲಿ ವಿಜೇತರಾದವರನ್ನು ದಕ್ಷಿಣ ಪ್ರಾಂತೀಯ ಸ್ಪರ್ಧೆಗೆ ಆಯ್ಕೆಮಾಡಿತ್ತು. ವಿಶಾಖಪಟ್ಟಣದಲ್ಲಿ ನಡೆದಿದ್ದ ಆ ಸ್ಪರ್ಧೆಗೆ ಆಯ್ಕೆಯಾದ 35 ಮಂದಿಗೆ ವಿಶೇಷ ತರಬೇತಿ ನೀಡಲಾಗಿತ್ತು’ ಎಂದು ವಿವರಿಸಿದೆ.

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## JOB OPPORTUNITIES

### Accounts & Finance

**INDE CONSULTING** Invites applications from Graduates /PG for position of Accounts Executive. With morethan 1 year of Experience in Finance/ Audit/ Accounts. At Jayanagar, Bangalore. Mob-9902006065/ 080-26650690 CV to: indeconsultingas@gmail.com

**WANTED FEMALE** Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

**SENIOR ACCOUNTANT** Purchase Assistant, Sales Co-Ordinator & Design Engineer, Exp 2-4 years, Contact: 9886549598

### General

**LOOKING FOR** a Female Commerce graduate with good knowledge in Basic Computer operation (Near Brigade Rd.) Interested candidates can WhatsApp resume to 9980758212

**WANTED SPARE** Parts Assistant for Two Wheeler Showroom in Koramangala. Salary: 15K-20K. Contact : 9945083900.

**OPPORTUNITY FOR** Retired Officials, Bankers, NRI, Teachers, Professionals, Homemakers, CAs. Earn salary + Incentives. CALL: 9845279293

EAST WEST INSTITUTIONS
OUR NEW CAMPUS AT MYSORE ROAD
# 187, Dodda Aalda Mara Main Road, Kumbalagodu, (Bheemanakuppe) Kengeri Hobli, Bengaluru South. Mobile: 63601 67901
Require following personnel for immediate appointment
ADMISSION / STUDENT CO-ORDINATOR: MBA with experience (Female preferred)
LIBRARIAN: M.Lib with experience
OFFICE ASSISTANT: With experience & well versed in co-ordinating, liasoning with University work & their formalities
ALSO WANTED: Office Staff, Receptionist, Warden, Cook, Drivers, Attenders, Helpers & Lady Aayah.
Apply within 10 days from the date of advertisement E-mail: ewbsni2020@gmail.com
SVM-21214-BS

JOB VACANCY AT URC 515 ARMY BASE WORKSHOP, ULSOOR, BANGALORE - 08
Billing Clerk - 01, Minimum 12th pass. Past experience in billing/professional)
(a) Eligible category as per preference:-
(I) War Widows/Widows of Defence pers. (ii) Disabled Soldiers. (iii) Ex Servicemen. (iv) Spouses / Widows of ex servicemen. (v) Others.
Last date of application 25.01.2022.
Email: mwbangeag@gmail.com

### Advertising Agency

**REQUIRES DTP** OPERATOR for Advertising Agency, Knowledge of Kannada & English Typing, Contact :9900704150 OR email: jobs.dtpoperator@gmail.com

### Hospital & Medical Jobs

**REQUIRED FOR** C.V. HOSPITAL 143 B Bommasandra IA, Bangalore. SPECIALITY CONSULTANTS, DUTY DOCTORS, NURSES, RADIOGRAPHERS, LAB TECHNICIANS and PHARMACISTS. Contact: 080-41511104/ 97411-32406 Mail: cvhospital.in@gmail.com

**D** PHARMACY -Both male and female ,branch manager ,both experience and fresher,location RR nagar bangalore contact :-7338133755

**WANTED** Lab analysists and lab technician (for diagnostics) (both male and female) location RR Nagar Bangalore contact :-7338133755, 7829689303

**WANTED PHARMACIST'S** to work in MSIL (JANA AOSHADI KENDRA'S) all over Karnataka With certificate of B-Pharma/ D-Pharma/ M-Pharma Contact immediately @ 9845996744 /7760137876 or mail: poojyaya2005@gmail.com

### HRD & Admin

**ADMISSIONS** EXECUTIVE with over 5yrs. Exp. In Counselling for admissions, having excellent communication skills. ISME, Sarjapura Road, 28019800. hiring@isme.in.

**ADMINISTRATION OFFICE** STAFF young enthusiastic graduate freshers okay ready to join immediately, staying near Hulimavu, Bannerghatta Road, Bangalore. Long term career growth with Promotions golden opportunity, PF, ESIC Facilities, Strong Company of more than 18 years mail CV: dinesh.shastri@digitalage.co.in Call: 9448088666, 8095488666.

### Multiple Vacancy

A Bangalore Based Reputed Real Estate Company requires:
REAL ESTATE LEGAL MANAGER - Knowledge in Revenue Field of Real Estate. Experience in working for other Developers, Advocates or Stamp Vendors.
PROJECT MANAGER - Knowledge & Experience in Land/Plotted Development Projects & Industrial Construction (especially PEB) Experience in working for Developers or Class A Contractors.
SALES MANAGER - Experience in Real Estate Sales across Bangalore with CAT B Developers.
Call: 9686987907

**WANTED EXPERIENCED** LANDSCAPE SUPERVISOR/ HORTICULTURIST and COUNTER SALES PERSON for reputed Plant Nursery at YELAHANKA. 9845202274/ 9620498866.

***REQUIRED*** ***IMMEDIATELY*** for an ISO Plastic Moulding Industry. 1) ACCOUNTS MANAGER 2) ACCOUNTS EXECUTIVE 3) MS OFFICE- XLS/ WORD EXEC 4) LOGISTICS EXECUTIVE 5) SHOPPING MALL MERCHANDISERS South Bangalore *Experience*: Min 3 Years. *WAGES*: Attractive Salary with BONUS & other perks. *CONTACT* 9880125149/ 9590201077 jayceeindustries@gmail.com

### Part-Time Jobs

**THOSE WHO** Are Residing Malleswaram, 30 to 35k MNC Provide Work From Home: 7019215243/ 9886641282

### Marketing & Sales

**URGENTLY REQUIRED** Female Marketing Co-ordinator with Good Communication Skills.Experience in Security Industry Preferred. Email: adminaccts@networkda.in Call: 9880732602

**AGSAR PAINTS** PVT LTD. WANTED 'Sales Executives' Posting For Bangalore, Mangalore, Goa. EMail: bangalore@agsar.net Contact: 9535910010

### Walk-in

Aequitas
Walk In Interview
• Team Leader Tele caller
• Field Executive Experience DRA
Any Degree, PUC or SSLC Basic Computer Knowledge, Kannada English, Hindi Telugu, Tamil
• Banking Collection
SALARY, PF, ESI & INCENTIVES
Aequitas Debt Solution Pvt. Ltd., Wilson Garden, Bangalore-27
Landmark : Near Police Station
98808 82233/ 76761 16129

### Teachers/ Professors

**SANSKRIT TEACHERS** needed for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333 WALK-IN WELCOME.

## REAL ESTATE BUYING

### General

### General

**REQUIRED BANGALORE** properties for purchase. (A). Under SR Value (B). Site/ Land & Building (C). Clear Title (D). A-Katha (E) Settlement. (F) 1Cr- 5Cr. CONTACT:- 6360721992.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

## REAL ESTATE SELLING

### Flat

### General

**DUPLEX FLAT** For Sale In Tata Silk Farm, Thyagarajanagar, Bengaluru. Contact : 8971660799.

### Isro Layout

Flats For Sale In VV Nagar, Near Isro Layout, Bengaluru. Contact : 8971660799

### House

### BTM Layout

**BTM N.S.PALYA,** Dollars Layout, North,50x80 old house, Commercial/ Residential (Designers Dreams) reasonable Price,Suraj Realtors-9845232711.

### Sites

### Ulsoor

**SALE: TWO** Independent adjacent East facing houses, Ulsoor Road, Yellappa Chetty Layout. 1) Site 3360 Sft 4 BHK 2) Site 4507 sft, 3 BHK. G.N. Properties: 9845044179.

### Whitefield

**SALE: CORNER** Plot No. 38, Prestige Whistling Palms, ECC Road, 5360 Sft. Special reduced price only this month G.N. Properties: 9845044179.

## PERSONAL

### Change of Name

**I, PADMA** T Janardan aged 54 years S/o. Late. Sri. Thamabayya residing at #6, Ground Floor, 1st cross, Navodaya Nagar, Kothnur Dinne Main road, J.P Nagar 7th phase, Bangalore-560076, have changed my name to T.P. JANARDANA vide affidavit dated 11/01/2022 before notary Jayalingayya Mudenoormath., Bangalore

## PUBLIC NOTICE

PUBLIC NOTICE
My Clients are intending to purchase the Property morefully mentioned in the Schedule hereto and referred to as the Schedule Property from its present owner/s, **Smt. Parvathamma** W/o Late Puttaraju, and **Shri P.Manjunath,** S/o Late Puttaraju, residing at Residing at No.152, Vaderahalli Village,Tataguni Post, Kanakapura Road, Bangalore-560082.
Any person/s asserting any right title, interest or claim in the Schedule Property or any part thereof in any manner or having any claim against the Schedule Property or the documents thereof or objecting to such sale in favour of my clients, should write to the undersigned within SEVEN days with all documentary proof of basing and asserting their rights on the Schedule Property, after which period my clients shall proceed on the basis that there are no claims of whatsoever nature with regard to the Schedule Property.
SCHEDULE PROPERTIES
ALL THAT PIECE & PARCEL of the agricultural Land bearing **Sy No.159/3 (Old No.159/2)** measuring **1.00 Acre (including kharab land of 0.08 guntas)** situated at B.M.Kaval Village, Kengeri Hobli, Bangalore South Taluk and bounded on :
**East by:** Land of Art of Living
**West by:** Road and land of Rudrappa
**North by:** Land of P Manjunath and Parvathamma in Sy.No.159/4
**South by:** Land of Narasappa
ALL THAT PIECE & PARCEL of the agricultural Land bearing **Sy. No.159/4** (old Sy.No.159/2) measuring **1.00 Acre 10 Guntas** situated at B.M.Kaval Village, Kengeri Hobli, Bangalore South Taluk and bounded on
**East by:** Land of Art of Living
**West by:** Land of Art of Living
**North by:** Remaining land in Sy.No. 159/2
**South by:** Land of P Manjunath in Sy No.159/3.
**T.S. RAMESH,** Advocate No.A-602, PRIDE PAVILION PARTMENTS, West of Chord Road, Rajajinagar, BANGALORE-560010. M: 9886846877
Date: 12-01-2022. Place: Bangalore.

APPLICATION FOR ALLOTMENT OF TAILOR SHOP AT 515 ARMY BASE WORKSHOP, ULSOOR, BANGALORE- 08
1. Commandant & MD, 515 Army Base Wksp, Bangalore-560008 invites applications for allotment of Tailor shop on rental basis.
2. Eligible category as per preference:-
(i) War Widows/Widows of Def pers killed while on duty. (ii) Disabled Soldiers. (iii) Ex Servicemen. (iv) Spouses/Widows of ex servicemen. (v) Civilian.
3. Last date of receipt of filled application form is 25 Jan 2022 (upto 1100hrs) at office of Bn Cdr, Mil Wing of 515 Army Base Wksp.
Email-mwbangeag@gmail.com

## EDUCATIONAL

### Admission

**ONE SITTING:** LL.B, B.TECH, M.TECH, DIPLOMA, MBA, MCA, M.Sc, BBA, BCA, B.Sc, B.Com, B.PHARM, GNM, MLT, PU, SSLC. Asha Institute, Bangalore. Ph: 9448460103/ 7093438248.

EDUCATION
To Place your Classified Ads Contact:
9845114560

## BUSINESS

### Business Offers

### Finance

**NRI'S INVESTMENT** And Finance Available On Low Interest Against Properties, Land And Building, Sites, Flats, Converted And Agriculture Lands Call: 7411265189

### Business to Business

### Financial Services

**'AISHWARYA GROUP'** Invest 1L- 10L in Trading, Multiple Businesses. Monthly 7% Secured Fixed Returns. Investors welcome. Contact:-7892818780.

**PROVIDE PL,** BL, HL, Loan Against Properties, (Any Katha), All type of Loans. Pvt. Finanace, Co-op Banks, Banking. 10L- 10Cr. Contact:-8904047577.

## EDUCATION CORNER

VIVEKANANDA INSTITUTE OF MANAGEMENT
AN INSTITUTE OF JANATHA EDUCATION SOCIETY
Affiliated to Bengaluru City University & Approved by AICTE, NewDelhi
Only few seats available for MBA | MCOM
PGCET CODE: B-323
Contact: 9019492166 | 9513953480 080-23577334
Email:director@vimjes.edu.in URL:http://vimjes.edu.in
Dr.Rajkumar Road, Next to Orion Mall, Rajajinagar IIStage, Bengaluru-560055

VIVEKANANDA COLLEGE OF PHARMACY
AN INSTITUTE OF JANATHA EDUCATION SOCIETY
Affiliated to Rajiv Gandhi University of Health Sciences & Approved by PCI, New Delhi
Only few seats available for M.PHARM
PHARMACEUTICS
PHARMACEUTICAL CHEMISTRY
PGCET CODE: B060
Contact: 080-23377434 | 9513953489
Email:principal@vcpjes.edu.in URL:http://vcpjes.edu.in
Dr.Rajkumar Road, Next to Orion Mall, Rajajinagar IIStage, Bengaluru-560055

### Finance

**WE ARRANGE** Mortgage, House Purchase, Construction, Site Purchase and Mortgage Loans from Banks. Contact: 9353705002

**WE HAVE** Good Clients/ Files for Loan Against Properties. 1Cr to 10Cr. Direct Financiers, Genuine Consultants, Freelancers, Welcome for pvt. fin/ Bank/ Co-op Banks. No Upfront. Contact:- 8867203488.

## HEALTH SPECIAL

ಹಿಯರಿಂಗ್ ಹೆಲ್ಥ್ ಕೇರ್ ಕ್ಲಿನಿಕ್ as
25% ವರೆಗೆ ಕಡಿತ
ಎಲ್ಲಾ ಶ್ರವಣ ಸಾಧನಗಳ ಮೇಲೆ



HHCC HEARING HEALTH CARE CLINIC as
OREVA RS CHAIN OF HEARING CLINICS
20+ ವರ್ಷಗಳ ಶ್ರೇಷ್ಠತೆ
*T & C Apply.
ಈ ಕೊಡುಗೆ ಜನವರಿ 31 ರವರೆಗೆ
ತ್ವರಿತವಾಗಿ !!! ಸಂಪರ್ಕಿಸಿ:
+ ಅಗೋಚರ ಶ್ರವಣ ಸಾಧನಗಳು ಲಭ್ಯ
+ ಮೊಬೈಲ್ ಸಂಪರ್ಕ
+ ಹಿರಿಯ ನಾಗರಿಕರಿಗಾಗಿ ಮನೆ ಭೇಟಿ
“ನಿಮ್ಮ ಮನೆಯಲ್ಲಿಯೇ ಶ್ರವಣ ಸಾಮರ್ಥ್ಯ ತಪಾಸಣೆಗಾಗಿ ಆಧುನಿಕ ಉಪಕರಣಗಳನ್ನು ಬಳಸಲಾಗುತ್ತದೆ”
ಬೆಂಗಳೂರು ಮತ್ತು ಕರ್ನಾಟಕದಾದ್ಯಂತ ಶಾಖೆಗಳಿವೆ. ನಿಮ್ಮ ಸಮೀಪದ ಕೇಂದ್ರ ತಿಳಿಯಲು ಸಂಪರ್ಕಿಸಿ
99456 11100 www.hearingc.com

DH DECCAN HERALD ಪ್ರಜಾವಾಣಿ
BOOK YOUR REAL ESTATE
Classified Advertisement In Deccan Herald & Prajavani
SATURDAY & SUNDAY COMBO OFFER

| Ordinary Per word | Bold Per word | Ordinary Semi Display Per word | Bold Semi Display Per word | Single Col CD Per sqcm |
|---|---|---|---|---|
| 80 | 125 | 95 | 155 | 570 |

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

# ದಾಹ ತಣಿಸಲು ಕೆರೆಗಳ ಬಳಕೆ ಸಾಧ್ಯವೆ?





## ರಾಜಧಾನಿ ಒಡಲದನಿ

**ಬೆಂಗಳೂರು:** ರಾಜಧಾನಿಯ ಜನರ ಕುಡಿಯುವ ನೀರಿನ ಬೇಡಿಕೆ ಪೂರೈಸುವುದಕ್ಕಾಗಿ ಮೇಕೆದಾಟು ಸಮಾನಾಂತರ ಜಲಾಶಯ ನಿರ್ಮಿಸಬೇಕೆಂಬ ಬೇಡಿಕೆ ಮುಂದಿಟ್ಟುಕೊಂಡು ಕಾಂಗ್ರೆಸ್ ನಾಯಕರು ಪಾದಯಾತ್ರೆ ನಡೆಸುತ್ತಿದ್ದಾರೆ. ಬೆಂಗಳೂರಿನ ನೀರಿನ ಬೇಡಿಕೆ ಪೂರೈಸಲು ಇಲ್ಲಿರುವ ಕೆರೆಗಳ ಬಳಕೆ ಸಾಧ್ಯವಿಲ್ಲವೆ? ಎಂಬ ಚರ್ಚೆ ಈಗ ಸಾರ್ವಜನಿಕ ವಲಯದಲ್ಲಿ ಜೋರಾಗಿ ಸದ್ದು ಮಾಡುತ್ತಿದೆ.

ಸಹಸ್ರಾರು ಕೋಟಿ ರೂಪಾಯಿ ವ್ಯಯಿಸಿ ಹೊಸ ಅಣೆಕಟ್ಟೆ ನಿರ್ಮಿಸುವ ಯೋಜನೆಯ ಬದಲಿಗೆ ನಗರದಲ್ಲೇ ಇರುವ ಕೆರೆಗಳನ್ನು ಪುನರುಜ್ಜೀವನಗೊಳಿಸಿದರೆ ನೀರಿನ ಕೊರತೆಯ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯ ಎಂಬುದು ಹಲವರ ಅಭಿಪ್ರಾಯ. ಆದರೆ, ಕೆರೆ ನೀರಿನ ಬಳಕೆ, ಕೆರೆಗಳ ಪುನರುಜ್ಜೀವನದ ಕಾರ್ಯಸಾಧ್ಯತೆಯ ಬಗ್ಗೆಯೂ ಹಲವರಲ್ಲಿ ಅನುಮಾನಗಳಿವೆ. ಈ ಕುರಿತು ವಿವಿಧ ಕ್ಷೇತ್ರದ ತಜ್ಞರ ಅಭಿಪ್ರಾಯ ಈ ವಾರದ 'ರಾಜಧಾನಿಯ ಒಡಲ ದನಿ'ಯಲ್ಲಿ...

## 'ಮುಂಬೈ ಮಾದರಿ ಅನುಸರಿಸಬೇಕು'



ಬೆಂಗಳೂರಿನ ನೀರಿನ ಬೇಡಿಕೆ ಪೂರೈಸಲು ಕೆರೆಗಳ ಅಭಿವೃದ್ಧಿಯತ್ತ ಗಮನಹರಿಸಬೇಕು ಎಂದು ನ್ಯಾಯಾಲಯ ಆದೇಶ ನೀಡಿದೆ. ಆದರೆ, ಅದರ ಅನುಷ್ಠಾನಕ್ಕೆ ಯಾರೂ ಆಸಕ್ತಿ ತೋರಿಲ್ಲ. ಈಗ 'ಕನ್ನಡ ರಾಷ್ಟ್ರೀಯತೆ'ಯ ಭಾವನಾತ್ಮಕ ಬಲ ಪಡೆದುಕೊಂಡು ಮೇಕೆದಾಟು ಯೋಜನೆ ಅನುಷ್ಠಾನದ ಕುರಿತು ಚರ್ಚೆ ನಡೆಯುತ್ತಿದೆ. 16,000 ಎಕರೆ ಅರಣ್ಯ ನಾಶಕ್ಕೆ ಈ ಯೋಜನೆ ಕಾರಣವಾಗಲಿದೆ ಎಂಬ ಅಂದಾಜಿದೆ.

ನಗರದಲ್ಲಿ 1,000 ಮಿಲಿ ಮೀಟರ್‌ವರೆಗೂ ಮಳೆ ಬೀಳುತ್ತಿದೆ. 1,000 ಚದರ ಕಿ.ಮೀ. ವಿಸ್ತರಿಸಿಕೊಂಡಿರುವ ಬೆಂಗಳೂರಿನಲ್ಲಿ ಇಷ್ಟೊಂದು ಪ್ರಮಾಣದ ಮಳೆಯ ನೀರನ್ನು ಹಿಡಿದಿಡಲು ಸರಿಯಾದ ಕೆರೆಗಳೇ ಇಲ್ಲ. ಹೊಸ ಕೆರೆಗಳನ್ನು ನಿರ್ಮಿಸುವ ಪ್ರಸ್ತಾವ ನಗರ ಮಹಾ ಯೋಜನೆಯಲ್ಲಿ ಕಾಣಿಸುವುದೇ ಇಲ್ಲ. ಬೆಂಗಳೂರು ಎತ್ತರದಲ್ಲಿರುವುದರಿಂದ ಮಳೆ ನೀರು ಹರಿದು ಸಮುದ್ರದ ಪಾಲಾಗುತ್ತಿದೆ. ನಗರದಲ್ಲಿರುವ ಕರೆಗಳ ಜತೆಗೆ ಹೊಸ ಕೆರೆಗಳ ನಿರ್ಮಾಣದ ಬಗ್ಗೆಯೂ ಯೋಚಿಸಬೇಕು. ಮುಂಬೈ ಮಹಾನಗರಕ್ಕೆ ಯಾವುದೇ ನದಿಗಳಿಂದ ನೀರು ಪೂರೈಸುವುದಿಲ್ಲ. ಅಲ್ಲಿನ ಆರು ಕೆರೆಗಳೇ ಕುಡಿಯುವ ನೀರಿನ ಮೂಲ. ಅಂತಹ ಮಾದರಿಯನ್ನು ಬೆಂಗಳೂರು ನಗರಕ್ಕೂ ಅಳವಡಿಸಬೇಕು. ಜನರಿಗೆ ನೀರು ಬೇಕಿದೆ. ಭಾವನಾತ್ಮಕ ವಿಚಾರವನ್ನು ಮುನ್ನೆಲೆಗೆ ತಂದು ಸ್ಥಳೀಯ ಸಂಪನ್ಮೂಲಗಳ ಬಳಕೆಯ ಚರ್ಚೆಯನ್ನು ಹಿನ್ನೆಲೆಗೆ ಸರಿಸಬಾರದು.

– **ಕ್ಷಿತಿಜ್ ಅರಸ್,** ಪ್ರಾಧ್ಯಾಪಕ, ಎನ್‌ಎಲ್‌ಎಸ್‌ಐಯು

## 'ಕೆರೆಗಳ ಅಭಿವೃದ್ಧಿಯಿಂದ ಪರಿಹಾರ ಸಾಧ್ಯ'

ಬೆಂಗಳೂರಿನಲ್ಲಿ ಸಾಮಾನ್ಯವಾಗಿ ವಾರ್ಷಿಕ 700 ಮಿಲಿಮೀಟರ್‌ನಿಂದ 850 ಮಿಲಿ ಮೀಟರ್‌ವರೆಗೂ ಮಳೆ ಬೀಳುತ್ತದೆ. ಮಳೆಯಿಂದಲೇ 15 ಟಿಎಂಸಿ ಅಡಿಗಳಷ್ಟು ನೀರು ಲಭಿಸುತ್ತದೆ. ಸದ್ಯ ನಗರದ ಒಟ್ಟು ನೀರಿನ ಬೇಡಿಕೆ 18 ಟಿಎಂಸಿ ಅಡಿಗಳಷ್ಟಿದೆ. ಇಲ್ಲಿ ಬೀಳುವ ಮಳೆಯ ನೀರನ್ನು ಕೆರೆಗಳಲ್ಲಿ ಹಿಡಿದಿಟ್ಟು, ಬಳಸಿಕೊಂಡರೆ ನಗರದ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯವಿದೆ.

ಮೇಕೆದಾಟು ಯೋಜನೆ ದುಬಾರಿಯಾದುದು. ಅಲ್ಲದೇ ಕಾವೇರಿ ವನ್ಯಜೀವಿಧಾಮದ ಹೆಚ್ಚಿನ ಜಮೀನು ಯೋಜನೆಗಾಗಿ ಮುಳುಗಡೆಯಾಗುತ್ತದೆ. ಎದುರಿನಲ್ಲಿ ತಮಿಳುನಾಡು ರಾಜ್ಯವನ್ನು ಇರಿಸಿಕೊಂಡು ನೋಡಿದಾಗ ಭಾವನಾತ್ಮಕವಾಗಿ ಈ ಯೋಜನೆ ಒಪ್ಪಿತವಾಗಬಹುದು. ಆದರೆ, ಅರಣ್ಯ ಮತ್ತು ಪರಿಸರ ಸಂರಕ್ಷಣಾ ಕಾಯ್ದೆಗಳಲ್ಲಿನ ನಿರ್ಬಂಧಗಳನ್ನು ಮೀರಿ ಅನುಷ್ಠಾನಕ್ಕೆ ತರುವುದು ಕಷ್ಟ.

1800ನೇ ಇಸವಿವರೆಗೂ ನಗರದಲ್ಲಿ 1,452 ಕೆರೆಗಳಿದ್ದವು. ಈಗ 193 ಕೆರೆಗಳಷ್ಟೇ ಉಳಿದಿವೆ. ಈ ಕೆರೆಗಳಲ್ಲೂ ಮಳೆಯ ನೀರನ್ನು ಸಂಗ್ರಹಿಸಿ, ಬಳಸಲು ಸಾಧ್ಯವಿದೆ. ನಗರದಲ್ಲಿ 18 ಟಿಎಂಸಿ ಅಡಿಯಷ್ಟು ಕೊಳಚೆ ನೀರು ಹರಿಯುತ್ತದೆ. ಅದನ್ನು ಸಂಸ್ಕರಿಸಿದರೆ 16 ಟಿಎಂಸಿ ಅಡಿಯಷ್ಟು ಬಳಕೆಗೆ ಯೋಗ್ಯವಾದ ನೀರು ಲಭಿಸುತ್ತದೆ. ಜಕ್ಕೂರು ಕೆರೆಯ ಪುನರುಜ್ಜೀವನಕ್ಕೆ ಅನುಸರಿಸಿದ ವಿಧಾನವನ್ನು ಬಳಸಿಕೊಂಡರೆ ಅತ್ಯಂತ ಶುದ್ಧವಾದ ನೀರನ್ನು ಪಡೆಯಲು ಸಾಧ್ಯ. ನಮ್ಮ ಅಧ್ಯಯನ ಮತ್ತು ಅನುಭವದಲ್ಲೇ ಇದು ಸಾಬೀತಾಗಿದೆ. ಸರ್ಕಾರ ಇಚ್ಛಾಶಕ್ತಿ ಪ್ರದರ್ಶಿಸಬೇಕಷ್ಟೆ.



– **ಪ್ರೊ.ಟಿ.ವಿ. ರಾಮಚಂದ್ರ,** ಪ್ರಾಧ್ಯಾಪಕ, ಐಐಎಸ್‌ಸಿ

## 'ಸ್ಥಳೀಯರ ಸಹಭಾಗಿತ್ವದ ಯೋಜನೆ ಬೇಕು'

ಸ್ಥಳೀಯರ ಸಹಕಾರದಲ್ಲಿ ಕೆರೆಗಳ ಪುನರುಜ್ಜೀವನ ಮತ್ತು ನಿರ್ವಹಣೆ ಮಾಡಿದರೆ ನೀರಿನ ಸಮಸ್ಯೆಗೆ ಪರಿಹಾರ ಸಾಧ್ಯ ಎಂಬುದಕ್ಕೆ ಪುಟ್ಟೇನಹಳ್ಳಿ ಕೆರೆ ಅಭಿವೃದ್ಧಿ ಪುರಾವೆಯನ್ನು ಒದಗಿಸಿದೆ. 2010ರಿಂದ ಈ ಕೆರೆಯನ್ನು ಪುನರುಜ್ಜೀವನಗೊಳಿಸಲಾಗಿದೆ. ಆ ಬಳಿಕ ಸುತ್ತಲಿನ ನೂರಾರು ಕೊಳವೆ ಬಾವಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಉತ್ತಮ ಗುಣಮಟ್ಟದ ನೀರು ಕೂಡ ಲಭಿಸುತ್ತಿದೆ.

ಕೆರೆಗಳ ಅಭಿವೃದ್ಧಿಯಿಂದ ನಗರದಲ್ಲಿ ಪ್ರವಾಹ ಉಂಟಾಗುವುದನ್ನು ತಡೆಯಬಹುದು. ಕೆರೆಯ ಸುತ್ತ ಗಿಡಗಳನ್ನು ನೆಡುವುದರಿಂದ ನಗರದ ಉಷ್ಣಾಂಶ ತಗ್ಗುತ್ತದೆ. ಉತ್ತಮವಾದ ಗಾಳಿಯೂ ಲಭಿಸುತ್ತದೆ. ಎಲ್ಲ ಕೆರೆಗಳಲ್ಲೂ ಈ ಮಾದರಿಯ ಕೆಲಸ ಮಾಡಲು ಸಾಧ್ಯವಿದೆ. ಆದರೆ, ಸ್ಥಳೀಯರ ಸಂಪೂರ್ಣ ಸಹಭಾಗಿತ್ವದಲ್ಲೇ ಯೋಜನೆ ರೂಪಿಸಿ ಅನುಷ್ಠಾನಕ್ಕೆ ತರಬೇಕು.



– **ಉಷಾ ರಾಜಗೋಪಾಲನ್,** ಪುಟ್ಟೇನಹಳ್ಳಿ ಕೆರೆ ಅಭಿವೃದ್ಧಿ ಟ್ರಸ್ಟ್ ಸದಸ್ಯೆ

## 'ಕೊಳವೆ ಬಾವಿ ಮರುಪೂರಣಕ್ಕೆ ಬಳಸಬಹುದು'

ಬೆಂಗಳೂರಿನಲ್ಲಿರುವ ಕೆರೆಗಳ ನೀರನ್ನು ನೇರವಾಗಿ ಕುಡಿಯುವುದಕ್ಕೆ ಬಳಸುವುದಕ್ಕೆ ಕೆಲವು ಸಮಸ್ಯೆಗಳಿವೆ. ಬಹುತೇಕ ಎಲ್ಲ ಕೆರೆಗಳಿಗೂ ಕೊಳಚೆ ನೀರು ನೇರವಾಗಿ ಸೇರುತ್ತಿದೆ. ಈ ಕೆರೆಗಳ ನೀರನ್ನು ಸಂಪೂರ್ಣ ಶುದ್ಧವಾದ ಸ್ವರೂಪಕ್ಕೆ ಪರಿವರ್ತಿಸುವುದು ಕಷ್ಟದ ಕೆಲಸ.

ದೊಡ್ಡ ಯೋಜನೆಗಳ ಬದಲಿಗೆ ನಗರದಲ್ಲಿನ ಕೆರೆಗಳನ್ನೇ ಅಭಿವೃದ್ಧಿಪಡಿಸಿ ಕುಡಿಯುವ ನೀರು ಪೂರೈಕೆಗೆ ಬಳಸಬೇಕು ಎಂದು ಕೆಲವರು ಹಲವು ವರ್ಷಗಳಿಂದ ಒತ್ತಾಯಿಸುತ್ತಿದ್ದಾರೆ. ಆದರೆ, ಈ ದಿಸೆಯಲ್ಲಿ ಹೆಚ್ಚೇನೂ ಅಧ್ಯಯನಗಳು ನಡೆದಿಲ್ಲ. ಯೋಜನೆಯ ಕಾರ್ಯಸಾಧ್ಯತೆಯ ಕುರಿತೂ ಪರಿಶೀಲನೆ ಆಗಿಲ್ಲ.

ಈಗ ನಗರದ ಬಹುಪಾಲು ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಕುಡಿಯುವ ನೀರು ಲಭ್ಯವಿದೆ. ಇಂತಹ ಸ್ಥಿತಿಯಲ್ಲಿ ಜನರು ಕೆರೆಯ ನೀರಿನ ಸೇವನೆಗೆ ಒಲವು ತೋರುವ ಸಾಧ್ಯತೆಯೂ ಕಡಿಮೆ ಇದೆ. ಪ್ರಾಯೋಗಿಕವಾಗಿ ಸಂಸ್ಕರಿಸಿದ ನೀರನ್ನು ಒಮ್ಮೆ ರುಚಿ ನೋಡಬಹುದು. ನಿತ್ಯ ಬಳಸಲು ಆಸಕ್ತಿ ತೋರುವವರು ಕಡಿಮೆ.

ನಗರದಲ್ಲಿ ಕೆಲವೇ ಕೆರೆಗಳು ಮಾತ್ರ ಕೊಳಚೆ ನೀರಿನಿಂದ ಮುಕ್ತವಾಗಿವೆ. ಕೆಲವು ಕೆರೆಗಳ ಜಲಾನಯನ ಪ್ರದೇಶವೂ ಚೆನ್ನಾಗಿದೆ. ಅಂತಹ ಕೆರೆಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಕೆರೆಗಳ ನೀರು ಭೂಮಿಯಲ್ಲಿ ಇಂಗಿ, ಕೊಳವೆಬಾವಿಗಳಲ್ಲಿನ ನೀರಿನ ಮಟ್ಟ ಹೆಚ್ಚುವಂತಾಗಬೇಕು. ಕೊಳವೆ ಬಾವಿಗಳ ಮೂಲಕ ಮೇಲೆತ್ತಿದ ನೀರನ್ನು ಬಳಸುವುದು ಆರೋಗ್ಯದ ದೃಷ್ಟಿಯಿಂದಲೂ ಉತ್ತಮ.



– **ಡಾ.ಯು.ವಿ. ಸಿಂಗ್,** ನಿವೃತ್ತ ಐಎಫ್‌ಎಸ್ ಅಧಿಕಾರಿ

## ಪುಸ್ತಕ ಬಹುಮಾನಕ್ಕೆ ಆಹ್ವಾನ

**ಬೆಂಗಳೂರು:** ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಅನುವಾದಿತ ಪುಸ್ತಕಗಳಿಗೆ ನೀಡಲಿರುವ 2021ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಪುಸ್ತಕಗಳನ್ನು ಆಹ್ವಾನಿಸಿದೆ.

2021ರ ಜ.1ರಿಂದ ಡಿ.31ರ ಅವಧಿಯಲ್ಲಿ ಪ್ರಥಮ ಆವೃತ್ತಿಯಲ್ಲಿ ಪ್ರಕಟವಾದ ಅನುವಾದಿತ ಪುಸ್ತಕಗಳನ್ನು ಹಾಗೂ ಅನುವಾದ ಅಧ್ಯಯನ ಕುರಿತ ಪುಸ್ತಕಗಳನ್ನು ಮಾತ್ರ ಬಹುಮಾನಕ್ಕೆ ಪರಿಗಣಿಸಲಾಗುತ್ತದೆ. ಕನ್ನಡದಿಂದ ಇತರ ಯಾವುದೇ ಭಾಷೆಗೆ ಅಥವಾ ಇತರ ಭಾಷೆಗಳಿಂದ ಕನ್ನಡಕ್ಕೆ ಅನುವಾದ ಮಾಡಲಾಗಿರುವ ಪುಸ್ತಕಗಳನ್ನು ಕಳುಹಿಸಲು ಫೆ.15 ಕೊನೆಯ ದಿನ. ಪುಸ್ತಕದ ನಾಲ್ಕು ಪ್ರತಿಗಳನ್ನು ಕಳುಹಿಸಬೇಕು ಎಂದು ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ವಿಳಾಸ: ರಿಜಿಸ್ಟ್ರಾರ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056 ವಿವರಗಳಿಗೆ kuvempubhashabharathi.karnataka.gov.in ನೋಡಿ.

## ಸಹಸ್ರಲಿಂಗಕ್ಕೆ ಪ್ರವೇಶ ನಿರ್ಬಂಧ

**ಶಿರಸಿ:** ಮಕರ ಸಂಕ್ರಾಂತಿ ಹಬ್ಬ ನಡೆಯುವ ಜ.14 ಮತ್ತು 15 ರಂದು ತಾಲ್ಲೂಕಿನ ಸಹಸ್ರಲಿಂಗಕ್ಕೆ ಸಾರ್ವಜನಿಕ ಪ್ರವೇಶ ನಿರ್ಬಂಧಿಸಿ ಭೈರುಂಬೆ ಗ್ರಾಮ ಪಂಚಾಯ್ತಿ ಆದೇಶಿಸಿದೆ.

ಹಬ್ಬದ ಸಂದರ್ಭದಲ್ಲಿ ಇಲ್ಲಿನ ಶಾಲ್ಮಲಾನದಿಯಲ್ಲಿ ಪುಣ್ಯಸ್ನಾನ ಮಾಡಿ, ಶಿವಲಿಂಗಗಳಿಗೆ ಪೂಜೆ ಸಲ್ಲಿಸಲು ಭಕ್ತರ ದಂಡು ಹರಿದುಬರುತ್ತದೆ. ಹೊರಜಿಲ್ಲೆಗಳಿಂದಲೂ ಸಾಕಷ್ಟು ಜನರು ಬರುತ್ತಾರೆ. ಕೋವಿಡ್ ನಿಯಮಾವಳಿ ಪಾಲನೆ ಸಲುವಾಗಿ ಜನ ದಟ್ಟಣೆ ತಡೆಯಲು ನಿರ್ಬಂಧ ವಿಧಿಸುವ ನಿರ್ಣಯ ಕೈಗೊಳ್ಳಲಾಗಿದೆ ಎಂದು ಗ್ರಾಮ ಪಂಚಾಯ್ತಿ ಅಧ್ಯಕ್ಷ ರಾಘವೇಂದ್ರ ನಾಯ್ಕ ತಿಳಿಸಿದ್ದಾರೆ.




### ಪ್ರಶಸ್ತಿ ಪ್ರದಾನ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ನಡೆದ ಸಮಾರಂಭದಲ್ಲಿ ನಾಡಿಗೇರ ಕೃಷ್ಣರಾಯ ಪ್ರಶಸ್ತಿಯನ್ನು 'ಸಮಾಜಮುಖಿ' ಸಂಪಾದಕ ಚಂದ್ರಕಾಂತ ವಡ್ಡು ಅವರಿಗೆ, ಮಾ.ರಾಮಮೂರ್ತಿ ಪ್ರಶಸ್ತಿಯನ್ನು 'ಈ ಸಂಜೆ' ಸಂಪಾದಕ ಟಿ.ವೆಂಕಟೇಶ್ ಅವರಿಗೆ, ಅತ್ಯುತ್ತಮ ಛಾಯಾಗ್ರಾಹಕ ಪ್ರಶಸ್ತಿಯನ್ನು ವಿಶ್ವನಾಥ ಸುವರ್ಣ ಅವರಿಗೆ ಪ್ರದಾನ ಮಾಡಲಾಯಿತು. ಸಂಘದ ಉಪಾಧ್ಯಕ್ಷ ಮತ್ತಿಕೆರೆ ಜಯರಾಂ, ವಾರ್ತಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಎಚ್.ಬಿ.ದಿನೇಶ್, ಪತ್ರಕರ್ತ ಪದ್ಮರಾಜ ದಂಡಾವತಿ, ಪತ್ರಕರ್ತ ಸಂಘ ಬೆಂಗಳೂರು ನಗರ ಘಟಕ ಅಧ್ಯಕ್ಷ ಸೋಮಶೇಖರ ಗಾಂಧಿ, ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು, ಪ್ರಧಾನ ಕಾರ್ಯದರ್ಶಿ ದೇವರಾಜ್ ಇದ್ದರು

ಪ್ರಜಾವಾಣಿ ಚಿತ್ರ

### ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬ; ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ

# ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋರಮಂಗಲದ ಕೇಂದ್ರೀಯ ಸದನ ಮತ್ತು ಈಜಿಪುರ ನಡುವೆ ಸಂಪರ್ಕ ಕಲ್ಪಿಸುವ ಈಜಿಪುರ ಮೇಲ್ಸೇತುವೆ ನಿರ್ಮಾಣ ಕಾರ್ಯದ ವಿಳಂಬಕ್ಕೆ ಹೈಕೋರ್ಟ್ ತೀವ್ರ ಅತೃಪ್ತಿ ವ್ಯಕ್ತಪಡಿಸಿದೆ.

ಈ ಸಂಬಂಧ ಕೋರಮಂಗಲದ ಆದಿನಾರಾಯಣ ಶೆಟ್ಟಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಮತ್ತು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, 'ಕಾಮಗಾರಿ ಪೂರ್ಣಗೊಳಿಸಲು ಭೂ ಸ್ವಾಧೀನ, ಮರಗಳ ತೆರವು ಸೇರಿದಂತೆ ಅನೇಕ ಅಡಚಣೆಗಳಿದ್ದವು. ಈಗ ಅವೆಲ್ಲಾ ನಿವಾರಣೆಯಾಗಿವೆ. ಮರಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆಗೆ ಮನವಿ ಮಾಡಲಾಗಿದೆ. ಆದಷ್ಟು ಶೀಘ್ರವೇ ಕಾಮಗಾರಿ ಪೂರ್ಣಗೊಳಿಸಲಾಗುವುದು. ಈ ಕುರಿತ ವಿವರವಾದ ಪ್ರಮಾಣಪತ್ರ ಸಲ್ಲಿಸಲು ಕಾಲಾವಕಾಶ ಬೇಕು' ಎಂದು ಮನವಿ ಮಾಡಿದರು.

### ಮುಖ್ಯಾಂಶಗಳು

- 2019ರ ನವೆಂಬರ್‌ನಲ್ಲೇ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು
- ಪಾಲಿಕೆ ಕಾರ್ಯವೈಖರಿ ನಮಗೆ ತೃಪ್ತಿ ತಂದಿಲ್ಲ
- ಅಡ್ಡಿಗಳಿವೆ ಎಂಬುದು ಮೊದಲೇ ತಿಳಿದಿರಲಿಲ್ಲವೇ

ಈ ಮನವಿಯನ್ನು ಒಪ್ಪದ ನ್ಯಾಯಪೀಠ, 'ಮೇಲ್ಸೇತುವೆ ಕಾಮಗಾರಿ ಪೂರ್ಣಗೊಳಿಸುವ ಕುರಿತಂತೆ ಈ ಹಿಂದಿನ ವಿಚಾರಣೆಯಲ್ಲೇ ಪ್ರಮಾಣಪತ್ರ ಸಲ್ಲಿಸಿ ಎಂದು ಸೂಚನೆ ನೀಡಲಾಗಿತ್ತು.



**ಯೋಜನೆ ವಿಳಂಬಕ್ಕೆ ಬಿಬಿಎಂಪಿ ಕುಂಟುನೆಪ ಹೇಳುತ್ತಿದೆ. ಇದಕ್ಕೆ ಅಡ್ಡಿಗಳಿವೆ ಎಂದಾದರೆ ಪಾಲಿಕೆ ಕಾಮಗಾರಿಯನ್ನೇ ಆರಂಭಿಸಬಾರದಿತ್ತು**

**ಋತುರಾಜ್ ಅವಸ್ಥಿ**
ಮುಖ್ಯ ನ್ಯಾಯಮೂರ್ತಿ

ಆದರೆ, ಇಷ್ಟು ದಿನವಾದರೂ ಪ್ರಮಾಣಪತ್ರ ಸಲ್ಲಿಸಿಲ್ಲ' ಎಂದು ಕಿಡಿಕಾರಿತು.

'ಮೇಲ್ಸೇತುವೆಯನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ ಎಂಬ ಬಗ್ಗೆ ಒಂದು ವಾರದಲ್ಲಿ ವಿವರವಾದ ವರದಿಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿ. ಇಲ್ಲವಾದರೆ ಮುಖ್ಯ ಆಯುಕ್ತರೇ ಖುದ್ದು ಕೋರ್ಟ್‌ಗೆ ಹಾಜರಾಗಬೇಕು' ಎಂದು ಕಟ್ಟುನಿಟ್ಟಾಗಿ ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿದೆ.

### 'ಆಯುಕ್ತರಿಗೆ ಹುದ್ದೆ ತ್ಯಜಿಸಲು ಹೇಳಿ'

'ಯೋಜನೆ ಇಷ್ಟೊಂದು ವಿಳಂಬವಾದರೂ ಪಾಲಿಕೆ ಆಯುಕ್ತರು ಏನು ಮಾಡುತ್ತಿದ್ದಾರೆ' ಎಂದು ಪಾಲಿಕೆ ವಕೀಲರನ್ನು ತರಾಟೆಗೆ ತೆಗೆದುಕೊಂಡ ನ್ಯಾಯಪೀಠ, 'ಬಿಬಿಎಂಪಿ ಆಯುಕ್ತರಿಗೆ ಕೆಲಸ ಮಾಡಲು ಆಗದಿದ್ದರೆ ಅವರು ತಮ್ಮ ಹುದ್ದೆಯನ್ನು ತ್ಯಜಿಸಲು ಹೇಳಿ. ಬೇರೆ ಸಮರ್ಥ ಅಧಿಕಾರಿಗಳು ಆ ಜಾಗಕ್ಕೆ ಬರುತ್ತಾರೆ' ಎಂದು ಗುಡುಗಿದೆ.

ಕಾಮಗಾರಿ ವಿಳಂಬಕ್ಕೆ ಕಾರಣ ನೀಡಿದ ಪಾಲಿಕೆ ವಕೀಲರು, 'ಮೇಲ್ಸೇತುವೆ ನಿರ್ಮಾಣ ಗುತ್ತಿಗೆ ಪಡೆದಿರುವ ಮೆಸರ್ಸ್ ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪೆನಿಗೆ ಈಗಾಗಲೇ ದಂಡ ವಿಧಿಸಲಾಗಿದೆ. ಸದ್ಯ ಶೇ 44ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಹೊಸದಾಗಿ 2022ರ ಆಗಸ್ಟ್ 31ರ ಗಡುವು ನೀಡಲಾಗಿದೆ. ಅಷ್ಟರಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು' ಎಂದು ವಿವರಿಸಿದರು.

ಆದರೆ, ನ್ಯಾಯಪೀಠ ಈ ಸಮರ್ಥನೆಯನ್ನು ತಳ್ಳಿ ಹಾಕಿತು. 'ನೀವು ಗುತ್ತಿಗೆದಾರರಿಗೆ ದಂಡ ವಿಧಿಸಿದರೆ ಸಾಲದು, ಯೋಜನೆಯ ವಿಳಂಬದಿಂದ ಸಾರ್ವಜನಿಕರಿಗೆ ಎಷ್ಟು ತೊಂದರೆ ಆಗಿದೆ, ಎಷ್ಟು ಹಣ ಪೋಲಾಗಿದೆ ಎಂಬುದರ ಬಗ್ಗೆ ಯೋಚಿಸಿದ್ದೀರಾ' ಎಂದು ಖಾರವಾಗಿ ಪ್ರಶ್ನಿಸಿತು.

# ಮಾದಕ ವಸ್ತು: ಪೊಲೀಸರ ಕ್ರಮ ಎತ್ತಿಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಾದಕ ವಸ್ತು ಸಾಗಣೆ ಆರೋಪದಡಿ ಬಂಧಿಸಿ ಸ್ಥಾನಬದ್ಧತೆಯಲ್ಲಿ(ಡಿಟೆನ್ಶನ್) ಇಟ್ಟಿರುವ ಆರೋಪಿಯನ್ನು ಬಿಡುಗಡೆ ಮಾಡಲು ನಿರಾಕರಿಸಿರುವ ಹೈಕೋರ್ಟ್, ರಾಜ್ಯ ಪೊಲೀಸರ ಕ್ರಮವನ್ನು ಎತ್ತಿಹಿಡಿದಿದೆ.

'ಪೊಲೀಸರು ನನ್ನ ಪತಿಯನ್ನು ಅಕ್ರಮ ಬಂಧನದಲ್ಲಿ ಇರಿಸಿದ್ದು ಕೂಡಲೇ ಬಿಡುಗಡೆ ಮಾಡುವಂತೆ ನಿರ್ದೇಶಿಸಬೇಕು' ಎಂದು ಕೋರಿ ನಗರದ ಅನ್ನಸಂದ್ರಪಾಳ್ಯದ ಮುಸ್ಲಿಂ ಕಾಲೋನಿ ನಿವಾಸಿ ಖತೀಜುತಲ್ ನಜ್ಮಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಆರೋಪಗಳನ್ನು ಬಲವಾಗಿ ಅಲ್ಲಗಳೆದ ಹೆಚ್ಚುವರಿ ಅಡ್ವೊಕೇಟ್ ಜನರಲ್ ವೈ.ಎಚ್. ವಿಜಯಕುಮಾರ್ ಮತ್ತು ರಾಜ್ಯ ಪ್ರಾಸಿಕ್ಯೂಷನ್ ವಕೀಲ ಪಿ.ತೇಜಸ್, 'ಪ್ರಕರಣದಲ್ಲಿ ಪ್ರಾಧಿಕಾರ, ಸರ್ಕಾರ ಮತ್ತು ಸಲಹಾ ಮಂಡಳಿಗೆ ಮನವಿ ನೀಡುವ ಹಕ್ಕಿನ ಕುರಿತು ಬಂಧಿತನಿಗೆ ತಿಳಿಸಲಾಗಿದೆ. ಹೀಗಾಗಿ ಬಂಧನದ ಆದೇಶ ಮತ್ತು ಬಂಧಿಸಿರುವ ಕ್ರಮಗಳಲ್ಲಿ ಯಾವುದೇ ಲೋಪವಿಲ್ಲ' ಎಂದು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟಿದ್ದರು.

ಇದನ್ನು ಮಾನ್ಯ ಮಾಡಿದ್ದ ನ್ಯಾಯಪೀಠ, 'ಆರೋಪಿ, ಮಾದಕ ವಸ್ತುಗಳು ಮತ್ತು ಅಮಲು ಪದಾರ್ಥಗಳ ಅಕ್ರಮ ಸಾಗಣೆ ಪ್ರತಿಬಂಧಕ ಕಾಯ್ದೆ –1988ರ ಕಲಂ 12 (1) (ಎ) ಉಲ್ಲಂಘಿಸಿದ್ದು, ಸ್ಥಾನಬದ್ಧತೆಯಲ್ಲಿಟ್ಟಿರುವ ಆದೇಶ ಸರಿಯಾಗಿಯೇ ಇದೆ' ಎಂದು ತೀರ್ಪು ನೀಡಿದೆ.

'ಮಾದಕ ವಸ್ತುಗಳ ಅಕ್ರಮ ಸಾಗಣೆ ಆರೋಪದಲ್ಲಿ ಯಾವುದೇ ವ್ಯಕ್ತಿಯನ್ನು ಬಂಧಿಸಿದಾಗ ಆ ಕುರಿತು ಮೇಲ್ವಿಚಾರಣೆ ನಡೆಸುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ಆದರೆ, ಬಂಧನದ ಆದೇಶ ಮತ್ತು ಬಂಧನಕ್ಕೆ ಆಧಾರಗಳನ್ನು ಒಳಗೊಂಡ ವರದಿ ಸ್ವೀಕರಿಸಿದ ನಂತರವೇ ಈ ಅಧಿಕಾರ ಚಲಾಯಿಸಬಹುದು. ಬಿಡುಗಡೆಗಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಬಹುದು ಎಂಬ ಅಂಶವನ್ನು ತಿಳಿಸಲು ರಾಜ್ಯ ಸರ್ಕಾರಕ್ಕೆ ಯಾವುದೇ ಬಾಧ್ಯತೆ ಇಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

**ಪ್ರಕರಣದ ಹಿನ್ನೆಲೆ:** ಮಾದಕ ವಸ್ತುಗಳ ಸಾಗಣೆ ದಂಧೆಗೆ ಸಂಬಂಧಿಸಿದಂತೆ ದಾಖಲಿಸಲಾಗಿದ್ದ ದೂರಿನ ಮೇರೆಗೆ ಎಚ್‌ಎಎಲ್ ಠಾಣೆ ಪೊಲೀಸರು ಅನ್ನಸಂದ್ರಪಾಳ್ಯದ ಮುಸ್ಲಿಂ ಕಾಲೋನಿ ನಿವಾಸಿ ಕಾಸಿಫ್ ಎಂಬುವರನ್ನು 2021ರ ಆ.31 ರಂದು ಬಂಧಿಸಿದ್ದರು. ದಂಧೆಗೆ ಸಂಬಂಧಿಸಿದಂತೆ ಕಾಸಿಫ್ ಐದು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಮಾಹಿತಿ ವಿಚಾರಣೆ ವೇಳೆ ಬಹಿರಂಗಗೊಂಡಿತ್ತು. ನಂತರ ನ್ಯಾಯಾಲಯ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು.

'ಪೊಲೀಸರು ನನ್ನ ಪತಿಯನ್ನು ಅಕ್ರಮವಾಗಿ ಬಂಧಿಸಿ ಸ್ಥಾನಬದ್ಧತೆಯಲ್ಲಿ ಇರಿಸಿದ್ದಾರೆ. ಬಿಡುಗಡೆಗೆ ಸಂಬಂಧಿಸಿದಂತೆ ಕೇಂದ್ರಕ್ಕೆ ಮನವಿ ಸಲ್ಲಿಸಲು ಇರುವ ಅವಕಾಶದ ಬಗ್ಗೆ ತಿಳಿಸಿಲ್ಲ. ಇದು ಸಂವಿಧಾನದ 22 (5)ರ ಅಡಿಯಲ್ಲಿ ಖಾತರಿಪಡಿಸಲಾದ ಮೂಲಭೂತ ಹಕ್ಕಿನ ಉಲ್ಲಂಘನೆ' ಎಂದು ಖತೀಜುತಲ್ ನಜ್ಮಾ ಅರ್ಜಿಯಲ್ಲಿ ಆಕ್ಷೇಪಿಸಿದ್ದರು.

### ಸಂವಿಧಾನದ 22 (5) ನೇ ವಿಧಿ ಹೇಳುವುದೇನು?

ಪ್ರತಿಬಂಧಕ ಸ್ಥಾನಬದ್ಧತೆಗೆ ಅವಕಾಶ ಕಲ್ಪಿಸುವ ಯಾವುದೇ ಕಾನೂನಿನ ಮೇರೆಗೆ ಮಾಡಲಾದ ಆದೇಶಕ್ಕೆ ಅನುಸಾರವಾಗಿ ಯಾವುದೇ ಒಬ್ಬ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಟ್ಟಿದ್ದರೆ, ಆ ಆದೇಶವನ್ನು ಮಾಡಿದ ಸಕ್ಷಮ ಪ್ರಾಧಿಕಾರವು ಆದಷ್ಟು ಬೇಗನೆ, ಆ ಆದೇಶವನ್ನು ಯಾವ ಆಧಾರದ ಮೇಲೆ ಮಾಡಲಾಯಿತೆಂಬುದನ್ನು ಆ ವ್ಯಕ್ತಿಗೆ ತಿಳಿಸತಕ್ಕದ್ದು ಮತ್ತು ಆ ಆದೇಶದ ವಿರುದ್ಧ ಅತ್ಯಂತ ಶೀಘ್ರವಾಗಿ ಮನವಿ ಮಾಡಿಕೊಳ್ಳಲು ಆ ವ್ಯಕ್ತಿಗೆ ಅವಕಾಶ ಕೊಡತಕ್ಕದ್ದು.

## ಅಶ್ವತ್ಥನಾರಾಯಣಗೆ ಬಿಗಿ ಭದ್ರತೆ

ಪ್ರಜಾವಾಣಿ ವಾರ್ತೆ

**ರಾಮನಗರ:** ಮಂಗಳವಾರ ರಾಮನಗರದಲ್ಲಿ ಬಿಜೆಪಿ ವತಿಯಿಂದ ನಡೆದ ಸುದ್ದಿಗೋಷ್ಠಿಗೆ ಬಂದ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣರಿಗೆ ಪೊಲೀಸರು ಹೆಚ್ಚಿನ ಭದ್ರತೆ ಒದಗಿಸಿದ್ದರು.

ವಿಶೇಷ ಎಸ್ಕಾರ್ಟ್ ವಾಹನದ ಜೊತೆಗೆ ಹಿಂದಿಗಿಂತ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿತ್ತು. ಜೊತೆಗೆ ನೀಲಿ ಸಫಾರಿ ತೊಟ್ಟ 'ಕೆಂಪೇಗೌಡ ಪಡೆ'ಯ ಹತ್ತಕ್ಕೂ ಹೆಚ್ಚು ಸಿಬ್ಬಂದಿ ಸಚಿವರ ಸುತ್ತ ಕಾವಲಿಗೆ ನಿಂತರು.

ಆರಂಭದಲ್ಲಿ ಬಿಜೆಪಿ ಕಾರ್ಯಕರ್ತರನ್ನೂ ಪೊಲೀಸರು ಒಳಗೆ ಬಿಟ್ಟಿರಲಿಲ್ಲ. ಕಾರ್ಯಕರ್ತರು ಗಲಾಟೆ ಮಾಡಿದ ಬಳಿಕ ಅವರನ್ನು ಒಳಬಿಡಲಾಯಿತು. ಸಚಿವರ ಸಲುವಾಗಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಪೊಲೀಸರು ವಾಹನ ಸಂಚಾರ ತಡೆದಿದ್ದು, ಕೆಲವು ಹೊತ್ತಿನವರೆಗೂ ವಾಹನಗಳು ಸಾಲುಗಟ್ಟಿ ನಿಂತವು.

# ಅಲಯನ್ಸ್ ವಿ.ವಿ: ಲಾಂಛನ ಬಿಡುಗಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಲಯನ್ಸ್ ವಿಶ್ವವಿದ್ಯಾಲಯವು ಶೈಕ್ಷಣಿಕ ಕ್ಷೇತ್ರದಲ್ಲಿ 25 ವಸಂತಗಳನ್ನು ಪೂರೈಸಿದೆ. ರಜತ ವರ್ಷಾಚರಣೆಯ ನೆನಪಿಗಾಗಿ ವಿಶೇಷ ಲಾಂಛನವನ್ನು ಸಿದ್ಧಪಡಿಸಲಾಗಿದ್ದು, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಇದನ್ನು ಇತ್ತೀಚೆಗೆ ಬಿಡುಗಡೆ ಮಾಡಿದರು.

'ವಿಶ್ವವಿದ್ಯಾಲಯವು ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದ್ದು, ಅದನ್ನು ಮುಂದುವರಿಸಿಕೊಂಡು ಸಾಗುತ್ತಿದೆ. ಇದು ಪರಿವರ್ತನೆಯ ನೈಜ ಲಕ್ಷಣ. ರಾಜ್ಯದಲ್ಲಿ ಸಮಾನತೆ, ವೈವಿಧ್ಯ ಹಾಗೂ ಬೆಳವಣಿಗೆ ತತ್ವಗಳ ಮೇಲೆ ಉನ್ನತ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ' ಎಂದು ಸಚಿವ ಅಶ್ವತ್ಥನಾರಾಯಣ ಹೇಳಿದರು.

'ಸಾಕ್ಷರತೆ, ವಿಮರ್ಶಾತ್ಮಕ ಚಿಂತನೆ, ಮಾನವೀಯ ಹಾಗೂ ವೈಜ್ಞಾನಿಕ ವಿಚಾರಣೆ, ನಾಯಕತ್ವ, ಲೋಕೋಪಕಾರ ಹಾಗೂ ನಿರಂತರ ಕಲಿಕೆಯ ಚಕ್ರವನ್ನು ಈ ಲಾಂಛನ ಸಾಂಕೇತಿಸುತ್ತದೆ' ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.




ಅಲಯನ್ಸ್ ವಿಶ್ವವಿದ್ಯಾಲಯದ ರಜತ ವರ್ಷಾಚರಣೆಯ ಲಾಂಛನವನ್ನು ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರು ಬಿಡುಗಡೆ ಮಾಡಿದರು. ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ಆಡಳಿತ ಮಂಡಳಿಯವರು ಇದ್ದಾರೆ

## ಕೊಡವರ ಮದುವೆ ಕೇಕ್ , ಶಾಂಪೇನ್, ಪಟಾಕಿ ನಿಷೇಧ

**ಗೋಣಿಕೊಪ್ಪಲು:** 'ಕೊಡವರ ಮದುವೆ ಸಮಾರಂಭಗಳಲ್ಲಿ ಕೇಕ್ ಕತ್ತರಿಸುವುದು, ಶಾಂಪೇನ್ ಚಿಮುಕಿಸುವುದು ಮತ್ತು ಪಟಾಕಿ ಸಿಡಿಸುವುದನ್ನು ಟಿ.ಶೆಟ್ಟಿಗೇರಿ ತಾವಳಗೇರಿ ಮೂಂದ್ ನಾಡ್ ಕೊಡವ ಸಮಾಜ ನಿಷೇಧಿಸಿದೆ' ಎಂದು ಸಮಾಜದ ಅಧ್ಯಕ್ಷ ಚೊಟ್ಟೆಯಾಂಡಮಾಡ ವಿಶ್ವನಾಥ್ ತಿಳಿಸಿದರು.

ಸಮಾಜದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, 'ಮದುವೆಯಲ್ಲಿ ಚಾಣ ನೀರ್ ತೆಗೆಯುವ ಪದ್ಧತಿಯ ಪ್ರಕಾರ, ಮಂಟಪಕ್ಕೆ ಬಂದ ವಧುವಿನ ತಲೆಯಿಂದ ತಂಬಿಗೆಯನ್ನು ಬೊಳ್ಚ ಕೊಡದ ಕೆಳಗೆ ಇಳಿಸಿ ಗುರು ಕಾರೋಣ ಹಾಗೂ ದೇವರನ್ನು ಪ್ರಾರ್ಥಿಸಲಾಗುತ್ತದೆ. ಹಿರಿಯರ ಕಾಲಿಗೆ ನಮಸ್ಕರಿಸಿ, ಆಶೀರ್ವಾದ ಪಡೆದು, ವರನ ಕೋಣೆಗೆ ತೆರಳುವುದು ಪದ್ಧತಿ. ಆದರೆ, ಇತ್ತೀಚೆಗೆ ಮೂಗು ತೂರಿಸಿರುವ ಕೆಲವು ಆಚರಣೆಗಳನ್ನು ಕೈಬಿಡಬೇಕು' ಎಂದು ಹೇಳಿದರು.

# 'ಕೋವಿಡ್ ಹೆಚ್ಚಾದರೆ ಕಾಂಗ್ರೆಸ್ ತಬ್ಲಿಘಿಗಳೇ ಹೊಣೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದಲ್ಲಿ ಕೋವಿಡ್ ಮೂರನೇ ಅಲೆ ಉಲ್ಬಣವಾದರೆ ಅದಕ್ಕೆ ಕಾಂಗ್ರೆಸ್ ತಬ್ಲಿಘಿಗಳೇ ನೇರ ಹೊಣೆ' ಎಂದು ಬಿಜೆಪಿ ಟ್ವೀಟ್ ಮಾಡಿದೆ.

'ಬೆಂಗಳೂರಿಗೆ ನೀರು ಹಂಚುವುದಕ್ಕಾಗಿ ಪಾದಯಾತ್ರೆ ಎಂದು ಸುಳ್ಳಿನ ಜಾತ್ರೆ ಮಾಡುತ್ತಿರುವ ಕಾಂಗ್ರೆಸ್, ಬೆಂಗಳೂರಿಗೆ ಕೋವಿಡ್ ರಫ್ತು ಮಾಡುತ್ತಿದೆ. ಈ ಮೂಲಕ ಕೋವಿಡ್ ಸೋಂಕಿತ ಕಾಂಗ್ರೆಸಿಗರು ಊರಿಗೆಲ್ಲ ಸೋಂಕು ಹಂಚುತ್ತಿದ್ದಾರೆ. ಕಾಂಗ್ರೆಸ್ ಮೂರನೇ ಅಲೆಯ ಸೂಪರ್ ಸ್ಪ್ರೆಡರ್ ಆಗುತ್ತಿದೆ' ಎಂದು ಹೇಳಿದೆ.

'ಈ ಸುಳ್ಳಿನ ಜಾತ್ರೆಯ ಪ್ರಹಸನದಲ್ಲಿ ಅರ್ಧಗಂಟೆಯ ನಡಿಗೆಯ ನಾಟಕವಾಡುತ್ತಿರುವ ಕಾಂಗ್ರೆಸ್ ಪುಢಾರಿಗಳು ಬೆಂಗಳೂರು ನಗರಕ್ಕೆ ವಾಪಸ್ ಆಗುತ್ತಿದ್ದಾರೆ. ಇವರೆಲ್ಲ ಕೋವಿಡ್ ಸೋಂಕಿನ ಸಂಭಾವ್ಯ ವಾಹಕರು. ರಾಜಧಾನಿಗೆ ಕೊರೊನಾ ಹರಡುವುದು ನಿಮ್ಮ ಉದ್ದೇಶವೇ' ಎಂದೂ ಪ್ರಶ್ನಿಸಿದೆ.

### ಮೇಕೆದಾಟು ಪಾದಯಾತ್ರೆ ಪಿಐಎಲ್ ಸಲ್ಲಿಕೆ

**ಬೆಂಗಳೂರು:** 'ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ನಡೆಸುತ್ತಿರುವ ಪಾದಯಾತ್ರೆ ತಡೆಯಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್‌ಗೆ ಪಿಐಎಲ್ ಸಲ್ಲಿಸಲಾಗಿದೆ.

ಬೆಂಗಳೂರಿನ ತಿಂಡ್ಲು ನಿವಾಸಿ ಎ.ವಿ. ನಾಗೇಂದ್ರ ಪ್ರಸಾದ್ ಸಲ್ಲಿಸಿರುವ ಅರ್ಜಿಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕಂದಾಯ ಮತ್ತು ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳು, ರಾಮನಗರ ಜಿಲ್ಲಾಧಿಕಾರಿ, ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಪ್ರತಿವಾದಿಗಳನ್ನಾಗಿ ಹೆಸರಿಸಲಾಗಿದೆ.

### ಕೋವಿಡ್ ಸೋಂಕು ಹೆಚ್ಚಳ

**ರಾಮನಗರ:** ಪಾದಯಾತ್ರೆಯ ಜೊತೆಜೊತೆಗೆ ರಾಮನಗರ ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಉಲ್ಬಣಗೊಂಡಿದ್ದು, ಮಂಗಳವಾರ 65 ಪ್ರಕರಣಗಳು ವರದಿಯಾಗಿವೆ. ಜಿಲ್ಲೆಯಲ್ಲಿ ಸದ್ಯ ಕೋವಿಡ್ ಪಾಸಿಟಿವಿಟಿ ದರ ಶೇ 7.8ಕ್ಕೆ ಏರಿಕೆ ಆಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆಯು 144ಕ್ಕೆ ಏರಿದೆ. ರಾಮನಗರ ಜಿಲ್ಲಾಧಿಕಾರಿ, ಹೆಚ್ಚುವರಿ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒ ಸೇರಿದಂತೆ ಪ್ರಮುಖ ಅಧಿಕಾರಿಗಳು ಸೋಂಕಿಗೆ ಒಳಗಾಗಿದ್ದು, ಕ್ವಾರಂಟೈನ್‌ನಲ್ಲಿ ಇದ್ದಾರೆ. ಇದಲ್ಲದೆ ಸರ್ಕಾರಿ ಆಸ್ಪತ್ರೆಗಳ ಅನೇಕ ವೈದ್ಯರಿಗೂ ಸೋಂಕು ದೃಢಪಟ್ಟಿದ್ದು, ಈ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

### ರಾಮನಗರಕ್ಕೆ ಬರಲಿದ್ದಾರೆ ಹಾಸನ ಕಾರ್ಯಕರ್ತರು

**ರಾಮನಗರ:** ಪಾದಯಾತ್ರೆ ನಾಲ್ಕನೇ ದಿನವಾದ ಬುಧವಾರ ಪಾದಯಾತ್ರಿಗರು ರಾಮನಗರ ತಾಲ್ಲೂಕಿನಲ್ಲಿ ನಡಿಗೆ ಕೈಗೊಳ್ಳಲಿದ್ದಾರೆ.

ಪಾದಯಾತ್ರಿಗರಿಗೆ ಹಾಸನ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಸಾಥ್ ನೀಡಲಿದ್ದಾರೆ.

# ರೂಪಾ ವಿರುದ್ಧದ ಮೊಕದ್ದಮೆ ವಿಚಾರಣೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಐಪಿಎಸ್ ಅಧಿಕಾರಿ ಡಿ.ರೂಪಾ ವಿರುದ್ಧ ನಿವೃತ್ತ ಡಿಜಿಪಿ ಎಚ್.ಎನ್.ಸತ್ಯನಾರಾಯಣ ರಾವ್ ದಾಖಲಿಸಿರುವ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಅಧೀನ ನ್ಯಾಯಾಲಯದ ವಿಚಾರಣೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.


ವಿಚಾರಣೆ ರದ್ದುಪಡಿಸುವಂತೆ ಕೋರಿ ಡಿ.ರೂಪಾ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ, ದೂರುದಾರ ಎಚ್.ಎನ್. ಸತ್ಯನಾರಾಯಣ ರಾವ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಅರ್ಜಿದಾರರ ಪರ ವಕೀಲ ಮಧುಕರ್ ದೇಶಪಾಂಡೆ, 'ಅಪರಾಧ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 199ರ ಅನುಸಾರ ಸರ್ಕಾರಿ ನೌಕರರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಬೇಕಾದರೆ ವಿಶೇಷ ನಿಯಮ ಅನುಸರಿಸಿ, ಪ್ರಾಸಿಕ್ಯೂಟರ್ ಮುಖಾಂತರವೇ ಸೆಷನ್ಸ್ ನ್ಯಾಯಾಲಯದಲ್ಲಿ ದಾಖಲಿಸಬೇಕು. ಮಾನಹಾನಿ ವರದಿ ಪ್ರಕಟಗೊಂಡ ಆರು ತಿಂಗಳ ಒಳಗಾಗಿ ಮೊಕದ್ದಮೆ ದಾಖಲಿಸಬೇಕು. ಆದರೆ, ಈ ಪ್ರಕರಣದಲ್ಲಿ ಸತ್ಯನಾರಾಯಣ ರಾವ್ ಈ ನಿಯಮ ಪಾಲಿಸಿಲ್ಲ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

'ಒಬ್ಬ ಸರ್ಕಾರಿ ನೌಕರ ಮತ್ತೊಬ್ಬ ಸರ್ಕಾರಿ ನೌಕರರ ವಿರುದ್ಧ ಸರ್ಕಾರಕ್ಕೆ ವರದಿ ಸಲ್ಲಿಸುವುದು ಮಾನನಷ್ಟ ಪ್ರಕರಣದ ವ್ಯಾಪ್ತಿಗೆ ಬರುವುದಿಲ್ಲ. ದೂರನ್ನು ಪರಿಗಣಿಸಿ ತನಿಖೆಗೆ ಆದೇಶಿಸಿರುವ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನಡೆ ಕಾನೂನು ಬಾಹಿರ. ಆದ್ದರಿಂದ, ಡಿ.ರೂಪಾ ವಿರುದ್ಧದ ಅಧೀನ ನ್ಯಾಯಾಲಯದ ವಿಚಾರಣೆ ರದ್ದುಪಡಿಸಬೇಕು. ಈ ಅರ್ಜಿ ಇತ್ಯರ್ಥವಾಗುವರೆಗೂ ವಿಚಾರಣೆಗೆ ತಡೆ ನೀಡಬೇಕು' ಎಂದು ಕೋರಿದರು.

**ಪ್ರಕರಣವೇನು?:** ರಾಜ್ಯ ಕಾರಾಗೃಹಗಳ ಇಲಾಖೆ ಡಿಜಿಐ ಆಗಿದ್ದ ಡಿ.ರೂಪಾ 2017ರ ಜುಲೈ 12ರಂದು ಸರ್ಕಾರಕ್ಕೆ ವರದಿ ಸಲ್ಲಿಸಿ, ಕಾರಾಗೃಹ ಇಲಾಖೆ ಡಿಜಿಪಿಯಾಗಿದ್ದ ಎಚ್.ಎನ್. ಸತ್ಯನಾರಾಯಣ ರಾವ್ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿದ್ದರು. ಪರಪ್ಪನ ಅಗ್ರಹಾರ ಜೈಲಿನಲ್ಲಿ ಬಂಧನದಲ್ಲಿದ್ದ ಎಐಎಡಿಎಂಕೆ ನಾಯಕಿ ಶಶಿಕಲಾ ಅವರಿಗೆ ವಿಶೇಷ ಸೌಲಭ್ಯ ಕಲ್ಪಿಸಲು ಸತ್ಯನಾರಾಯಣ ರಾವ್ ₹ 2 ಕೋಟಿ ಲಂಚ ಪಡೆದಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಕುರಿತ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು.

2017ರ ಜುಲೈ 31ರಂದು ನಿವೃತ್ತರಾಗಿದ್ದ ಸತ್ಯನಾರಾಯಣ ರಾವ್, 'ತಮ್ಮ ಘನತೆಗೆ ಧಕ್ಕೆ ಉಂಟಾಗಿದೆ' ಎಂದು ಆರೋಪಿಸಿ, ಡಿ.ರೂಪಾ ವಿರುದ್ಧ 2018ರ ಫೆಬ್ರುವರಿ 5ರಂದು ನಗರದ 9ನೇ ಎಸಿಎಂಎಂ ನ್ಯಾಯಾಲಯಕ್ಕೆ ₹ 20 ಕೋಟಿ ಮೊತ್ತಕ್ಕೆ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ರೂಪಾ ಸದ್ಯ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿಯಾಗಿದ್ದಾರೆ.



# ಪ್ರತಿರಕ್ಷಣಾ ವ್ಯವಸ್ಥೆ ಮತ್ತು ಲಸಿಕೆ



ಬಹುತೇಕ ಎಲ್ಲ ಜೀವಿಗಳು ಕೆಲವು ಪ್ರತಿರಕ್ಷಣಾ ವ್ಯವಸ್ಥೆಯನ್ನು ಹೊಂದಿವೆ. ಬ್ಯಾಕ್ಟೀರಿಯಾಗಳು ಸಹ ಕಿಣ್ವಗಳ ರೂಪದಲ್ಲಿ ಪ್ರತಿರಕ್ಷಣಾ ವ್ಯವಸ್ಥೆಯನ್ನು ಹೊಂದಿರುತ್ತವೆ

**ಸುಧೀರ ಎಚ್. ಎಸ್.**

ಜೀವಿಗಳನ್ನು ರೋಗಗಳಿಂದ ರಕ್ಷಿಸುವ ಜೈವಿಕ ಪ್ರಕ್ರಿಯೆಗಳಲ್ಲಿ ಪ್ರತಿರಕ್ಷಣಾ ವ್ಯವಸ್ಥೆಯು ಒಂದು ಬಗೆ. ಇದರ ಕಾರ್ಯವು ಬಹುಮಟ್ಟಿಗೆ ಭದ್ರತಾ ವ್ಯವಸ್ಥೆಯಂತೆ. ನಮ್ಮ ದೇಹಕ್ಕೆ ತಗಲುವ ಯಾವುದೇ ಹಾನಿಕಾರಕ ವೈರಸ್‌ಗಳು ಮತ್ತು ಬ್ಯಾಕ್ಟೀರಿಯಾಗಳನ್ನು ಪತ್ತೆ ಮಾಡಿಕೊಂಡು ಅದಕ್ಕೆ ಸೂಕ್ತವಾಗಿ ಪ್ರತಿಕ್ರಿಯಿಸುತ್ತದೆ.

ಬಹುತೇಕ ಎಲ್ಲ ಜೀವಿಗಳು ಕೆಲವು ಪ್ರತಿರಕ್ಷಣಾ ವ್ಯವಸ್ಥೆಯನ್ನು ಹೊಂದಿವೆ. ಬ್ಯಾಕ್ಟೀರಿಯಾಗಳು ಸಹ ಕಿಣ್ವಗಳ ರೂಪದಲ್ಲಿ ಪ್ರತಿರಕ್ಷಣಾ ವ್ಯವಸ್ಥೆಯನ್ನು ಹೊಂದಿರುತ್ತವೆ; ಅದು ಅವುಗಳನ್ನು ಸೋಂಕಿನಿಂದ ರಕ್ಷಿಸುತ್ತದೆ. ಪ್ರಾಥಮಿಕವಾಗಿ, ಪ್ರತಿರಕ್ಷಣಾ ವ್ಯವಸ್ಥೆಗಳು ಎರಡು ವಿಧಗಳಾಗಿವೆ: ಜನ್ಮಜಾತ ಪ್ರತಿರಕ್ಷಣಾ ವ್ಯವಸ್ಥೆ ಮತ್ತು ಹೊಂದಾಣಿಕೆಯ ಪ್ರತಿರಕ್ಷಣಾ ವ್ಯವಸ್ಥೆ.

ಜನ್ಮಜಾತ ಪ್ರತಿರಕ್ಷಣಾ ವ್ಯವಸ್ಥೆಯು ಸಸ್ಯಗಳು, ಶಿಲೀಂಧ್ರಗಳು, ಕೀಟಗಳು ಮತ್ತು ಪ್ರಾಚೀನ ಬಹುಕೋಶೀಯ ಜೀವಿಗಳಲ್ಲಿ ಕಂಡುಬರುವ ಪ್ರಬಲ ಮತ್ತು ಹಳೆಯ ವಿಕಸನೀಯ ರಕ್ಷಣಾ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯು ತಿಳಿದಿರುವ ಸಂದರ್ಭಗಳು ಮತ್ತು ಪ್ರಚೋದನೆಗಳ ವ್ಯಾಪಕ ಶ್ರೇಣಿಯ ಕೆಲವು ಪ್ರಮಾಣಿತ ಪ್ರತಿಕ್ರಿಯೆಗಳನ್ನು ಒದಗಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಹೊಂದಾಣಿಕೆಯ ಪ್ರತಿರಕ್ಷಣಾ ವ್ಯವಸ್ಥೆಯು ಪ್ರತಿ ಪ್ರಚೋದನೆಗೆ ನಿರ್ದಿಷ್ಟ ಪ್ರತಿಕ್ರಿಯೆಯನ್ನು ನೀಡುತ್ತದೆ ಮತ್ತು ಅದು ಹಿಂದೆ ಎದುರಿಸಿದ ಅಣುಗಳನ್ನು ಗುರುತಿಸಲು ಕಲಿಯುತ್ತದೆ.

ಹೊಂದಾಣಿಕೆಯ ಪ್ರತಿರಕ್ಷಣಾ ವ್ಯವಸ್ಥೆಯನ್ನು 'ಸ್ವಾಧೀನಪಡಿಸಿಕೊಂಡ ಪ್ರತಿರಕ್ಷಣಾ ವ್ಯವಸ್ಥೆ' ಎಂದೂ ಕರೆಯಲಾಗುತ್ತದೆ. ಏಕೆಂದರೆ ಈ ವ್ಯವಸ್ಥೆಯು ರೋಗನಿರೋಧಕ ಸ್ಮರಣೆಯನ್ನು ಇಟ್ಟುಕೊಳ್ಳುವುದಲ್ಲದೆ, ಇದು ಅದೇ ಹಾನಿಕಾರಕ ಬ್ಯಾಕ್ಟೀರಿಯಾ ಅಥವಾ ವೈರಸ್‌ಗಳು (ರೋಗಕಾರಕ) ನಮ್ಮ ದೇಹದಲ್ಲಿ ಮತ್ತೊಮ್ಮೆ ಕಾಣಿಸಿಕೊಂಡಾಗ ಇನ್ನೂ ವರ್ಧಿತ ಪ್ರತಿಕ್ರಿಯೆಯನ್ನು ನೀಡಬಲ್ಲವು. ಇದೇ ಸ್ವಾಧೀನಪಡಿಸಿಕೊಂಡ ಪ್ರತಿರಕ್ಷೆಯ ಕಾರ್ಯವಿಧಾನವೇ 'ಲಸಿಕೆ'ಗೆ ಆಧಾರವಾಗಿದೆ.

ಹೊಂದಾಣಿಕೆಯ ಪ್ರತಿರಕ್ಷಣಾ ವ್ಯವಸ್ಥೆಯಲ್ಲಿ ಪ್ರತಿಕಾಯಗಳು (antibodies) ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಈ ಪ್ರತಿಕಾಯಗಳು ವಿಶೇಷವಾದ Y-ಆಕಾರದ ಪ್ರೊಟೀನ್‌ಗಳಾಗಿದ್ದು ಹೊಂದಾಣಿಕೆಯ ಪ್ರತಿರಕ್ಷಣಾ ವ್ಯವಸ್ಥೆಯಲ್ಲಿ ಹಾನಿಕಾರಕ ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳನ್ನು ಗುರುತಿಸಲು ಮತ್ತು ತಟಸ್ಥಗೊಳಿಸುವಲ್ಲಿ ಇದರ ಪಾತ್ರ ಪ್ರಮುಖ.

ರೋಗಕಾರಕಗಳಲ್ಲಿ ಕೆಲವು ವಿಶಿಷ್ಟ ಅಣುಗಳಿರುತ್ತವೆ; ಅದಕ್ಕೆ ಪ್ರತಿಜನಕಗಳು (antigen) ಎಂದು ಕರೆಯಲಾಗುತ್ತದೆ. ಪ್ರತಿಜನಕವು ಮೂಲಭೂತವಾಗಿ ರೋಗಕಾರಕಗಳ (ವೈರಸ್‌ಗಳು, ಬ್ಯಾಕ್ಟೀರಿಯಾಗಳು ಮತ್ತು ಪರಾಗಗಳು) ಹೊರಗೆ ಇರುವ ಅಣು ಅಥವಾ ಆಣ್ವಿಕ ರಚನೆಯಾಗಿದೆ. ಪ್ರತಿಕಾಯಗಳು ಇಂತಹ ಪ್ರತಿಜನಕಗಳನ್ನು ಗುರುತಿಸಬಲ್ಲವು ಮತ್ತು ಅದಕ್ಕೆ ಹೋಗಿ ಅಂಟಿಕೊಳ್ಳಬಹುದು (ಅದರ ಜೊತೆ ಸೇರಬಹುದು). ದೇಹದಲ್ಲಿ ವೈರಲ್ ಅಥವಾ ಬ್ಯಾಕ್ಟೀರಿಯಾದ ಸೋಂಕು ತಗಲಿದಾಗ ಪ್ರತಿಜನಕಗಳ ಉಪಸ್ಥಿತಿಯು ಸಾಮಾನ್ಯವಾಗಿ ಪ್ರತಿರಕ್ಷಣಾ ಪ್ರತಿಕ್ರಿಯೆಯನ್ನು ಪ್ರಚೋದಿಸುತ್ತದೆ. ಆಗ ಪ್ರತಿಕಾಯಗಳು ಪ್ರತಿಜನಕಗಳನ್ನು ಹುಡುಕಿಕೊಂಡು ಹೋಗಿ ಅದರೊಡನೆ ಸೇರುತ್ತವೆ.

ಯಾವುದೇ ರೋಗಕಾರಕ ಸೋಂಕು ತಗುಲಿದ ಸಂದರ್ಭದಲ್ಲಿ, ಪ್ರತಿಕಾಯಗಳು ರಕ್ತದಲ್ಲಿ ಉತ್ಪತ್ತಿಯಾಗುತ್ತವೆ. ಸೋಂಕು ಕಡಿಮೆಯಾದಂತೆ, ಈ ಪ್ರತಿಕಾಯಗಳನ್ನು ಉತ್ಪಾದಿಸುವ ಜೀವಕೋಶಗಳು ಸಾಯುತ್ತವೆ ಮತ್ತು ಅದರ ಪರಿಣಾಮವಾಗಿ ರಕ್ತದ ಪ್ರತಿಕಾಯ ಮಟ್ಟ ಕಡಿಮೆಯಾಗುತ್ತವೆ. ಹೀಗಿದ್ದರೂ ಕೆಲವು ಪ್ರತಿಕಾಯ-ಉತ್ಪಾದಕ ಜೀವಕೋಶಗಳು ಮೂಳೆಗಳ ಮಜ್ಜೆಗೆ ಸೇರುತ್ತವೆ. ಅವನ್ನೇ ದೀರ್ಘಾವಧಿಯ ಪ್ಲಾಸ್ಮಾ ಜೀವಕೋಶಗಳು ಎಂದು ಕರೆಯಲಾಗುತ್ತದೆ. ಇಲ್ಲಿದ್ದುಕೊಂಡೇ ರೋಗಕಾರಕದಿಂದ ಮರುಸೋಂಕನ್ನು ತಡೆಗಟ್ಟಲು ಸ್ವಲ್ಪ ಮಟ್ಟದ ಪ್ರತಿಕಾಯಗಳನ್ನು ನಿರಂತರವಾಗಿ ಸ್ರವಿಸುತ್ತದೆ.

## SARS-CoV-2 ವೈರಸ್

SARS-CoV-2 ವೈರಸ್‌ನ ಹೊರ ಪದರದಲ್ಲಿ ವಿಶಿಷ್ಟವಾದ 'ಸ್ಪೈಕ್‌ಗಳನ್ನು' ಹೊಂದಿದೆ. ಕೆಲವು ಪ್ರತಿಕಾಯಗಳು ಈ ಸ್ಪೈಕ್ ಪ್ರೊಟೀನ್‌ಗಳನ್ನು ಗುರುತಿಸುತ್ತವೆ; ಅದರಲ್ಲಿಗೆ ಹೋಗಿ ಅಂಟಿಕೊಳ್ಳಬಹುದು (ಸೇರಬಹುದು). SARS-CoV-2 ವೈರಸ್ ಸೋಂಕಿನ ಸಮಯದಲ್ಲಿ ಸಹ ಪ್ರತಿಕಾಯಗಳು ಉತ್ಪತ್ತಿಯಾಗುತ್ತವೆ; ಅವು ರಕ್ತದಲ್ಲಿಯೂ ಪರಿಚಲನೆಗೊಳ್ಳುತ್ತವೆ. ಈ ವೈರಸ್ ಸೋಂಕಿನ ಪ್ರಮಾಣ ಮತ್ತು ಆತಿಥೇಯ ದೇಹದ ಸ್ಥಿತಿಯು ಪ್ರತಿಕಾಯಗಳು ಅವುಗಳ ವಿರುದ್ಧ ಹೋರಾಡಬಹುದೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸುತ್ತದೆ. ಈಗಾಗಲೇ ತಿಳಿದಿರುವಂತೆ, ರೋಗಲಕ್ಷಣ ಇರುವ ಪ್ರಕರಣಗಳ ಜೊತೆ ರೋಗಲಕ್ಷಣರಹಿತ ಪ್ರಕರಣಗಳು ಈ ವೈರಸ್ ಹರಡುವಿಕೆಯಲ್ಲಿ ಕಾಣುತ್ತಿದ್ದೇವೆ.

ಪ್ರಮುಖವಾಗಿ ಈ ವೈರಸ್ ಸೋಂಕಿರುವ ವ್ಯಕ್ತಿ ರೋಗಲಕ್ಷಣಗಳಿಲ್ಲದ ಸಂದರ್ಭಗಳಲ್ಲಿ ಇದರ ಹರಡುವಿಕೆಗೆ ಕಾರಣವಾಗುತ್ತಾರೆ. ಈ ವೈರಸ್ ಸೋಂಕಿಗೆ ತುತ್ತಾಗಿ ಕೊಮೊರ್ಬಿಡಿಟಿ ಇರುವವವರಲ್ಲಿ ಸಾವಿನ ಪ್ರಮಾಣ ಹೆಚ್ಚಿದೆ. ಈ ವೈರಸ್ ಸೋಂಕು ತಗಲಿದ ಸಂಧರ್ಭದಲ್ಲಿ ದೇಹದ ಪ್ರತಿರಕ್ಷಣಾ ವ್ಯವಸ್ಥೆಯು ಉತ್ತಮವಾಗಿ ಕಾರ್ಯನಿರ್ವಹಿಸಿಯೋ ಅಥವಾ ಸೋಂಕನ್ನು ಎದುರಿಸಲು ಸಾಕಷ್ಟು ಪ್ರತಿಕಾಯಗಳನ್ನು ಉತ್ಪಾದಿಸಿಯೋ ಸೋಂಕಿನಿಂದ ಚೇತರಿಸಿಕೊಂಡ ಬಹಳಷ್ಟು ನಿದರ್ಶನಗಳಿವೆ.


SARS-CoV-2 ಸೋಂಕು ಮನುಷ್ಯರಲ್ಲಿ ನಿರ್ದಿಷ್ಟವಾದ ಪ್ರತಿಜನಕ ಮತ್ತು ದೀರ್ಘಾವಧಿಯ ಹ್ಯೂಮರಲ್ ಪ್ರತಿರಕ್ಷಣಾ ಪ್ರತಿಕ್ರಿಯೆಯನ್ನು ಪ್ರೇರೇಪಿಸುತ್ತದೆ ಎಂದು ಇತ್ತೀಚಿನ ಒಂದು ಅಧ್ಯಯನ ತಿಳಿಸಿದೆ.

ಪ್ರತಿಕಾಯಗಳು ದೇಹದ ಹಲವು ಭಾಗಗಳಲ್ಲಿ ಸತ್ತು-ಕೊಳೆತರು, ಅವು ಅಸ್ಥಿಮಜ್ಜೆಯ ಪ್ಲಾಸ್ಮಾಕೋಶಗಳಲ್ಲಿ ವಾಸಿಸುತ್ತವೆ ಎಂದು ತಿಳಿದುಬಂದಿದೆ. ಆದರೆ ಕೆಲವು ಹೊಸ ಅಧ್ಯಯನಗಳು, ಇವೂ ಸುಮಾರು ಒಂದು ವರ್ಷದ ನಂತರ ಸಾಯಬಹುದು ಎಂದು ಸೂಚಿಸಿವೆ; ಅಂತಹ ಸಂದರ್ಭದಲ್ಲಿ – ಬಹುಶಃ ಒಂದು ವರ್ಷದ ನಂತರ ಮರುಸೋಂಕಿಗೆ ತುತ್ತಾಗಬಹುದು. ಇದರಿಂದಲೇ ಬೂಸ್ಟರ್ ಡೋಸ್ ತೆಗೆದುಕೊಳ್ಳುವುದು ಅತ್ಯವಶ್ಯಕ.

ರೋಗನಿರೋಧಕ ಮತ್ತು ಶಕ್ತಿವರ್ಧಕಗಳಾಗಿ ಮಾರಾಟವಾಗುವ ಉತ್ಪನ್ನಗಳು ರೋಗದ ವಿರುದ್ಧ ಸ್ವಾಧೀನಪಡಿಸಿಕೊಂಡಿರುವ ಪ್ರತಿರಕ್ಷೆಯನ್ನು ಒದಗಿಸಲು ಸಾಧ್ಯವಿಲ್ಲ. ಕೊರೊನಾವೈರಸ್ ವಿರುದ್ಧ ಇರುವ ಏಕೈಕ ಮಾರ್ಗ ಅದಕ್ಕೆ ವೃದ್ಧಿಸಿರುವ ಲಸಿಕೆಯನ್ನು ಹಾಕಿಸಿಕೊಳ್ಳುವುದು. ಯಾವುದೇ ಸಂದರ್ಭದಲ್ಲಿ, ರೋಗಕಾರಕಗಳ ವಿರುದ್ಧ ಹೋರಾಡುವ ಪ್ರಮುಖ ಅಂಶವೆಂದರೆ ನಮ್ಮ ಪ್ರತಿಕಾಯಗಳು, ಮತ್ತು SARS-CoV-2 ವಿರುದ್ಧದ ಲಸಿಕೆಯು ಕೊರೊನಾವೈರಸ್ ವಿರುದ್ಧ ಸ್ವಾಧೀನಪಡಿಸಿಕೊಂಡಿರುವ ಪ್ರತಿರಕ್ಷೆಯನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ.

ಹೀಗಾಗಿ18 ವರ್ಷಕ್ಕಿಂತ ಮೇಲ್ಪಟ್ಟ ಪ್ರತಿಯೊಬ್ಬರೂ ಲಸಿಕೆಯನ್ನು ತೆಗೆದುಕೊಳ್ಳುವುದು ಅನಿವಾರ್ಯ ಮತ್ತು ಅತ್ಯವಶ್ಯಕ. ಇದು ವೈರಸ್ ಹರಡುವುದನ್ನು ತಡೆಯುವ ಏಕೈಕ ಮಾರ್ಗವಾಗಿದೆ. ಹಾಗಾಗಿ ಪ್ರತಿಯೊಬ್ಬರೂ ಲಸಿಕೆ ಹಾಕಿಸಿಕೊಂಡಾಗ ಮಾತ್ರ ನಾವೆಲ್ಲಾ ಸುರಕ್ಷಿತವಾಗಿರಲು ಸಾಧ್ಯ.

(ಲೇಖಕ: ಸಂಶೋಧಕ)



# ಕನ್ನಡ ಬರೆಯಲು 'ಪದ' ಇದೆ

**ಕೃಷ್ಣ ಭಟ್**



**ಬರವಣಿಗೆ** ಎಂಬುದು ಪೆನ್ನು–ಹಾಳೆಯಿಂದ ಕಂಪ್ಯೂಟರ್ ಕೀಬೋರ್ಡ್, ಮಾನಿಟರ್‌ಗೆ ಬದಲಾಗಿ ಹಲವು ವರ್ಷಗಳೇ ಸಂದಿವೆ. ಬರೆದಾದ ನಂತರದ ಹಂತಗಳಿಗೆ ಅಂದರೆ, ಮುದ್ರಣ, ವೆಬ್‌ನಲ್ಲಿ ಪ್ರಸಾರ ಸೇರಿದಂತೆ ಇತರೆಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ಹೊಸ ಕಾಲದ ಬಹುತೇಕ ಬರಹಗಾರರು ಈಗ ಕೀಬೋರ್ಡ್‌ನಲ್ಲೇ ಬರೆಯುತ್ತಾರೆ. ಇನ್ನು, ಕೈಯಲ್ಲಿ ಬರೆದರೂ ಅದನ್ನು ನಂತರ ಕೀಬೋರ್ಡ್‌ನಲ್ಲಿ ಟೈಪ್ ಮಾಡುವುದು ಅತ್ಯಂತ ಸಹಜವಾದ ಪ್ರಕ್ರಿಯೆ.

ಆದರೆ, ಹಾಗೆ ಬರೆಯುವುದಕ್ಕೆ ನಮಗೆ ಕನ್ನಡದಲ್ಲಿ ಅನುಕೂಲಕರವಾದ ತಂತ್ರಾಂಶ ಇವೆಯೇ ಎಂದು ನೋಡಿದರೆ, ಎಲ್ಲ ತಂತ್ರಾಂಶಗಳಲ್ಲೂ ಒಂದಲ್ಲ ಒಂದು ಕೊರತೆ ಎದ್ದು ಕಾಣುತ್ತದೆ. ಕೆಲವು ತಂತ್ರಾಂಶಗಳು ಕೆಲವೇ ಅಪ್ಲಿಕೇಶನ್‌ಗಳಿಗೆ ಬೆಂಬಲ ನೀಡುತ್ತವೆ. ಇನ್ನು ಕೆಲವು ತಂತ್ರಾಂಶಗಳು ಯುನಿಕೋಡ್ ಮಾತ್ರ ಬೆಂಬಲಿಸುತ್ತವೆ. ಹೀಗಾಗಿ, ಅದರಲ್ಲಿ ಫಾಂಟ್ ಆಯ್ಕೆಗಳಿಲ್ಲ. ಮುದ್ರಣಕ್ಕೆ ಸುಂದರವಾದ ಫಾಂಟ್ ಸಿಗುವುದಿಲ್ಲ ಎಂಬ ಕೊರಗಿನಿಂದ ಹಿಡಿದು ಹಲವು ರೀತಿಯ ತೊಂದರೆಗಳು ಕನ್ನಡದ ತಂತ್ರಾಂಶಗಳಲ್ಲಿವೆ.

ಈ ಎಲ್ಲದರ ಮಧ್ಯೆಯೇ, ಈ ನಿಟ್ಟಿನಲ್ಲಿ ಸದ್ದಿಲ್ಲದೇ ಕೆಲಸ ಮಾಡುತ್ತ ಬಂದಿರುವವರು ಲೋಹಿತ್ ಡಿ.ಎಸ್. ಸಾಫ್ಟ್‌ವೇರ್ ತಂತ್ರಜ್ಞ ಲೋಹಿತ್ ಹತ್ತಾರು ವರ್ಷಗಳ ಹಿಂದೆಯೇ ಪದ ಎಂಬ ಕನ್ನಡ ಬರೆಯುವ ಸಾಫ್ಟ್‌ವೇರ್ ಒಂದನ್ನು ಕನ್ನಡಿಗರಿಗೆ ನೀಡಿದ್ದರು. ಅದು ಸರಳ ಮತ್ತು ಸುಲಭವಾದ ಟೈಪಿಂಗ್ ಸೌಲಭ್ಯವನ್ನು ಒದಗಿಸುತ್ತಿದ್ದುದರಿಂದ ಬಹಳಷ್ಟು ಜನರು ಅದನ್ನು ಬಳಸುತ್ತಿದ್ದರು.

ಈಗ ಅದರ ಇನ್ನೊಂದು ಸುಧಾರಿತ ಆವೃತ್ತಿಯನ್ನು ಬಿಡುಗಡೆ ಮಾಡಿದ್ದು, ಇನ್ನಷ್ಟು ಜನರಿಗೆ ಅನುಕೂಲ ಮಾಡಿಕೊಡುವ ಮಹತ್ವದ ಕೆಲಸ ಮಾಡಿದ್ದಾರೆ. ಈ ಹೊಸ ಆವೃತ್ತಿಯಲ್ಲಿ ANSI ಶೈಲಿಯ ಬರವಣಿಗೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದರಿಂದ, ಈಗಾಗಲೇ ಜನಪ್ರಿಯವಾಗಿರುವ ಕನ್ನಡ ಗಣಕ ಪರಿಷತ್ತಿನ ಸಾಫ್ಟ್‌ವೇರ್ ನುಡಿ ಜೊತೆಗೆ ಲಭ್ಯವಾಗುವ ಎಲ್ಲ ಫಾಂಟ್‌ಗಳನ್ನೂ ಇದು ಬೆಂಬಲಿಸುವಂತಾಗಿದೆ. ಸಾಮಾನ್ಯವಾಗಿ ಫಾಂಟ್‌ಗಳ ಆಯ್ಕೆ ವಿಶಾಲವಾಗಿದೆ ಎಂಬ ಕಾರಣಕ್ಕೆ ಮುದ್ರಣದ ಉದ್ದೇಶಕ್ಕೆ ಬರೆಯುವವರು ಇನ್ನೂ ಆನ್ಸಿಯಲ್ಲೇ ಬರೆಯುತ್ತಿದ್ದಾರೆ. ಸುಂದರ ಫಾಂಟ್‌ಗಳ ಆಯ್ಕೆ ಅದರಲ್ಲಿದೆ ಎಂಬುದು ಒಂದು ಮುಖ್ಯ ಕಾರಣ. ಹೀಗಾಗಿ, ಮುದ್ರಣ ಉದ್ದೇಶಕ್ಕಾಗಿ ಬರೆಯುವವರಿಗೆ ಪದ ಬಳಸಲು ಸಾಧ್ಯವಾಗುತ್ತಿರಲಿಲ್ಲ. ಪದ ಬಳಸುವವರು ಕೂಡ ಯೂನಿಕೋಡ್‌ನಲ್ಲಿ ಬರೆದು ನಂತರ, ಇತರ ಸಾಫ್ಟ್‌ವೇರ್ ಬಳಸಿಕೊಂಡು ಅದನ್ನು ಕನ್ವರ್ಟ್ ಮಾಡುವ ಅನಿವಾರ್ಯತೆ ಒದಗುತ್ತಿತ್ತು.

ಈ ಹೊಸ ಆವೃತ್ತಿಯಲ್ಲಿ, ಒಂದು ಕನ್ವರ್ಟರ್ ಅನ್ನೂ ಪದ ಒದಗಿಸಿದೆ. ಇದರಲ್ಲಿ ಆನ್ಸಿಯಲ್ಲಿ ಬರೆದ ಪದಗಳನ್ನು ಯೂನಿಕೋಡ್‌ಗೆ ಸುಲಭವಾಗಿ ಪರಿವರ್ತಿಸಬಹುದು.

ಕನ್ನಡದಲ್ಲಿ ಬರೆಯಲು ಆರಂಭಿಸುವವರಿಗಾಗಿ ಟೈಪಿಂಗ್ ಟ್ಯೂಟರ್ ಅನ್ನು ಈ ಹೊಸ ಆವೃತ್ತಿಯಲ್ಲಿ ಒದಗಿಸಲಾಗಿದೆ. ಈ ಹಿಂದಿನ ಆವೃತ್ತಿಯಲ್ಲಿ ಕೆ.ಪಿ. ರಾವ್ ಅಭಿವೃದ್ಧಿಪಡಿಸಿದ ಕೀಬೋರ್ಡ್ ವಿನ್ಯಾಸದಲ್ಲಿ ಮಾತ್ರ ಬರೆಯಲು ಅವಕಾಶವಿತ್ತು. ಆದರೆ ಈ ಆವೃತ್ತಿಯಲ್ಲಿ ಇನ್‌ಸ್ಕ್ರಿಪ್ಟ್‌ನಲ್ಲಿ ಬರೆಯುವ ಸೌಲಭ್ಯವನ್ನೂ ಒದಗಿಸಲಾಗಿದೆ. ಅಲ್ಲದೆ, ಕೆ.ಪಿ. ರಾವ್ ಅವರು ಅಭಿವೃದ್ಧಿಪಡಿಸಿದ ಕೀಬೋರ್ಡ್ ಎಂಬುದನ್ನು ಸ್ಮರಿಸಿಕೊಳ್ಳಲು ಆ ಕೀಬೋರ್ಡ್ ಹೆಸರನ್ನು ಕೆ.ಪಿ. ರಾವ್ ಎಂದೇ ಬದಲಿಸಿದ್ದೂ ಅಭಿನಂದನೀಯ ಕೆಲಸ. ಹಿಂದಿನ ಆವೃತ್ತಿಯಲ್ಲಿ ಇನ್‌ಸ್ಕ್ರಿಪ್ಟ್ ಕೀಬೋರ್ಡ್ ವಿನ್ಯಾಸ ಲಭ್ಯವಿರಲಿಲ್ಲ. ಇದರಿಂದ, ಇನ್‌ಸ್ಕ್ರಿಪ್ಟ್‌ನಲ್ಲಿ ಕನ್ನಡ ಬರೆಯುವುದನ್ನು ರೂಢಿಸಿಕೊಂಡವರು ಪದಬಳಕೆ ಮಾಡಲು ಸಾಧ್ಯವಾಗುತ್ತಿರಲಿಲ್ಲ.

ಇವರ ವಿಶೇಷತೆಯೆಂದರೆ, ಇಡೀ ಸಾಫ್ಟ್‌ವೇರ್ ಅನ್ನು ಅವರು ಉಚಿತವಾಗಿ ಕನ್ನಡಿಗರಿಗೆ ಒದಗಿಸಿದ್ದು! ಕನ್ನಡದಲ್ಲಿ ಈಗಾಗಲೇ ಕನ್ನಡ ಬರೆಯುವುದಕ್ಕೆಂದು ಹಲವು ತಂತ್ರಾಂಶಗಳಿವೆ. ಈ ಪೈಕಿ ಹೆಚ್ಚಿನವರು ಬಳಸುತ್ತಿರುವ ನುಡಿ ಕನ್ನಡ ಗಣಕ ಪರಿಷತ್ತು ಅಭಿವೃದ್ಧಿ ಪಡಿಸಿರುವುದಾಗಿರುವುದರಿಂದ ಅದು ಉಚಿತವಾಗಿ ಸಿಗುತ್ತಿದೆ. ಉಳಿದಂತೆ ಬಹುತೇಕ ಎಲ್ಲ ಸಾಫ್ಟ್‌ವೇರ್ ಅನ್ನೂ ಹಣ ಕೊಟ್ಟು ಕೊಂಡುಕೊಳ್ಳಬೇಕಿದೆ.

ಆದರೆ, ಇವರು ತಾವು ಹಾಕಿದ ಶ್ರಮಕ್ಕೆ ಸ್ವಲ್ಪವೂ ಪ್ರತಿಫಲ ನಿರೀಕ್ಷಿಸದೇ ಕನ್ನಡಿಗರಿಗಾಗಿ ಈ ಸೌಲಭ್ಯವನ್ನು ಒದಗಿಸಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ ಸಾವಿರಾರು ಜನರು ಇದರ ಉಪಯೋಗ ಪಡೆದಿದ್ದಾರೆ. ಒಂದು ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವಲ್ಲಿ ಹಲವು ದಿನಗಳ ಕಾಲ ಶ್ರಮ ಹಾಕಬೇಕಿರುತ್ತದೆ. ಈ ಬಗ್ಗೆ ಮಾತನಾಡಿದ ಲೋಹಿತ್ ಡಿ.ಎಸ್., 'ಆನ್ಸಿ ಬೆಂಬಲಕ್ಕಾಗಿ ನಾವು ಹಲವು ಪ್ರಯೋಗಗಳನ್ನು ನಡೆಸಿದ್ದೇವೆ. ಪರಿಣತರನ್ನು ಬಳಸಿಕೊಂಡು ಅವರಿಂದ ಕನ್ನಡ ಹಾಗೂ ಸಂಸ್ಕೃತದ ಕ್ಲಿಷ್ಟ ಪದಗಳನ್ನೆಲ್ಲ ಬರೆದು ನೋಡಿದ್ದೇವೆ. ಸರಿಯಾಗಿ ಅಕ್ಷರಗಳು ಮೂಡಿ ಬರುತ್ತಿಲ್ಲದಿದ್ದಾಗ ಅದಕ್ಕೆ ಕಾರಣ ಹುಡುಕಿ ಸರಿಪಡಿಸಿದ್ದೇವೆ. ಮುಂದಿನ ದಿನಗಳಲ್ಲಿ ಶಬ್ದಕೋಶ, ಇನ್ನಷ್ಟು ಸ್ವರಚಿಹ್ನೆಗಳನ್ನು ಬಳಸುವ ಆಯ್ಕೆ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಸೇರಿಸುವ ಉದ್ದೇಶವಿದೆ' ಎಂದು ಹೇಳಿದ್ದಾರೆ.



ಈ ಆವೃತ್ತಿಯಲ್ಲಿ ಆನ್ಸಿ ಸೌಲಭ್ಯ ಕಲ್ಪಿಸಲು ನಾವು ತುಂಬಾ ಪ್ರಯೋಗಗಳನ್ನು ನಡೆಸಿದ್ದೇವೆ. ಕನ್ನಡ ಹಾಗೂ ಸಂಸ್ಕೃತ ಕ್ಲಿಷ್ಟ ಪದಗಳನ್ನೆಲ್ಲ ಬರೆಯಲು ಸಾಧ್ಯವಾಗುತ್ತದೆಯೇ ಎಂದು ತಜ್ಞರೊಂದಿಗೆ ಪ್ರಯೋಗ ನಡೆಸಿದ್ದೇವೆ. ಅಲ್ಲದೆ, ಆನ್ಸಿ ಇಂದ ಯುನಿಕೋಡ್‌ಗೆ ಪದಗಳನ್ನು ರೂಪಾಂತರಿಸುವ ಸೌಲಭ್ಯವನ್ನೂ ಕೂಡಾ ಇದೇ ರೀತಿ ಪ್ರಯೋಗ ನಡೆಸಿ, ಹೆಚ್ಚು ನಿಖರವಾಗಿ ಇದು ಕೆಲಸ ಮಾಡುವ ಹಾಗೆ ನೋಡಿಕೊಂಡಿದ್ದೇವೆ. ಮುಂದಿನ ದಿನದಲ್ಲಿ ಇನ್ನಷ್ಟು ಸೌಲಭ್ಯಗಳನ್ನು ಒದಗಿಸುವ ಯೋಚನೆಯಲ್ಲಿದ್ದೇನೆ. ಇದು ಹೆಚ್ಚು ಜನರಿಗೆ ತಲುಪಬೇಕು ಎಂಬುದು ನನ್ನ ಉದ್ದೇಶ.

**ಲೋಹಿತ್ ಡಿ. ಎಸ್.**
ಪದ ತಂತ್ರಾಂಶದ ನಿರ್ಮಾತೃ



# ಮೊಬೈಲ್ ಆಗುವುದು ವೈಫೈ ಹಾಟ್‌ಸ್ಪಾಟ್



**ಅವಿನಾಶ್ ಬಿ.**

**ಕೋವಿಡ್-19** ಸೋಂಕಿನ ಪ್ರಮಾಣ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಮನೆಯಿಂದಲೇ ಕೆಲಸ ಮಾಡುವ ವ್ಯವಸ್ಥೆಯನ್ನು ಈಗ ಹೆಚ್ಚಿನ ಸಂಸ್ಥೆಗಳು ಮರಳಿ ಜಾರಿಗೆ ತಂದಿವೆ. ಮಕ್ಕಳ ಆನ್‌ಲೈನ್ ಕ್ಲಾಸಿಗೂ ಇಂಟರ್ನೆಟ್ ಬೇಕು. ಇಂಥ ಸಂದರ್ಭದಲ್ಲಿ ಇಂಟರ್ನೆಟ್ ಸಂಪರ್ಕದ್ದೇ ಸಮಸ್ಯೆ ಬಹುತೇಕರಿಗೆ. ಲ್ಯಾಪ್‌ಟಾಪ್ ಅಥವಾ ವೈಫೈ ಬೆಂಬಲಿತ ಡೆಸ್ಕ್‌ಟಾಪ್ ಕಂಪ್ಯೂಟರಿಗೆ ಇಂಟರ್ನೆಟ್ ಸೌಕರ್ಯ ದೊರಕಿಸಬೇಕೆಂದರೆ, ಒಂದೋ ಬ್ರಾಡ್‌ಬ್ಯಾಂಡ್/ಆಪ್ಟಿಕಲ್ ಫೈಬರ್ ಕೇಬಲ್ ವ್ಯವಸ್ಥೆಯನ್ನು ಅವಲಂಬಿಸಬೇಕು. ಅದಕ್ಕೆ ಹೆಚ್ಚು ಖರ್ಚು ಮಾಡಲು ಸಾಧ್ಯವಿಲ್ಲದವರಿಗೆ, ಸ್ಮಾರ್ಟ್‌ಫೋನನ್ನೇ ವೈಫೈ ಹಾಟ್‌ಸ್ಪಾಟ್ ಆಗಿ ಮಾರ್ಪಡಿಸಿ ಇಂಟರ್ನೆಟ್ ಸಂಪರ್ಕ ಪಡೆಯಬಹುದು. ಇದು ಹೇಗೆ ಎಂಬ ವಿಚಾರ ಹೆಚ್ಚಿನವರಿಗೆ ತಿಳಿದಿಲ್ಲ. ಅಷ್ಟೇ ಅಲ್ಲ, ಈ ವೈಫೈ ಹಾಟ್‌ಸ್ಪಾಟ್ ಮೂಲಕ ಹೆಚ್ಚು ವೇಗದಲ್ಲಿ ಇಂಟರ್ನೆಟ್ ಸಂಪರ್ಕ ಬಳಸುವುದರ ಮಾಹಿತಿಯೂ ಹೆಚ್ಚಿನವರಿಗೆ ಇಲ್ಲ.

ಉಚಿತ ವೈಫೈ ಉಪಯೋಗಿಸುವುದಂತೂ ಯಾವತ್ತೂ ಸುರಕ್ಷಿತವಲ್ಲ. ಇಂಥ ಸಂದರ್ಭದಲ್ಲಿ ಆಂಡ್ರಾಯ್ಡ್ ಫೋನ್ ಮೂಲಕ ನಮ್ಮದೇ ವೈಫೈ ನೆಟ್‌ವರ್ಕ್ ಅಥವಾ ಹಾಟ್‌ಸ್ಪಾಟ್ ರಚಿಸುವುದು ಹೇಗೆ? ಅದರ ವೇಗ ಹೆಚ್ಚಿಸುವುದು ಹೇಗೆ?


ಆಂಡ್ರಾಯ್ಡ್ ಫೋನ್‌ನಲ್ಲಿ ಮೊಬೈಲ್ ಹಾಟ್‌ಸ್ಪಾಟ್ ಸೆಟ್ ಮಾಡುವುದು ತುಂಬ ಸುಲಭ. ಡೇಟಾ (ಮೊಬೈಲ್ ಇಂಟರ್ನೆಟ್ ಸಂಪರ್ಕ) ಆನ್ ಇರಲಿ. ಸೆಟ್ಟಿಂಗ್ ಆ್ಯಪ್ ತೆರೆಯಿರಿ. ಅಲ್ಲಿ 'ಸೆಟ್ಟಿಂಗ್ಸ್ > ವೈ-ಫೈ & ನೆಟ್‌ವರ್ಕ್ > ಹಾಟ್‌ಸ್ಪಾಟ್ & ಟಿದರಿಂಗ್' ಎಂಬಲ್ಲಿ ಕ್ಲಿಕ್ ಮಾಡಿ, ವೈಫೈ ಹಾಟ್‌ಸ್ಪಾಟ್ ಒತ್ತಿ, ಅದನ್ನು ಸಕ್ರಿಯಗೊಳಿಸಿ. ಇದಕ್ಕೆ ಸುರಕ್ಷಿತವಾದ ಪ್ರಬಲ ಪಾಸ್‌ವರ್ಡ್ ಹೊಂದಿಸಲೇಬೇಕು. ಇಲ್ಲವಾದಲ್ಲಿ, ಬೇರೆಯವರೂ ಇದೇ ವೈಫೈ ನೆಟ್‌ವರ್ಕ್‌ಗೆ ಸಂಪರ್ಕಿಸಿ, ನಿಮ್ಮ ಡೇಟಾ ಪ್ಯಾಕ್ ಖಾಲಿ ಮಾಡಿಬಿಡುವ ಅಪಾಯವಿದೆ. ಹೆಚ್ಚು ಸಾಧನಗಳು ಸಂಪರ್ಕವಾದರೆ, ಮೊಬೈಲ್ ಡೇಟಾ ವೇಗ ಕಡಿಮೆಯಾಗುತ್ತದೆ.

ಆಂಡ್ರಾಯ್ಡ್ ಫೋನ್ ಮೂಲಕ ನಮ್ಮದೇ ವೈಫೈ ನೆಟ್‌ವರ್ಕ್ ಅಥವಾ ಹಾಟ್‌ಸ್ಪಾಟ್ ರಚಿಸುವುದು ಹೇಗೆ? ಅದರ ವೇಗ ಹೆಚ್ಚಿಸುವುದು ಹೇಗೆ?

ಹೊಸ ಸ್ಮಾರ್ಟ್‌ಫೋನ್‌ಗಳಲ್ಲಾದರೆ, ಇದನ್ನು ಸಕ್ರಿಯಗೊಳಿಸಲು ಶಾರ್ಟ್‌ಕಟ್ ಮಾರ್ಗವಿದೆ. ನೋಟಿಫಿಕೇಶನ್ ಟ್ರೇಯನ್ನು ಕೆಳಕ್ಕೆ ಎಳೆದಾಗಲೇ ಹಾಟ್‌ಸ್ಪಾಟ್ ಬಟನ್ ಇರುತ್ತದೆ. ಆನ್ ಮತ್ತು ಆಫ್ ಮಾಡುವುದಕ್ಕೂ ಇದೇ ಬಟನ್ ಒತ್ತಬಹುದು.

## ಇಂಟರ್ನೆಟ್ ವೇಗ ಹೆಚ್ಚಿಸುವುದು

ಹಾಟ್‌ಸ್ಪಾಟ್ & ಟಿದರಿಂಗ್ ಎಂಬುದನ್ನು ನೇರವಾಗಿ ಆಯ್ಕೆ ಮಾಡಿದರೆ, ವೈಫೈ ಮೂಲಕವೇ ಸಂಪರ್ಕ ಏರ್ಪಡುತ್ತದೆ. ಆದರೆ, ಅಲ್ಲೇ ಮತ್ತೊಂದು ಆಯ್ಕೆಯಿದೆ. ಅದು ಯುಎಸ್‌ಬಿ ಟಿದರಿಂಗ್. ಅಂದರೆ, ಸ್ಮಾರ್ಟ್‌ಫೋನ್‌ನ ಜೊತೆಗೆ ಬಂದಿರುವ ಯುಎಸ್‌ಬಿ ಕೇಬಲ್ ಅನ್ನು ಕಂಪ್ಯೂಟರಿಗೆ ಯುಎಸ್‌ಬಿ ಪೋರ್ಟ್ ಮೂಲಕ ಜೋಡಿಸಿದರೆ ನಿಸ್ತಂತು ಸಂಪರ್ಕಕ್ಕಿಂತಲೂ ಹೆಚ್ಚು ವೇಗದ ಇಂಟರ್ನೆಟ್ ಪಡೆಯಬಹುದು. ಯುಎಸ್‌ಬಿ ಕೇಬಲ್ ಮೂಲಕ ಲ್ಯಾಪ್‌ಟಾಪ್ ಹಾಗೂ ಸ್ಮಾರ್ಟ್‌ಫೋನನ್ನು ಬೆಸೆದ ಬಳಿಕ, 'ಸೆಟ್ಟಿಂಗ್ಸ್ > ವೈ-ಫೈ & ನೆಟ್‌ವರ್ಕ್ > ಹಾಟ್‌ಸ್ಪಾಟ್ & ಟಿದರಿಂಗ್ > ಯುಎಸ್‌ಬಿ ಟಿದರಿಂಗ್' ಎಂಬಲ್ಲಿ ಇದನ್ನು ಸಕ್ರಿಯಗೊಳಿಸಿದರಾಯಿತು.





ಮೊಬೈಲ್ ಡೇಟಾ ಟಿದರಿಂಗ್ ಮಾಡುವ ಸೆಟ್ಟಿಂಗ್ಸ್

ಆದರೆ ಇಂಟರ್ನೆಟ್ ವೇಗವು ನೀವಿರುವ ಪ್ರದೇಶದಲ್ಲಿ ನೆಟ್‌ವರ್ಕ್ ಮತ್ತು ಫೋನ್/ಕಂಪ್ಯೂಟರ್ ಬೆಂಬಲಿಸುವ ಯುಎಸ್‌ಬಿ ಕೇಬಲ್‌ನ ವಿಧವನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಈಗ ಯುಎಸ್‌ಬಿ 2.0, ಯುಎಸ್‌ಬಿ 3.0 ಹಾಗೂ ಇತ್ತೀಚೆಗೆ ಯುಎಸ್‌ಬಿ 3.1 ಆವೃತ್ತಿಗಳು ಬಂದಿವೆ. ಯುಎಸ್‌ಬಿ 3.1ರಲ್ಲಿ ಇಂಟರ್ನೆಟ್ ಡೇಟಾ ವಿನಿಮಯದ ವೇಗ ಗರಿಷ್ಠವಾಗಿರುತ್ತದೆ. ಆದರೆ, ಹೊಚ್ಚಹೊಸ ಆವೃತ್ತಿಯ ಕೇಬಲ್ ಖರೀದಿಸುತ್ತೀರೆಂದಾದರೆ, ಅದು ಸ್ಮಾರ್ಟ್‌ಫೋನ್‌ಗೆ ಮತ್ತು ಕಂಪ್ಯೂಟರಿಗೆ ಹೊಂದಿಕೊಳ್ಳುತ್ತದೆಯೇ ಎಂಬುದನ್ನು ಮೊದಲೇ ಖಚಿತಪಡಿಸಿಕೊಳ್ಳುವುದು ಸೂಕ್ತ.

## ಮತ್ತಷ್ಟು ವೇಗವಾಗಿಸಲು

ಸಾಮಾನ್ಯವಾಗಿ ಮೊಬೈಲ್ ಹಾಟ್‌ಸ್ಪಾಟ್ ಆನ್ ಮಾಡಿದಾಗ, ಡೇಟಾ ವರ್ಗಾವಣೆಯ ವೇಗವು ಡೀಫಾಲ್ಟ್ ಆಗಿ 2.4GHz ನಲ್ಲಿರುತ್ತದೆ. ಆಯ್ಕೆ ಇರುವ ಆಧುನಿಕ ಮೊಬೈಲ್ ಫೋನ್‌ಗಳಲ್ಲಿ ಇದನ್ನು 5GHz ಗೆ ಬದಲಾಯಿಸಿದರೆ, ಇಂಟರ್ನೆಟ್ ವೇಗವು ಮತ್ತಷ್ಟು ಹೆಚ್ಚಾಗುತ್ತದೆ.

ಬ್ಲೂಟೂತ್ ಟಿದರಿಂಗ್ ಎಂಬ ವ್ಯವಸ್ಥೆಯನ್ನೂ ಇದೇ ರೀತಿ ಬಳಸಿಕೊಳ್ಳಬಹುದು. ಆದರೆ, ಇದಕ್ಕೆ ಹೆಚ್ಚಿನ ಬ್ಯಾಟರಿ ಚಾರ್ಜ್ ಅಗತ್ಯವಿರುತ್ತದೆ ಎಂಬುದು ಗಮನದಲ್ಲಿರಲಿ. ಯುಎಸ್‌ಬಿ ಟಿದರಿಂಗ್ ವ್ಯವಸ್ಥೆ ಬಳಸುವುದರ ಮತ್ತೊಂದು ಲಾಭ ಎಂದರೆ, ಅದನ್ನು ಜೋಡಿಸಿದ ಕಂಪ್ಯೂಟರ್/ಲ್ಯಾಪ್‌ಟಾಪ್, ನಿಮ್ಮ ಫೋನನ್ನು ಚಾರ್ಜ್ ಕೂಡ ಮಾಡುತ್ತಿರುತ್ತದೆ.

ರಾಜ್ಯದ ಮೇಕೆದಾಟು ಯೋಜನೆಗೆ ತಕರಾರು ತೆಗೆಯುತ್ತಲೇ ಇರುವ ನೆರೆ ರಾಜ್ಯ

# ತಮಿಳುನಾಡಿಗೆ ನಿಗದಿಗಿಂತ ಹೆಚ್ಚು ನೀರು

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಮೇಕೆದಾಟು ಯೋಜನೆಗೆ ಅತ್ತ ತಮಿಳುನಾಡು ಸರ್ಕಾರ ತಕರಾರು ತೆಗೆಯುತ್ತಲೇ ಇದ್ದರೆ, ಇತ್ತ ಕಾವೇರಿಯಿಂದ ತಮಿಳುನಾಡಿಗೆ ಬಿಡಬೇಕಾದ ನೀರು ನಿಗದಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಹರಿದು ಹೋಗಿದೆ.

ಕಾವೇರಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿದ್ದ ತೀರ್ಪಿನ ಪ್ರಕಾರ, ಸಾಮಾನ್ಯ ಜಲವರ್ಷದಲ್ಲಿ ತಮಿಳುನಾಡಿಗೆ 2018–19ನೇ ಸಾಲಿನಿಂದ 177.25 ಟಿಎಂಸಿ ಅಡಿ ನೀರು ಬಿಡಬೇಕಿದೆ. ಆದರೆ, ಪ್ರಸಕ್ತ ವರ್ಷವೂ ಸೇರಿ ಕಳೆದ ನಾಲ್ಕು ವರ್ಷಗಳಲ್ಲಿ ಈ ಪ್ರಮಾಣಕ್ಕಿಂತ ಹೆಚ್ಚು ನೀರು ಹರಿದು ಹೋಗಿದೆ.

ಕಾವೇರಿ ನ್ಯಾಯ ಮಂಡಳಿಯ 2007ರ ಫೆ. 5ರ ಅಂತಿಮ ತೀರ್ಪಿನ ಅನ್ವಯ ಸಾಮಾನ್ಯ ಜಲವರ್ಷದಲ್ಲಿ ಕಾವೇರಿಯಿಂದ ತಮಿಳುನಾಡಿಗೆ 192 ಟಿಎಂಸಿ ಅಡಿ ಹರಿಸಬೇಕಿತ್ತು. ಈ ನೀರಿನ ಪ್ರಮಾಣದ ಹಂಚಿಕೆಯನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ವಿಶೇಷ ಮೇಲ್ಮನವಿಯ ಮೇಲೆ ಸುಪ್ರೀಂ ಕೋರ್ಟ್ 2018ರ ಫೆ. 16ರಂದು ನೀಡಿದ ತೀರ್ಪಿನಲ್ಲಿ 177.25 ಟಿಎಂಸಿ ಅಡಿಗೆ ಇಳಿಸಿತ್ತು.

**10 ವರ್ಷಗಳಲ್ಲಿ ತಮಿಳುನಾಡಿಗೆ ಹರಿದ ನೀರು (ಟಿಎಂಸಿ ಅಡಿಗಳಲ್ಲಿ)**

| ವರ್ಷ | ಹರಿಯಬೇಕಾದ ನೀರು | ಹರಿದ ನೀರು |
|---|---|---|
| 2011–12 | 192 | 240.45 |
| 2012–13 | 192 | 100.43 |
| 2013–14 | 192 | 259.40 |
| 2014–15 | 192 | 229.38 |
| 2015–16 | 192 | 154.00 |
| 2016–17 | 192 | 69.68 |
| 2017–18 | 192 | 123.58 |
| 2018–19 | 177.25 | 398.51 |
| 2019–20 | 177.25 | 275.40 |
| 2020–21 | 177.25 | 211.31 |
| 2021–22* | 177.25 | 240 |

* ಜನವರಿ 8ರವರೆಗೆ

ಜಲವರ್ಷ 2011–12ರಿಂದ 2017–18ರವರೆಗಿನ ಅವಧಿಯಲ್ಲಿ 2012–13 ಮತ್ತು 2015ರಿಂದ 2018ರವರೆಗಿನ ಮೂರು ವರ್ಷಗಳ ಅವಧಿಯಲ್ಲಿ ತಮಿಳುನಾಡಿಗೆ ನಿಗದಿಪಡಿಸಿದ್ದಕ್ಕಿಂತ ಕಡಿಮೆ ಪ್ರಮಾಣದ ನೀರು ಬಿಡುಗಡೆ ಮಾಡಲಾಗಿತ್ತು. ಇದು ಕರ್ನಾಟಕ ಮತ್ತು ತಮಿಳುನಾಡು ಮಧ್ಯೆ ಜಲ ಸಂಘರ್ಷಕ್ಕೆ ಕಾರಣವಾಗಿತ್ತು.

ಪ್ರಸಕ್ತ ವರ್ಷದಲ್ಲಿ ಕರ್ನಾಟಕ–ತಮಿಳುನಾಡು ಗಡಿಯಲ್ಲಿರುವ ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ಶನಿವಾರದವರೆಗೆ (ಜ. 8) 240 ಟಿಎಂಸಿ ಅಡಿ ನೀರು ಮೆಟ್ಟೂರು ಜಲಾಶಯ ಸೇರಿರುವುದು ದಾಖಲಾಗಿದೆ.

ಜೂನ್‌ನಿಂದ ಮೇ ತಿಂಗಳವರೆಗೆ, ಪ್ರತಿ ತಿಂಗಳು ತಮಿಳುನಾಡಿಗೆ ಹರಿಸಬೇಕಾದ ಒಟ್ಟು ನೀರಿನ ಪ್ರಮಾಣವನ್ನು ನಿಗದಿಪಡಿಸಿದೆ. ಆದರೆ, ಈ ವರ್ಷ 12 ತಿಂಗಳಲ್ಲಿ ಹರಿಸಬೇಕಾದ ಒಟ್ಟು ನೀರಿನ ಪ್ರಮಾಣಕ್ಕಿಂತ 60 ಟಿಎಂಸಿ ಅಡಿಗಿಂತಲೂ ಹೆಚ್ಚು ನೀರು ಈಗಾಗಲೇ ಹರಿದು ಹೋಗಿದೆ. ಸುಪ್ರೀಂಕೋರ್ಟ್ ನಿಗದಿಪಡಿಸಿದ ಪ್ರಕಾರ, ಜೂನ್‌ನಿಂದ ಜನವರಿ ಅಂತ್ಯದವರೆಗೆ 167 ಟಿಎಂಸಿ ಅಡಿ ನೀರು ಬಿಡಬೇಕಿದೆ. ಉಳಿದಂತೆ, ಫೆಬ್ರುವರಿ, ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ತಲಾ 2.5 ಟಿಎಂಸಿ ಅಡಿ ನೀರು ಬಿಡಬೇಕಿದೆ.

ಅಕ್ಟೋಬರ್ ಹಾಗೂ ನವೆಂಬರ್ ತಿಂಗಳಲ್ಲಿ ನಿರಂತರ ಮಳೆಯಾದ ಪರಿಣಾಮ ಕಾವೇರಿ ಕೊಳ್ಳದ ಪ್ರಮುಖ ಜಲಾಶಯಗಳಾದ ರಾಜ್ಯದ ಕೆಆರ್‌ಎಸ್ ಮತ್ತು ತಮಿಳುನಾಡಿನ ಮೆಟ್ಟೂರು ಜಲಾಶಯಗಳು ಗರಿಷ್ಠ ಪ್ರಮಾಣದಲ್ಲಿ ಭರ್ತಿ ಆಗಿವೆ. ಮೆಟ್ಟೂರು ಜಲಾಶಯದಲ್ಲಿ ಸದ್ಯ 90.28 ಟಿಎಂಸಿ ಅಡಿ ನೀರಿದೆ. ಈ ಜಲಾಶಯದ ನೀರು ಸಂಗ್ರಹ ಸಾಮರ್ಥ್ಯ 95.66 ಟಿಎಂಸಿ ಅಡಿ, ಕಳೆದ ವರ್ಷ ಇದೇ ಅವಧಿಯಲ್ಲಿ 73.55 ಟಿಎಂಸಿ ಅಡಿಯಷ್ಟು ಇತ್ತು. ಮೆಟ್ಟೂರು ಜಲಾಶಯದಲ್ಲಿ ಸಾಕಷ್ಟು ನೀರು ತುಂಬಿರುವುದರಿಂದ ನಿತ್ಯ 1,000 ಕ್ಯುಸೆಕ್ ನೀರು ಹೊರ ಹೋಗುತ್ತಿದೆ ಎಂದು ಜಲ ಸಂಪನ್ಮೂಲ ಇಲಾಖೆಯ ಮೂಲಗಳು ತಿಳಿಸಿವೆ.

'ಸದ್ಯ ಕೃಷ್ಣರಾಜ ಸಾಗರ (ಕೆಆರ್‌ಎಸ್), ಹಾರಂಗಿ, ಕಬಿನಿ ಜಲಾಶಯಗಳಿಂದ ಕಾಲುವೆಗಳಲ್ಲಿ ನೀರು ಹೊರ ಬಿಡುತ್ತಿಲ್ಲ. ಹೇಮಾವತಿ ಜಲಾಶಯದಿಂದ ಮಾತ್ರ 1,450 ಕ್ಯುಸೆಕ್ ನೀರು ಹೊರಹೋಗುತ್ತಿದೆ. ಕೆಆರ್‌ಎಸ್‌ನಲ್ಲಿ ಸದ್ಯ (ಜ. 9) 47.16 ಟಿಎಂಸಿ ಅಡಿ ನೀರು ಇದೆ. ಕಳೆದ ವರ್ಷ ಇದೇ ಅವಧಿಯಲ್ಲಿ 41.39 ಟಿಎಂಸಿ ಅಡಿ ನೀರು ಇತ್ತು. ಕೆಆರ್‌ಎಸ್ ಜಲಾಶಯದ ನೀರು ಸಂಗ್ರಹ ಸಾಮರ್ಥ್ಯ 49.45 ಟಿಎಂಸಿ ಅಡಿ' ಎಂದೂ ಮೂಲಗಳು ಹೇಳಿವೆ.

## 'ಡಿಕೆಶಿ ಕಾಂಗ್ರೆಸ್‌ನ ಬೇಜವಾಬ್ದಾರಿ ಅಧ್ಯಕ್ಷ'



ರವಿಕುಮಾರ್

**ಚಿಕ್ಕಬಳ್ಳಾಪುರ:** 'ಕೋವಿಡ್ ಹರಡುತ್ತಿರುವಾಗ ಪಾದಯಾತ್ರೆ ಮಾಡುತ್ತಿರುವ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಪಕ್ಷದ ಬೇಜವಾಬ್ದಾರಿ ಅಧ್ಯಕ್ಷ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಟೀಕಿಸಿದ್ದಾರೆ.

ಮಂಗಳವಾರ ನಡೆದ ಬಿಜೆಪಿ ರೈತ ಮೋರ್ಚಾ ರಾಜ್ಯ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಅವರು, 'ಶಿವಕುಮಾರ್ ಅವರಿಗೆ ಸಮಾಜದ ಬಗ್ಗೆ ಕಾಳಜಿ ಇದ್ದರೆ ತಕ್ಷಣವೇ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲಿ. ಅದನ್ನು ಬಿಟ್ಟು, ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಿ ಎಂದ ಅಧಿಕಾರಿಗಳ ವಿರುದ್ಧ ಹರಿಹಾಯುವುದು ಸರಿಯಲ್ಲ' ಎಂದರು.

'ನಮಗೂ ನಿಮ್ಮ ವಿರುದ್ಧ ಸಾವಿರಾರು ಜನರನ್ನು ಸೇರಿಸಿ ಪ್ರತಿಭಟಿಸುವ ತಾಕತ್ತು ಇದೆ. ಆದರೆ ನಮಗೆ ಜವಾಬ್ದಾರಿ ಇದೆ. ನಿಮಗೆ ಸಾಮಾನ್ಯ ತಿಳಿವಳಿಕೆ ಮತ್ತು ಸಮಾಜದ ಬಗ್ಗೆ ಕಾಳಜಿ ಇಲ್ಲ' ಎಂದು ದೂರಿದರು.




## ಅಂಚೆ ಚೀಟಿ ಪ್ರದರ್ಶನ 21ರಿಂದ

**ಬೆಂಗಳೂರು:** ಅಂಚೆ ಇಲಾಖೆಯು 'ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ' ಕುರಿತು ಜ.21ರಿಂದ 23ರವರೆಗೆ 'ಸಂಸ್ಕೃತಿಪೆಕ್ಸ್–2022' ಅಂಚೆ ಚೀಟಿಗಳ ಸಂಗ್ರಹದ ಪ್ರದರ್ಶನವನ್ನು ಆನ್‌ಲೈನ್ ಮೂಲಕ ಆಯೋಜಿಸಿದೆ.

ಬೆಂಗಳೂರು ಜಿಲ್ಲೆಯ ನಿವಾಸಿಗಳು ಪ್ರವೇಶ ಅರ್ಜಿಗಳನ್ನು ಸಲ್ಲಿಸಲು ಇದೇ 12 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ https://samskritipex2022.comಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

## 'ಬಿಜೆಪಿ ಶಾಸಕರು ನಿಯಮ ಉಲ್ಲಂಘಿಸಿದರೂ ಪ್ರಕರಣ ದಾಖಲಿಸಿ'



ಈಶ್ವರಪ್ಪ

**ಶಿವಮೊಗ್ಗ:** 'ಬಿಜೆಪಿ ಶಾಸಕರು ಕೋವಿಡ್ ನಿಯಮ ಉಲ್ಲಂಘನೆ ಮಾಡಿದರೆ ಅವರ ವಿರುದ್ಧವೂ ಪ್ರಕರಣ ದಾಖಲಿಸಬೇಕು ಎಂಬುದು ನನ್ನ ಒತ್ತಾಯ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

'ಕೋವಿಡ್ ನಿಯಮ ಉಲ್ಲಂಘನೆಗೆ ಪ್ರಕರಣ ದಾಖಲಿಸುವುದು ಕಾಂಗ್ರೆಸ್‌ನವರಿಗೆ ಮಾತ್ರ ಅಂತಲ್ಲ. ಆದರೆ, ಕಾಂಗ್ರೆಸ್‌ನವರು ಅದೇ ದಂಧೆ ಮಾಡಿಕೊಂಡಿದ್ದಾರೆ' ಎಂದು ಕುಟುಕಿದರು.

'ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಪಾಲ್ಗೊಂಡು ಕೊರೊನಾ ನಿಯಮ ಉಲ್ಲಂಘಿಸಿದ ನಮ್ಮ ಶಾಸಕ ರೇಣುಕಾಚಾರ್ಯ ಕೊನೆಗೆ ಕ್ಷಮೆಯನ್ನಾದರೂ ಕೇಳಿದರು. ಆದರೆ, ಕಾಂಗ್ರೆಸ್‌ನವರಿಗೆ ಕ್ಷಮೆ ಕೇಳುವ ಸೌಜನ್ಯವೂ ಇಲ್ಲ. ಏನ್ ಮಾಡ್ತೀರಾ ಮಾಡ್ಕೊಳ್ಳಿ ಅಂತಾರೆ. ಅಲ್ಲೂ ದಾದಾಗಿರಿ, ಗೂಂಡಾಗಿರಿ ಎಂಬುದು ಕಾಂಗ್ರೆಸ್‌ನಲ್ಲಿರುವ ವ್ಯವಸ್ಥೆ' ಎಂದರು.

'ಕೋವಿಡ್ ಯಾವ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಅದನ್ನೂ ಕೂಡ ಸುಳ್ಳು ಅಂಕಿ–ಅಂಶ ಎಂದು ಡಿ.ಕೆ.ಶಿವಕುಮಾರ್ ಹೇಳುತ್ತಿದ್ದಾರೆ. ಮುಖ್ಯಮಂತ್ರಿ ಆಗುವ ಕನಸು ಕಾಣುತ್ತಿರುವ ವ್ಯಕ್ತಿ ಸರ್ಕಾರ ನೀಡಿದ ಅಂಕಿ–ಅಂಶ ಸುಳ್ಳು ಎಂದು ಹೇಳಿದರೆ ಹೇಗೆ? ಕಾಂಗ್ರೆಸ್‌ನವರು ಸ್ವಾತಂತ್ರ್ಯ ಬಂದಾಗಿನಿಂದ ಕೇಂದ್ರ ಹಾಗೂ ರಾಜ್ಯದಲ್ಲಿ ಆಳ್ವಿಕೆ ಮಾಡಿ ಅಂಕಿ–ಅಂಶ ಕೊಟ್ಟಿದ್ದಾರೆ. ಇದು ಸುಳ್ಳು ಎಂದು ಹೇಳೋಕೆ ಆಗುತ್ತಾ? ನಾನು ಹಾಗೆ ಹೇಳಲ್ಲ' ಎಂದರು.

# 'ಲಾಕ್‌ಡೌನ್ ಜಾರಿಯಾದರೆ ಬಿಜೆಪಿಯೇ ಹೊಣೆ'

ಪ್ರಜಾವಾಣಿ ವಾರ್ತೆ



ಕನಕಪುರದ ಚನ್ನಬಸಪ್ಪ ವೃತ್ತದಲ್ಲಿ ಮಂಗಳವಾರ ಮೇಕೆದಾಟು ಪಾದಯಾತ್ರೆ ಸಂದರ್ಭ ನೆರೆದ ಜನಸ್ತೋಮ

**ರಾಮನಗರ:** 'ರಾಜ್ಯದಲ್ಲಿ ಮತ್ತೆ ಲಾಕ್‌ಡೌನ್ ಜಾರಿಯಾದರೆ ಅದಕ್ಕೆ ಬಿಜೆಪಿಯೇ ಕಾರಣ ಹೊರತು ಕಾಂಗ್ರೆಸ್ ಅಲ್ಲ' ಎಂದು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಕನಕಪುರದಲ್ಲಿ ಮಂಗಳವಾರ ಮೇಕೆದಾಟು ಮೂರನೇ ದಿನದ ಪಾದಯಾತ್ರೆ ಆರಂಭಕ್ಕೆ ಮುನ್ನ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿಯನ್ನು ಸೂಕ್ತವಾಗಿ ಸರ್ಕಾರ ನಿರ್ವಹಿಸಲಿಲ್ಲ. ಪ್ರಧಾನಿ ಮೋದಿ ದೇಶದಲ್ಲಿ ಚುನಾವಣಾ ರ್‍ಯಾಲಿ ಮಾಡಿದರೆ, ರಾಜ್ಯದಲ್ಲೂ ಬಿಜೆಪಿ ನಾಯಕರೇ ಕಾರ್ಯಕ್ರಮಗಳನ್ನು ಮಾಡಿದರು. ಕೋವಿಡ್ ಹರಡಿದ್ದು ಬಿಜೆಪಿಯವರಿಂದಲೇ. ಈಗ ಪಾದಯಾತ್ರೆ ತಡೆಯುವ ಸಲುವಾಗಿ ಲಾಕ್‌ಡೌನ್ ನಾಟಕ ಆರಂಭ ಆಗಿದೆ ಎಂದು ದೂರಿದರು.

'ಪಾದಯಾತ್ರೆ ಮಾಡಿದ್ದಕ್ಕೆ ನಮ್ಮ 31 ಜನರ ಮೇಲೆ ಕೇಸು ಹಾಕಿಸಿದ್ದೀರಿ. ಅದೇ ಬಿಜೆಪಿ ನಾಯಕರು ಕಾರ್ಯಕ್ರಮ ಮಾಡಿದಾಗ ಯಾರ ಮೇಲೆ ಕೇಸ್ ಹಾಕಿದ್ದೀರಿ? ಇದಕ್ಕೆಲ್ಲ ನಾವು ಹೆದರಲ್ಲ. ಹೀಗೆ ಕೇಸ್ ಹಾಕಿ ನಮ್ಮನ್ನು ಹೆದರಿಸಬಹುದು ಎಂದುಕೊಂಡರೆ ಬಿಜೆಪಿಯವರಂತ ಮೂರ್ಖರು ಯಾರೂ ಇಲ್ಲ' ಎಂದರು.

ರೋಗ ಉಲ್ಬಣವಾದರೆ ಲಾಕ್‌ಡೌನ್ ಮಾಡಬೇಕಾಗುತ್ತೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಬೇಜವಾಬ್ದಾರಿಯ ಹೇಳಿಕೆ ನೀಡಿರುವುದು ಸರಿಯಲ್ಲ. ರಾಜ್ಯದಲ್ಲಿ ಲಾಕ್‌ಡೌನ್ ಹೇರುವಷ್ಟು ಪರಿಸ್ಥಿತಿ ಹದಗೆಟ್ಟಿಲ್ಲ. ಕಳೆದ ಬಾರಿ ಲಾಕ್‌ಡೌನ್‌ನಿಂದ ಲಕ್ಷಾಂತರ ಮಂದಿ ಸಂಕಷ್ಟ ಅನುಭವಿಸಿದ್ದಾರೆ. ಅವರಿಗೆ ಸರ್ಕಾರ ಘೋಷಿಸಿದ ಪರಿಹಾರವೇ ಇನ್ನೂ ಸಿಕ್ಕಿಲ್ಲ. ಹೀಗಿರುವಾಗ ಮತ್ತೆ ಲಾಕ್‌ಡೌನ್ ಘೋಷಣೆ ಮಾಡುವ ಮುನ್ನ ಸರ್ಕಾರ ಯೋಚನೆ ಮಾಡಬೇಕು ಎಂದು ಟೀಕಿಸಿದರು.

### 'ಡಿಕೆಶಿ ಕಲ್ಲುಗುಂಡು'



ಸಿದ್ದರಾಮಯ್ಯ

'ಎರಡು ದಿನ ನಡೆದರೂ ಡಿ.ಕೆ. ಶಿವಕುಮಾರ್ ಕಲ್ಲುಗುಂಡಿನಂತೆ ಇದ್ದಾರೆ. ಇಂತಹವರ ಗಂಟಲು ದ್ರವ ಪರೀಕ್ಷೆಗೆ ಸರ್ಕಾರ ವೈದ್ಯಾಧಿಕಾರಿಯನ್ನು ಕಳುಹಿಸಿತ್ತು. ಬಹುಶಃ ಮಾದರಿ ಪರೀಕ್ಷೆ ಮಾಡಿ ಕೊರೊನಾ ಇದೆ ಎಂದು ಸುಳ್ಳು ವರದಿ ಕೊಡುವ ಯೋಚನೆ ಮಾಡಿಕೊಂಡಿದ್ದರೋ' ಎಂದು ಸಿದ್ದರಾಮಯ್ಯ ಅನುಮಾನ ವ್ಯಕ್ತಪಡಿಸಿದರು.

### ಬಿಜೆಪಿಗೆ ಬಳ್ಳಾರಿ ಪಾದಯಾತ್ರೆ ನೆನಪು

'ಈ ಹಿಂದೆ ಬಳ್ಳಾರಿಯಲ್ಲಿ ಪಾದಯಾತ್ರೆ ಮಾಡಿದಾಗ ಕಡೇ ದಿನ ಐದು ಲಕ್ಷ ಜನ ಸೇರಿದ್ದರು. ಈಗಲೂ ಜನ ನಮ್ಮ ಪಾದಯಾತ್ರೆಗೆ ಸ್ವಯಂ ಪ್ರೇರಿತರಾಗಿ ಬರಲು ಆರಂಭ ಮಾಡಿದ್ದಾರೆ. ಇದರಿಂದ ಬಿಜೆಪಿಯವರಿಗೆ ಭಯ ಶುರುವಾಗಿದೆ. ಬಳ್ಳಾರಿ ಪಾದಯಾತ್ರೆ ನೆನಪಾದ್ರೆ ಬಸವರಾಜ ಬೊಮ್ಮಾಯಿ ಅವರಿಗೆ ರಾತ್ರಿ ನಿದ್ರೆ ಬರುತ್ತಿಲ್ಲ ಅನ್ಸುತ್ತೆ. ನಾವು ಅವರ ಯಾವ ಷಡ್ಯಂತ್ರಗಳಿಗೂ ಮಣಿಯದೆ ಹನ್ನೊಂದು ದಿನಗಳ ಪಾದಯಾತ್ರೆ ಮಾಡುತ್ತೇವೆ' ಎಂದು ಸಿದ್ದರಾಮಯ್ಯ ಸವಾಲು ಹಾಕಿದರು.

ಡಿ.ಕೆ ಸುರೇಶ್, ಅಶ್ವತ್ಥನಾರಾಯಣ ನಡುವೆ ಮುಂದುವರಿದ ಏಟು–ಎದಿರೇಟು

# ಮತ್ತೆ ಮುನ್ನೆಲೆಗೆ ಬಂದ 'ಗಂಡಸುತನ' ವಿಚಾರ

ಪ್ರಜಾವಾಣಿ ವಾರ್ತೆ



ಡಿ.ಕೆ. ಸುರೇಶ್



ಅಶ್ವತ್ಥನಾರಾಯಣ

**ರಾಮನಗರ:** ಜಿಲ್ಲೆಯಲ್ಲಿ 'ಗಂಡಸುತನ'ದ ವಿಚಾರ ಮಂಗಳವಾರ ಮತ್ತೆ ಮುನ್ನೆಲೆಗೆ ಬಂದಿದ್ದು, ಇಬ್ಬರ ಹೇಳಿಕೆಗಳು ಸಾಮಾಜಿಕ ಜಾಲತಾಣಗಳಲ್ಲೂ ವೈರಲ್ ಆಗುತ್ತಿವೆ.

ಸೋಮವಾರ ರಾತ್ರಿ ಕನಕಪುರದಲ್ಲಿ ನಡೆದ ಮೇಕೆದಾಟು ಪಾದಯಾತ್ರೆಯ ವೇದಿಕೆ ಕಾರ್ಯಕ್ರಮದಲ್ಲಿ ಸಂಸದ ಡಿ.ಕೆ. ಸುರೇಶ್ ಮಾತನಾಡಿ 'ರಾಜ್ಯದಿಂದ ಆಯ್ಕೆಯಾಗಿರುವ 26 ಬಿಜೆಪಿ ಸಂಸದರಿಗೆ ಗಂಡಸುತನ ಇದ್ದರೆ ಪ್ರಧಾನಿ ಮೋದಿ ಅವರನ್ನು ಮನವೊಲಿಸಿ ಅವರಿಂದಲೇ ಮೇಕೆದಾಟು ಯೋಜನೆಗೆ ಚಾಲನೆ ಕೊಡಿಸಲಿ. ಆಗ ನಾನೇ ಅವರ ಪಾದಪೂಜೆ ಮಾಡಿ ಸ್ವಾಗತಿಸುತ್ತೇನೆ. ಅಂತಹ ಗಂಡಸರು ಬಿಜೆಪಿಯಲ್ಲಿ ಇದ್ದಾರಾ?' ಎಂದು ಸವಾಲು ಹಾಕಿದ್ದರು.

ಮಂಗಳವಾರ ರಾಮನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಮತ್ತೆ ಗಂಡಸುತನ ವಿಚಾರವನ್ನು ಕೆದಕಿದರು.

'ಮೇಕೆದಾಟು ಯೋಜನೆ ಜಾರಿ ಮಾಡುವ ಗಂಡಸುತನ ಇರೋದು ಬಿಜೆಪಿಗೆ ಮಾತ್ರ. ಕಾಂಗ್ರೆಸ್‌ಗೆ ಇದನ್ನೆಲ್ಲ ಅನುಷ್ಠಾನಗೊಳಿಸುವ ಶಕ್ತಿಯೇ ಇಲ್ಲ. ಈ ವಿಷಯದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಸಂಸದ ಡಿ.ಕೆ. ಸುರೇಶ್ ಅವರಿಗೆ ಪೌರುಷವಿದೆಯಾ? ಈ ವಿಚಾರದಲ್ಲಿ ನಾನು ನೇರವಾಗಿ ಅವರಿಬ್ಬರಿಗೂ ಸವಾಲೆಸೆಯುತ್ತಿದ್ದೇನೆ. ನಾವು ಬಿಜೆಪಿಯವರು ಗಂಡಸರು. ನಮ್ಮ ಗಂಡಸುತನವನ್ನು ಕೆಲಸದ ಮೂಲಕ ತೋರಿಸುತ್ತೇವೆ. ನೀವು ಗಂಡಸುತನ ಇದ್ದರೆ ಚುನಾವಣೆ ಸಂದರ್ಭ ಈ ಬಗ್ಗೆ ಮಾತನಾಡಿ' ಎಂದು ಸವಾಲು ಹಾಕಿದರು.

ಇದಕ್ಕೆ ಕನಕಪುರದಲ್ಲಿ ಮಂಗಳವಾರ ಮಧ್ಯಾಹ್ನ ಪ್ರತಿಕ್ರಿಯೆ ನೀಡಿದ ಸುರೇಶ್ 'ಬಿಜೆಪಿಯವರು ಹೇಗೆಲ್ಲ ತಮ್ಮ ಗಂಡಸುತನ ತೋರಿಸಿದ್ದಾರೆ ಎಂಬುದನ್ನು ಅವರ ವೈರಲ್ ವಿಡಿಯೊಗಳೇ ಹೇಳುತ್ತವೆ. ಗಂಡಸರಾದವರು ಎಂದೂ ತಮ್ಮ ಗಂಡಸುತನ ಚೆಕ್ ಮಾಡಲು ಹೋಗಲ್ಲ. ನಮ್ಮ ಎದುರು ಇದರ ಮಾತುಗಳನ್ನಾಡುವವರು ಪ್ರಧಾನಿ ಮುಂದೆ ತಮ್ಮ ಗಂಡಸುತನ ತೋರಿಸಿ' ಎಂದು ವ್ಯಂಗ್ಯವಾಡಿದರು.

ಇದೇ ತಿಂಗಳ 3ರಂದು ರಾಮನಗರದ ಜಿಲ್ಲಾ ಕಚೇರಿಗಳ ಸಂಕೀರ್ಣದಲ್ಲಿ ನಡೆದ ಪ್ರತಿಮೆಗಳ ಅನಾವರಣ ಕಾರ್ಯಕ್ರಮದಲ್ಲಿ 'ಗಂಡಸುತನ' ವಿಚಾರಕ್ಕೆ ಅಶ್ವತ್ಥನಾರಾಯಣ ಹಾಗೂ ಡಿ.ಕೆ. ಸುರೇಶ್ ನಡುವೆ ಮುಖ್ಯಮಂತ್ರಿ ಎದುರೇ ಜಟಾಪಟಿ ನಡೆದಿತ್ತು.

### ಯೋಜನಾ ವೆಚ್ಚ ದುಪ್ಪಟ್ಟುಗೊಳಿಸಿದ್ದೇ ಡಿಕೆಶಿ ಸಾಧನೆ: ಬಿಜೆಪಿ

**ಬೆಂಗಳೂರು:** 'ಮೇಕೆದಾಟು ಯೋಜನೆಯ ಅಂದಾಜು ವೆಚ್ಚವನ್ನು ₹5,800 ಕೋಟಿಯಿಂದ ₹9,000 ಕೋಟಿಗೆ ಹೆಚ್ಚಿಸಿದ್ದೇ ಡಿ.ಕೆ.ಶಿವಕುಮಾರ್ ಅವರ ಸಾಧನೆ. ದಿಢೀರ್ ಆಗಿ ವೆಚ್ಚ ದುಪ್ಪಟ್ಟು ಮಾಡುವುದರ ಹಿಂದಿನ ಹಕೀಕತ್ ಏನು' ಎಂದು ಬಿಜೆಪಿ ಪ್ರಶ್ನಿಸಿದೆ.

ನಾಲ್ಕು ದಶಕಗಳಲ್ಲಿ ಜನಪ್ರತಿನಿಧಿಯಾಗಿ ಡಿ.ಕೆ.ಶಿವಕುಮಾರ್ ಸಮಾಜಕ್ಕೆ ನೀಡಿರುವ ಕೊಡುಗೆ ಏನು? ವಿವಿಧ ಪಕ್ಷಗಳ ಪ್ರಮುಖ ನಾಯಕರು ಹಲವು ಕೊಡುಗೆಗಳನ್ನು ನೀಡಿದ್ದಾರೆ. ಆದರೆ ಇವರ ಒಂದೇ ಒಂದು ಕೊಡುಗೆ ಏನಾದರೂ ಇದ್ದರೆ ರಾಜ್ಯದ ಜನರ ಮುಂದಿಡಲಿ ಎಂದು ಬಿಜೆಪಿ ಸವಾಲು ಹಾಕಿದೆ.

'ನಾಲ್ಕು ದಶಕಗಳಲ್ಲಿ ಇವರು ಮಾಡಿದ ಪ್ರಮುಖ ಸಾಧನೆ ಎಂದರೆ, ಬಂಡೆ ನುಂಗೋದು, ಗುಡ್ಡೆ ನುಂಗೋದು ಮತ್ತು ಗೋಮಾಳ ನುಂಗೋದು' ಎಂದು ಬಿಜೆಪಿ ರಾಜ್ಯ ಘಟಕದ ಮುಖ್ಯ ವಕ್ತಾರ ಎಂ.ಜಿ.ಮಹೇಶ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

'ಸುಪ್ರೀಂಕೋರ್ಟ್ ಒಪ್ಪಿಗೆ ಸಿಕ್ಕಿದ ತಕ್ಷಣ ಮೇಕೆದಾಟು ಯೋಜನೆ ಆರಂಭಿಸಲು ನಮ್ಮ ಸರ್ಕಾರ ಒಂದು ಕ್ಷಣ ಕೂಡಾ ವಿಳಂಬ ಮಾಡುವುದಿಲ್ಲ. ಆದರೆ, ನಿಜಲಿಂಗಪ್ಪ ಅವರ ಕಾಲದಲ್ಲಿ ರೂಪುಗೊಂಡ ಈ ಯೋಜನೆ ಇಷ್ಟು ತಡವಾಗಿದ್ದು ಏಕೆ ಎಂಬುದಕ್ಕೆ ಶಿವಕುಮಾರ್ ಉತ್ತರ ನೀಡಬೇಕು. ಕಾಂಗ್ರೆಸ್ ನಾಟಕವನ್ನು ಜನ ನೋಡಿದ್ದಾರೆ. ಈ ಯೋಜನೆಯನ್ನು ಬಿಜೆಪಿಯೇ ಪೂರ್ಣಗೊಳಿಸಲಿದೆ' ಎಂದು ಹೇಳಿದರು.

## ಕಲಬುರಗಿ: ಪ್ರಾಂತ ಪ್ರಮುಖರ ಬೈಠಕ್

**ಕಲಬುರಗಿ:** ಆರ್‌ಎಸ್‌ಎಸ್ ಮುಖಂಡ ಮೋಹನ ಭಾಗವತ್ ಅವರು, ನಗರದಲ್ಲಿ ಮೂರು ದಿನಗಳ ಕಾಲ ಆಯೋಜಿಸಿರುವ ಬೈಠಕ್, ಸಂವಾದ ಹಾಗೂ ಹಿರಿಯರೊಂದಿಗೆ ಚರ್ಚೆ ಕಾರ್ಯಕ್ರಮಗಳಿಗೆ ಮಂಗಳವಾರ ಚಾಲನೆ ನೀಡಿದರು.

ಇಲ್ಲಿನ ಹೊಸ ಜೇವರ್ಗಿ ರಸ್ತೆಯಲ್ಲಿರುವ ಖಮಿತಕರ್ ಭವನದಲ್ಲಿ ಆಯೋಜಿಸಿದ್ದ ಮೊದಲ ದಿನದ ಬೈಠಕ್‌ನಲ್ಲಿ ಅವರು ಪಾಲ್ಗೊಂಡರು. ಪ್ರಾಂತ ವ್ಯಾಪ್ತಿಗೆ ಸೇರಿದ ಉತ್ತರ ಕರ್ನಾಟಕದ 17 ಜಿಲ್ಲೆಗಳ ಆಯ್ದ ಪ್ರಮುಖರನ್ನು ಮಾತ್ರ ಈ ಬೈಠಕ್‌ಗೆ ಆಹ್ವಾನಿಸಲಾಗಿದೆ. ಆರ್‌ಎಸ್‌ಎಸ್‌ನ ಪ್ರಾಂತ ಪ್ರಮುಖ ಪಿ.ಖಗೇಶನ್, ಜಿಲ್ಲಾ ಪ್ರಮುಖ ಅಶೋಕ ಪಾಟೀಲ, ಪ್ರಾಂತ ಬೌದ್ಧಿಕ ಪ್ರಮುಖ ಕೃಷ್ಣ ಜೋಶಿ, ಉತ್ತರ ಪ್ರಾಂತದ ಸಮರಸ ಪ್ರಮುಖ ಸುಭಾಷ ಕಾಂಬಳೆ ಸೇರಿದಂತೆ ಹಲವು ಮುಖಂಡರೂ ಈ ಬೈಠಕ್‌ನಲ್ಲಿ ಭಾಗವಹಿಸಿದ್ದಾರೆ.

ಜ. 12ರಂದು (ಬುಧವಾರ) ಬೆಳಿಗ್ಗೆ 11ಕ್ಕೆ ಭಾಗವತ್ ಅವರು ಗಣ್ಯರೊಂದಿಗೆ ಸಂವಾದ ನಡೆಸಲಿದ್ದಾರೆ. ಜ. 13ರಂದು ಆಯೋಜಿಸಿದ್ದ ಬಹಿರಂಗ ಸಮಾವೇಶವನ್ನು ಕೋವಿಡ್ ಮಾರ್ಗಸೂಚಿಯ ಕಾರಣ ಕೈಬಿಡಲಾಗಿದೆ. ಅಂದು ಆನ್‌ಲೈನ್ ಮೂಲಕ ಭಾಗವತ್ ಅವರು ಮಾತನಾಡಲಿದ್ದಾರೆ ಎಂದು ಆರ್‌ಎಸ್‌ಎಸ್ ಪ್ರಮುಖರು ತಿಳಿಸಿದ್ದಾರೆ.

# 'ಸಾಕ್ಷ್ಯ ಕೊಡಿ, ಇಲ್ಲವೇ ಕ್ಷಮೆ ಯಾಚಿಸಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೋವಿಡ್ ಪ್ರಕರಣಗಳ ಸಂಖ್ಯೆಯನ್ನು ಹೆಚ್ಚಾಗಿ ತೋರಿಸಿ ಸರ್ಕಾರ ಹಣ ಸಂಪಾದಿಸುತ್ತಿದೆ ಎಂಬ ಆರೋಪಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಾಕ್ಷ್ಯ ಒದಗಿಸಬೇಕು. ಇಲ್ಲದಿದ್ದಲ್ಲಿ ಬಹಿರಂಗ ಕ್ಷಮೆ ಯಾಚಿಸಬೇಕು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸವಾಲು ಹಾಕಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಕೋವಿಡ್ ನಿಯಂತ್ರಣ ಮತ್ತು ಪರೀಕ್ಷೆಯಲ್ಲಿ ತಪ್ಪು ಕಂಡುಬಂದಿದ್ದರೆ ಅವರು ಸರ್ಕಾರಕ್ಕೆ ದೂರು ನೀಡಬೇಕಿತ್ತು. ರಾಜಕೀಯ ಲಾಭಕ್ಕಾಗಿ ತಪ್ಪು ಸಂದೇಶ ನೀಡಿ, ವದಂತಿ ಹಬ್ಬಿಸಿದ್ದಾರೆ. ಸುಳ್ಳು ಆರೋಪಕ್ಕೆ ಸಾಕ್ಷ್ಯ ಕೊಡದಿದ್ದರೆ ಅಥವಾ ಕ್ಷಮೆ ಯಾಚಿಸದಿದ್ದರೆ ಶಿವಕುಮಾರ್ ವಿರುದ್ಧ ಕಾನೂನು ಕ್ರಮ ಜರುಗಿಸುತ್ತೇವೆ' ಎಂದರು.

ತಮಗೆ ಕೋವಿಡ್ ಸೋಂಕು ತಗುಲಿಸಲು ಸರ್ಕಾರ ಯತ್ನಿಸಿತ್ತು ಎಂದು ಅವರು ಆರೋಪಿಸಿದ್ದಾರೆ. ವಿಮಾನ ನಿಲ್ದಾಣಕ್ಕೆ ಬರುವ ಅಂತರರಾಷ್ಟ್ರೀಯ ಪ್ರಯಾಣಿಕರನ್ನು ಹಿಡಿದು ಕೋವಿಡ್ ದೃಢಪಟ್ಟಿದೆ ಎಂದು ಬಿಂಬಿಸಲಾಗುತ್ತಿದೆ ಎಂದಿದ್ದಾರೆ. ಈ ರೀತಿಯ ಆಧಾರರಹಿತ ಆರೋಪಗಳನ್ನು ಮಾಡಿ, ವದಂತಿ ಹಬ್ಬಿಸುವವರ ವಿರುದ್ಧ ಕಾನೂನಿನ ರೀತಿಯಲ್ಲೇ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

'ಶಿವಕುಮಾರ್ ಅವರು ನನ್ನನ್ನು ಮತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ವೈಯಕ್ತಿಕವಾಗಿ ನಿಂದಿಸಿದ್ದಾರೆ. ಅದನ್ನು ರಾಜಕೀಯವಾಗಿಯೇ ನಾವು ಎದುರಿಸುತ್ತೇವೆ. ಆದರೆ, ಕೋವಿಡ್ ನಿಯಂತ್ರಣ ಮತ್ತು ಪರೀಕ್ಷೆ ಕುರಿತು ಸುಳ್ಳು ಆರೋಪ ಮಾಡುವ ಮೂಲಕ ಆರೋಗ್ಯ ವ್ಯವಸ್ಥೆಯ ಬಗ್ಗೆ ವದಂತಿ ಹಬ್ಬಿಸಿದ್ದಾರೆ. ಸರ್ಕಾರಿ ನೌಕರರ ಕರ್ತವ್ಯಕ್ಕೂ ಅಡ್ಡಿಪಡಿಸಿದ್ದಾರೆ. ಇವುಗಳನ್ನು ಕಾನೂನಿನ ಮೂಲಕ ಎದುರಿಸಲಾಗುವುದು' ಎಂದರು.

ಕೆಪಿಸಿಸಿ ಅಧ್ಯಕ್ಷರ ವಿರುದ್ಧ ಸಾಂಕ್ರಾಮಿಕ ಕಾಯಿಲೆಗಳ ಕಾಯ್ದೆ–1897, ಸಾಂಕ್ರಾಮಿಕ ಕಾಯಿಲೆಗಳ ಕಾಯ್ದೆ–2020 ಮತ್ತು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲು ಅವಕಾಶವಿದೆ. ಆರೋಪ ಮಾಡಿರುವವರು ತಕ್ಷಣವೇ ಸಾಕ್ಷ್ಯಗಳ ಸಮೇತ ಸ್ಪಷ್ಟನೆ ನೀಡಬೇಕು. ಇಲ್ಲವಾದರೆ ಕಾನೂನು ಕ್ರಮ ನಿಶ್ಚಿತ ಎಂದು ಆರೋಗ್ಯ ಸಚಿವರು ಹೇಳಿದರು.

# ಮೈಸೂರಿಗರ ಜೊತೆ ಸಿದ್ದರಾಮಯ್ಯ ಹೆಜ್ಜೆ

ಒಂದನೇ ಪುಟದಿಂದ

ಅದಾಗಲೇ ಸೂರ್ಯ ನೆತ್ತಿ ಮೇಲೆ ಬಂದಿದ್ದು, ಕನಕಪುರ ಹೊರವಲಯದಿಂದ ಇಬ್ಬರೂ ಬೆವರು ಒರೆಸಿಕೊಳ್ಳುತ್ತಲೇ ಹೆಜ್ಜೆ ಹಾಕಿದರು. ಪಾದಯಾತ್ರೆ ವೇಳೆ ಕಾರ್ಯಕರ್ತರ ನೂಗುನುಗ್ಗಲು ಏರ್ಪಟ್ಟಿದ್ದು, ಸಂಸದ ಡಿ.ಕೆ. ಸುರೇಶ್ ತಾವೇ ದಾರಿ ಮಾಡಿ ಕೊಡಲು ಮುಂದಾದರು. ಈ ವೇಳೆ ಯುವ ಕಾಂಗ್ರೆಸ್ ಮುಖಂಡ ಮೊಹಮ್ಮದ್ ನಲಪಾಡ್ ಅಡ್ಡ ಬಂದರು. ಇದರಿಂದ ಸಿಟ್ಟಿಗೆದ್ದ ಸುರೇಶ್ ಅವರ ಕತ್ತಿನ ಪಟ್ಟಿ ಎಳೆದು ಪಕ್ಕಕ್ಕೆ ಸರಿಸಿ, ಅಡ್ಡ ಬರಬೇಡ ಎಂಬ ಎಚ್ಚರಿಕೆಯನ್ನೂ ನೀಡಿದರು.

ಮಂಗಳವಾರ ಹಿಂದಿನ ದಿನಕ್ಕಿಂತ ಹೆಚ್ಚು ಸಂಖ್ಯೆಯ ಜನರು ಸೇರಿದ್ದರು. ಕನಕಪುರ ವೃತ್ತದಲ್ಲಿ ಜನಸಾಗರವೇ ನೆರೆದಿದ್ದು, ನಾಯಕರಿಗೆ ಕ್ರೇನ್ ಮೂಲಕ ಸೇಬಿನ ಹಾರ ಹಾಕಲು ಪೈಪೋಟಿ ನಡೆಯಿತು. ಮಧ್ಯಾಹ್ನ 3ರ ಸುಮಾರಿಗೆ 8 ಕಿ.ಮೀ. ದೂರ ಕ್ರಮಿಸಿ ಗಾಣಾಳು ಗ್ರಾಮಕ್ಕೆ ಬಂದ ಸಿದ್ದರಾಮಯ್ಯ, ಡಿಕೆಶಿ ಅಲ್ಲಿ ಮುದ್ದೆ ಸವಿದು ಕೆಲ ಕಾಲ ನಿದ್ದೆಯ ಮೊರೆ ಹೋದರು. ಕನಕಪುರ ತಾಲ್ಲೂಕಿನ ಗಡಿಗ್ರಾಮ ಚಿಕ್ಕೇನಹಳ್ಳಿಯಲ್ಲಿ ದಿನದ ಪಾದಯಾತ್ರೆ ಮುಕ್ತಾಯ ಆಗುವ ಹೊತ್ತಿಗೆ ರಾತ್ರಿ 10 ಆಗಿತ್ತು. ದಣಿದು ಬಂದ ಸಾವಿರಾರು ಮಂದಿಗೆ ಬಾಡೂಟದ ವ್ಯವಸ್ಥೆ ಮಾಡಲಾಗಿತ್ತು.

ಬುಧವಾರ ಇಲ್ಲಿಂದ ರಾಮನಗರ ಪಟ್ಟಣದವರೆಗೆ ಪಾದಯಾತ್ರೆ ಮುಂದುವರಿಯಲಿದೆ.

ಮೈಸೂರು ಭಾಗದ ಕಾಂಗ್ರೆಸ್ ಶಾಸಕರು, ಮುಖಂಡರು ಪಾದಯಾತ್ರೆಗೆ ಸಾಥ್ ನೀಡಿದರು. ಕಿಕ್ಕಿರಿದ ಜನರ ನಡುವೆ ಕೋವಿಡ್ ನಿಯಮ ಪಾಲನೆ ಮರೀಚಿಕೆಯಾಗಿಯೇ ಉಳಿದು ಹೋಯಿತು. ಕಾರ್ಯಕರ್ತರು ಪಾದ ಯಾತ್ರೆಗೆ ಜೋಡೆತ್ತು, ಮೇಕೆಯನ್ನೂ ಕರೆತಂದಿದ್ದರು. ಪಾದಯಾತ್ರೆಯಲ್ಲಿ ಶಾಲೆ–ಕಾಲೇಜು ವಿದ್ಯಾರ್ಥಿಗಳೂ ಕಾಣಿಸಿಕೊಂಡಿದ್ದು, ಡಿಕೆಶಿ ಜೊತೆ ಸೆಲ್ಫಿ ತೆಗೆಸಿಕೊಂಡರು. ಕನಕಪುರ–ರಾಮನಗರ ರಸ್ತೆಯಲ್ಲಿ ಸಂಚಾರ ಅಸ್ತವ್ಯಸ್ತ ಆಗಿತ್ತು.

ಸಮಾಲೋಚನಾ ಸಭೆಯಲ್ಲಿ ಅಳಲು ತೋಡಿಕೊಂಡ ದೇವದಾಸಿ ಕುಟುಂಬದ ಯುವತಿ

# ತಂದೆಯ ಹೆಸರು ಏನೆಂದು ಬರೆಯಲಿ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸರ್ಕಾರದ ಸವಲತ್ತು ಪಡೆಯಲು ತಂದೆಯ ಹೆಸರು ಕಡ್ಡಾಯ. ಯಾರದೋ ಒಂದು ಹೆಸರು ಬರೆಯಿರಿ ಎಂದರೆ ನಾವು ಯಾರ ಹೆಸರು ಬರೆಯಬೇಕು....' ದೇವದಾಸಿ ಕುಟುಂಬದ ಯುವತಿಯೊಬ್ಬಳು ಗದ್ಗದಿತರಾಗಿ ಪ್ರಶ್ನಿಸಿದ ಪರಿ ಇದು.

ದೇವದಾಸಿ ತಾಯಂದಿರು ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿ ಮತ್ತು ಉದ್ದೇಶಿತ ಕರ್ನಾಟಕ ದೇವದಾಸಿ ಪದ್ಧತಿ (ತಡೆ, ನಿಷೇಧ, ಪರಿಹಾರ ಮತ್ತು ಪುನರ್ವಸತಿ) ಮಸೂದೆ ಕುರಿತು ಚರ್ಚಿಸಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ವಿಮುಕ್ತ ದೇವದಾಸಿ ಮಹಿಳೆಯರ ಮತ್ತು ಮಕ್ಕಳ ವೇದಿಕೆ ಮತ್ತು ಚಿಲ್ಡ್ರನ್ ಆಫ್ ಇಂಡಿಯಾ ಫೌಂಡೇಷನ್ ವತಿಯಿಂದ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಸಮಾಲೋಚನಾ ಸಭೆಯಲ್ಲಿ ಕೊಪ್ಪಳದ ಯುವತಿಯೊಬ್ಬರು ಕೇಳಿದ ಈ ಪ್ರಶ್ನೆ ಒಮ್ಮೆಲೆ ನೀರವ ವಾತಾವರಣ ಸೃಷ್ಟಿಸಿತು.

'ತಲೆಮಾರುಗಳಿಂದ ದೇವದಾಸಿ ಪದ್ಧತಿಯಲ್ಲಿ ಸಿಲುಕಿರುವ ಕುಟುಂಬದ ಹೆಣ್ಣು ಮಗು ನಾನು. ಈ ಪದ್ಧತಿಯನ್ನು ವಿರೋಧಿಸಿ ವಿದ್ಯಾಭ್ಯಾಸ ಪಡೆದಿದ್ದೇನೆ. ಯಾವುದೇ ಸವಲತ್ತಿಗೆ ಅರ್ಜಿ ಸಲ್ಲಿಸುವಾಗ ತಂದೆಯ ಹೆಸರು ದಾಖಲಿಸಲೇಬೇಕು. ತಂದೆಯ ಹೆಸರು ಗೊತ್ತಿಲ್ಲ ಎಂದರೆ, ಮುಖವನ್ನೊಮ್ಮೆ ನೋಡಿ ಯಾವುದೋ ಒಂದು ಹೆಸರು ಬರೆಯಮ್ಮ ಎಂದು ಅಧಿಕಾರಿಗಳು ಹೇಳುತ್ತಾರೆ. ಇದು ತೀರಾ ಮುಜುಗರ ಉಂಟು ಮಾಡುತ್ತದೆ. ಇದೇ ಕಾರಣಕ್ಕೆ ಎಷ್ಟೋ ಹೆಣ್ಣು ಮಕ್ಕಳು ತಮ್ಮ ಶಿಕ್ಷಣವನ್ನೇ ಮೊಟಕುಗೊಳಿಸಿದ್ದಾರೆ. ಸೌಲಭ್ಯ ಪಡೆಯುವುದಕ್ಕು ಹಿಂಜರಿಯುತ್ತಾರೆ' ಎಂದು ಪರಿಸ್ಥಿತಿ ವಿವರಿಸಿದರು.



ಸಮಾಲೋಚನಾ ಸಭೆಯಲ್ಲಿ ಚಿಲ್ಡ್ರನ್ ಆಫ್ ಇಂಡಿಯಾ ಫೌಂಡೇಷನ್‌ನ ಡಾ.ಎನ್.ವಿ. ವಾಸುದೇವ ಶರ್ಮಾ, ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರಶೆಟ್ಟಿ, ಪ್ರೊ. ಎಸ್.ಜಾಫೆಟ್ ಅವರು ದೇವದಾಸಿ ತಾಯಂದಿರು ಮತ್ತು ಮಕ್ಕಳ ಜತೆ ಸಮಾಲೋಚನೆ ನಡೆಸಿದರು –ಪ್ರಜಾವಾಣಿ ಚಿತ್ರ

'ದೇವದಾಸಿ ಪದ್ಧತಿ ನಿಷೇಧ ಕಾಯ್ದೆ 1982ರಲ್ಲಿ ಜಾರಿಗೆ ಬಂದರೂ ಇಂದಿಗೂ ಈ ಸಂಪ್ರದಾಯ ಜೀವಂತವಾಗಿದೆ. 90ರ ದಶಕದಲ್ಲಿ ಸರ್ಕಾರ ನಡೆಸಿದ ದೇವದಾಸಿ ಸಮೀಕ್ಷೆಯಲ್ಲಿ ಹೆಸರಿಲ್ಲದೇ ಇರುವುದರಿಂದ ಮಾಸಾಶನ ಸಿಕ್ಕಿಲ್ಲ. ಮಕ್ಕಳನ್ನು ನೋಡಿಕೊಳ್ಳಲು ಸಾರ್ವಜನಿಕ ಸ್ಥಳಗಳಲ್ಲಿ ಕಸ ಆಯುವ ಸ್ಥಿತಿ ನಮ್ಮದು' ಎಂದು ದಾವಣಗೆರೆಯ ಮಹಿಳೆಯೊಬ್ಬರು ಅಳಲು ತೋಡಿಕೊಂಡರು.

ಬೆಳಗಾವಿ, ಬಾಗಲಕೋಟೆ, ವಿಜಯಪುರ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯಪುರ, ದಾವಣಗೆರೆ ಮತ್ತು ವಿಜಯನಗರ ಜಿಲ್ಲೆಗಳಿಂದ ಬಂದಿದ್ದ ದೇವದಾಸಿಯರು ಹಾಗೂ ಅವರ ಮಕ್ಕಳು ಅವಮಾನದ ಕಥೆಗಳನ್ನು ಬಿಚ್ಚಿಟ್ಟರು.

ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್.ಶಶಿಧರಶೆಟ್ಟಿ, 'ದೇವದಾಸಿ ಕುಟುಂಬಗಳಿಗೆ ಆಗಿರುವ ಅನ್ಯಾಯ ಸರಿಪಡಿಸಲು ಸರ್ಕಾರಕ್ಕೆ ಒತ್ತಡ ಹೇರಬೇಕು. ಸರ್ಕಾರ ಜಗ್ಗದಿದ್ದರೆ ಕಾನೂನು ಹೋರಾಟ ನಡೆಸಬೇಕು. ಅದಕ್ಕೆ ಬೇಕಿರುವ ನೆರವನ್ನು ಪ್ರಾಧಿಕಾರ ಒದಗಿಸಲಿದೆ' ಎಂದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಎಸ್. ಜಾಫೆಟ್ ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕಿ ಇಂದಿರಾ ಅವರಿಗೆ ಸಂತ್ರಸ್ತರು ಬೇಡಿಕೆಗಳ ಮನವಿಯನ್ನು ಸಲ್ಲಿಸಿದರು.

### ಬೇಡಿಕೆಗಳು...

- ದೇವದಾಸಿ ತಾಯಂದಿರು ಮತ್ತು ಅವರ ಮಕ್ಕಳ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪಿಸಬೇಕು.
- ದೇವದಾಸಿ ಕುಟುಂಬಗಳ ಸಮಗ್ರ ಅಭಿವೃದ್ಧಿಗೆ 2018ರಲ್ಲಿ ರೂಪಿಸಿರುವ ಮಸೂದೆಯನ್ನು ಅಂಗೀಕರಿಸಬೇಕು.
- ದೇವದಾಸಿ ಕುಟುಂಬಗಳ ಸಮಗ್ರ ಸಮೀಕ್ಷೆ ನಡೆಸಬೇಕು. ದೇವದಾಸಿ ಕುಟುಂಬಗಳ ಪಟ್ಟಿಯಿಂದ ಕೈಬಿಟ್ಟಿರುವ ಮಹಿಳೆಯರ ಸೇರ್ಪಡೆಗಾಗಿ ಹೊಸ ಸರ್ವೆ ನಡೆಸಬೇಕು.
- 9 ತಿಂಗಳಿಂದ ಬಾಕಿ ಇರುವ ಮಾಸಾಶನ ಬಿಡುಗಡೆ ಮಾಡಬೇಕು. ದೇವದಾಸಿ ಮಕ್ಕಳಿಗೆ ವಿಶೇಷ ವಿದ್ಯಾರ್ಥಿವೇತನ ನೀಡಬೇಕು.
- ದೇವದಾಸಿ ಮಕ್ಕಳ ಮದುವೆಗೆ ನೀಡುವ ಪ್ರೋತ್ಸಾಹಧನ ಒಂದು ವರ್ಷದಿಂದ ಬಿಡುಗಡೆಯಾಗಿಲ್ಲ. ಇದನ್ನು ಕೂಡಲೇ ಬಿಡುಗಡೆ ಮಾಡಬೇಕು. ದೇವದಾಸಿ ಕುಟುಂಬಗಳ ಸದಸ್ಯರ ನಡುವೆಯೇ ಮದುವೆ ನಡೆದರೂ ಪ್ರೋತ್ಸಾಹಧನ ನೀಡಬೇಕು.

### ಉದ್ಯೋಗ ನೀಡಲು ₹40 ಲಕ್ಷ ಲಂಚ!

'ಈ ಎಲ್ಲಾ ಸವಾಲುಗಳನ್ನು ಮೆಟ್ಟಿನಿಂತು ಉನ್ನತ ವಿದ್ಯಾಭ್ಯಾಸ ಪಡೆದವರೂ ಉದ್ಯೋಗ ಪಡೆಯಲು ಲಂಚ ಕೊಡಲೇಬೇಕು. ಸರ್ಕಾರಿ ಉದ್ಯೋಗವೊಂದಕ್ಕೆ ₹40 ಲಕ್ಷ ಲಂಚ ಕೇಳಿದರು. ₹40 ಕೊಡಲೂ ಸಾಧ್ಯವಾಗದ ಸ್ಥಿತಿ ನಮ್ಮದು. ಸವಲತ್ತು ಕೇಳಿಕೊಂಡು ಹೋದಾಗ ನಮ್ಮನ್ನು ನೋಡುವ ರೀತಿಯೇ ಬೇರೆ' ಎಂದು ಹೇಳುತ್ತಾ ದೇವದಾಸಿಯೊಬ್ಬರ ಮಗಳು ಕಣ್ಣೀರಿಟ್ಟಾಗ ಬಹುತೇಕ ಸಭಿಕರ ಕಣ್ಣಾಲಿಗಳು ತುಂಬಿಕೊಂಡವು.

**CIPET: School for Advanced Research in Petrochemicals (SARP)-APDDRL**
**Central Institute of Petrochemicals Engineering & Technology (CIPET)**
CIPET सिपेट · Azadi Ka Amrit Mahotsav · sabic
(Department of Chemicals and Petrochemicals Ministry of Chemicals and Fertilisers, Govt. of India)
Plot No. 7P, Hi-tech Defense and Aerospace Park, Jalahobli, Devanahalli, Bengaluru North-562149
E-mail: apddrlbengaluru@gmail.com / apddrl@cipet.gov.in; Website: www.cipet.gov.in

**Applications for Job Oriented Skill Training (Free of cost)**

CIPET:SARP-APDDRL, Bengaluru, invites application for the following job assured free skill development training program sponsored by M/s SABIC India Private Limited, Gurugram under Corporate Social Responsibility (CSR) initiative.

| Program Name | Total No. of seats available | Training Duration | Minimum Qualification |
|---|---|---|---|
| Machine Operator – Injection Moulding | 25 (Boys & Girls) | 960 Hours (6 Months) | 8th Pass |

**Training Fee, Study Material, Uniform, Food & Accommodation are free of cost**

**Date of counselling:** 17-01-2022 to 22-01-2022 **Program Starting date:** 01-02-2022
**Age:** Minimum 18 years & Maximum 28 years (relaxable by 5 years for SC/ST and 3 years for OBC participants)
**Job Opportunity:** On successful completion of training CIPET will arrange job in plastic industry with good salary.
Interested Candidates to join the training program and get immediate job opportunity may come directly at above mentioned address with the following certificates (originals and Xerox copies)
1. Mark Sheet (8th / 10th) ; 2. Transfer Certificate (TC); 3. Community Certificate; 4. Income Certificate; 5. Aadhar Card; 6. Passport Size Photo (5 Nos.)
Those who are unable to come directly, please send the application with details (Name, Father / Mother Name, Date of Birth, Sex, category, Present address, Mobile Number, Email ID, Aadhar Number with Copies of all mark sheet / Certificates) through email / post.
Senior Scientist & Head


**For any assistance / more information please contact: 88676 86766, 97398 60972, 76663 55661**

# ಸಿದ್ದೇಶ್ವರ ಸ್ವಾಮೀಜಿಗೆ ಚಿಕಿತ್ಸೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ಚಿಕ್ಕೋಡಿ ತಾಲ್ಲೂಕಿನ ಬಸವನಾಳಗಡ್ಡೆಯ ಭಕ್ತರೊಬ್ಬರ ತೋಟದ ಮನೆಯಲ್ಲಿ ಸೋಮವಾರ ಆಕಸ್ಮಿಕವಾಗಿ ಬಿದ್ದು ಗಾಯಗೊಂಡಿರುವ ವಿಜಯಪುರ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಅವರಿಗೆ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯಲ್ಲಿರುವ ಕನ್ಹೇರಿ ಮಠದ ಸಿದ್ಧಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

‘ಶ್ರೀಗಳ ಬಲಭುಜ ಹಾಗೂ ತೊಡೆಯ ಮೇಲ್ಭಾಗದ ಮೂಳೆ ಮುರಿದಿದ್ದು, ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಸಣ್ಣ ಪ್ರಮಾಣದ ಶಸ್ತ್ರಚಿಕಿತ್ಸೆ ಅಗತ್ಯವಿದೆ ಎಂದು ವೈದ್ಯರು ತಿಳಿಸಿದ್ದಾರೆ. ಆದರೆ, ಶ್ರೀಗಳು ಅದಕ್ಕೆ ಸಮ್ಮತಿಸಿಲ್ಲ. ಲವಲವಿಕೆಯಿಂದ ಇದ್ದೇನೆ; ಶಸ್ತ್ರಚಿಕಿತ್ಸೆ ಮಾಡದೆಯೂ ಗುಣಪಡಿಸುವ ಮಾರ್ಗ ತಿಳಿಸಿ ಎಂದು ವೈದ್ಯರಿಗೆ ಹೇಳಿದ್ದಾರೆ.


ಸಿದ್ದೇಶ್ವರ ಸ್ವಾಮೀಜಿ

ವೈದ್ಯರು ಅವರ ಮನವೊಲಿಕೆಗೆ ಯತ್ನಿಸುತ್ತಿದ್ದಾರೆ’ ಎಂದು ಮೂಲಗಳು ಮಾಹಿತಿ ನೀಡಿವೆ.

ಪೂಜಾ ಕೈಂಕರ್ಯದಲ್ಲಿ ಎಂದಿನಂತೆ ತೊಡಗಿದ್ದಾರೆ. ಆಹಾರ ಸೇವನೆ ಮಾಡುತ್ತಿದ್ದಾರೆ. ಚೇತರಿಸಿಕೊಳ್ಳುತ್ತಿದ್ದಾರೆ. ಇನ್ನೂ ಕೆಲವು ದಿನಗಳವರೆಗೆ ಅವರು ಆಸ್ಪತ್ರೆಯಲ್ಲೇ ಇರಬೇಕಾಗುತ್ತದೆ ಎಂದು ತಿಳಿದುಬಂದಿದೆ.

ಶ್ರೀಗಳು ಶೀಘ್ರವಾಗಿ ಗುಣಮುಖರಾಗಲೆಂದು ಪ್ರಾರ್ಥಿಸಿ ಭಕ್ತರು, ಜನಪ್ರತಿನಿಧಿಗಳು, ರಾಜಕಾರಣಿಗಳು, ಅನುಯಾಯಿಗಳು ಟ್ವೀಟ್‌ಗಳನ್ನು ಮಾಡಿದ್ದಾರೆ.

**ಮುಖ್ಯಮಂತ್ರಿ ಟ್ವೀಟ್:** ‘ಆಧ್ಯಾತ್ಮಿಕ ಗುರುಗಳಾದ ಸಿದ್ದೇಶ್ವರ ಸ್ವಾಮೀಜಿ ಆಕಸ್ಮಿಕವಾಗಿ ಆಯತಪ್ಪಿ ಬಿದ್ದು ಗಾಯಗೊಂಡಿರುವ ಸುದ್ದಿ ತಿಳಿದು ತೀವ್ರ ಆಘಾತಕ್ಕೆ ಒಳಗಾಗಿದ್ದೇನೆ. ಶ್ರೀಗಳೊಂದಿಗೆ ದೂರವಾಣಿ ಕರೆ ಮಾಡಿ ಮಾತನಾಡಿ ಅವರ ಆರೋಗ್ಯದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೇನೆ. ಅವರು ಶೀಘ್ರ ಗುಣಮುಖರಾಗಲೆಂದು ಪ್ರಾರ್ಥಿಸುತ್ತೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟ್ವೀಟ್ ಮಾಡಿದ್ದಾರೆ.

# ಎರಡೇ ದಿನಗಳಲ್ಲಿ ಪಾದಯಾತ್ರಿಗಳ ಮೂತಿ ಒಣಗಿ ಹೋಗಿವೆ: ಯತ್ನಾಳ್

ಪ್ರಜಾವಾಣಿ ವಾರ್ತೆ

**ಕೆರೂರ (ವಿಜಯಪುರ ಜಿಲ್ಲೆ):** ‘ಮೇಕೆದಾಟು ಯೋಜನೆಗೆ ಆಗ್ರಹಿಸಿ ನಡೆಸುತ್ತಿರುವ ಕಾಂಗ್ರೆಸ್‌ನ ಪಾದಯಾತ್ರಿಗಳ ಮುಖ ಎರಡೇ ದಿನಕ್ಕೆ ಒಣಗಿ ಹೋಗಿವೆ. ಅವರೆಲ್ಲ ಅಭಿವೃದ್ಧಿ ನೆಪದಲ್ಲಿ ಮೋಜು ಮಸ್ತಿಗಾಗಿ ಮಾತ್ರ ಯಾತ್ರೆ ಹಮ್ಮಿಕೊಂಡಿದ್ದಾರೆ’ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರು ಟೀಕಿಸಿದರು.

ಅವರು ಕೆರೂರ ಪಟ್ಟಣದಲ್ಲಿ ಸೋಮವಾರ ರಾತ್ರಿ ಸಿದ್ಧಶ್ರೀ ಸೌಹಾರ್ದ ಬ್ಯಾಂಕ್ ನೂತನ ಶಾಖೆ ಉದ್ಘಾಟಿಸಿ ಮಾತನಾಡಿದ ಅವರು, ‘ಪಾದಯಾತ್ರೆಯ ದಾರಿಯುದ್ದಕ್ಕೂ ಕಬಾಬ್, ಮೋಜು ಮಸ್ತಿಗೆ ಎಲ್ಲ ಸಿದ್ಧತೆಗಳಾಗಿವೆ. ಇನ್ನೂ ಎಂಟು ದಿನದಲ್ಲಿ ಅವರಿಗೆ ಏನೇನು ಆರೋಗ್ಯ ಸಮಸ್ಯೆಗಳಾಗುತ್ತವೆಯೋ ಗೊತ್ತಿಲ್ಲ’ ಎಂದು ಲೇವಡಿ ಮಾಡಿದರು.

‘ಈ ಹಿಂದೆ ಕೇಂದ್ರದಲ್ಲಿ, ರಾಜ್ಯದಲ್ಲಿ ಅವರದೇ ಸರ್ಕಾರವಿದ್ದರೂ ಮೇಕೆದಾಟು ಯೋಜನೆ ಕೈಗೆತ್ತಿಕೊಳ್ಳದ ಕಾಂಗ್ರೆಸ್, ಓಮೈಕ್ರಾನ್ ಹಾವಳಿಯ ಈ ಸಂಕಷ್ಟದ ಕಾಲದಲ್ಲಿ ಜಿದ್ದಿಗೆ ಬಿದ್ದು, ಜನರ ಆರೋಗ್ಯದೊಂದಿಗೆ ಚೆಲ್ಲಾಟವಾಡಿ ಯಾತ್ರೆ ನಡೆಸುವುದು ಅರ್ಥಹೀನ’ ಎಂದು ಅವರು ಟೀಕಿಸಿದರು.

‘ಸಂಕ್ರಾಂತಿ ಬಳಿಕ ಸಚಿವ ಸಂಪುಟಕ್ಕೆ ಮೇಜರ್ ಸರ್ಜರಿಯಾಗುವುದು ಗ್ಯಾರಂಟಿ. ನಾನೇನೂ ಯಾವ ಸ್ಥಾನಮಾನಕ್ಕಾಗಿ ಬೇಡಿಕೆ ಇಟ್ಟಿಲ್ಲ. ಪಕ್ಷದ ಹೈಕಮಾಂಡ್ ಹಾಗೂ ಸಿಎಂ ನಿರ್ಧಾರಕ್ಕೆ ಸದಾ ಬದ್ಧ’ ಎಂದು ತಿಳಿಸಿದರು.

## ಮುಷ್ಕರ ಕೈಬಿಟ್ಟು ಬೋಧನೆಗೆ ಮರಳಲು ಮನವಿ

# ‘ಅತಿಥಿ ಉಪನ್ಯಾಸಕರಿಗೆ ಶೀಘ್ರ ಸಿಹಿಸುದ್ದಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಅತಿಥಿ ಉಪನ್ಯಾಸಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ಸಂಬಂಧ ಮುಖ್ಯಮಂತ್ರಿ ಜೊತೆ ಈಗಾಗಲೇ ಹಲವು ಬಾರಿ ಚರ್ಚಿಸಿದ್ದು, ಒಂದೆರಡು ದಿನಗಳಲ್ಲಿ ಫಲಿತಾಂಶ ಹೊರಬೀಳಲಿದೆ. ಆದ್ದರಿಂದ, ಅತಿಥಿ ಉಪನ್ಯಾಸಕರು ಮುಷ್ಕರ ಕೈಬಿಟ್ಟು ಬೋಧನೆಗೆ ಹಿಂದಿರುಗಬೇಕು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮನವಿ ಮಾಡಿದರು.


ಅಶ್ವತ್ಥನಾರಾಯಣ

**ಮುಖ್ಯಾಂಶಗಳು**
- ಒಂದೆರಡು ದಿನಗಳಲ್ಲಿ ಫಲಿತಾಂಶ ಹೊರಬೀಳುವ ಸಾಧ್ಯತೆ
- ವಿಧಾನ ಪರಿಷತ್ ಸಭಾಪತಿ ನೇತೃತ್ವದಲ್ಲಿ ಮೂರು ತಾಸು ನಡೆದ ಸಭೆ
- ಮುಖ್ಯಮಂತ್ರಿ ಜೊತೆಗೆ ಚರ್ಚಿಸಿ ತೀರ್ಮಾನ ಪ್ರಕಟ

ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಕುರಿತು ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಚೇರಿಯಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ನೇತೃತ್ವದಲ್ಲಿ ಮಂಗಳವಾರ ನಡೆದ ಮೂರು ತಾಸುಗಳ ಸಭೆಯ ಬಳಿಕ ಅವರು ಈ ಭರವಸೆ ನೀಡಿದರು.

‘ಕೊರೊನಾ ಸೋಂಕು ಕಾಣಿಸಿಕೊಂಡ ಕಾರಣಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ಅವರು ಪ್ರತ್ಯೇಕವಾಸದಲ್ಲಿದ್ದಾರೆ. ಅವರ ಜತೆ ಮತ್ತೊಮ್ಮೆ ಚರ್ಚಿಸಿ ಅಂತಿಮ ತೀರ್ಮಾನ ಪ್ರಕಟಿಸಲಾಗುವುದು. ಅತಿಥಿ ಉಪನ್ಯಾಸಕರ ಸಮಸ್ಯೆ ಇತ್ಯರ್ಥದಲ್ಲಿ ಆರ್ಥಿಕ ಹೊರೆ ಮತ್ತಿತರ ಅಂಶಗಳಿವೆ. ಒಟ್ಟಿನಲ್ಲಿ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದು’ ಎಂದರು.

ವಿಧಾನ ಪರಿಷತ್ ಸದಸ್ಯರಾದ ಆಯನೂರು ಮಂಜುನಾಥ್, ಶಶಿಲ್ ನಮೋಶಿ, ಪುಟ್ಟಣ್ಣ, ಚಿದಾನಂದಗೌಡ, ಎಸ್.ವಿ. ಸಂಕನೂರು, ಅರುಣ್ ಶಹಾಪುರ, ವೈ.ಎ. ನಾರಾಯಣಸ್ವಾಮಿ, ಕೆ.ಟಿ. ಶ್ರೀಕಂಠೇಗೌಡ, ಭೋಜೇಗೌಡ, ಹಣಮಂತ ನಿರಾಣಿ, ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ. ಕುಮಾರ ನಾಯಕ್ ಮತ್ತು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್, ಉಪನ್ಯಾಸಕರಿಗೆ ಸಂಬಂಧಿಸಿದ 4–5 ಸಂಘಗಳ ಪ್ರತಿನಿಧಿಗಳು ಸಭೆಯಲ್ಲಿದ್ದರು.

## ಕೆ.ಎನ್. ಚನ್ನೇಗೌಡಗೆ ಕಸಾಪ ದತ್ತಿ ಪ್ರಶಸ್ತಿ



**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತು ನೀಡುವ ‘ನಾಗಡಿಕೆರೆ ಕಿಟ್ಟಪ್ಪಗೌಡ ರುಕ್ಮಿಣಿ ತೀರ್ಥಹಳ್ಳಿ ದತ್ತಿ ಪ್ರಶಸ್ತಿ’ಗೆ ‘ವಿಜಯವಾಣಿ’ ಸಂಪಾದಕ ಕೆ.ಎನ್. ಚನ್ನೇಗೌಡ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿಯು ಈ ಆಯ್ಕೆ ನಡೆಸಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ.ಕನ್ನಡ ಪತ್ರಿಕೋದ್ಯಮದಲ್ಲಿ ಗಣನೀಯ ಸೇವೆ ಸಲ್ಲಿಸಿದ ಪತ್ರಕರ್ತರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಕಳೆದ 25 ವರ್ಷಗಳಿಂದ ಚನ್ನೇಗೌಡ ಅವರು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ

# ಅಕಾಲಿಕ ಮಳೆ: ನೆಲಕ್ಕುರುಳಿದ ಬೆಳೆ

**ಚಿಂಚೋಳಿ (ಕಲಬುರಗಿ ಜಿಲ್ಲೆ):** ತಾಲ್ಲೂಕಿನ ವಿವಿಧೆಡೆ ಸೋಮವಾರ ತಡರಾತ್ರಿ ಬಿರುಗಾಳಿ ಸಹಿತ ಬಿರುಸಿನ ಮಳೆ ಸುರಿದಿದೆ. ಹೊಲದಲ್ಲಿ ಬೆಳೆದು ನಿಂತಿದ್ದ ಅಪಾರ ಪ್ರಮಾಣದ ಜೋಳದ ಬೆಳೆ ನೆಲಕಚ್ಚಿದೆ.

ರಾತ್ರಿ 11.45ರ ಸುಮಾರಿಗೆ ಏಕಾಏಕಿ ಆರಂಭವಾದ ಮಳೆ ಒಂದು ತಾಸಿನವರೆಗೂ ಸುರಿಯಿತು. ರಾಯಕೋಡ, ರುದ್ನೂರ, ಭೂತಪೂರ, ಚಿಂತಪಳ್ಳಿ, ಪೆಂಚನಪಳ್ಳಿ, ಕೊಡರಡಂಪಳ್ಳಿ, ಕೆರೋಳ್ಳಿ, ಕನಕಪುರ, ಇತರೆಡೆ ಮಳೆ ಸುರಿದಿದೆ.

‘ವಿವಿಧ ಗ್ರಾಮ ಹಾಗೂ ತಾಂಡಾಗಳ ರೈತರು ಕರೆ ಮಾಡಿ ಮಳೆಯಿಂದ ಜೋಳದ ಬೆಳೆ ಹಾಳಾಗಿರುವ ಕುರಿತು ತಿಳಿಸಿದ್ದಾರೆ.


ಚಿಂಚೋಳಿ ತಾಲ್ಲೂಕಿನ ಪೆಂಚನಪಳ್ಳಿ– ಕೊರಡಪಳ್ಳಿ ಮಧ್ಯೆ ಸೋಮವಾರ ರಾತ್ರಿ ಬಿರುಗಾಳಿ, ಮಳೆಯ ಕಾರಣ ಜೋಳದ ಬೆಳೆ ನೆಲಕ್ಕುರುಳಿದೆ

ಶೀಘ್ರ ಸಮೀಕ್ಷೆ ಆರಂಭಿಸಿ ವರದಿ ಸಲ್ಲಿಸುತ್ತೇವೆ’ ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಅನಿಲಕುಮಾರ ರಾಠೋಡ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ್ದಾರೆ.


ಕರ್ನಾಟಕ ಸರ್ಕಾರ
**ಕಾರ್ಯಪಾಲಕ ಇಂಜಿನೀಯರರವರ ಕಛೇರಿ**
**ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರಿ**
ಸಂಖ್ಯೆ:ಕಾಪಾಅ/ಪರಾಇಂ/ವಿಯಾ/ಟೆ.ಪ್ರ/ತಾಸಾ–3/5054ಮುಮವಿ/2021–22/1261 ದಿನಾಂಕ: 05.01.2022
**ಅಲ್ಪಾವಧಿ ಟೆಂಡರ ಪ್ರಕಟಣೆ “ಇ–ಪ್ರೊಕ್ಯೂರ್‌ಮೆಂಟ್” ಮೂಲಕ**
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರಿ ರವರಿಂದ KW-4 ದ್ವಿ ಲಕೋಟೆ ಪದ್ಧತಿ ನಿಬಂಧನೆಗೊಳಪಟ್ಟ ರಸ್ತೆ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಅಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : 1. ಯಾದಗಿರಿ ತಾಲೂಕಿನ ಅಬ್ಬೇತುಮಕೂರ ಗ್ರಾಮದ ಕ್ರಿಶ್ಚಿಯನ್ ಕಾಲೋನಿಯಿಂದ ಭೀಮಾ ನದಿಯವರೆಗೆ ರಸ್ತೆ ಸುಧಾರಣೆ Indent No. RDPR/2021-22/RD/WORK_INDENT87326, 2) ಟೆಂಡರಿಗಿಟ್ಟ ಮೊತ್ತ: ರೂ. 1,24,13,084=97, 3) ಲೆಕ್ಕ ಶಿರ್ಷಿಕೆ: 2021–22ನೇ ಸಾಲಿನ 5054 ಮುಖ್ಯಮಂತ್ರಿ ವಿಶೇಷ ಅಭಿವೃದ್ಧಿ ಯೋಜನೆ, 4) ಗುತ್ತಿಗೆದಾರರ, ಅರ್ಹತೆ : 1ನೇ ಹಾಗೂ ಮೇಲ್ಪಟ್ಟು ದರ್ಜೆ, 5) ಟೆಂಡರ ಫಾರಂ ಪಡೆಯುವ ದಿನಾಂಕ: 07–01–2022 ರಿಂದ 15–01–2022, 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ, 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 15–01–2022ಸಾಯಂಕಾಲ 4.30 ಗಂಟೆವರೆಗೆ, 8) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ: 17–01–2022 ಬೆಳಿಗ್ಗೆ 11.00 ಗಂಟೆಯ ನಂತರ, 9) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 22–01–2022 ಬೆಳಿಗ್ಗೆ 11.00 ಗಂಟೆಯ ನಂತರ, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಸ್ಟೇಷನ್ ಏರಿಯಾ ಯಾದಗಿರ 585202. 11) ಅಂತರ್ಜಾಲ ತಾಣದ ವಿಳಾಸ: www.eproc.karnataka.gov.in.
ವಿ.ಸೂ. ಪ್ರೀ ಬಿಡ್ಡ್ ಮಿಟಿಂಗ್ ದಿನಾಂಕ: 12–01–2022 ಸ್ಥಳ: ಕಾರ್ಯಪಾಲಕ ಇಂಜಿನೀಯರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಕಛೇರಿ, ಸ್ಟೇಷನ್ ರಸ್ತೆ, ಯಾದಗಿರ.
ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/332/ಎಂಸಿ&ಎ/2021–22



**ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿ**
ಸಂಖ್ಯೆ: ಮನಪಾಬ/ತಾಂ/ಡಿ.ಎಂ/ ಡಿ.ಎಂ.ಎಫ್/10/38 ಬದಲಿ ಕಾಮಗಾರಿಗಳು/ 2021–22 ದಿನಾಂಕ:07.01.2022
**ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)**
ಬಳ್ಳಾರಿ ಮಹಾನಗರಪಾಲಿಕೆವತಿಯಿಂದ **2020–21 ನೇ ಸಾಲಿನ ಅವಧಿಗಾಗಿ ಅನುಮೋದನೆಗೊಂಡ ಪರಿಷ್ಕೃತ ಕ್ರಿಯಾಯೋಜನೆಯ 6 ರಲ್ಲಿನ ಬಳ್ಳಾರಿ ಜಿಲ್ಲೆ ಗಣಿಗಾರಿಕೆ ಪ್ರದೇಶಗಳ ಅಭಿವೃದ್ಧಿ (ಜಿಲ್ಲಾ ಖನಿಜ ಫೌಂಡೇಶನ್ ನಿಧಿ) (District Mineral Foundation Fund)** ರಲ್ಲಿ ಕಾಮಗಾರಿಗಳ ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ.**6.00** ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ. **89.00** ಲಕ್ಷಗಳು ಇರುತ್ತದೆ. ಇಂಡೆಂಟ್ ಸಂಖ್ಯೆ: **123617, 123618, 123621, 123624, 123626, 123629, 123634, 123635, 123637, 123638, 123639,** ಟೆಂಡರ್ ಸಲ್ಲಿಸಲು ದಿನಾಂಕ:**14.01.2022** ರಿಂದ **28.01.2022** ರ **15.30** ಗಂಟೆಯೊಳಗಾಗಿ ಡೌನ್‌ಲೋಡ್ ಮಾಡಿಕೊಂಡು, ದಿನಾಂಕ:**28.01.2022** ರಂದು **17.30** ಗಂಟೆಯೊಳಗಾಗಿ ಸಲ್ಲಿಸಬಹುದು ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ:**01.02.2022** ಬೆಳಗ್ಗೆ **11.00** ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ:**05.02.2022** ಬೆಳಗ್ಗೆ **11.30** ಗಂಟೆಗೆ ಕಾಮಗಾರಿಗಳ ಎಲ್ಲಾ ವಿವರಗಳಿಗಾಗಿ, ಮೀಸಲಾತಿ ಟೆಂಡರ್ ಕುರಿತಂತೆ ಹಾಗೂ ಯಾವುದೇ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್: http://eproc.karnataka.gov.in ಅನ್ನು ಮತ್ತು www.ballaricity.mrc.gov.in ಅನ್ನು ಗಮನಿಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.
ಸಹಿ/–ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/604/ಎಂಸಿಎ/2021–22



**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**
ಆಸ್ತಿ ಅಧಿಕಾರಿಗಳ ಕಛೇರಿ, ಜಿಕೆವಿಕೆ, ಬೆಂಗಳೂರು–560 065
ಸಂ:ಇ.ಒ/ಎಸ್.ಪಿ.ಒ/ಇ–ಪ್ರೊಕ್ಯೂರ್‌ಮೆಂಟ್/114/2021–22 ದಿನಾಂಕ: 04–01–2022
**ಟೆಂಡರ್ ಪ್ರಕಟಣೆ, (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)**
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಉಪಕರಣಗಳು ಕ್ರಮ ಸಂಖ್ಯೆ 1 ರಿಂದ 19 ರ ವರೆವಿಗೆ ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜೆ–1 ಮತ್ತು ಕೆ.ಜೆ–2 ನಿಬಂಧನೆಗೊಳಪಟ್ಟು, ಟೆಂಡರನ್ನು ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.eproc.karnataka.gov.in** ಮುಖಾಂತರ ಭಾಗವಹಿಸಬಹುದು. ಕೆ.ಜೆ–1, ಮತ್ತು ಕೆ.ಜೆ–2 ಟೆಂಡರ್ ಡಾಕ್ಯುಮೆಂಟ್, ಟೆಂಡರ್ ನೋಟಿಫಿಕೇಷನ್, ಟೆಂಡರ್ ಶೆಡ್ಯೂಲ್, ಇ.ಎಂ.ಡಿ ದರ, ಟೆಂಡರ್ ಫಾರ್ಮ್‌ಗಳನ್ನು ಈ ಮೇಲಿನ ವೆಬ್‌ಸೈಟ್ ಮುಖಾಂತರ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ : 04–02–2022 ಸಂಜೆ 4.00 ಘಂಟೆಯವರೆಗೆ** ಮತ್ತು ಟೆಂಡರನ್ನು ತೆರೆಯುವ **ದಿನಾಂಕ :07–02–2022 ಬೆಳಿಗ್ಗೆ 10.30 ಘಂಟೆಗೆ** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವನ್ನು ಕಾಯ್ದಿರಿಸಿರುತ್ತದೆ. ಹೆಚ್ಚಿನ ಮಾಹಿತಿಗಾಗಿ **www.uasbangalore.edu.in** or **www.eproc.karnataka.gov.in** ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: 91–8046010000, +91–8022631200 ಮತ್ತು ಸರಕು ಖರೀದಿ ಅಧಿಕಾರಿಗಳು, ಯು.ಎ.ಎಸ್. ಜಿ.ಕೆ.ವಿ.ಕೆ., ಬೆಂಗಳೂರು–560065. ದೂರವಾಣಿ ಸಂಖ್ಯೆ: 080–23630128 ಸಂಪರ್ಕಿಸಿ.
ಸಹಿ/– ಆಸ್ತಿ ಅಧಿಕಾರಿಗಳು
DIPR/DDU/AAPL/RO2803/21-22
ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕರ್ನಾಟಕ ಸರ್ಕಾರ
**ಆಯುಷ್ ಇಲಾಖೆ**
**ಶ್ರೀ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ**
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಧನ್ವಂತರಿ ರಸ್ತೆ,
ಬೆಂಗಳೂರು–560009 ದೂ: 080–22872848, ಇ–ಮೇಲ್: principalgamc9@gmail.com
ಸಂಖ್ಯೆ: ಶ್ರೀಜಸಆಯುಆ/19/ಸರಬ/2021–22 ದಿನಾಂಕ: 06.01.2022
**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ**
ಶ್ರೀ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ, ಬೆಂಗಳೂರು ಇಲ್ಲಿ ದಾಖಲಾಗುವ ಒಳರೋಗಿಗಳಿಗೆ ಸಿದ್ಧಪಡಿಸಿದ ಪಥ್ಯಾಹಾರ ಸರಬರಾಜು ಮಾಡಿ ವಿತರಿಸಲು ದರಗುತ್ತಿಗೆ ನಿಗದಿಪಡಿಸುವ ಸಲುವಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಲಾಗುತ್ತಿದೆ.
ಇ–ಟೆಂಡರ್ ಅನುಸೂಚಿಗಳು: 1) ಟೆಂಡರ್ ದಾಖಲೆ ಇ–ಪೋರ್ಟಲ್‌ನಲ್ಲಿ ದೊರೆಯುವ ದಿನಾಂಕ: 07.01.2022. 2) ಟೆಂಡರ್ ದಾಖಲೆ ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 20.01.2022ರ ಬೆಳಿಗ್ಗೆ 11.00 ಗಂಟೆಯವರೆಗೆ. 3) ಅಪ್‌ಲೋಡ್ ಆದ ಇ–ಟೆಂಡರ್‌ಗಳನ್ನು ತೆರೆಯುವ ದಿನಾಂಕ: 21.01.2022ರ ಬೆಳಿಗ್ಗೆ 11.00 ಗಂಟೆಗೆ. 4) ಇ–ಟೆಂಡರ್ ದಾಖಲೆ ತೆರೆಯುವ ಸ್ಥಳ: ಪ್ರಾಚಾರ್ಯರ ಕೊಠಡಿ, ಶ್ರೀ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ, (ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ), ಧನ್ವಂತರಿ ರಸ್ತೆ, ಬೆಂಗಳೂರು. ಇ–ಟೆಂಡರ್ ನಿಯಮಗಳು / ನಿಬಂಧನೆಗಳನ್ನು ವೆಬ್‌ಸೈಟ್: **https://eproc.karnataka.gov.in** ದಿನಾಂಕ: **07.01.2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಸದಸ್ಯ ಕಾರ್ಯದರ್ಶಿಗಳು/ಸಹಾಯಕ ಆಡಳಿತಾಧಿಕಾರಿಗಳು
ಟೆಂಡರ್ ಸಮಿತಿ
DIPR/DDU/YC/2800/2021-22
ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕರ್ನಾಟಕ ಸರ್ಕಾರ
**ಕಂದಾಯ ಇಲಾಖೆ, ಭೂಮಿ ಉಸ್ತುವಾರಿ ಕೋಶ**
ಮೊದಲನೇ ಮಹಡಿ, ಎಸ್.ಎಸ್.ಎಲ್.ಆರ್ ಕಟ್ಟಡ, ಕೆ. ಆರ್. ವೃತ್ತ, ಬೆಂಗಳೂರು – 560 001. ದೂರವಾಣಿ: 080–22113255
ಸಂಖ್ಯೆ: ಬಿ.ಎಂ.ಸಿ/11013/04/2022 ದಿನಾಂಕ: 11.01.2022
**ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ**
ಕಂದಾಯ ಇಲಾಖೆಯ “ಕಂದಾಯ ದಾಖಲೆ ಮನೆ ಬಾಗಿಲಿಗೆ” ಸೇವೆಗಾಗಿ ರಾಜ್ಯದ 31 ಜಿಲ್ಲೆಗಳಿಗೆ ಅವಶ್ಯವಿರುವ ಸ್ಟಿಕ್ಕರ್‌ಗಳನ್ನು ಒಳಗೊಂಡ ಪ್ಲಾಸ್ಟಿಕ್ ಲಕೋಟೆಗಳನ್ನು ಖರೀದಿಸಲು ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: 18.01.2022 ರ ಸಂಜೆ 6.30 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು, http://eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸಹಿ/–
ಸಹಾಯಕ ಆಯುಕ್ತರು
ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ
DIPR/DDU/Zen/RO-2808/2020-21
ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ**
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ, ನವನಗರ, ಪಿ.ಬಿ.ರಸ್ತೆ, ಹುಬ್ಬಳ್ಳಿ–580 025.
ದೂರವಾಣಿ ಸಂಖ್ಯೆ: : (0836) 2223877 ಫ್ಯಾಕ್ಸ ಸಂಖ್ಯೆ : (0836) 2324307
Email.ID:ceepmc1.hescom@gmail.com Web Site :www.hescom.co.in
Corporate Identity Number (CIN) : U31401KA2002SGC030437
No: HESCOM/SEE(PMC)/EE-P1/2021-22/Cys-5068 Date: 11.01.2022
**ಟೆಂಡರ್ ಪ್ರಕಟಣೆ**
(ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಮಾತ್ರ)
ಅಧೀಕ್ಷಕ ಇಂಜಿನಿಯರ್ (ವಿ), ಪಿಎಂಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಹೆಸ್ಕಾಂ ವ್ಯಾಪ್ತಿಯಲ್ಲಿ ವಿವಿಧ ಅಧಿಕಾರಿಗಳಿಗೆ ಸ್ವಾಮಿತ್ವದಲ್ಲಿರುವ ಹೊಸ ವಿದ್ಯುತ್ ಉಪ–ಕೇಂದ್ರಗಳಿಂದ ಹೊಸ 11ಕೆವಿ ಮಾರ್ಗಗಳನ್ನು ನಿರ್ಮಿಸುವ ಕಾಮಗಾರಿಗಳಿಗೆ ಬಿಡ್ ಇಂಡೆಂಟ್ ಸಂಖ್ಯೆ: 5564 ರಿಂದ 5576 (13 Packages) ರನ್ನು ಆಹ್ವಾನಿಸಲಾಗಿದೆ.
ಸದರಿ ಟೆಂಡರಿನ ಪೂರ್ಣ ವಿವರವನ್ನು ವೆಬ್‌ಸೈಟ್ **www.eproc.karnataka.gov.in** ರಲ್ಲಿ ದಿನಾಂಕ: 12.01.2022 @ 11.00 ಘಂಟೆ ನಂತರ ಪಡೆಯಬಹುದು.
ಸಹಿ/– ಅಧೀಕ್ಷಕ ಇಂಜಿನಿಯರ್(ವಿ)
(ಪಿಎಂಸಿ), ಹೆಸ್ಕಾಂ,
ಹುಬ್ಬಳ್ಳಿ
ವಾಸಾಇ/ಧಾ/882/2021–22/ದೇಶಪಾಂಡೆಪಬ್ಲಿಸಿಟಿ
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕರ್ನಾಟಕ ಸರ್ಕಾರ
**ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ**
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ–576103.
ಪೋ/ಫ್ಯಾಕ್ಸ್: 0820–2532961, Email: pfdudupi@gmail.com
ನಂ:ಕಾನಿಇಂ:ಬಂಮೀವಿ:ಉಡುಪಿ ಎಇ: ಪ್ರಕಟಣೆ–03: :2021–22: ದಿನಾಂಕ: 07.01.2022
**ಟೆಂಡರು ಪ್ರಕಟಣೆ**
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿ ದಾಖಲೆ ಪದ್ಧತಿ)
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು **www.eproc.karnataka.gov.in** ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
**ಕಾಮಗಾರಿಯ ಹೆಸರು ಮತ್ತು ಟೆಂಡರ್ ನಂಬರ** (1) ಉಡುಪಿ ಜಿಲ್ಲೆ ಬೈಂದೂರು ತಾಲೂಕು ಮರವಂತೆಯಲ್ಲಿ ಮೀನುಗಾರಿಕಾ ಹೊರಬಂದರಿನ ನಿರ್ಮಾಣ ಕಾಮಗಾರಿ. (2ನೇ ಹಂತ) (ಇಂಡೆಂಟ್ ಸಂ:28), **ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 7390.63 ಲಕ್ಷ, ಇಎಂಡಿ ಮೊತ್ತ: ರೂ.73.91 ಲಕ್ಷ** (ರೂ 1.00 ಲಕ್ಷ ಇ–ಪ್ರೊಕ್ ಮುಖಾಂತರ & ರೂ.72.91 ಲಕ್ಷ ಟೆಂಡರ್ ತಪಶೀಲಿನಲ್ಲಿ ತಿಳಿಸಿದಂತೆ), **ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ವೇಳೆ: 03.02.2022 ರಂದು 16.00** ಗಂಟೆಯವರೆಗೆ, **ಟೆಂಡರ್ ಪಡೆಯುವ ದಿನಾಂಕ ಮತ್ತು ವೇಳೆ: 07.02.2022 ರಂದು 17.00** ಗಂಟೆಯವರೆಗೆ
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ವಾಸಾಇ/ಸನಿಉ/ಎಂಸಿಎ/539/21–22 ದಿ: 11.01.2022 ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ



**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**
**ಇಂಜಿನಿಯರಿಂಗ್ ಘಟಕ**
(ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560023)
(ದೂರವಾಣಿ ಸಂಖ್ಯೆ: 080–29557023 E-mail: cekhsdrp@gmail.com & cekhsdrp-hfws@karnataka.gov.in)
ಸಂಖ್ಯೆ: ಆಕುಕಇ/ಇಂ.ಘ/ಮು.ಇಂ/ತಾ.ಸ–2/ಸ.ಇಂ–2,3,4,5,6&7/ವೈ.ಕಾ/ಟಿಎನ್‌ಡಿ/2021–22/3216 ದಿ: 10.01.2022
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರುರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಒಂದನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ, ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ದ್ವಿ ಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement) ಮೂಲಕ ಆಹ್ವಾನಿಸಲಾಗಿದೆ.
**ಕಾಮಗಾರಿಯ ವಿವರ :** ಪ್ಯಾಕೇಜ್ ಕಾಮಗಾರಿಗಳಾದ (1) ಬೆಂಗಳೂರಿನ ಶಿವಾಜಿನಗರದ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಇಲ್ಲಿಗೆ ಪೀಡಿಯಾಟ್ರಿಕ್ ಐ.ಸಿಯು ಅಳವಡಿಸುವುದು. (2) ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ನೆಲಮಹಡಿಯಲ್ಲಿ ಇಲ್ಲಿಗೆ ಪೀಡಿಯಾಟ್ರಿಕ್ ಐ.ಸಿಯು ಮೊದಲನೇ ಮತ್ತು ಎರಡನೇ ಮಹಡಿಯಲ್ಲಿ ಹೆಚ್.ಡಿ.ಯು ಲೈನ್ ಅಳವಡಿಸುವುದು, (3) ಶಿವಮೊಗ್ಗದ ಶಿಮ್ಸ್ ನಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳು, (4) ಬೆಂಗಳೂರಿನ ಸೋಮೇಶ್ವರ ನಗರದ IGICH ನ ನೆಲಮಹಡಿಯಲ್ಲಿ ವಾರ್ಡ್‌ಗಳನ್ನು ಪಿ.ಐ.ಸಿ.ಯು ಆಗಿ ಮಾರ್ಪಡಿಸುವುದು, ಮೊದಲನೇ ಮಹಡಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳು, (5) ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ 10 ಪಿ.ಐ.ಸಿ.ಯು, 40 ಐ.ಸಿ.ಯು ಮತ್ತು 50 ಆಕ್ಸಿಜನೇಟೆಡ್ ಬೆಡ್‌ಗಳನ್ನು ಅಳವಡಿಸುವುದು (6) ಕೊಡಗು ಜಿಲ್ಲೆಯ ಮಡಿಕೇರಿಯ KoIMS ಬೋಧನಾ ಆಸ್ಪತ್ರೆಗೆ 10 ಪಿ.ಐ.ಸಿ.ಯು, 40 ಐ.ಸಿ.ಯು ಬೆಡ್‌ಗಳನ್ನು ಅಳವಡಿಸುವುದು, (7) ಮಂಡ್ಯ ಜಿಲ್ಲೆಯ MIMS ಬೋಧನಾ ಆಸ್ಪತ್ರೆಗೆ 20 ಪಿ.ಐ.ಸಿ.ಯು, 40 ಐ.ಸಿ.ಯು ಬೆಡ್ & 60 ಆಕ್ಸಿಜನೇಟೆಡ್ ಬೆಡ್‌ಗಳನ್ನು ಅಳವಡಿಸುವುದು, (8) ಹಾಸನ ಜಿಲ್ಲೆಯ HIMS ಬೋಧನಾ ಆಸ್ಪತ್ರೆಗೆ 10 ಪಿ.ಐ.ಸಿ.ಯು, 80 ಐ.ಸಿ.ಯು ಬೆಡ್‌ಗಳನ್ನು ಅಳವಡಿಸುವುದು, (9) ಧಾರವಾಡ ಜಿಲ್ಲೆಯ ಕಿಮ್ಸ್ ಹುಬ್ಬಳ್ಳಿಗೆ ಹೆಚ್ಚುವರಿ ಕಾಮಗಾರಿಗಳು, (10) ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ಪಿ.ಐ.ಸಿ.ಯು, ಎನ್.ಐ.ಸಿ.ಯು ಮತ್ತು ಸ್ಟೆಪ್‌ಡೌನ್ ಪಿ.ಐ.ಸಿ.ಯು ಅಳವಡಿಸುವುದು, (11) ರಾಯಚೂರು ಜಿಲ್ಲೆಯ ರಿಮ್ಸ್ ಆಸ್ಪತ್ರೆಗೆ ಮತ್ತು ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ 30 ಪಿ.ಐ.ಸಿ.ಯು, 60 ಐ.ಸಿ.ಯು ಬೆಡ್ & 60 ಆಕ್ಸಿಜನೇಟೆಡ್ ಬೆಡ್‌ಗಳನ್ನು ಅಳವಡಿಸುವುದು, (12) ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 10 ಪಿ.ಐ.ಸಿ.ಯು, 80 ಐ.ಸಿ.ಯು ಬೆಡ್ & 50 ಆಕ್ಸಿಜನೇಟೆಡ್ ಬೆಡ್‌ಗಳನ್ನು ಅಳವಡಿಸುವುದು, (13) ವಿಮ್ಸ್ ಬಳ್ಳಾರಿಯಲ್ಲಿ 10 ಪಿ.ಐ.ಸಿ.ಯು, 50 ಐ.ಸಿ.ಯು ಬೆಡ್& 40 ಆಕ್ಸಿಜನೇಟೆಡ್ ಬೆಡ್‌ಗಳನ್ನು ಅಳವಡಿಸುವುದು, (14) ಉತ್ತರ ಕನ್ನಡ ಜಿಲ್ಲೆಯ ಕ್ರಿಮ್ಸ್ ಕಾರವಾರ ಇಲ್ಲಿಗೆ ಪಿ.ಐ.ಸಿ.ಯು, ಐ.ಸಿ.ಯು ಬೆಡ್ & ಇತರೆ ಹೆಚ್ಚುವರಿ ಕಾಮಗಾರಿಗಳು. **ಅಂದಾಜು ಮೊತ್ತ** : 2331.11 ಲಕ್ಷಗಳು. **ಇ.ಎಂ.ಡಿ ಮೊತ್ತ** : 23.31 ಲಕ್ಷಗಳು. **ಕಾಲಾವಧಿ (ಮಳೆಗಾಲ ಸೇರಿದಂತೆ)** : 3 ತಿಂಗಳು.
**ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು:–** 1. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : 25.01.2022 ರಂದು 16.00 ಗಂಟೆಯವರೆಗೆ. 2. ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : 27.01.2022 ರಂದು 16.30 ಗಂಟೆಗೆ.
ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement Platform) www.eproc.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು www.eproc.karnataka.gov.in ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (e-Procurement Platform) ನೊಂದಾಯಿಸುವ ಅಗತ್ಯ ಇದೆ.
**ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯು ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.**
ಸಹಿ/–
ಮುಖ್ಯ ಇಂಜಿನಿಯರ್,
ಆ&ಕುಕಇ, ಇಂಜಿನಿಯರಿಂಗ್ ಘಟಕ,
ಬೆಂಗಳೂರು.



**ಕಾವೇರಿ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ.,
ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ
**ಟೆಂಡರ್ ಪ್ರಕಟಣೆ ಸಂಖ್ಯೆ: 21/2021–22 ದಿನಾಂಕ: 07.01.2022**
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆಕ್ಸ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಎಕ್ಸಿಕ್ಯುಟಿವ್ ಇಂಜಿನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ(ನಿ) ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.) ಬೆಂಗಳೂರು ರವರ ಪರವಾಗಿ Hemavathy Dam Rehabilitation and Improvement Project (DRIP-II) & Votehole Dam Rehabilitation and Improvement Project (DRIP-II) ಗಳ ಕಾಮಗಾರಿಗಳಿಗೆ ನೋಂದಾಯಿತರಾದ ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಒಟ್ಟು 2 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.9.60 ಕೋಟಿಗಳು ಹಾಗೂ ಕನಿಷ್ಠ ಟೆಂಡರ್ ಮೊತ್ತ ರೂ. 5.85 ಕೋಟಿಗಳು ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://eproc.karnataka.gov.in ಮೂಲಕ ದಿನಾಂಕ: 14.01.2022 ರಿಂದ 14.02.2022 ರ ವರೆಗೆ ಪಡೆಯಬಹುದು (Down load). ತಾಂತ್ರಿಕ ಬಿಡ್ ತೆರೆಯುವ ದಿನಾಂಕ 16.02.2022, 11.00 ಗಂಟೆಯ ನಂತರ, ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https://eproc.karnataka.gov.in ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. **ಸಹಿ/– ಕಾರ್ಯಪಾಲಕ ಇಂಜಿನಿಯರ್,**
**ಹೇಮಾವತಿ ಅಣೆಕಟ್ಟು ವಿಭಾಗ, ಕಾನೀನಿನಿ, ಗೊರೂರು**
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/628/2021–22



**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರ ಕಛೇರಿ (ವಿದ್ಯುತ್), ಪೂರ್ವ ವಲಯ,
16ನೇ ಮಹಡಿ, ಪಿಯು ಕಟ್ಟಡ, ಎಂಜಿ ರಸ್ತೆ, ಬೆಂಗಳೂರು
ನಂ.: ಬಿಬಿಎಂಪಿ/ಕಾಪಾಅ/ವಿದ್ಯುತ್/ಪೂರ್ವ/ಟೆಂಡರ್/10/2021–22 ದಿನಾಂಕ: 11.01.2022
**ಟೆಂಡರ್ ತಿದ್ದುಪಡಿ**
ಉಲ್ಲೇಖ: 1. ಟೆಂಡರ್ ಪ್ರಕಟಣೆ ಸಂಖ್ಯೆ: ಬಿಬಿಎಂಪಿ/ಕಾಪಾಅ/ವಿದ್ಯುತ್/ಪೂರ್ವ/ಟೆಂಡರ್/10/2021–22, ದಿನಾಂಕ: 06.01.2022.
ಈ ಕಛೇರಿಯ ಉಲ್ಲೇಖಿತ ಟೆಂಡರ್ ಪ್ರಕಟಣೆ ಸಂಖ್ಯೆ: ಬಿಬಿಎಂಪಿ/ಕಾಪಾಅ/ವಿದ್ಯುತ್/ಪೂರ್ವ/ಟೆಂಡರ್/10/2021–22, ದಿನಾಂಕ: 06.01.2022ರ ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿಯನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ. ಉಳಿದಂತೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

| ನಿಗದಿಪಡಿಸಿದ ದಿನಾಂಕ ಮತ್ತು ಸ್ಥಳ | ಪರಿಷ್ಕರಿಸಿದ ದಿನಾಂಕ ಮತ್ತು ಸ್ಥಳ |
| --- | --- |
| ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿ.: **14.01.2022**ರ **ಸಂಜೆ 4:00 ಗಂಟೆಯೊಳಗೆ** ಸಲ್ಲಿಸತಕ್ಕದ್ದು ಮತ್ತು ತಾಂತ್ರಿಕ ಬಿಡ್ಡನ್ನು ದಿ.: **17.01.2022**ರ **ಸಂಜೆ 4:00 ಗಂಟೆಗೆ** ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್ಡನ್ನು ದಿ.: **20.01.2022**ರ **ಸಂಜೆ 4:00 ಗಂಟೆಗೆ** ತೆರೆಯಲಾಗುವುದು. | ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿ.: **17.01.2022**ರ **ಸಂಜೆ 4:00 ಗಂಟೆಯೊಳಗೆ** ಸಲ್ಲಿಸತಕ್ಕದ್ದು ಮತ್ತು ತಾಂತ್ರಿಕ ಬಿಡ್ಡನ್ನು ದಿ.: **19.01.2022**ರ **ಸಂಜೆ 4:00 ಗಂಟೆಗೆ** ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್ಡನ್ನು ದಿ.: **21.01.2022**ರ **ಸಂಜೆ 4:00 ಗಂಟೆಗೆ** ತೆರೆಯಲಾಗುವುದು. |
| ಪೂರ್ವಭಾವಿ ಸಭೆಯನ್ನು **12.01.2022**ರ **ಬೆಳಗ್ಗೆ 11:30 ಗಂಟೆಗೆ** ಅಧೀಕ್ಷಕ ಅಭಿಯಂತರರ ಕಛೇರಿ (ವಿದ್ಯುತ್), 23ನೇ ಮಹಡಿ, ಎಂಜಿ ರಸ್ತೆ, ಬೆಂಗಳೂರು–560001ರಲ್ಲಿ ನಿಗದಿಪಡಿಸಲಾಗಿತ್ತು. | ಪೂರ್ವಭಾವಿ ಸಭೆಯ ಸ್ಥಳವನ್ನು ಪರಿಷ್ಕರಿಸಿ **12.01.2022**ರ **ಬೆಳಗ್ಗೆ 11:30 ಗಂಟೆಗೆ** ಮೀಟಿಂಗ್ ಹಾಲ್–01, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ ಇಲ್ಲಿ ನಿಗದಿಪಡಿಸಲಾಗಿದೆ. |

ಸಹಿ/– ಕಾರ್ಯಪಾಲಕ ಅಭಿಯಂತರರು(ವಿದ್ಯುತ್), ಪೂರ್ವ ವಲಯ, ಬಿಬಿಎಂಪಿ
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಅಥಣಿ–591304, ಕಾರ್ಯಾಲಯ, ತಾ:ಅಥಣಿ ಜಿ:ಬೆಳಗಾವಿ (ಕರ್ನಾಟಕ)
ಅಧಿಸೂಚನೆ ಸಂ./ಕಾಇಂ/ಕನೀನಿನಿ/ಪುಪುವಿ/ಯೋಶಾ/ಟೆಂಡರ/ಪ್ರೋಜೇಕ್ಷನ್ ವಾಲ್ ಕಾಮಗಾರಿ/21–22/2120 ದಿನಾಂಕ: –01–2022
**ಅಲ್ಪಾವಧಿ ಟೆಂಡರ ಅಧಿಸೂಚನೆ**
**(ಇ–ಸಂಗ್ರಹಣಾ ಕೋಶದ ಮೂಲಕ ಮಾತ್ರ)**
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಆರ್ & ಆರ್ ವಿಭಾಗ ಅಥಣಿ, ಇವರು ಇ–ಪ್ರೊಕ್ಯೂರಮೆಂಟ ಪೋರ್ಟಾಲ್ ಮುಖಾಂತರ ನೊಂದಾಯಿತ Class–I in KPWD/Category–III & above Enrolled in KNNL ಗುತ್ತಿಗೆದಾರರಿಂದ “Providing protection work to Bank of Krishna river on left side downstream of Hippargi Barrage. ಕಾಮಗಾರಿಗೆ ಶೇಕಡಾವಾರು ಟೆಂಡರನ್ನು ಅಹ್ವಾನಿಸಿರುತ್ತಾರೆ.
ಗುತ್ತಿಗೆದಾರರು ಎರಡು ಕವರ್ ಬಿಡ್ ಸಲ್ಲಿಕೆ ವಿಧಾನವನ್ನು ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.eproc.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಭರ್ತಿಮಾಡಿದ ಟೆಂಡರನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸುವುದು.
ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 2517.56 ಲಕ್ಷಗಳು ಇರುತ್ತವೆ. ಟೆಂಡರ ಅವಧಿ 06 ತಿಂಗಳು (ಮಳೆಗಾಲ ಸಹಿತ)
1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:12.01.2022 ರಿಂದ ದಿನಾಂಕ 27.01.2022 ರ 4.00 ಘಂಟೆಯವರೆಗೆ. 2:ಆಕ್ಷೇಪಣೆಗಳನ್ನು ಸಲ್ಲಿಸುವ ದಿನಾಂಕ: 25.01.2022 ರ 4.00 ಘಂಟೆಯವರೆಗೆ. 3:ಪೂರ್ವಭಾವಿ ಸಭೆ (ಪ್ರಿ–ಬಿಡ್ ಮಿಟಿಂಗ್) ದಿನಾಂಕ:18.01.2022 ರ 11.00 ಘಂಟೆ, 4:ಪೂರ್ಣವಾಗಿ ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:27.01.2022 ರ 4.00 ಘಂಟೆಯವರೆಗೆ. 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:29.01.2022 ರ 11.00 ಘಂಟೆ, 6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:07.02.2022ರ 11: ಘಂಟೆ ಅಥವಾ ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.
ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಚೇರಿ ದೂರವಾಣಿ ಸಂಖ್ಯೆ:08289–285031 ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಚೇರಿ ದೂರವಾಣಿ ಸಂಖ್ಯೆ:08289–285031 ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/–(ಆರ್.ಜಿ ರಾಠೋಡ)
ಕಾರ್ಯನಿರ್ವಾಹಕ ಅಭಿಯಂತರರು, ಪುವ ಮತ್ತು ಪುನಿ ವಿಭಾಗ, ಅಥಣಿ.
DIPR/BGM/RO-NO-1237/MCA/2021-22



**ಕರ್ನಾಟಕ ಸರಕಾರ**
**(ಲೋಕೋಪಯೋಗಿ ಇಲಾಖೆ)**
**ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ**
ದೂರವಾಣಿ ಸಂ:08338/273859 ಇ–ಮೇಲ್:eepwdckd@gmail.com
ಕ್ರ.ಸಂ. ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2021–22/5219 ದಿನಾಂಕ: 10/01/2022
**ಅವಧಿ ವಿಸ್ತರಣೆ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ–1**
ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2021–22/5070 ದಿನಾಂಕ: 03/01/2022 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 17–01–2022 ರಂದು (11.00 ಗಂಟೆಗೆ) 2) ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ :19–01–2022 (ಸಾಯಂಕಾಲ 5.30 ಗಂಟೆಯ ವರೆಗೆ) 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 21–01–2022 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 24–01–2022 (ಸಾಯಂಕಾಲ 4.30 ಗಂಟೆಗೆ) 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): “ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ”
ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1225/MCA/2021-22



**ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಪ್ರಿಯದರ್ಶಿನಿ ನೇಕಾರ ಭವನ, 1ನೇ ಮಹಡಿ,
ಕೆ.ಎಚ್. ಪಾಟೀಲ ಕಾಲೇಜ ಎದುರುಗಡೆ, ನೇಕಾರ ಕಾಲನಿ, ವಿದ್ಯಾನಗರ, ಹುಬ್ಬಳ್ಳಿ–580 031.
PH: 9900017357 email: khdccs@gmail.com
ಕ್ರ :ಕಕೈಅನಿ/ಪ್ರಕ/ವ್ಯನಿ/ವ್ಯ(ಯೋ–ಅ)/2021–22/ ದಿನಾಂಕ: 07.01.2022
**ಆಸಕ್ತಿ ವ್ಯಕ್ತಪಡಿಸುವಿಕೆ**
ಕರ್ನಾಟಕ ಕೈಮಗ್ಗ ಅಬಿವೃದ್ಧಿ ನಿಗಮ ನಿಯಮಿತವು, ಪ್ರೀಯದರ್ಶಿನಿ ನೇಕಾರರ ಭವನದ ಸೆಲ್ಲರನಲ್ಲಿ ಮಳಿಗೆ ಸಂಖ್ಯೆ: **3ಎ, 1716** ಚ.ಅಡಿ, **ಮಳಿಗೆ(ಸರಕು ದಾಸ್ತಾನಿಗಾಗಿ) ಹೊಂದಿದ್ದು ಹಾಗೂ ಗ್ರೌಡ್ ಪ್ಲೋರ್(ಕಟ್ಟಡದ ಮುಂಬದಿ)ನಲ್ಲಿ ಮಳಿಗೆ ಸಂಖ್ಯೆ : 10 – 672 ಚದರು ಅಡಿ, ಮಳಿಗೆ ಸಂಖ್ಯೆ : 8–660 ಚದರು ಅಡಿ, 11 & 12–1344 ಚದರು ಅಡಿಗಳಿದ್ದು(ಸರಕುಗಳ ಮಾರಟಕ್ಕಾಗಿ ಸೂಸಜ್ಜಿತವಾಗಿದ್ದು)**, ಮುಗಂಡಹಣ 10 ತಿಂಗಳ ಬಾಡಿಗೆ, ಪ್ರತಿ 3 ವರ್ಷಕೊಮ್ಮೆ ಶೇ.15ರಷ್ಟು ಬಾಡಿಗೆ ಹೆಚ್ಚಳ, ಕರಾರು ಪತ್ರದ ಅವಧಿ ಮೂರು ವರ್ಷಗಳು. **ಆಸಕ್ತಿಯುಳ್ಳ ಅರ್ಹ ಬಾಡಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸಿದೆ. ಆಸಕ್ತರು ತಮ್ಮ ಸ್ವವಿವರಗಳೊಂದಿಗೆ ದರಪಟ್ಟಿಯನ್ನು** ಮುಚ್ಚಿದ ಲಕೋಟೆಯಲ್ಲಿ (Sealed Quotation) ಸಲ್ಲಿಸುವುದು. ಲಕೋಟೆಯ ಮೇಲೆ **“ಕಟ್ಟಡದ ಬಾಡಿಗೆಗಾಗಿ”** ಎಂದು ನಮೂದಿಸಿ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಪ್ರಿಯದರ್ಶಿನಿ ನೇಕಾರ ಭವನ, 1ನೇ ಮಹಡಿ, ಕೆ.ಎಚ್.ಪಾಟೀಲ ಕಾಲೇಜ ಎದುರುಗಡೆ, ನೇಕಾರ ಕಾಲನಿ, ವಿದ್ಯಾನಗರ, ಹುಬ್ಬಳ್ಳಿ–580031ರ ವಿಳಾಸಕ್ಕೆ ಸಲ್ಲಿಸುವುದು. ದರಪಟ್ಟಿಯನ್ನು ಸಲ್ಲಿಸುವ **ಕೊನೆಯ ದಿನಾಂಕ : 25.01.2022 ಮಧ್ಯಾಹ್ನ 3.30ಗಂಟೆಯಾಗಿದ್ದು**, ನಂತರ ಬಂದ ಲಕೋಟೆಗಳನ್ನು ಸ್ವೀಕರಿಸುವುದಿಲ್ಲ. ಅದೇ ದಿನ ಸಂಜೆ 4.00ಗಂಟೆಗೆ ಲಕೋಟೆಗಳನ್ನು ತೆರೆಯಲಾಗುವುದು.
ಕೋಟೇಶನ್‌ಗಳನ್ನು ಯಾವುದೇ ಸೂಚನೆ ಇಲ್ಲದೆ ಪೂರ್ತಿ ಅಥವಾ ಭಾಗಶ: ಪರಿಗಣಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ. ಹೆಚ್ಚಿನ ಮಾಹಿತಿಗಾಗಿ **“ಕಂಪನಿ ಕಾರ್ಯದರ್ಶಿ ವಿಭಾಗ”** ದೂರವಾಣಿ ಸಂಖ್ಯೆ : 9900017357 ಇವರನ್ನು ಸಂಪರ್ಕಿಸುವುದು.
ಸಹಿ/–
ವಾ.ಸಾ.ಇ/ಧಾ/874/2020–21/ದೇಶಪಾಂಡೆಪಬ್ಲಿಸಿಟಿ ವ್ಯವಸ್ಥಾಪಕ ನಿರ್ದೇಶಕರು
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

# ಸುಲ್ಲಿ ಡೀಲ್ಸ್: 30 ಟ್ವಿಟರ್ ಖಾತೆಗಳ ದುರ್ಬಳಕೆ

ನವದೆಹಲಿ (ಪಿಟಿಐ): 'ಸುಲ್ಲಿ ಡೀಲ್ಸ್' ಗುಂಪಿನವರು ಉದ್ದೇಶಿತ ಹರಾಜಿಗಾಗಿ ಮುಸ್ಲಿಂ ಮಹಿಳೆಯರ ಚಿತ್ರಗಳನ್ನು ಅಪ್‌ಲೋಡ್ ಮಾಡಲು ಸುಮಾರು 30 ಟ್ವಿಟರ್ ಖಾತೆಗಳ ದುರ್ಬಳಕೆ ಮಾಡಿಕೊಂಡಿರುವುದು ತನಿಖೆಯಿಂದ ಬಹಿರಂಗವಾಗಿದೆ ಎಂದು ದೆಹಲಿ ಪೊಲೀಸರು ಸೋಮವಾರ ಹೇಳಿದ್ದಾರೆ.

ಇಂಧೋರ್‌ನ 26 ವರ್ಷದ ಯುವಕ ಓಂಕಾರೇಶ್ವರ ಠಾಕೂರ್ ಸುಲ್ಲಿ ಡೀಲ್ಸ್ ಗುಂಪಿನ ಸದಸ್ಯನಾಗಿದ್ದಾನೆ. ಇತರ ಸದಸ್ಯರ ಗುರುತಿಸುವಿಕೆಗೆ ದೆಹಲಿ ಪೊಲೀಸರು ಪ್ರಯತ್ನ ನಡೆಸುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಠಾಕೂರ್ ಬುಲ್ಲಿ ಬಾಯ್ ಆ್ಯಪ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ತನ್ನ ಲ್ಯಾಪ್‌ಟಾಪ್‌ನಿಂದ ಅಳಿಸಿ ಹಾಕಿದ್ದನು. ಆ್ಯಪ್ ಮತ್ತು ಅದರಲ್ಲಿ ಹಾಕುತ್ತಿದ್ದ ವಿಷಯಗಳ ಬಗ್ಗೆ ಹೆಚ್ಚಿನ ವಿವರ ತಿಳಿಯಲು ಈ ಹಿಂದೆ ಬಂಧಿಸಲಾದ ಬುಲ್ಲಿ ಬಾಯ್ ಆ್ಯಪ್ ಸೃಷ್ಟಿಕರ್ತ ನೀರಜ್ ಬಿಷ್ಣೋಯಿ ಮತ್ತು ಠಾಕೂರ್ ಬಳಿಯಿದ್ದ ಲ್ಯಾಪ್‌ಟಾಪ್ ಮತ್ತು ಫೋನ್‌ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದೂ ಅವರು ಹೇಳಿದರು.

ಇನ್ನೊಂದೆಡೆ ಮಹಿಳೆಯರ ಚಿತ್ರಗಳನ್ನು ಹರಾಜಿಗಿಡಲು ಟ್ವಿಟರ್ ಖಾತೆಗಳನ್ನು ದುರ್ಬಳಕೆ ಮಾಡಿಕೊಂಡ ಗುಂಪಿನ ಸದಸ್ಯರ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ ಎಂದು ಅಧಿಕಾರಿ ಮಾಹಿತಿ ನೀಡಿದರು.

ಪ್ರಕರಣದ ಆರೋಪಿಯಾದ ಠಾಕೂರ್‌ನನ್ನು ಪೊಲೀಸರು ಶನಿವಾರ ರಾತ್ರಿ ಬಂಧಿಸಿದ್ದರು. ವಿಚಾರಣೆ ವೇಳೆ ತಾನೊಂದು ಜಾಲತಾಣ ನಡೆಸುತ್ತಿರುವುದಾಗಿ, ಅಮೆರಿಕದಲ್ಲಿ ತನಗೆ ಗ್ರಾಹಕರಿರುವುದಾಗಿ ಹೇಳಿದ್ದ.

# 'ಶಾಸಕರ ಅಮಾನತು ಉಚ್ಚಾಟನೆಗಿಂತಲೂ ಕೆಟ್ಟದ್ದು'

ಪ್ರಜಾವಾಣಿ ವಾರ್ತೆ



ನವದೆಹಲಿ: ಮಹಾರಾಷ್ಟ್ರ ವಿಧಾನಸಭೆಯಿಂದ 12 ಶಾಸಕರನ್ನು ಒಂದು ವರ್ಷದ ಅವಧಿಗೆ ಅಮಾನತು ಮಾಡಿರುವುದು 'ಉಚ್ಚಾಟನೆಗಿಂತಲೂ ಕೆಟ್ಟದಾದ ಕ್ರಮ' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಸದನದ ಒಳಗೆ ಮತ್ತು ಹೊರಗೆ ಸಭಾಧ್ಯಕ್ಷರ ಜೊತೆಗೆ ತೋರಿದ ಅನುಚಿತ ವರ್ತನೆಗಾಗಿ ಕಳೆದ ವರ್ಷ ಜುಲೈ ತಿಂಗಳು ವಿಧಾನಸಭೆಯ 12 ಶಾಸಕರನ್ನು ಅಮಾನತುಪಡಿಸಲಾಗಿತ್ತು.

ಅಮಾನತುಗೊಂಡಿದ್ದ ಶಾಸಕರು ಆಶೀಶ್ ಶೇಲರ್ ನೇತೃತ್ವದಲ್ಲಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎ.ಎಂ.ಖಾನ್ವಿಲ್ಕರ್ ನೇತೃತ್ವದ ಪೀಠವು, 'ವಿಧಾನಸಭೆಯಲ್ಲಿ ಈ ಕ್ಷೇತ್ರಗಳ ಪ್ರಾತಿನಿಧಿತ್ವ ಇಲ್ಲವಾಗುವ ಕಾರಣ ಈ ಶಿಕ್ಷೆಯು ಉಚ್ಚಾಟನೆಗಿಂತಲೂ ಕೆಟ್ಟದ್ದಾಗಿದೆ' ಎಂದು ಅಭಿಪ್ರಾಯಪಟ್ಟಿತು.

ಒಂದು ವರ್ಷದ ಅಮಾನತು ಎಂದರೆ ಅದು ಆ ಶಾಸಕರು ಪ್ರತಿನಿಧಿಸುತ್ತಿದ್ದ ಕ್ಷೇತ್ರಗಳಿಗೆ ವಿಧಿಸಲಾದ ದಂಡನೆ. ನಿಯಮದ ಪ್ರಕಾರ ಯಾವುದೇ ಕ್ಷೇತ್ರ ಆರು ತಿಂಗಳಿಗೂ ಹೆಚ್ಚು ಪ್ರಾತಿನಿಧಿತ್ವ ಇಲ್ಲದೇ ಇರಬಾರದು ಎಂದಿತು.

ಚಾಲ್ತಿಯಲ್ಲಿರುವ ನಿಯಮಗಳನ್ನು ಉಲ್ಲೇಖಿಸಿ, ವಿಧಾನಸಭೆ ಸದಸ್ಯರನ್ನು 60 ದಿನಕ್ಕೂ ಅಧಿಕ ಕಾಲ ಅಮಾನತು ಮಾಡಲಾಗದು. ಸಂವಿಧಾನದ ವಿಧಿ 190 (4)ರ ಪ್ರಕಾರ ಅನುಮತಿಯಿಲ್ಲದೇ ಸದಸ್ಯ 60 ದಿನಕ್ಕೂ ಹೆಚ್ಚು ಕಾಲ ಸದನದಿಂದ ದೂರ ಉಳಿದರೆ ಆ ಕ್ಷೇತ್ರ ಖಾಲಿ ಇದೆ ಎಂದೇ ಭಾವಿಸಲಾಗುತ್ತದೆ ಎಂದು ಪೀಠವು ಉಲ್ಲೇಖಿಸಿತು.

ಶಾಸಕರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಮಹೇಶ್ ಜೇಠ್ಮಲಾನಿ ಅವರು, ಅನುಚಿತ ವರ್ತನೆಗಾಗಿ 'ಇತ್ತೀಚೆಗೆ ರಾಜ್ಯಸಭೆಯ 12 ಸದಸ್ಯರನ್ನು ಅಧಿವೇಶನದ ಅವಧಿಗೆ ಸೀಮಿತಗೊಳಿಸಿ ಅಮಾನತು ಮಾಡಲಾಗಿತ್ತು' ಎಂದರು.

ಮಹಾರಾಷ್ಟ್ರ ಸರ್ಕಾರ ಪ್ರತಿನಿಧಿಸಿದ್ದ ಹಿರಿಯ ವಕೀಲ ಸಿ.ಎ.ಸುಂದರಂ, ಶಾಸನಸಭೆ ವಿಧಿಸುವ ದಂಡನೆಯನ್ನು ಕೋರ್ಟ್ ಪರಿಶೀಲಿಸಲು ಬರುವುದಿಲ್ಲ ಎಂದರು. ಆದರೆ ಪೀಠ ಇದನ್ನು ಒಪ್ಪಲಿಲ್ಲ. ವಿಚಾರಣೆಯನ್ನು ಜ.18ಕ್ಕೆ ಮುಂದೂಡಲಾಯಿತು.

# 'ದುರ್ಬಲ ಸಾಕ್ಷಿ': 'ಸುಪ್ರೀಂ'ನಿಂದ ಮರುವ್ಯಾಖ್ಯಾನ

ನವದೆಹಲಿ (ಪಿಟಿಐ): ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿ 'ದುರ್ಬಲ ಸಾಕ್ಷಿ'ಗಳ ಅರ್ಥವಿವರಣೆಯನ್ನು ಸುಪ್ರೀಂಕೋರ್ಟ್ ಮಂಗಳವಾರ ವಿಸ್ತರಿಸಿ ಮಹತ್ವದ ಆದೇಶ ನೀಡಿದೆ.

ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್, ಸೂರ್ಯ ಕಾಂತ ಅವರಿರುವ ನ್ಯಾಯಪೀಠ, 'ದುರ್ಬಲ ಸಾಕ್ಷಿ'ಗಳ ಅರ್ಥದ ಮರುವ್ಯಾಖ್ಯಾನ ಮಾಡಿದೆ. 'ವಾಕ್ ಅಥವಾ ಶ್ರವಣ ದೋಷವುಳ್ಳ ವ್ಯಕ್ತಿ, ಅಥವಾ ಸಕ್ಷಮ ಕೋರ್ಟ್ ಒಪ್ಪಬಹುದಾಂತಹ ವೈಕಲ್ಯ ಹೊಂದಿರುವ ವ್ಯಕ್ತಿಯನ್ನು 'ದುರ್ಬಲ ಸಾಕ್ಷಿ' ಎಂಬುದಾಗಿ ಪರಿಗಣಿಸಬಹುದು' ಎಂದು ನ್ಯಾಯಪೀಠ ಹೇಳಿದೆ.

ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರು ಹಾಗೂ ಮಾನಸಿಕ ಕಾಯಿಲೆಯಿಂದ ಬಳಲುವವರು ಸಹ ಈ ಮರುವ್ಯಾಖ್ಯಾನದ ಪ್ರಕಾರ ಈಗ 'ದುರ್ಬಲ ಸಾಕ್ಷಿ'ಗಳ ವ್ಯಾಪ್ತಿಗೆ ಒಳಪಡುತ್ತಾರೆ.

'ದುರ್ಬಲ ಸಾಕ್ಷಿ'ಗಳು ನೀಡುವ ಹೇಳಿಕೆಗಳನ್ನು ದಾಖಲಿಸಲು ಸುರಕ್ಷಿತ ಹಾಗೂ ಮುಕ್ತ ವಾತಾವರಣವಿರುವ ಸೌಲಭ್ಯಗಳನ್ನು ಕಲ್ಪಿಸಬೇಕು. ಇದಕ್ಕಾಗಿ ಎರಡು ತಿಂಗಳ ಒಳಗಾಗಿ ಎಲ್ಲ ಹೈಕೋರ್ಟ್‌ಗಳು 'ದುರ್ಬಲ ಸಾಕ್ಷಿಗಳು ಸಾಕ್ಷ್ಯ ನುಡಿಯುವ ಕೇಂದ್ರ'ಗಳನ್ನು (ವಿಡಬ್ಲ್ಯುಡಿಸಿ) ಸ್ಥಾಪಿಸುವ ಯೋಜನೆ ಜಾರಿಗೊಳಿಸಬೇಕು. ಈ ಸಂಬಂಧ ಅಧಿಸೂಚನೆ ಹೊರಡಿಸಬೇಕು' ಎಂದೂ ನ್ಯಾಯಪೀಠ ನಿರ್ದೇಶನ ನೀಡಿತು.

ವಿಡಬ್ಲ್ಯುಡಿಸಿ ರಚನೆ, ಯೋಜನೆಯ ಅನುಷ್ಠಾನ, ತರಬೇತಿ ಕಾರ್ಯಕ್ರಮದ ಉಸ್ತುವಾರಿಗಾಗಿ ರಚಿಸಿರುವ ಸಮಿತಿಗೆ ಜಮ್ಮು-ಕಾಶ್ಮೀರ ಹೈಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ಗೀತಾ ಮಿತ್ತಲ್ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿ ನ್ಯಾಯಪೀಠ ಆದೇಶಿಸಿತು.

## 'ಮಾಜಿ ಗೃಹ ಸಚಿವ ವಿರುದ್ಧದ ತನಿಖೆಗೆ ಮಹಾರಾಷ್ಟ್ರ ಸರ್ಕಾರದ ತೊಡಕು'

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಮಾಜಿ ಗೃಹಸಚಿವ ಅನಿಲ್ ದೇಶ್‌ಮುಖ್ ಅವರ ವಿರುದ್ಧದ ತನಿಖೆಗೆ ಭಂಗ ಉಂಟುಮಾಡಲು ರಾಜ್ಯ ಸರ್ಕಾರ ಯತ್ನಿಸುತ್ತಿದೆ ಎಂದು ಸಿಬಿಐ ಮಂಗಳವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಸಿಬಿಐ ತನಿಖೆ ನಡೆಸುತ್ತಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ತಾನೂ ಪ್ರಕರಣ ದಾಖಲಿಸುವ ಮೂಲಕ ಪುನರಾವರ್ತನೆ ಆಗುವಂತೆ ನೋಡಿಕೊಳ್ಳುತ್ತಿದೆ ಎಂದು ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ತಿಳಿಸಿದೆ.

ಮಾಜಿ ಪೊಲೀಸ್ ಕಮಿಷನರ್ ಪರಂವೀರ್ ಸಿಂಗ್ ವಿರುದ್ಧ ದಾಖಲಿಸಲಾಗಿರುವ ಕ್ರಿಮಿನಲ್ ಪ್ರಕರಣಗಳು, ಸಿಬಿಐಯೇ ತನಿಖೆ ಪೂರ್ಣಗೊಳಿಸಲು ಮತ್ತು ನಿಷ್ಪಕ್ಷಪಾತವಾಗಿ ನಡೆಸಲು ಸೂಕ್ತವಾದುದಾಗಿವೆ ಎಂದು ಹೇಳಿದೆ.

'ಈ ವಿಷಯ ಕುರಿತು ಈ ಕೋರ್ಟ್ ಹಾಗೂ ಬಾಂಬೆ ಹೈಕೋರ್ಟ್ ವ್ಯಕ್ತಪಡಿಸಿದ ಕಾರಣಗಳ ಆಧಾರ ಹಾಗೂ ಅರ್ಜಿದಾರರು (ಸಿಂಗ್) ಉಲ್ಲೇಖಿಸಿರುವ ಪ್ರಮುಖ ಕಾರಣಗಳ ಹಿನ್ನೆಲೆಯಲ್ಲಿ ಸಿಬಿಐಯೇ ತನಿಖೆಯನ್ನು ಪೂರ್ಣಗೊಳಿಸಲು ಹಾಗೂ ನಿಷ್ಪಕ್ಷಪಾತವಾಗಿ ತನಿಖೆ ನಡೆಸಲು ಸೂಕ್ತವಾದುದಾಗಿದೆ' ಎಂದು ಸಿಬಿಐ ತಿಳಿಸಿದೆ.

## 'ಸೊಸೆಗೆ ಅತ್ತೆಯೇ ಚಿತ್ರಹಿಂಸೆ ನೀಡಿದಾಗ ಅಪರಾಧ ಗಂಭೀರ'

ನವದೆಹಲಿ (ಪಿಟಿಐ): 'ಒಬ್ಬ ಮಹಿಳೆಯಾಗಿ ಅತ್ತೆಯೇ ತನ್ನ ಸೊಸೆಗೆ ಚಿತ್ರಹಿಂಸೆ ನೀಡಿದ್ದೇಯಾದರೆ, ಅಂಥ ಅಪರಾಧ ಮತ್ತಷ್ಟೂ ಗಂಭೀರ ಸ್ವರೂಪದ್ದಾಗುತ್ತದೆ' ಎಂದು ಸುಪ್ರೀಂಕೋರ್ಟ್ ಮಂಗಳವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಹಾಗೂ ಬಿ.ವಿ.ನಾಗರತ್ನ ಅವರಿದ್ದ ನ್ಯಾಯಪೀಠ, ವರದಕ್ಷಿಣೆ ಪ್ರಕರಣವೊಂದಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಅಲ್ಲದೇ, ಈ ಪ್ರಕರಣದಲ್ಲಿ ಅತ್ತೆಗೆ ಒಂದು ವರ್ಷ ಜೈಲು ಹಾಗೂ ₹ 1 ಸಾವಿರ ದಂಡ ವಿಧಿಸಿ ಮದ್ರಾಸ್ ಹೈಕೋರ್ಟ್ ನೀಡಿದ್ದ ಶಿಕ್ಷೆಯನ್ನು ನ್ಯಾಯಪೀಠ ಎತ್ತಿ ಹಿಡಿಯಿತು.

'ಒಬ್ಬ ಮಹಿಳೆ ಮತ್ತೊಬ್ಬ ಮಹಿಳೆಯನ್ನು ರಕ್ಷಿಸದಿದ್ದರೆ, ಆ ಮತ್ತೊಬ್ಬ ಮಹಿಳೆ (ಈ ಪ್ರಕರಣದಲ್ಲಿ ಸೊಸೆ) ದುರ್ಬಲಳಾಗುತ್ತಾಳೆ' ಎಂದು ನ್ಯಾಯಪೀಠ ಹೇಳಿತು.

## ಚೀನಾ–ಮ್ಯಾನ್ಮಾರ್ ಗಡಿ: ಈಶಾನ್ಯ ಉಗ್ರ ಗುಂಪುಗಳು ಮತ್ತೆ ಒಗ್ಗಟ್ಟು?

ಕೋಲ್ಕತ್ತ (ಪಿಟಿಐ): ಇತ್ತೀಚಿನ ತಿಂಗಳುಗಳಲ್ಲಿ ಈಶಾನ್ಯ ಭಾರತದ ಭಾಗಗಳನ್ನು ಉಗ್ರರು ನಡೆಸಿದ ದಾಳಿಗಳು ಕಂಗೆಡಿಸಿವೆ. ಇದು ಭಾರತ ಮತ್ತು ಮ್ಯಾನ್ಮಾರ್ ಗಡಿ ಭಾಗಗಳಲ್ಲಿ ಉಗ್ರರು ಮತ್ತೆ ಒಂದುಗೂಡುತ್ತಿರುವುದನ್ನು ಸೂಚಿಸುತ್ತಿದೆ ಎಂದು ರಕ್ಷಣಾ ಪರಿಣಿತರು ಆತಂಕ ವ್ಯಕ್ತಪಡಿಸಿದ್ದಾರೆ.

ಮಣಿಪುರದಲ್ಲಿ ಚುನಾವಣೆ ನಡೆಯುವುದರಿಂದ ಗಡಿಯಲ್ಲಿ ಇನ್ನೂ ಹೆಚ್ಚಿನ ಎಚ್ಚರಿಕೆ ವಹಿಸಬೇಕಿದೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ನಾಗಾಲ್ಯಾಂಡ್‌ನಲ್ಲಿ ಸ್ಥಗಿತಗೊಂಡಿರುವ ಶಾಂತಿ ಮಾತುಕತೆಗಳಿಂದ ವಿಭಜಿತಗೊಂಡಿರುವ ಉಗ್ರ ಗುಂಪುಗಳು ಹಾಗೂ ಮಣಿಪುರಿ ಬಂಡುಕೋರ ಗುಂಪುಗಳು ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗೆ ಅಡ್ಡಿಪಡಿಸಲು ಚೀನಾದ ಯುನ್ನಾನ್ ಪ್ರಾಂತ್ಯ ಮತ್ತು ಮ್ಯಾನ್ಮಾರ್ ಗಡಿ ಪ್ರದೇಶಗಳಲ್ಲಿ ಮತ್ತೆ ಗುಂಪುಗೂಡುತ್ತಿವೆ ಎಂದು ರಕ್ಷಣಾ ತಜ್ಞರು ಅಂದಾಜಿಸಿದ್ದಾರೆ.

'ಚೀನಾದಲ್ಲಿ ಉಗ್ರಗಾಮಿ ಗುಂಪುಗಳು ಮರು ಸಂಘಟನೆಯಾಗುತ್ತಿವೆ. ಅದಕ್ಕಾಗಿ ಗುಂಪಿನ ಹಲವು ಸದಸ್ಯರು ಚೀನಾದಲ್ಲಿ ಕೆಲಸ ಮಾಡುತ್ತಿದ್ದಾರೆ' ಎಂದು ಅಸ್ಸಾಂ ರೈಫಲ್ಸ್‌ನ ಮಾಜಿ ಇನ್‌ಸ್ಪೆಕ್ಟರ್ ಜನರಲ್ ಮೇಜರ್ ಜನರಲ್ ಭಬಾನಿ ಎಸ್.ದಾಸ್ ಅವರು ಪಿಟಿಐಗೆ ತಿಳಿಸಿದ್ದಾರೆ.

ಯುನೈಟೆಡ್ ಲಿಬರೇಶನ್ ಫ್ರಂಟ್ ಆಫ್ ಅಸ್ಸಾಂ (ಐ), ಪೀಪಲ್ಸ್ ಲಿಬರೇಶನ್ ಆರ್ಮಿ ಆಫ್ ಮಣಿಪುರ ಮತ್ತು ಶಾಂತಿ ಮಾತುಕತೆಗೆ ವಿರುದ್ಧವಾಗಿರುವ ನ್ಯಾಷನಲ್ ಸೋಷಿಯಲಿಸ್ಟ್ ಕೌನ್ಸಿಲ್ ಆಫ್ ನಾಗಾಲ್ಯಾಂಡ್ (ಕೆ) ನ ವಿಭಜಿತ ಬಣಗಳು ಗಡಿನಾಡಿನಲ್ಲಿ ಮತ್ತೆ ಗುಂಪುಗೂಡುತ್ತಿವೆ ಎಂದು ಹೇಳಲಾಗಿದೆ.

# ಶಾಲೆ ಬಂದ್: ಡಿ.ಸಿಗೆ ಅಧಿಕಾರ

ಒಂದನೇ ಪುಟದಿಂದ

ಕೋವಿಡ್‌ನಿಂದ ಮನೆಗಳಲ್ಲಿ ಪ್ರತ್ಯೇಕವಾಸದಲ್ಲಿರುವವರ ಮೇಲೆ ಹೆಚ್ಚಿನ ನಿಗಾ ಇಡಲಾಗುವುದು. ಇವರ ಆರೋಗ್ಯ ಸ್ಥಿತಿಯ ಮೇಲ್ವಿಚಾರಣೆಯನ್ನು ನಿಯಮಿತವಾಗಿ ಮಾಡಬೇಕು ಮತ್ತು ಸೂಕ್ತ ಔಷಧಿಗಳ ಕಿಟ್‌ಗಳನ್ನು ಒದಗಿಸಬೇಕು. ಪರೀಕ್ಷಾ ವರದಿ ಬಂದ ಕೂಡಲೇ ಸೋಂಕಿತರ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿ, ಆಸ್ಪತ್ರೆಗೆ ದಾಖಲಿಸುವ ಅಗತ್ಯವಿದೆಯೇ ಇಲ್ಲವೇ ಎಂದು ನಿರ್ಧರಿಸುವ ಟ್ರಯಾಜಿಂಗ್ ವ್ಯವಸ್ಥೆ ಬಲಪಡಿಸಲು ಸೂಚಿಸಲಾಯಿತು ಎಂದರು.

'ಕೋವಿಡ್ ಮುಂಜಾಗ್ರತಾ ಕ್ರಮವಾಗಿ ಜಾರಿಗೊಳಿಸಿರುವ ಮಾರ್ಗಸೂಚಿಗಳನ್ನು ಈ ತಿಂಗಳ ಅಂತ್ಯದವರೆಗೆ ವಿಸ್ತರಿಸಲಾಗಿದೆ. ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇದರಿಂದಾಗಿ ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಕರ್ಫ್ಯೂ ಈ ತಿಂಗಳ ಕೊನೆಯವರೆಗೂ ಜಾರಿಯಲ್ಲಿರುವ ಸಾಧ್ಯತೆ ಹೆಚ್ಚಿದೆ' ಎಂದು ಮೂಲಗಳು ಹೇಳಿವೆ.

**ನಿರ್ಬಂಧ ಪರಿಷ್ಕರಣೆ:**

- ಎಲ್ಲ ರೀತಿಯ ಧರಣಿ, ಪ್ರತಿಭಟನೆ ಮತ್ತು ರ್‍ಯಾಲಿಗಳನ್ನು ನಿರ್ಬಂಧಿಸಲಾಗಿದೆ. ಮದುವೆಗಳಿಗೆ ಒಳಾಂಗಣ 100 ಮತ್ತು ಹೊರಾಂಗಣದಲ್ಲಿ 200 ಜನರಿಗೆ ಮಾತ್ರ ಅವಕಾಶ
- ಮೆಟ್ರೊ ಸೇರಿದಂತೆ ಎಲ್ಲ ರೀತಿಯ ಸಾರ್ವಜನಿಕರ ಸಾರಿಗೆಗಳಲ್ಲಿ ಆಸನ ಸಾಮರ್ಥ್ಯದಷ್ಟೇ ಪ್ರಯಾಣಕ್ಕೆ ಅವಕಾಶ.
- ಬಿಬಿಎಂಪಿ ವಿಶೇಷ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಪರಿಸ್ಥಿತಿಯನ್ನು ನೋಡಿಕೊಂಡು ಹೆಚ್ಚುವರಿ ನಿರ್ಬಂಧಗಳನ್ನು ವಿಧಿಸಬಹುದು.
- ಬಿಬಿಎಂಪಿ ವಿಶೇಷ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳು ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು. ಇದಕ್ಕಾಗಿ ಸಿಆರ್‌ಪಿಸಿಯ 144 ನೇ ಸೆಕ್ಷನ್ ವಿಧಿಸಬಹುದು. ಇದನ್ನು ಯಾರಾದರೂ ಉಲ್ಲಂಘಿಸಿದರೆ, ಕಾನೂನು ಪ್ರಕಾರ ಕ್ರಮ ಜರುಗಿಸಬಹುದು.


## ಕರ್ನಾಟಕ ಸರ್ಕಾರ
## ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್‌ಗಳು)
ಫ್ಯಾಕ್ಸ್: 080–23461576 ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.25/2021 ದಿನಾಂಕ:11–01–2022

**ಅಧಿಸೂಚನೆ**

**ಪಿಜಿಇಟಿ–2021 – ಕರ್ನಾಟಕದಲ್ಲಿನ ಸ್ನಾತಕೋತ್ತರ ವೈದ್ಯಕೀಯ (ಪದವಿ ಮತ್ತು ಡಿಪ್ಲೊಮ) ಕೋರ್ಸುಗಳ ಪ್ರವೇಶ 2021–22 ಮತ್ತು ಕರ್ನಾಟಕದ ಸೇವಾನಿರತ ವೈದ್ಯರುಗಳಿಗೆ ಸ್ನಾತಕೋತ್ತರ ಡಿಎನ್‌ಬಿ ಹಾಗು ಡಿಪ್ಲೊಮ ಕೋರ್ಸುಗಳಿಗೆ ಪ್ರವೇಶ**

1. ಸರ್ಕಾರವು ತನ್ನ ಪತ್ರ ಸಂಖ್ಯೆ ಎಂಇಡಿ 04 ಆರ್‌ಜಿಯು 2022, ಬೆಂಗಳೂರು ದಿನಾಂಕ 06–01–2022 ರಲ್ಲಿ ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲು ಮತ್ತು ದಾಖಲಾತಿ ಪರಿಶೀಲನೆಯನ್ನು ಪ್ರಾರಂಭಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಆದೇಶಿಸಿರುತ್ತದೆ.
2. ಸರ್ಕಾರದ ನಿರ್ದೇಶನದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು NEET-PG 2021 ರಲ್ಲಿ ಅರ್ಹತೆಯನ್ನು ಪಡೆದಿರುವ ಹಾಗು ಅರ್ಹತಾ ಮಾನದಂಡಗಳನ್ನು ಪೂರೈಸುವ ಅರ್ಹ ಅಭ್ಯರ್ಥಿಗಳಿಂದ 2021–22 ನೇ ಸಾಲಿಗೆ ಕರ್ನಾಟಕ ರಾಜ್ಯದಲ್ಲಿನ ಸ್ನಾತಕೋತ್ತರ ಪದವಿ / ಡಿಪ್ಲೊಮ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಅಂದರೆ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸೀಟುಗಳು, ಖಾಸಗಿ ಮತ್ತು ಅಲ್ಪ ಸಂಖ್ಯಾತ ವೈದ್ಯಕೀಯ ಕಾಲೇಜುಗಳಲ್ಲಿ ಲಭ್ಯವಾಗುವ ಸರ್ಕಾರಿ ಕೋಟದ ಸೀಟುಗಳು ಮತ್ತು ಖಾಸಗಿ ಮತ್ತು ಅಲ್ಪ ಸಂಖ್ಯಾತ ವೈದ್ಯಕೀಯ ಕಾಲೇಜುಗಳಲ್ಲಿ ಖಾಸಗಿ ಸೀಟುಗಳ (KPCF, KRLMPCA, AMPCK and Private Universities) ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಿದೆ.
3. ಸರ್ಕಾರದ ಆದೇಶ ಸಂಖ್ಯೆ ಆಕುಕ 882 ಹೆಚ್‌ಎಸ್‌ಹೆಚ್ 2021 ಬೆಂಗಳೂರು ದಿನಾಂಕ 10–01–2022 ರ ಅನ್ವಯ NEET-PG 2021 ರಲ್ಲಿ ಅರ್ಹತೆಯನ್ನು ಪಡೆದಿರುವ ಹಾಗು ಅರ್ಹತಾ ಮಾನದಂಡಗಳನ್ನು ಪೂರೈಸುವ ಕರ್ನಾಟಕ ಸೇವಾನಿರತ ಅರ್ಹ ಅಭ್ಯರ್ಥಿಗಳಿಂದ 2021–22 ನೇ ಸಾಲಿಗೆ ಕರ್ನಾಟಕ ರಾಜ್ಯದಲ್ಲಿನ ಸ್ನಾತಕೋತ್ತರ ಡಿಎನ್‌ಬಿ ಹಾಗು ಡಿಪ್ಲೊಮ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿಯೂ ಸಹ ಪ್ರಾಧಿಕಾರವು ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಿದೆ.
4. PGNEET-2021 ರಲ್ಲಿ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಮಾತ್ರ ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ನೊಂದಣಿ ಮಾಡಿಕೊಳ್ಳಲು ಅರ್ಹರಿರುತ್ತಾರೆ.
5. ಕರ್ನಾಟಕೇತರ ಅಭ್ಯರ್ಥಿಗಳಿಗೆ ಯಾವುದೇ ಮೀಸಲಾತಿಯ ಸವಲತ್ತುಗಳು ಅನ್ವಯಿಸುವುದಿಲ್ಲ. ಆದ್ದರಿಂದ PGNEET- 2021 ರಲ್ಲಿ ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ (50th Percentile) ಅರ್ಹತೆಯನ್ನು ಪಡೆಯಬಹುದಾಗಿದೆ ಹಾಗು ಪ್ರವೇಶಕ್ಕಾಗಿ ನೊಂದಣಿಯನ್ನು ಮಾಡಿ ಕೊಳ್ಳಬಹುದಾಗಿದೆ. SC/ST/OBC ಅರ್ಹತಾ ಮಾನದಂಡಗಳು ಕರ್ನಾಟಕ SC/ST/OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.
6. ಆಸಕ್ತ ಅರ್ಹ ಅಭ್ಯರ್ಥಿಗಳು **ದಿನಾಂಕ 12–01–2022 ರ ಬೆ. 11.00 ರಿಂದ 15–01–2022 ರಾತ್ರಿ 11.59 ರ ವರೆಗೆ** ಅರ್ಜಿ ಸಲ್ಲಿಸಬಹುದಾಗಿರುತ್ತದೆ ಮತ್ತು ದಿನಾಂಕ **17–01–2022 ರೊಳಗಾಗಿ (ಸಂಜೆ 4.00 ರೊಳಗಾಗಿ)** ಅರ್ಜಿ ಶುಲ್ಕವನ್ನು ಪಾವತಿಸಬಹುದಾಗಿರುತ್ತದೆ.
7. ನೊಂದಣಿ ಶುಲ್ಕ, ದಾಖಲಾತಿ ಪರಿಶೀಲನೆಯ ವೇಳಾಪಟ್ಟಿ, ದಾಖಲಾತಿ ಪರಿಶೀಲನೆಗೆ ಸಲ್ಲಿಸಬೇಕಾದ ಮೂಲ ದಾಖಲಾತಿಗಳು, ಹಾಗು ಇತರೆ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿಕೊಂಡು ನೊಂದಣಿ ಮಾಡಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ದಾಖಲಾತಿ ಪರಿಶೀಲನೆಗೆ ಹಾಜರಾಗಬಹುದು.
8. ವಿವರವಾದ ಅರ್ಹತಾ ಮಾನದಂಡಗಳನ್ನೊಳಗೊಂಡ ಮಾಹಿತಿ ಪುಸ್ತಕ 2021 ಅನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ.
9. NEET-PG 2021 ನಲ್ಲಿ ಅರ್ಹತೆಯನ್ನು ಪಡೆದ ಮಾತ್ರಕ್ಕೆ, ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ / ನಿಗದಿತ ಪ್ರಮಾಣ ಪತ್ರಗಳನ್ನು ದಾಖಲಾತಿ ಪರಿಶೀಲನೆಗೆ ಹಾಜರುಪಡಿಸದಿದ್ದಲ್ಲಿ ಅಭ್ಯರ್ಥಿಯು ಪ್ರವೇಶಾತಿಗಾಗಿ ಯಾವುದೇ ಹಕ್ಕನ್ನು ಹೊಂದುವುದಿಲ್ಲ. ಮುಂದುವರಿದು, ನೊಂದಣಿ ಮಾಡಿಕೊಂಡು ದಾಖಲಾತಿ ಪರೀಶೀಲನೆಯನ್ನು ಯಶಸ್ವಿಯಾಗಿ ಪೂರೈಸುವ ಅಭ್ಯರ್ಥಿಗಳು ಮಾತ್ರ ಕರ್ನಾಟಕದಲ್ಲಿನ ಸರ್ಕಾರಿ / ಖಾಸಗಿ ಕಾಲೇಜುಗಳಲ್ಲಿ ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ.
10. ನೊಂದಣಿ ಮಾಡದಿರುವ ಅಥವಾ ನೊಂದಣಿ ಮಾಡಿ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳದೆ ಇರುವ ಅಭ್ಯರ್ಥಿಗಳು ಪ್ರಾಧಿಕಾರದಿಂದಾಗಲೀ ಅಥವಾ ಕಾಲೇಜುಗಳಿಂದಾಗಲೀ ಸೀಟುಗಳನ್ನು ತೆಗೆದುಕೊಳ್ಳಲು ಅನುಮತಿಸಲಾಗುವುದಿಲ್ಲ, MOP-UP ಸುತ್ತಿನ ಸೀಟು ಹಂಚಿಕೆಯ ನಂತರ ಉಳಿಯಬಹುದಾದ ಸೀಟುಗಳನ್ನು ಆಯಾ ಕಾಲೇಜುಗಳಿಗೆ ವರ್ಗಾಯಿಸಲಾಗುತ್ತದೆ. ಈ ಸೀಟುಗಳನ್ನು ಭರ್ತಿ ಮಾಡಿಕೊಳ್ಳಲು, ಪ್ರಾಧಿಕಾರವು ಕಳುಹಿಸುವ ನೊಂದಣಿ ಮಾಡಿಕೊಂಡು ದಾಖಲಾತಿ ಪರಿಶೀಲನೆಯನ್ನು ಮಾಡಿಸಿದ ಆದರೆ ಯಾವುದೇ ಸೀಟುಗಳನ್ನು ಹಂಚಿಕೆ ಪಡೆಯದೇ ಇರುವ ಅಭ್ಯರ್ಥಿಗಳ ಪಟ್ಟಿಯ ಅನುಕ್ರಮದಂತೆ ಕಾಲೇಜುಗಳಲ್ಲಿ ಸೀಟುಗಳನ್ನು ಭರ್ತಿಮಾಡಿಕೊಳ್ಳಲಾಗುತ್ತದೆ. (ಭಾರತ ಸರ್ಕಾರದ ಸೂಚನೆಗಳ ಅನ್ವಯ).

**ಸೂಚನೆ:** ನೀಟ್ ಪಿಜಿ 2021 ರಲ್ಲಿ ಅರ್ಹತೆ ಪಡೆದ ಎಲ್ಲಾ ಅಭ್ಯರ್ಥಿಗಳು ಕರ್ನಾಟಕ ರಾಜ್ಯದ ಪಿಜಿ ವೈದ್ಯಕೀಯ (ಪದವಿ / ಡಿಪ್ಲೊಮಾ) ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗಲು ಆನ್‌ಲೈನ್ ಮೂಲಕ ನೊಂದಾಯಿಸಿಕೊಳ್ಳಲು ಮತ್ತು ದಾಖಲೆಗಳ ಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಚಿಸಿದೆ.

ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಅನ್ನು ನೋಡಲು ಕೋರಿದೆ.

ಸಹಿ/–
(ಎಸ್. ರಮ್ಯ, ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ಬೆಂ.ನ/ಜಿಎ/2811/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



## ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
# 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080-22265383. Website: www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ/ಡಿಪಿಆರ್–09/13403/2021–22 ದಿನಾಂಕ:10.01.2022

**ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ**
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿಯು ಈ ಕೆಳಕಂಡ ಸೇವೆಗೆ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಹಾಗೂ ಬೆಂಗಳೂರಿನಲ್ಲಿ ನೆಲೆಸಿರುವ ಪ್ರತಿಷ್ಠಿತ ಅರ್ಹ ಸಲಹಾ ಸಂಸ್ಥೆಗಳಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : **ಹಾಸನ ಜಿಲ್ಲೆ ಮತ್ತು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಉದ್ದೇಶಿತ ಐಐಟಿ ಜಮೀನಿನಲ್ಲಿ ಕೈಗಾರಿಕಾ ಬಡಾವಣೆಯ ರಚನೆ, ಆರ್ಥಿಕ ವಿಶ್ಲೇಷಣಾ ವರದಿ, ಕಾರ್ಯಸಾಧ್ಯತಾ ವರದಿ, ಬಡಾವಣೆ ನಕ್ಷೆ, ವಿವರವಾದ ಅಂದಾಜು ಪಟ್ಟಿಯೊಂದಿಗೆ ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಸಲು ಸಲಹಾ ಸೇವೆಗಳನ್ನು ಒದಗಿಸುವ ಬಗ್ಗೆ.**

ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **31.01.2022ರ ಸಂಜೆ 4.00 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ ದಿನಾಂಕ : 12.01.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2

ವಾಸಾಸಂಇ/ಬೆಂ.ನ/ಜಿಎ/2790/2021–22

ಕೋವಿಡ್-19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



## ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in

**ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)**

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2021–22 ದಿನಾಂಕ : 11–01–2022

**ಅಲ್ಪಾವಧಿ ಇ–ಟೆಂಡರ ಅಧಿಸೂಚನೆ**

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಸನ್ 2020–21 ಹಾಗೂ 2021–22ನೇ ಸಾಲಿನ ಶಾಸಕರ ಅನುದಾನ ಹಾಗೂ ಪಾಲಿಕೆಯ ಸಾಮಾನ್ಯ ನಿಧಿಯ ಅನುದಾನ, ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD/HDMC/ ಇತರೇ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರಮೆಂಟ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ–ಪ್ರೊಕ್ಯೂರಮೆಂಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

**ಪರಿಶಿಷ್ಟ ಜಾತಿಯ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳು**

(1) ಇಂಡೆಂಟ್ ನಂ– 125298 ರೂ. **41.10** ಲಕ್ಷ (2) ಇಂಡೆಂಟ್ ನಂ– 125071 ರೂ. **28.00** ಲಕ್ಷ (3) ಇಂಡೆಂಟ್ ನಂ– 125808 ರೂ. **14.00** ಲಕ್ಷ

**ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ**

(4) ಇಂಡೆಂಟ್ ನಂ– 125576 ರೂ. **27.00** ಲಕ್ಷ

**ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರುವ ಕಾಮಗಾರಿಗಳು.**

(5) ಇಂಡೆಂಟ್ ನಂ– 122989 ರೂ. **10.00** ಲಕ್ಷ (6) ಇಂಡೆಂಟ್ ನಂ– 125028 ರೂ. **3.05** ಲಕ್ಷ (7) ಇಂಡೆಂಟ್ ನಂ– 125061 ರೂ. **30.60** ಲಕ್ಷ (8) ಇಂಡೆಂಟ್ ನಂ– 125295 ರೂ. **41.90** ಲಕ್ಷ (9) ಇಂಡೆಂಟ್ ನಂ– 123368 ರೂ. **4.00** ಲಕ್ಷ (10) ಇಂಡೆಂಟ್ ನಂ– 123416 ರೂ. **6.00** ಲಕ್ಷ (11) ಇಂಡೆಂಟ್ ನಂ– 125807 ರೂ. **42.00** ಲಕ್ಷ (12) ಇಂಡೆಂಟ್ ನಂ– 125575 ರೂ. **30.00** ಲಕ್ಷ (13) ಇಂಡೆಂಟ್ ನಂ– 125774 ರೂ. **28.00** ಲಕ್ಷ (14) ಇಂಡೆಂಟ್ ನಂ– 125806 ರೂ. **12.00** ಲಕ್ಷ (15) ಇಂಡೆಂಟ್ ನಂ– 121528 ರೂ. **53.00** ಲಕ್ಷ (16) ಇಂಡೆಂಟ್ ನಂ– 121529 ರೂ. **59.70** ಲಕ್ಷ (17) ಇಂಡೆಂಟ್ ನಂ– 120968 ರೂ. **90.00** ಲಕ್ಷ (18) ಇಂಡೆಂಟ್ ನಂ– 122066 ರೂ. **85.00** ಲಕ್ಷ (19) ಇಂಡೆಂಟ್ ನಂ– 121451 ರೂ. **70.00** ಲಕ್ಷ

**ಮರು ಕರೆ ಕಾಮಗಾರಿ**

**ಪರಿಶಿಷ್ಟ ಜಾತಿಯ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿಗಳು**

(20) ಇಂಡೆಂಟ್ ನಂ– 120449 ರೂ. **16.60** ಲಕ್ಷ (2ನೇ ಕರೆ) (21) ಇಂಡೆಂಟ್ ನಂ– 118291 ರೂ. **5.00** ಲಕ್ಷ (2ನೇ ಕರೆ)

**ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರುವ ಕಾಮಗಾರಿಗಳು.**

(22) ಇಂಡೆಂಟ್ ನಂ– 118679 ರೂ. **50.00** ಲಕ್ಷ (23) ಇಂಡೆಂಟ್ ನಂ– 120816 ರೂ. **90.00** ಲಕ್ಷ (2ನೇ ಕರೆ) (24) ಇಂಡೆಂಟ್ ನಂ– 116435 ರೂ. **97.50** ಲಕ್ಷ (2ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ: 0836:2213834ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ http:/www.eproc.karnataka.gov.in ರಲ್ಲಿ ಪಡೆಯಬಹುದು. ಕ್ರಮ ಸಂಖ್ಯೆ 01 ರಿಂದ 14ರ ಹಾಗೂ ಕ್ರಮಸಂಖ್ಯೆ 20 ರಿಂದ 24ರ ಕಾಮಗಾರಿಗಳ ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿ: **14–01–2022** ರಿಂದ ಪಡೆಯಬಹುದಾಗಿದೆ. ಕ್ರಮ ಸಂಖ್ಯೆ 15 ರಿಂದ 19 ರ ಕಾಮಗಾರಿಗಳ ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿ: **17–01–2022** ರಿಂದ ಪಡೆಯಬಹುದಾಗಿದೆ.

ಕ್ರಮ ಸಂಖ್ಯೆ 01 ರಿಂದ 14ರ ಹಾಗೂ ಕ್ರಮಸಂಖ್ಯೆ 20 ರಿಂದ 24ರ ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **24–01–2022** ರಂದು ಸಾಯಂಕಾಲ 4.00 ಘಂಟೆಯವರೆಗೆ

ಕ್ರಮ ಸಂಖ್ಯೆ 15 ರಿಂದ 19 ರ ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **27–01–2022** ರಂದು ಸಾಯಂಕಾಲ 4.00 ಘಂಟೆಯವರೆಗೆ

ಕ್ರಮ ಸಂಖ್ಯೆ 01 ರಿಂದ 14ರ ಹಾಗೂ ಕ್ರಮಸಂಖ್ಯೆ 20 ರಿಂದ 24ರ ಕಾಮಗಾರಿಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17–01–2022** ಸಾಯಂಕಾಲ 4.30 ಘಂಟೆಯ ನಂತರ.

ಕ್ರಮ ಸಂಖ್ಯೆ 15 ರಿಂದ 19 ರ ಕಾಮಗಾರಿಗಳ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27–01–2022** ಸಾಯಂಕಾಲ 4.30 ಘಂಟೆಯ

ಕ್ರಮ ಸಂಖ್ಯೆ 15 ರಿಂದ 19 ಹಾಗೂ 23 ರಿಂದ 24ರ ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **31–01–2022** ರಂದು ತೆರೆಯಲಾಗುವುದು. ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ

ವಾಸಾಸಂಇ/ಧಾ/ಎಂಸಿಎ/872/2021–22



## ಕರ್ನಾಟಕ ಸರ್ಕಾರ
## ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–3/.ಟೆಂಡರ್.ಅಧಿಸೂಚನೆ/2021–22/6573 ದಿನಾಂಕ:05.01.2022

**ಅಲ್ಪಾವಧಿ ಟೆಂಡರ ಪ್ರಕಟಣೆ**

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಲೆಕ್ಕ ಶೀರ್ಷಿಕೆ 5054 ಎಸ್.ಸಿ.ಪಿ/ಟಿಎಸ್.ಪಿ, 3054 ಎಸ್.ಸಿ.ಪಿ/ಟಿಎಸ್.ಪಿ ನಿರ್ವಹಣೆ, 3054 ರಾ.ಹೆ. ನಿರ್ವಹಣೆ, 8443 ಠೇವಣಿ ವದಂತಿಯ, ಪಿ.ಎಮ್.ಎ.ಜಿ.ವೈ, ಅತಿವೃಷ್ಠಿ ಮಳೆಹಾನಿ, ಟೂರಿಸಮ್ ಹಾಗೂ ಕೆ.ಕೆ.ಆರ್.ಡಿಬಿ ಯೋಜನೆಯಡಿಯಲ್ಲಿ ಒಟ್ಟು (74) ಕಾಮಗಾರಿಗಳಿಗೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : ಕನಿಷ್ಠ ರೂ. 7.04 ಲಕ್ಷಗಳು ಗರಿಷ್ಠ ರೂ. 421.06 ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ : "**ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು,** "ಕ್ಲಾಸ್–I: ಯಾವುದೇ ಮೊತ್ತಕ್ಕೆ ಭಾಗವಹಿಸಬಹುದು, "ಕ್ಲಾಸ್–II: ಕಾಮಗಾರಿ ಮೊತ್ತ ರೂ. 5.00 ಕೋಟಿಯವರೆಗೆ, "ಕ್ಲಾಸ್–III: ಕಾಮಗಾರಿ ಮೊತ್ತ ರೂ. 2.00 ಕೋಟಿಯವರೆಗೆ, "ಕ್ಲಾಸ್–IV: ಕಾಮಗಾರಿ ಮೊತ್ತ ರೂ. 25.00 ಲಕ್ಷಗಳವರೆಗೆ "ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು." 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ : ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ. 15,600.00 ಗರಿಷ್ಠ ರೂ. 6,32,000.00ಗಳು, ಪ್ರೀ ಬಿಡ್ ಮಿಟಿಂಗ 18/01/2022 (11.00 ಗಂಟೆ), 5) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟಿಕರಣ ಕೋರುವ ಕೊನೆಯ ದಿನಾಂಕ : 19/01/2022 (17.30 ಗಂಟೆ), 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 21/01/2022 (16.00 ಗಂಟೆ), 7) ತಾಂತ್ರಿಕ ಬಿಡ್ ತೆರವುಗೊಳಿಸಿವ ದಿನಾಂಕ : 24/01/2022 (16.30 ಗಂಟೆ), 8) ಆರ್ಥಿಕ ಬಿಡ್ ತೆರೆವುಗೋಳಿಸುವ ದಿನಾಂಕ : 28/01/2022 (16.30 ಗಂಟೆ), 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 10) ಅಂತರ್ಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/928/ಎಂ.ಸಿ.&ಎ/2021–22



## ಕರ್ನಾಟಕ ಸರಕಾರ
## ಕಾರ್ಯನಿರ್ವಾಹಕ ಅಭಿಯಂತರ ಕಛೇರಿ
## ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು

ಸಂ. ಕಾನಿಅ/ಗ್ರಾನೀಸ&ನೈ/ವಿರಾ/ತಾ.ಶಾ/JJM-2021-22/ಇ–ಟೆಂಡರ/2021–22/1529 ದಿನಾಂಕ: 06–01–2022

**ಇ–ಪ್ರೋಕ್ಯೂರಮೆಂಟ ಅಲ್ಪಾವಧಿ ಟೆಂಡರ ಪ್ರಕಟಣೆ**

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಇವರು KW-1,2, 3 & 4 (Standard Bid Document) ನಿಬಂಧನೆಗಳೊಪಟ್ಟಂತೆ ಪಂಚಾಯತರಾಜ ಇಂಜಿನೀಯರಿಂಗ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಇ–ಪ್ರೋಕ್ಯೂರಮೆಂಟ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2021–22 ನೇ ಸಾಲಿನ Jal Jeevan Mission(JJM) ಯೋಜನೆ ಅಡಿಯ ಕೇಂದ್ರ & ರಾಜ್ಯ (85%), ಗ್ರಾಮ ಪಂಚಾಯಿತಿ (5%) ಮತ್ತು ಸಮುಧಾಯ ವಂತಿಕೆ (10%) ಅನುದಾನದಡಿಯಲ್ಲಿ ರಾಯಚೂರು ಜಿಲ್ಲೆಯ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ–ಟೆಂಡರ ಆಹ್ವಾನಿಸಲಾಗಿದೆ.

1] E-Payment/NEFT ಮುಖಾಂತರ ಅರ್ಜಿ ಸ್ವೀಕರಿಸುವ ದಿನಾಂಕ : **07–01–2022,** 2] ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ : **07–01–2022,** 3] ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **21–01–2022 ಸಂಜೆ 5:30 ಗಂಟೆವರೆಗೆ,** 4] ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **23–01–2022 ಮುಂಜಾನೆ 11:00 ಗಂಟೆ** ಸಾಧ್ಯವಿದ್ದಲ್ಲಿ, 5] ಆರ್ಥಿಕ ಬಿಡ್ ತೆರೆಯುವ ದಿನಾಂಕ : **25–01–2022 ಮುಂಜಾನೆ 11:00 ಗಂಟೆ** ಸಾಧ್ಯವಿದ್ದಲ್ಲಿ.

**Indent Nos.: Lingasugur : 37761 SC Reserved, 37768, 37767, 37765, 37764, 37763, 37762, Manvi : 37810, 37809, 37808, 37807, Raichur : 37759, 37760**

ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ http://eproc.karnataka.gov.in ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು.,
ಗ್ರಾನೀ.ಸ & ನೈ ವಿಭಾಗ, ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/484/ಎಂ.ಸಿ.&ಎ/2021–22



## ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿಯಮಿತ (ಬೆಂಗಳೂರು ಡೇರಿ)

ಡಿ.ಆರ್.ಕಾಲೇಜು ಅಂಚೆ, ಡಾ: ಎಂ.ಹೆಚ್.ಮರೀಗೌಡರಸ್ತೆ, ಬೆಂಗಳೂರು–560029
ಇ–ಮೇಲ್: bamulpurchase@gmail.com
ವೆಬ್‌ಸೈಟ್ : www.bamulnandini.coop. ದೂರವಾಣಿ : 080–26096248

**ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್**

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.(ಬಮೂಲ್), ಬೆಂಗಳೂರುರವರು ಆಸಕ್ತಿಯುಳ್ಳ ಅರ್ಹ ತಯಾರಕರು/ಸರಬರಾಜುದಾರರುಗಳಿಂದ ಈ ಕೆಳಕಂಡ ಸಾಮಗ್ರಿಗಳಿಗೆ ಸರಬರಾಜಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಿದೆ.

**I. IFT No. BAMUL/PUR/T&C e- Tender-261/2021-22** **Date: 27.12.2021**

| Sl | Particulars | Qty | Estd Cost in Lkhs | Tender No |
|---|---|---|---|---|
| 01 | Design, Supply, Erection, Testing & Commissioning of LMP Expansion Plant along with Utility Expansion on Turnkey Basis at Kanakapura Dairy | 01 Lot | 3,127.00 | 261(01) |
| 02 | Design, Supply, Erection, Testing & Commissioning of 20 KLPH Homogenizer with Accessories & allied Equipments on Turnkey basis to Main Dairy | 01 Set | 125.00 | 261(02) |

**II. IFT No. BAMUL/PUR/T&C e- Tender-262/2021-22** **Date: 28.12.2021**

| Sl | Particulars | Qty | Estd Cost in Lkhs | Tender No |
|---|---|---|---|---|
| 01 | Supply of Trays for Peda / Mysore Pak at Main Dairy for One Year | | | |
| | a) 100gm Peda / Mysore pak | 10,00,000 nos | 37.70 | 262(01) |
| | b) 250gm Peda / Mysore pak | 14,00,000 nos | 72.10 | |
| 02 | Supply of LID Film for Peda/ Mysore Pak at Main Dairy for One Year | | | |
| | a) 100gm Peda / Mysore pak | 1,800 kg | 8.04 | 262(02) |
| | b) 250gm Peda / Mysore pak | 3,200 kg | 14.29 | |
| 03 | Supply & Installation of X-Ray Machine with S.S Conveyor for 100/200gm butter Packing Line at Main Dairy | 01 set | 43.00 | 262(03) |
| 04 | Supply & Installation of Nandini Kisok Parlour Structure at BAMUL Marketing area for a period of 2 years | 2,000 sft | 99.00 | 262(04) |

**III. IFT No. BAMUL/PUR/T&C e- Tender-263/2021-22** **Date: 30.12.2021**

| Sl | Particulars | Qty | Estd Cost in Lkhs | Tender No |
|---|---|---|---|---|
| 01 | Printing, Supply & Fixing of LED boards at BAMUL Marketing Area | 10,000 sft | 70.00 | 263(01) |
| 02 | Supply of Bottle Cooler – 200 ltrs | 200 nos | 34.00 | 263(02) |
| 03 | Supply of Bottle Cooler – 400 ltrs | 200 nos | 50.00 | 263(03) |
| 04 | Supply of Visi Cooler – 300 ltrs | 200 nos | 60.00 | 263(04) |
| 05 | Printing & Supply of Banners | 15,000 sft | 3.00 | 263(05) |
| 06 | Supply of Nandini Gift Bags | 5,000 nos | 3.00 | 263(06) |
| 07 | Supply of Milk Carry Bags | 10,000 nos | 50.00 | 263(07) |
| 08 | Printing & Supply of T-shirt | 5,000 nos | 15.00 | 263(08) |
| 09 | Printing & Supply of Caps | 5000 nos | 3.00 | 263(09) |

| | | |
|---|---|---|
| 1 | ಇ–ಟೆಂಡರ್ ದಾಖಲೆಗಳು ಲಭಿಸುವ ದಿನಾಂಕ ಮತ್ತು ಸಮಯ | **03.01.2022 ರಿಂದ 03.02.2022 ಅಪರಾಹ್ನ 02.00 ಗಂಟೆವರೆಗೆ** |
| 2 | ಪ್ರೀ–ಬಿಡ್ ಮೀಟಿಂಗ್ ಮತ್ತು ಟೆಂಡರ್ ಬಗ್ಗೆ ಸ್ಪಷ್ಟನೆ ದಿನಾಂಕ ಮತ್ತು ಸಮಯ | **20.01.2022 ಬೆಳಿಗ್ಗೆ 11.00 ಗಂಟೆಗೆ ವರೆಗೆ** |
| 3 | ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ | **03.02.2022ಅಪರಾಹ್ನ 02.00 ಗಂಟೆವರೆಗೆ** |
| 4 | ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ | **04.02.2022ಅಪರಾಹ್ನ 02.35 ಗಂಟೆಗೆ** |
| 5 | ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ | **07.02.2022 ಬೆಳಿಗ್ಗೆ 11.30 ಗಂಟೆಗೆ** |
| 6 | ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ತೆರೆಯುವ ಸ್ಥಳ: **ಬೆಂಗಳೂರು ಸಹಕಾರ ಹಾಲು ಒಕ್ಕೂಟ (ನಿ.) (ಬೆಂಗಳೂರು ಡೇರಿ) ಮಂಡಲಿ ಸಭಾಂಗಣ** | |

ಟೆಂಡರ್‌ದಾರರು ಮೇಲೆ ತಿಳಿಸಿರುವ ಸೇವೆಗಳಿಗೆ ಪ್ರತ್ಯೇಕ ಟೆಂಡರ್ ಸಲ್ಲಿಸಬೇಕು. ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಹೊಂದಿರಬೇಕಾದ ಅರ್ಹತಾ ಅಗತ್ಯತೆಯನ್ನು ವಿಭಾಗ VII ರಲ್ಲಿ ತಿಳಿಸಲಾಗಿದೆ.

ಇ.ಎಂ.ಡಿ. ಬಾಬ್ತಿನ ಹಣವು ಟೆಂಡರ್ ಅವಧಿಯ 45 ದಿನಗಳ ವಾಯ್ದೆ ಮೀರಿದ್ದು, ಅಂದರೆ ಒಟ್ಟು 135 ದಿನಗಳ ಸಿಂಧುತ್ವದ ಅವಧಿಗೆ ಅನ್ವಯವಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕ ಇ–ಪಾವತಿಯ ವಿಧಾನಗಳು ಮತ್ತುಟೆಂಡರ್ ದಾಖಲೆಗಳ ವಿವರವನ್ನು ವೆಬ್‌ಸೈಟ್ **www.eproc.karnataka.gov.in**ನಲ್ಲಿ ವೀಕ್ಷಿಸಬಹುದು. **Tender No: KMF/BAMUL/PUR/2021-22/261,262,263.**

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ (ಬಮೂಲ್)

# ಅಭಿಮತ



ಸುಭಾಷಿತ
ನಾವು ನಂಬುವ ತತ್ವಗಳಿಗಿಂತ ಬದುಕುವ ರೀತಿ ಮುಖ್ಯ.
-ಎ.ಎನ್.ಮೂರ್ತಿ ರಾವ್

# ಆರೋಗ್ಯ ಸೂಚಿ: ಕರ್ನಾಟಕದ ಸಾಧನೆ ನಿರಾಶಾದಾಯಕ

ನೀತಿ ಆಯೋಗದ 2019–20ನೇ ಸಾಲಿನ 'ಆರೋಗ್ಯ ಸೂಚ್ಯಂಕ ವರದಿ' ಇತ್ತೀಚೆಗೆ ಪ್ರಕಟವಾಗಿದೆ. ದೇಶದ ವಿವಿಧ ರಾಜ್ಯಗಳು ಆರೋಗ್ಯ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಗೆ ಈ ವರದಿಯು ಕನ್ನಡಿ ಹಿಡಿಯುತ್ತದೆ. ದಕ್ಷಿಣ ಭಾರತದ ಬಹುತೇಕ ಎಲ್ಲ ರಾಜ್ಯಗಳು ಆರೋಗ್ಯ ಕ್ಷೇತ್ರದ ವಿವಿಧ ಸೂಚಿಗಳಲ್ಲಿ ಪ್ರಗತಿಯತ್ತ ಮುಖ ಮಾಡಿದ್ದರೆ, ಕರ್ನಾಟಕ ಮಾತ್ರ ಹಿಂದೆ ಬಿದ್ದಿರುವುದು ಕಳವಳಕಾರಿ. 24 ಸೂಚ್ಯಂಕಗಳ ಆಧಾರದ ಮೇಲೆ ರ‍್ಯಾಂಕಿಂಗ್ ನೀಡಲಾಗಿದ್ದು, ನಮ್ಮ ರಾಜ್ಯ ಒಂಬತ್ತನೇ ಸ್ಥಾನಕ್ಕೆ ಕುಸಿದಿದೆ. 2018–19ನೇ ಸಾಲಿಗೆ ಹೋಲಿಸಿದರೆ, 2019–20ನೇ ಸಾಲಿನಲ್ಲಿ ಒಂದು ಸ್ಥಾನ ಕುಸಿತ ಕಂಡಿದೆ. ಅಷ್ಟೇ ಅಲ್ಲದೆ, ಆರೋಗ್ಯ ಕ್ಷೇತ್ರದಲ್ಲಿ ಒಟ್ಟಾರೆ ಆಗಿರುವ ಪ್ರಗತಿ ವಿಚಾರದಲ್ಲಿ ರಾಜ್ಯ ಕೊನೆಯ ಸ್ಥಾನದಲ್ಲಿದೆ. ಅಕ್ಕಪಕ್ಕದ ಕೇರಳ ಮತ್ತು ತಮಿಳುನಾಡು ರಾಜ್ಯಗಳು ಆರೋಗ್ಯ ಕ್ಷೇತ್ರದಲ್ಲಿ ಬಹಳಷ್ಟು ಪ್ರಗತಿ ಸಾಧಿಸುವ ಮೂಲಕ ರ‍್ಯಾಂಕಿಂಗ್ ಪಟ್ಟಿಯಲ್ಲಿ ಮೊದಲ ಎರಡು ಸ್ಥಾನದಲ್ಲಿರುವಾಗ ರಾಜ್ಯದ ಕಳಪೆ ಸಾಧನೆ ನಿರಾಸೆ ಮೂಡಿಸುತ್ತದೆ. ಆರೋಗ್ಯ ಕ್ಷೇತ್ರದತ್ತ ರಾಜ್ಯ ಎಷ್ಟೊಂದು ನಿರ್ಲಕ್ಷ್ಯ ತಾಳಿದೆ ಎನ್ನುವುದಕ್ಕೆ ಇದು ನಿದರ್ಶನ. ವರದಿಯಲ್ಲಿ ಉಲ್ಲೇಖಿಸಿರುವ ಹಲವು ಅಂಶಗಳು ಆಗಬೇಕಿರುವ ಸುಧಾರಣಾ ಕ್ರಮಗಳತ್ತ ಬೊಟ್ಟು ಮಾಡುತ್ತವೆ. ಎಲ್ಲೆಲ್ಲಿ ತಪ್ಪು ಹೆಜ್ಜೆ ಇಟ್ಟಿದ್ದೇವೆ, ಏನೆಲ್ಲ ಬದಲಾವಣೆ ಮಾಡಿಕೊಳ್ಳಬೇಕಿದೆ, ಅಗ್ರಕ್ರಮಾಂಕದಲ್ಲಿರುವ ರಾಜ್ಯಗಳಿಂದ ನಾವು ಕಲಿಯುವುದು ಏನಿದೆ ಎಂಬುದನ್ನು ತಿಳಿದುಕೊಳ್ಳಲು ಆರೋಗ್ಯ ಸೂಚ್ಯಂಕ ವರದಿ ಉಪಯುಕ್ತ. ಆರೋಗ್ಯ ಕ್ಷೇತ್ರದಲ್ಲಿ ರಾಜ್ಯ ಹಿಂದೆ ಬೀಳಲು ಹಲವು ಅಂಶಗಳು ಕಾರಣವಾಗಿವೆ. ನವಜಾತ ಶಿಶುಗಳ ಮರಣ ಪ್ರಮಾಣ, ಹೆರಿಗೆ ಸಮಯದಲ್ಲಿ ತಾಯಂದಿರ ಮರಣ ಪ್ರಮಾಣ, ಲಿಂಗಾನುಪಾತ, ಆಸ್ಪತ್ರೆಯಲ್ಲಿ ಆಗುವ ಹೆರಿಗೆಗಳ ಪ್ರಮಾಣ ಹಾಗೂ ರಾಜ್ಯದ ಒಟ್ಟು ವೆಚ್ಚದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಮಾಡಲಾಗುವ ವೆಚ್ಚದ ಪ್ರಮಾಣದಲ್ಲಿ ಕುಸಿತ – ಇವೆಲ್ಲ ರಾಜ್ಯದ ಹಿನ್ನಡೆಗೆ ಕಾರಣ ಎಂಬುದು ದತ್ತಾಂಶಗಳಿಂದ ಸ್ಪಷ್ಟ.



**ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೂ ರಾಜ್ಯದ ಸಾಮಾಜಿಕ, ಆರ್ಥಿಕ ಬೆಳವಣಿಗೆಗೂ ನೇರ ಸಂಬಂಧವಿದೆ ಎಂಬುದನ್ನು ಸರ್ಕಾರ ಅರಿತು, ಪ್ರಗತಿದಾಯಕ ಆರೋಗ್ಯ ನೀತಿಗಳನ್ನು ರೂಪಿಸಬೇಕು**

ಆರೋಗ್ಯ ಸೂಚ್ಯಂಕದ ವರದಿಯು ವಸ್ತುಸ್ಥಿತಿಯನ್ನು ಮನದಟ್ಟು ಮಾಡುವ ಕಾರಣದಿಂದ ಮಾತ್ರವಲ್ಲದೆ ಕೇಂದ್ರದ ಅನುದಾನ ಪಡೆಯುವ ದೃಷ್ಟಿಯಿಂದಲೂ ಮಹತ್ವದ ಪಾತ್ರ ವಹಿಸುತ್ತದೆ. ಉತ್ತಮ ಪ್ರಗತಿ ತೋರುತ್ತಿರುವ ರಾಜ್ಯಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ನೀತಿ ಆಯೋಗ ಶಿಫಾರಸು ಮಾಡಿದೆ. ಕಳಪೆ ಸಾಧನೆ ಎಂದರೆ ಅನುದಾನದ ಪ್ರಮಾಣದಲ್ಲೂ ಕುಸಿತ ಎಂದೇ ಅರ್ಥ. ಆಡಳಿತದ ಹೊಣೆ ಹೊತ್ತವರ ವೈಫಲ್ಯಕ್ಕಾಗಿ ರಾಜ್ಯ ಬೆಲೆ ತೆರಬೇಕಾದುದು ಬೇಸರದ ಸಂಗತಿ. ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಸೇವೆಗೆ ಸಂಬಂಧಿಸಿದ ಕೊರತೆಗಳು ಬಹಳಷ್ಟಿವೆ. ಜಿಲ್ಲಾ ಮಟ್ಟದಲ್ಲಿ ಹೃದಯ ಆರೋಗ್ಯ ಆರೈಕೆ ವ್ಯವಸ್ಥೆ ಕೂಡ ಸಮರ್ಪಕವಾಗಿಲ್ಲ ಎನ್ನುವುದು ಹಿಂದಿನ ಸಮೀಕ್ಷೆಗಳಲ್ಲಿ ಎದ್ದು ಕಂಡಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ರಾಜ್ಯ ಸರ್ಕಾರ ಎಷ್ಟು ಮುತುವರ್ಜಿ ತೋರಬೇಕಿತ್ತೋ ಅಷ್ಟನ್ನು ತೋರಿಲ್ಲ ಎಂಬ ಸತ್ಯವನ್ನೂ ಆ ಸಮೀಕ್ಷೆಗಳು ಹೊರಹಾಕಿವೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಚಿಕಿತ್ಸೆಗೆ ನೆರವಾಗಬಲ್ಲ ತಾಲ್ಲೂಕು ಆಸ್ಪತ್ರೆಗಳ ಸಾಮರ್ಥ್ಯವನ್ನು ಮೇಲ್ದರ್ಜೆಗೆ ಏರಿಸಬೇಕೆಂಬ ಬೇಡಿಕೆ ಕೂಡ ಬಹುದಿನಗಳಿಂದ ಹಾಗೇ ನನೆಗುದಿಗೆ ಬಿದ್ದಿದೆ. ಜಿಲ್ಲಾ ಆಸ್ಪತ್ರೆಯಿಂದ ಹಿಡಿದು ಉಪ ಆರೋಗ್ಯ ಕೇಂದ್ರದವರೆಗೆ ಎಲ್ಲ ಹಂತಗಳಲ್ಲೂ ವೈದ್ಯರ ಕೊರತೆ ತೀವ್ರವಾಗಿ ಬಾಧಿಸುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ರೋಗಪೀಡಿತ ಆಗಿರುವುದರಿಂದಲೇ ಜನರಿಗೆ ಅವುಗಳ ಕುರಿತು ಭಯ ಹಾಗೂ ಅಪನಂಬಿಕೆ. ಸುಸ್ಥಿರವಾದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಕಲ್ಪಿಸುವ ದೃಷ್ಟಿಯಲ್ಲಿ ಅಕ್ಕಪಕ್ಕದ ರಾಜ್ಯಗಳಿಂದ ನಾವು ಕಲಿಯುವುದು ಬೇಕಾದಷ್ಟಿದೆ. ತಮಿಳುನಾಡಿನಲ್ಲಿ ಚಿಕಿತ್ಸೆ ಪಡೆಯಲು ಜನ ವಿಶ್ವಾಸದಿಂದ ಆರೋಗ್ಯ ಕೇಂದ್ರಗಳ ಕಡೆಗೆ ತೆರಳುತ್ತಾರೆ. ಆರೋಗ್ಯ ಕೇಂದ್ರಗಳ ಸಾಮರ್ಥ್ಯದ ಕುರಿತು ನಮ್ಮಲ್ಲೂ ಅಂತಹ ನಂಬಿಕೆ ಬೆಳೆಯುವಂತೆ ಸೌಲಭ್ಯಗಳನ್ನು ಮೇಲ್ದರ್ಜೆಗೆ ಏರಿಸಬೇಕು. ಕೇರಳದಲ್ಲಿ ಪ್ರತೀ ಐದು ಸಾವಿರ ಜನರಿಗೆ ಒಂದರಂತೆ ಆರೋಗ್ಯ ಕೇಂದ್ರವಿದೆ. ರಾಜ್ಯದಲ್ಲೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸುವತ್ತ ಗಮನಹರಿಸಬೇಕು. ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೂ ರಾಜ್ಯದ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಗೂ ನೇರ ಸಂಬಂಧವಿದೆ ಎಂಬುದನ್ನು ಸರ್ಕಾರ ಅರಿಯಬೇಕು. ವೈಫಲ್ಯಗಳನ್ನು ಅರಿತು, ಪ್ರಗತಿಯತ್ತ ಹೆಜ್ಜೆ ಹಾಕುವಂತಹ ಆರೋಗ್ಯ ನೀತಿಗಳನ್ನು ರೂಪಿಸಬೇಕು. ಆರೋಗ್ಯ ಕ್ಷೇತ್ರವನ್ನು ಆದ್ಯತಾ ವಲಯವನ್ನಾಗಿ ಗುರುತಿಸಿ, ಸಾರ್ವಜನಿಕ ಆರೋಗ್ಯ ರಕ್ಷಣೆಗೆ ಸಮರ್ಪಕವಾದ ವ್ಯವಸ್ಥೆ ರೂಪಿಸಬೇಕು.

## ದಿನದ ಟ್ವೀಟ್



### ಅನಗತ್ಯ ತಿಣುಕಾಟ

ಮಗನ ಮೂರನೆಯ ಕ್ಲಾಸ್ ಗಣಿತದಲ್ಲಿ 'ಪುನರಾವರ್ತಿತ ಸಂಕಲನವೇ ಗುಣಾಕಾರ' ಅನ್ನುವ ಹೇಳಿಕೆ. 'ಮತ್ತೆ ಮತ್ತೆ ಕೂಡಿಸುವುದೇ ಗುಣಾಕಾರ' ಅನ್ನಬಹುದಲ್ಲವೇ? ಇದ್ಯಾಕೆ ಇಷ್ಟೊಂದು ಕಷ್ಟವಾಗಿಸಿದ್ದಾರೆ ಅಂತ ತಿಳಿಯಲ್ಲ.

**ವಸಂತ ಶೆಟ್ಟಿ,** ಬರಹಗಾರ

## ಕಿಡಿನುಡಿ

ಕೊರೊನಾ ತಡೆಗಟ್ಟುವುದೇ ಸರ್ಕಾರದ ಉದ್ದೇಶವಾಗಿದ್ದರೆ ಸುಭಾಷ್ ಗುತ್ತೇದಾರ್, ರೇಣುಕಾಚಾರ್ಯ ಮೇಲೂ ಕೇಸು ದಾಖಲಾಗಬೇಕಿತ್ತು ಅಲ್ಲವೇ? ನಮ್ಮ ಮೇಲೆ ಮಾತ್ರ ಕಾನೂನು ಕ್ರಮ ಏಕೆ? ಸರ್ಕಾರ ಇನ್ನೂ ಎಷ್ಟು ಕೇಸು ದಾಖಲಿಸುತ್ತದೋ ದಾಖಲಿಸಲಿ, ಎಲ್ಲದಕ್ಕೂ ನಾವು ಕಾನೂನಿನ ಮೂಲಕವೇ ಉತ್ತರ ನೀಡುತ್ತೇವೆ.



**ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

## 25 ವರ್ಷಗಳ ಹಿಂದೆ

ಭಾನುವಾರ, 12-1-1997

**• ಸಚಿವರ ವಿರುದ್ಧ ಸಿಬಿಐ ತನಿಖೆ ಪ್ರಧಾನಿ ಅನುಮತಿಗೆ ಪ್ರಸ್ತಾವ**

**ನವದೆಹಲಿ, ಜ. 11 (ಪಿಟಿಐ)**– ಪ್ರಧಾನಿ ಅವರ ಪೂರ್ವಾನುಮತಿ ಇಲ್ಲದೆಯೇ ಸೇವೆಯಲ್ಲಿರುವ ಅಥವಾ ಮಾಜಿ ಕೇಂದ್ರ ಸಚಿವರುಗಳ ವಿರುದ್ಧ ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ) ಯಾವುದೇ ಕ್ರಮ ಜರುಗಿಸುವುದಕ್ಕೆ ತಡೆ ಹಾಕಲು ಸರ್ಕಾರ ಉದ್ದೇಶಿಸಿದೆ.

ಈ ಪ್ರಸ್ತಾವದ ಪ್ರಕಾರ, ಸೇವೆಯಲ್ಲಿರುವ ಅಥವಾ ಮಾಜಿ ಕೇಂದ್ರ ಸಚಿವರುಗಳ ವಿರುದ್ಧ ಶೋಧ ಸೇರಿದಂತೆ ಯಾವುದೇ ರೀತಿಯ ವಿಚಾರಣೆ ಕೈಗೊಳ್ಳುವ ಮೊದಲು ಸಿಬಿಐ, ಪ್ರಧಾನಿಯ ಅನುಮತಿ ಪಡೆಯಬೇಕಾಗುತ್ತದೆ.

**• ಉತ್ತರ– ದಕ್ಷಿಣ ಕರ್ನಾಟಕ ಭೇದ ಬೇಡ: ಪ್ರಧಾನಿ ಕರೆ**

**ಬೆಳಗಾವಿ, ಜ. 11**– ಉತ್ತರ ಕರ್ನಾಟಕ – ದಕ್ಷಿಣ ಕರ್ನಾಟಕ ಎಂಬ ಭೇದಭಾವ ಮಾಡುವುದು ಬೇಡ ಎಂದು ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಇಂದು ಇಲ್ಲಿ ಕಳಕಳಿಯ ಮನವಿ ಮಾಡಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಬೆಳಗಾವಿ ಮಧ್ಯವರ್ತಿ ಸಹಕಾರಿ ಬ್ಯಾಂಕಿನ (ಡಿ.ಸಿ.ಸಿ) ಅಮೃತ ಮಹೋತ್ಸವವನ್ನು ಉದ್ಘಾಟಿಸಿ ಭಾರಿ ಬಹಿರಂಗ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಹುಬ್ಬಳ್ಳಿ ರೈಲ್ವೆ ಕಾರ್ಯಾಗಾರದ ಅಭಿವೃದ್ಧಿಗೆ ₹37 ಕೋಟಿಯನ್ನು ತಾವು ಮಂಜೂರು ಮಾಡಿದಾಗ 'ಅದು ಹಾಸನ ಎಂದೇನೂ ಮಾಡಲಿಲ್ಲ' ಎಂದರು.

ತಾವು ಕೇವಲ ಹಾಸನದ ಪ್ರಧಾನಿ ಮತ್ತು ಒಕ್ಕಲಿಗರ ನಾಯಕ ಎಂದು 'ವ್ಯವಸ್ಥಿತವಾಗಿ ಬಿಂಬಿಸುವ ಪ್ರಯತ್ನವನ್ನು' ಪರೋಕ್ಷವಾಗಿ ಪ್ರಸ್ತಾಪಿಸಿ ಮಾತನಾಡಿದ ದೇವೇಗೌಡರು, ಕೃಷ್ಣಾ ಮೇಲ್ದಂಡೆ ಯೋಜನೆಗೆ ₹124 ಕೋಟಿ ನೆರವನ್ನು ಕೇಂದ್ರದಿಂದ ಬಿಡುಗಡೆ ಮಾಡಿದಾಗ ಅಲ್ಲಿ ತಮ್ಮ ಬೀಗರು ಇದ್ದಾರೆ ಎಂದು ತಿಳಿದಿರಲಿಲ್ಲ ಎಂದರು.

## 50 ವರ್ಷಗಳ ಹಿಂದೆ

ಬುಧವಾರ, 12-1-1972

**• ಅಮೆರಿಕ ನೆರವು ನಿಂತರೂ ಆರ್ಥಿಕ ಪ್ರಗತಿಗೆ ಧಕ್ಕೆ ಇಲ್ಲ**

**ನವದೆಹಲಿ, ಜ. 11**– ಅಮೆರಿಕ ನೆರವು ರದ್ದುಪಡಿಸಿದ್ದರಿಂದ ಉಂಟಾದ ಪರಿಸ್ಥಿತಿಯನ್ನು ಭಾರತವು ಯಶಸ್ವಿಯಾಗಿ ಎದುರಿಸುವುದು ಎಂದು ಅಧಿಕೃತ ವಕ್ತಾರರು ಇಂದು ಇಲ್ಲಿ ತಿಳಿಸಿದರು.

ಭಾರತವು ಮೊದಲು ಊಹಿಸಿದ್ದಂತೆ ಅಂತಹ ಕಷ್ಟದ ಪರಿಸ್ಥಿತಿಯಲ್ಲೇನಿಲ್ಲ. ನೆರವು ನಿಂತರೂ ಆರ್ಥಿಕ ರಂಗದ ಉತ್ಕರ್ಷ ಕಡಿಮೆಯಾಗುವುದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

ಉಕ್ಕು, ಗೊಬ್ಬರ, ಬಿಡಿ ಭಾಗಗಳು, ಪೆಟ್ರೋಲಿಯಂ ಉತ್ಪನ್ನ, ಮುದ್ರಣ ಕಾಗದ ಮುಂತಾದ ಐದಾರು ಉದ್ಯಮಗಳಲ್ಲಿ ತೊಂದರೆಯಾಗುವ ನಿರೀಕ್ಷೆ ಇದೆ ಎಂದರು.

**• ನೆರೆ ರಾಜ್ಯಗಳಿಗೆ ಮೈಸೂರಿನಿಂದ ವಿದ್ಯುತ್ ಬೇಡಿಕೆ ಖೋತಾ ಸಂಭವ**

**ನವದೆಹಲಿ, ಜ. 11**– ಮೈಸೂರು ತನ್ನ ನೆರೆಯ ರಾಜ್ಯಗಳಿಗೆ ಕಳೆದ ವರ್ಷ ನೀಡಿದಷ್ಟು ವಿದ್ಯುತ್‌ನ್ನು ಈ ವರ್ಷ ಸರಬರಾಜು ಮಾಡಲು ಸಾಧ್ಯವಾಗದಿರಬಹುದೆಂದು ರಾಜ್ಯದ ವಿದ್ಯುತ್ ಮಂಡಳಿ ಮುಖ್ಯ ಎಂಜಿನಿಯರ್ ಎಂ.ಎ. ಷರೀಫ್ ಇಂದು ಇಲ್ಲಿ ತಿಳಿಸಿದರು.

ನೆರೆಯ ರಾಜ್ಯಗಳಾದ ಆಂಧ್ರ, ತಮಿಳುನಾಡು, ಕೇರಳ, ಮಹಾರಾಷ್ಟ್ರ ಮತ್ತು ಗೋವಾಕ್ಕೆ ಕಳೆದ ವರ್ಷ ಸುಮಾರು 800 ದಶಲಕ್ಷ ಕಿಲೊವಾಟ್‌ಗಳಷ್ಟು ವಿದ್ಯುತ್ ಸರಬರಾಜು ಮಾಡಲಾಗಿತ್ತು ಎಂದರು.

ಮೆಟಾವರ್ಸ್: ತಂತ್ರಜ್ಞಾನ ವಲಯದಲ್ಲಿ ಹೊಸ ಕನಸು ಬಿತ್ತಿರುವ ವಾಸ್ತವೋಪಮ ಜಗತ್ತು

# ತಂತ್ರಜ್ಞಾನ ದೈತ್ಯರ ಹೊಸ ಅಂಗಳ



ವಿಶ್ಲೇಷಣೆ

ಕೇಡ್ ಮೆಟ್ಜ್

**ತಂತ್ರಜ್ಞಾನ** ಉದ್ಯಮದ ವಲಯದಲ್ಲಿ ಅತಿಹೆಚ್ಚು ಸದ್ದು ಮಾಡುತ್ತಿರುವ ಪದಗಳ ಸಾಲಿನಲ್ಲಿ ಮೆಟಾವರ್ಸ್ ಕೂಡ ಒಂದು. ಮೆಟಾವರ್ಸ್ ಅಂದರೆ ಹಲವು ಅರ್ಥಗಳು ಇವೆ. ಕಲ್ಪನೆಗಳನ್ನು ಹೇಗೆಲ್ಲ ಬೆಳೆಸಿಕೊಳ್ಳಬಹುದೋ ಹಾಗೆಲ್ಲ ವಿಕಾಸಗೊಳ್ಳುವ ವಾಸ್ತವೋಪಮ ಜಗತ್ತು ಇದಾಗಿರಬಹುದು. ಅಥವಾ ಇದು ವಾಣಿಜ್ಯ ಉದ್ದೇಶದ ಸಭೆಗಳನ್ನು ಮನೆಗಳಲ್ಲಿ ಇದ್ದುಕೊಂಡೇ ಆಯೋಜಿಸುವ ವೇದಿಕೆಯೂ ಆಗಿರಬಹುದು. ಈ ಪರಿಕಲ್ಪನೆಯ ಹಿಂದೆ ಬಿದ್ದಿರುವ ತಂತ್ರಜ್ಞಾನ ವಲಯದ ದೈತ್ಯ ಕಂಪನಿಗಳ ಪಾಲಿಗೆ ಇದು ಇಂದ್ರಿಯಗ್ರಾಹ್ಯವಾದ, ರಾಶಿಗಟ್ಟಲೆ ಹಣ ಮಾಡಿಕೊಳ್ಳುವ ಒಂದು ಅವಕಾಶ ಆಗಿರಬಹುದು.

ಮೊಬೈಲ್ ಕಂಪ್ಯೂಟಿಂಗ್‌ನಲ್ಲಿ ಆದ ಬೆಳವಣಿಗೆಯ ನೆರವಿನಿಂದ ಕೋಟ್ಯಂತರ ರೂಪಾಯಿಗಳನ್ನು ತಂತ್ರಜ್ಞಾನ ಕ್ಷೇತ್ರದ ದೈತ್ಯರು ಸಂಪಾದಿಸಿದರು. ಮೆಟಾವರ್ಸ್ (ವಾಸ್ತವೋಪಮ ಜಗತ್ತು) ಬಾಗಿಲುಗಳ ಮೇಲೆ ನಿಯಂತ್ರಣ ಸಾಧಿಸಿದರೆ ಹೊಸ ವಹಿವಾಟೊಂದರ ಕೇಂದ್ರ ಸ್ಥಾನದಲ್ಲಿ ನಿಂತಂತೆ ಆಗುತ್ತದೆ ಎಂದು ತಂತ್ರಜ್ಞಾನ ವಲಯದ ಪ್ರಭಾವಿಗಳು ನಂಬಿದ್ದಾರೆ.

ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಅಲೆಯೊಂದು ಬರಲಿ ಎಂದು ಹದಿನೈದು ವರ್ಷ ಕಾಯುವುದು ಉದ್ಯಮದ ಪಾಲಿಗೆ ದೀರ್ಘ ಅವಧಿಯಾಗುತ್ತದೆ. ಕೃತಕ ಬುದ್ಧಿಮತ್ತೆಯ ಮುಂದುವರಿದ ಹಂತಗಳು ಮತ್ತು ಕ್ವಾಂಟಂ ಕಂಪ್ಯೂಟಿಂಗ್, ಉದ್ಯಮದ ಕೇಂದ್ರ ಸ್ಥಾನಕ್ಕೆ ಬಂದಿರುತ್ತವೆ ಎಂದು ಹಲವರು ಭಾವಿಸಿದ್ದರು. ಆದರೆ, ಹಾಗೆ ಆಗುವುದಕ್ಕೆ ಬಹಳ ಸಮಯ ತೆಗೆದುಕೊಳ್ಳುತ್ತಿದೆ. ಕ್ರಿಪ್ಟೊಕರೆನ್ಸಿಗಳ ಹಿಂದಿರುವ ತಂತ್ರಜ್ಞಾನ, ವಿಕೇಂದ್ರೀಕೃತ ಕಂಪ್ಯೂಟಿಂಗ್ ಬಗ್ಗೆ ಭರವಸೆ ಇದೆಯಾದರೂ ಇವು ಮುಖ್ಯವಾಹಿನಿಯ ಭಾಗವಾಗುತ್ತವೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಹಾಗಾಗಿ ತಂತ್ರಜ್ಞಾನ ಕಂಪನಿಗಳು, ಗ್ರಾಹಕರಿಗೆ ವಾಸ್ತವೋಪಮ ವಿಶ್ವವನ್ನು ಪ್ರವೇಶಿಸಲು ಅನುವು ಮಾಡಿಕೊಡುವ ಸಾಧನಗಳನ್ನು ಮಾರಾಟ ಮಾಡಿ, ವಾಸ್ತವೋಪಮ ಜಗತ್ತಿನಲ್ಲಿ ಗ್ರಾಹಕರು ಪಡೆಯುವ ಅನುಭವವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವ ಹವಣಿಕೆಯಲ್ಲಿ ಇವೆ.

ಮಾರ್ಕ್ ಝುಕರ್‌ಬರ್ಗ್ ಅವರಿಗೆ ಮೆಟಾವರ್ಸ್ ಬಗ್ಗೆ ಅದೆಷ್ಟು ರೋಮಾಂಚನವೆಂದರೆ ಅವರು ತಮ್ಮ ಕಂಪನಿ ಫೇಸ್‌ಬುಕ್‌ನ ಹೆಸರನ್ನು ಈಚೆಗೆ ಮೆಟಾ ಎಂದು ಬದಲಿಸಿದ್ದಾರೆ. ಗೂಗಲ್ ಕಂಪನಿಯು ಮೆಟಾವರ್ಸ್‌ಗೆ ಸಂಬಂಧಿಸಿದ ತಂತ್ರಜ್ಞಾನವನ್ನು ಗಮನದಲ್ಲಿ ಇರಿಸಿಕೊಂಡು ಕೆಲವು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದೆ. ಮೊಬೈಲ್ ಲೋಕದಲ್ಲಿನ ಬೆಳವಣಿಗೆಯಿಂದ ಬಹುದೊಡ್ಡ ಪ್ರಯೋಜನ ಪಡೆದ ಆ್ಯಪಲ್ ಕಂಪನಿಯು ಮೆಟಾವರ್ಸ್‌ಗಾಗಿ ತನ್ನದೇ ಆದ ಸಾಧನಗಳನ್ನು ಅಭಿವೃದ್ಧಿಪಡಿಸುತ್ತಿದೆ. 'ಮೆಟಾವರ್ಸ್‌ನ ಕಾಲ ಹತ್ತಿರವಾಗುತ್ತಿದೆ ಎಂಬುದನ್ನು ಬಹುತೇಕ ಕಂಪನಿಗಳು ಮನಗಂಡಿವೆ. ಆದರೆ ಈ ತಂತ್ರಜ್ಞಾನದ ವಾಸ್ತವಕ್ಕಿಂತಲೂ ಅದರ ಸುತ್ತಲಿನ ಸಂಕಥನವು ತುಸು ಮುಂದಕ್ಕೆ ಹೆಜ್ಜೆ ಇರಿಸಿದೆ' ಎಂದು ಹೂಡಿಕೆದಾರ (ವೆಂಚರ್ ಕ್ಯಾಪಿಟಲಿಸ್ಟ್), ಬರಹಗಾರ ಮ್ಯಾಥ್ಯೂ ಬಾಲ್ ಹೇಳುತ್ತಾರೆ. ಒಂದು ಅಂದಾಜಿನ ಪ್ರಕಾರ, ಮೆಟಾವರ್ಸ್ ತಂತ್ರಜ್ಞಾನದ–ಗೇಮ್ಸ್, ವಾಸ್ತವೋಪಮ ಹೆಡ್‌ಸೆಟ್‌ಗಳು ಮತ್ತು ಇತರ ಆನ್‌ಲೈನ್ ಸೇವೆಗಳಿಗೆ ಸಂಬಂಧಿಸಿದ ಸಲಕರಣೆಗಳು–ಮಾರುಕಟ್ಟೆಯು 2020ರಲ್ಲಿ ₹ 3.62 ಲಕ್ಷ ಕೋಟಿಯನ್ನು ದಾಟಿದೆ. ಈ ಮಾರುಕಟ್ಟೆಯು ಪ್ರತಿವರ್ಷವೂ ಶೇಕಡ 40ಕ್ಕಿಂತ ಹೆಚ್ಚಿನ ಪ್ರಮಾಣದ ಬೆಳವಣಿಗೆಯನ್ನು ಕಾಣಲಿದೆ.

ಇದು ಇಂಟರ್ನೆಟ್‌ನ ವಿಕಾಸದ ಹಂತ. ಮೈಕ್ರೊಸಾಫ್ಟ್‌ನಂತಹ ಕಂಪನಿಗಳು ಇಂತಹ ವಿಕಾಸದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಬಯಸುತ್ತವೆ ಎಂದು ಅಲೆಕ್ಸ್ ಕಿಪ್‌ಮನ್ ತಿಳಿಸಿದರು. ಇವರು ಮೈಕ್ರೊಸಾಫ್ಟ್ ಕಂಪನಿಯಲ್ಲಿ ದಶಕಕ್ಕೂ ಹೆಚ್ಚಿನ ಅವಧಿಯಿಂದ ಇಂತಹ ತಂತ್ರಜ್ಞಾನಗಳ ನಿರ್ವಹಣೆಯ ಅನುಭವ ಹೊಂದಿದ್ದಾರೆ. ಫೇಸ್‌ಬುಕ್‌ನಂತಹ ಕಂಪನಿಗಳು ತಮ್ಮ ಗಮನವನ್ನು ಮೆಟಾವರ್ಸ್ ಕಡೆ ಹರಿಸುವುದರಿಂದ, ಫೇಸ್‌ಬುಕ್‌ನಲ್ಲಿನ ವಸ್ತು–ವಿಷಯಗಳ ನಿಯಂತ್ರಣ, ಸುಳ್ಳು ಮಾಹಿತಿ ತಡೆಯುವ ಸಮಸ್ಯೆಗಳಲ್ಲದೆ ಬೇರೆ ಕಡೆಯೂ ಗಮನ ಹರಿಸಲು ಸಾಧ್ಯವಾಗುತ್ತದೆ. ಕಾನೂನು ಜಾರಿ ಸಂಸ್ಥೆಗಳು ಈ ಕಂಪನಿಗಳ ವಿರುದ್ಧ ಏಕಸ್ವಾಮ್ಯದ ಆರೋಪ ಹೊರಿಸುವ ಪ್ರಮೇಯವೂ ಇರುವುದಿಲ್ಲ. ಆದರೆ, ಮೆಟಾವರ್ಸ್‌ನಲ್ಲಿ ಖಾಸಗಿತನದ ಸುರಕ್ಷತೆಯಂತಹ ವಿಷಯಗಳ ಮೇಲೆ ಗಮನ ಇರಿಸಬೇಕಾದ ಸಂದರ್ಭ ಎದುರಾಗಬಹುದು.

ಮೆಟಾವರ್ಸ್ ಎಂಬುದು ಹೊಸ ಪರಿಕಲ್ಪನೆಯೇನೂ ಅಲ್ಲ. ವಿಜ್ಞಾನ ಕಾದಂಬರಿಕಾರ ನೀಲ್ ಸ್ಟೀಫನ್‌ಸನ್ ಅವರು 1992ರಲ್ಲಿ ಈ ಪದವನ್ನು ಮೊದಲಿಗೆ ಬಳಸಿದ್ದರು. ಈ ಪರಿಕಲ್ಪನೆಯನ್ನು ವಿಡಿಯೊ ಗೇಮ್ ಕಂಪನಿಗಳು ಹೆಚ್ಚಾಗಿ ಬಳಸುತ್ತಿವೆ. ಹಲವರು ಸೇರಿ ಏಕಕಾಲದಲ್ಲಿ ಆಡಬಹುದಾದ ಆನ್‌ಲೈನ್ ಆಟಗಳು ಈಚಿನ ದಿನಗಳಲ್ಲಿ ಡಿಜಿಟಲ್ ಜಗತ್ತಿನ ಮಾದರಿಯಲ್ಲಿ ಕೆಲಸ ಮಾಡಿವೆ. ಇಲ್ಲಿ ಬೇರೆ ಬೇರೆ ಕಡೆಗಳ ಜನ ಒಂದೆಡೆ ಸೇರಬಹುದು, ಮಾತುಕತೆ ನಡೆಸಬಹುದು. 2014ರಲ್ಲಿ ಫೇಸ್‌ಬುಕ್ ಕಂಪನಿಯು ₹ 14 ಸಾವಿರ ಕೋಟಿ ಪಾವತಿಸಿ ಅಕ್ಯುಲಸ್ ಕಂಪನಿಯನ್ನು ಖರೀದಿಸಿತು. ಈ ನವೋದ್ಯಮ ಕಂಪನಿಯು ವಾಸ್ತವೋಪಮ ಹೆಡ್‌ಸೆಟ್‌ಗಳನ್ನು ತಯಾರಿಸುತ್ತಿತ್ತು. ನೀವು ಒಂದು ಡಿಜಿಟಲ್ ಜಗತ್ತಿನಲ್ಲಿ ಇದ್ದೀರಿ ಎಂಬ ಭ್ರಮೆಯನ್ನು ಮೂಡಿಸುವ ಕನ್ನಡಕಗಳನ್ನು ಸಿದ್ಧಪಡಿಸುತ್ತಿತ್ತು. ಕಂಪ್ಯೂಟಿಂಗ್ ಜಗತ್ತಿನಲ್ಲಿ ಭವಿಷ್ಯದ ವೇದಿಕೆ ವಾಸ್ತವೋಪಮ ತಂತ್ರಜ್ಞಾನಕ್ಕೆ ಸಂಬಂಧಿಸಿದ್ದು ಎಂದು ಝುಕರ್‌ಬರ್ಗ್ ಆಗಲೇ ಹೇಳಲು ಆರಂಭಿಸಿದ್ದರು. ಆನ್‌ಲೈನ್ ಜಗತ್ತಿನ ಆಟಗಳಿಗಿಂತಲೂ ಹೆಚ್ಚು ವ್ಯಾಪಕವಾಗಿ ಮೆಟಾವರ್ಸ್ ನಮ್ಮ ಬದುಕನ್ನು ಆವರಿಸಲಿದೆ ಎಂಬುದು ಝುಕರ್‌ಬರ್ಗ್ ಹೇಳಿಕೆ. ಉತ್ಪನ್ನಗಳ ಖರೀದಿಗೆ, ಸೇವೆಗಳ ಬಳಕೆಗೆ ಮೆಟಾವರ್ಸ್ ಹೊಸ ವೇದಿಕೆಗಳನ್ನು ಕಲ್ಪಿಸಿಕೊಡಲಿದೆ. ಕುಟುಂಬದ ಸದಸ್ಯರ ಜೊತೆ, ಸ್ನೇಹಿತರ ಜೊತೆ ಮಾತುಕತೆ ನಡೆಸಲು ಹಾಗೂ ಸಹೋದ್ಯೋಗಿಗಳ ಜೊತೆ ಚರ್ಚೆ ನಡೆಸಲು ಹೊಸ ಮಾರ್ಗಗಳನ್ನು ರೂಪಿಸಿಕೊಡಲಿದೆ.




ಅತ್ಯಂತ ಜನಪ್ರಿಯವಾದ, ಗ್ರಾಹಕ ಸ್ನೇಹಿ ಆಗಿರುವ ಸಾಧನಗಳನ್ನು ತಯಾರಿಸುವಲ್ಲಿ ಹೆಸರು ಮಾಡಿರುವ ಆ್ಯಪಲ್ ಕಂಪನಿಯು ಮೆಟಾವರ್ಸ್‌ಗೆ ಅಗತ್ಯವಿರುವ ಹೆಡ್‌ಸೆಟ್‌ಗಳಲ್ಲಿ ಸುಧಾರಣೆ ತರುವ ಕೆಲಸ ಮಾಡುತ್ತಿದೆ ಎಂದು ಮೂಲಗಳು ಹೇಳಿವೆ. ಆದರೆ ಈ ಕುರಿತು ಮಾಹಿತಿ ನೀಡಲು ಆ್ಯಪಲ್ ನಿರಾಕರಿಸಿದೆ. ಮೆಟಾವರ್ಸ್ ಅನ್ನು ಅನುಭವಿಸಲು ಅಗತ್ಯವಿರುವ ಹಗುರವಾದ ಕನ್ನಡಕಗಳ ಲಭ್ಯತೆಯನ್ನು ಆಧರಿಸಿ, ಝುಕರ್‌ಬರ್ಗ್ ಅವರ ಕನಸು ನನಸಾಗುತ್ತದೆ ಎಂಬುದು ತಜ್ಞರ ಅಂಬೋಣ. ಈ ಕನ್ನಡಕಗಳು ತಮ್ಮ ಮೂಲಕ ಕಾಣಿಸುವ ನಿಜ ಜಗತ್ತಿನ ಮೇಲೊಂದು ಪರದೆಯನ್ನು ಸೃಷ್ಟಿಸಿ, ಅಲ್ಲಿ ಡಿಜಿಟಲ್ ಜಗತ್ತಿನ ವಿದ್ಯಮಾನಗಳನ್ನು ತೋರಿಸಬಲ್ಲವು.

ಇಂತಹ ಕನ್ನಡಕ ಧರಿಸಿ ಬೀದಿಗಳಲ್ಲಿ ನಡೆದುಕೊಂಡು ಹೋಗುವ ಜನ, ತಮ್ಮ ಕಣ್ಣೆದುರು ಸದಾ ಇರುವ ಡಿಜಿಟಲ್ ಪರದೆಯೊಂದರ ಮೂಲಕ ಕ್ರೀಡೆಯೊಂದರ ವಿವರಗಳನ್ನು ಗಮನಿಸಬಲ್ಲರು. ತಮ್ಮ ಪಕ್ಕದಲ್ಲಿ ಇರುವವರ ಜೊತೆ, ಪಕ್ಕದಲ್ಲಿ ಇಲ್ಲದವರ ಜೊತೆ ಒಂದೇ ಬಾರಿಗೆ ಮೆಟಾವರ್ಸ್ ಮೂಲಕ ಸಭೆ ನಡೆಸಬಲ್ಲರು. ಇಂತಹ ಕನ್ನಡಕಗಳನ್ನು ಅಭಿವೃದ್ಧಿಪಡಿಸುತ್ತಿರುವ ಕಂಪನಿಗಳ ಸಾಲಿಗೆ ಗೂಗಲ್ ಕೂಡ ಸೇರಿದೆ. ಕಳೆದ ವರ್ಷದಲ್ಲಿ ಗೂಗಲ್ ಕಂಪನಿಯು ನಾರ್ತ್ ಎಂಬ ನವೋದ್ಯಮವನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದು, ಈ ನಾರ್ತ್ ಕಂಪನಿಯು ಸ್ಮಾರ್ಟ್‌ಗ್ಲಾಸ್‌ಗೆ ಸಂಬಂಧಿಸಿದ ಹಲವು ಹಕ್ಕುಸ್ವಾಮ್ಯಗಳನ್ನು ತನ್ನದಾಗಿಸಿಕೊಂಡಿದೆ. ಈ ಸ್ಮಾರ್ಟ್‌ಗ್ಲಾಸ್‌ಗಳು ತಮ್ಮನ್ನು ಧರಿಸಿದವರ ಕಣ್ಣಮುಂದೆ ಡಿಜಿಟಲ್ ಚಿತ್ರಗಳನ್ನು ಮೂಡಿಸುತ್ತವೆ.

'ನಾವು ಅದ್ಭುತ ಉತ್ಪನ್ನಗಳನ್ನು ಸಿದ್ಧಪಡಿಸಬಹುದು. ಹಾಗೆ ಮಾಡುವಲ್ಲಿ ಹಾರ್ಡ್‌ವೇರ್‌ಗೆ ಸಂಬಂಧಿಸಿದಂತೆ ಯಾವ ಸಮಸ್ಯೆಯೂ ಇಲ್ಲ. ಇಲ್ಲಿ ವಾಣಿಜ್ಯ ವಹಿವಾಟಿನ ಮಾದರಿಗಳಿಗೆ ಸಂಬಂಧಿಸಿದಂತೆಯೂ ಸಮಸ್ಯೆ ಇಲ್ಲ. ಇಂತಹ ಉಪಕರಣಗಳನ್ನು ಬಳಸಲಿಕ್ಕೆ ಒಂದು ದಾರಿಯನ್ನು ಕಂಡುಕೊಳ್ಳುವುದು ದೊಡ್ಡ ಸಂಗತಿಯಲ್ಲ. ಆದರೆ ಇಲ್ಲಿ, ದತ್ತಾಂಶ ಸೋರಿಕೆ ಆದರೆ ಮುಂದೇನಾಗುತ್ತದೆ ಎಂಬುದೇ ಬಹುದೊಡ್ಡ ಪ್ರಶ್ನೆ' ಎಂದು ಇಂಟೆಲ್ ಕಂಪನಿಯಲ್ಲಿ ವಾಸ್ತವೋಪಮ ಯೋಜನೆಯೊಂದರಲ್ಲಿ ಕೆಲಸ ಮಾಡಿರುವ ಜೆರ್ರಿ ಬಟಿಸ್ಟಾ ಹೇಳುತ್ತಾರೆ.

ದಿ ನ್ಯೂಯಾರ್ಕ್ ಟೈಮ್ಸ್

## ಚುರುಮುರಿ



### ವೈರಸ್ ಸ್ಯಾರಿ

• ಮಣ್ಣೆ ರಾಜು

**ಸಂಕ್ರಾಂತಿ** ಹಬ್ಬದ ಸೀರೆ ಖರೀದಿಗೆ ಸುಮಿ ಬಂದಿದ್ದಳು. 'ಮೇಡಂ, ವೈರಸ್ ಸೀರೆ ತೋರಿಸಲಾ?' ಸೇಲ್ಸ್‌ಗರ್ಲ್ ಕೇಳಿದಳು.

'ಸ್ಯಾರಿ ಜೊತೆ ಮಾರಿಯನ್ನು ಕೊಳ್ತಾರೇನ್ರೀ?!' ಸುಮಿ ಗಾಬರಿಯಾದಳು.

'ಮೇಡಂ, ಇದು ಮಾರಕ ವೈರಸ್ ಅಲ್ಲ, ಮನಮೋಹಕ ವೈರಸ್ ಸ್ಯಾರಿ. ವೈರಸ್ ಚಿತ್ರಗಳ ಚಿತ್ತಾಕರ್ಷಕ ಸೀರೆ'.

'ಲೇಟೆಸ್ಟ್ ಓಮೈಕ್ರಾನ್ ಬ್ರ್ಯಾಂಡ್ ಇಲ್ವಾ?'

'ಇದೆ ನೋಡಿ, ಕ್ಯೂಟ್ ವೈರಸ್ ಚಿತ್ರಗಳ ಪ್ರಿಂಟ್ ಇದೆ. ಬಾರ್ಡರ್, ಸೆರಗು ಗ್ರ್ಯಾಂಡಾಗಿವೆ. ಡಿಸೈನ್, ಕಲರ್ ನಿಮಗೆ ಒಪ್ಪುತ್ತದೆ. ಸೀರೆ ಕೊಂಡರೆ ಬ್ಲೌಸ್ ಜೊತೆ ಮ್ಯಾಚಿಂಗ್ ಮಾಸ್ಕ್ ಫ್ರೀ'.

'ಈ ಸೀರೆಯನ್ನು ಸ್ಯಾನಿಟೈಸ್ ಮಾಡಿ ಉಡಬೇಕಾ? ಬೇರೆ ಸೀರೆಗಳಿಂದ ಅಂತರ ಕಾಪಾಡಬೇಕಾ?'

ಸೇಲ್ಸ್‌ಗರ್ಲ್ ನಗುತ್ತಾ ಇನ್ನಷ್ಟು ಸೀರೆಗಳನ್ನು ಬಿಚ್ಚಿ ಹರಡಿದಳು. ಕಣ್ಣು ಕುಕ್ಕುವ ಸೀರೆಗಳಿಗೆ ಸುಮಿ ಮನಸೋತಳು.

'ಗಂಡಸರೆಲ್ಲಾ ಗ್ಯಾಲರಿಗೆ ಹೋಗಿ...' ಅಲ್ಲಿದ್ದವರಿಗೆ ಸೇಲ್ಸ್‌ಗರ್ಲ್ ಕೂಗಿ ಹೇಳಿದಳು.

'ಗ್ಯಾಲರಿನಾ?!...' ಅರ್ಥವಾಗದೆ ಸುಮಿ ಕೇಳಿದಳು.

'ಹೌದು ಮೇಡಂ, ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೇನು ಕೆಲಸ? ಸೀರೆ ಅಂಗಡಿಯಲ್ಲಿ ಗಂಡಸರಿಗೆ ಕೆಲಸವಿಲ್ಲ. ಹೆಂಡ್ತಿಯ ಸೀರೆ ಆಯ್ಕೆಗೆ ಡಿಸ್ಟರ್ಬ್ ಮಾಡುವ ಮಕ್ಕಳನ್ನು ಆಟ ಆಡಿಸಿಕೊಂಡು ಕಾಯಲೆಂದು ಗಂಡಸರ ಗ್ಯಾಲರಿ ಮಾಡಿದ್ದೇವೆ'.

'ಅದೂ ಸರಿನೇ, ಗಂಡಂದಿರಿಗೆ ಸೀರೆ ಸೆಲೆಕ್ಷನ್ ಗೊತ್ತಿಲ್ಲ, ಸೀರೆ ಆಯ್ಕೆ ಹೆಂಗಸರ ಮೂಲಭೂತ ಜಾಣತನ...' ಸುಮಿ ಬೀಗಿದಳು.

'ಆದರೇನು, ಸೀರೆ ಆಯ್ಕೆ ಮಾಡುವಾಗ ಇರುವ ಜಾಣತನ ಗಂಡನನ್ನು ಆರಿಸುವಾಗ ಇರಲಿಲ್ಲ ಎಂದು ಎಷ್ಟೋ ಹೆಂಗಸರು ಪಶ್ಚಾತ್ತಾಪಪಡುತ್ತಾರೆ ಮೇಡಂ...'

'ಹೌದು, ನಮಗೆ ಮ್ಯಾಚ್ ಆಗುವ ರೆಡಿಮೇಡ್ ಗಂಡ ಸಿಗುವುದಿಲ್ಲ, ಸಿಕ್ಕಿರುವ ಗಂಡನನ್ನೇ ನಮಗೆ ಬೇಕಾದಂತೆ ಪಳಗಿಸಿಕೊಂಡು ಬಾಳಬೇಕಷ್ಟೇ...' ಎಂದ ಸುಮಿ ಸೀರೆ ಪ್ಯಾಕ್ ಮಾಡಲು ಹೇಳಿದಳು.

## ಸಂಗತ

# ಸನ್ಯಾಸತ್ವಕ್ಕೆ ಹೊಸ ಭಾಷ್ಯ

ಧೀರವಾಣಿಯಿಂದ ಜಗತ್ತನ್ನು ಜಾಗೃತಗೊಳಿಸಿದ ಪ್ರಕಾಂಡ ಪಂಡಿತ ಸ್ವಾಮಿ ವಿವೇಕಾನಂದರ ನಿಲುವು ಸರ್ವಕಾಲಕ್ಕೂ ಪ್ರಸ್ತುತ

• ಡಾ. ಎಚ್.ಬಿ.ಚಂದ್ರಶೇಖರ್

**ಸಾಧು,** ಸನ್ಯಾಸಿಗಳೆಂದರೆ ಸಮಾಜ, ಜನರಿಂದ ದೂರವುಳಿದು ವೈರಾಗ್ಯ ಭಾವದಿಂದ ಕಾಡು, ಗುಹೆಗಳಲ್ಲಿ ಏಕಾಂತ ವಾಸ ಮಾಡುತ್ತಾ ಧ್ಯಾನ, ಜಪ, ತಪಗಳಲ್ಲಿ ಮುಳುಗಿ ಆತ್ಮಸಾಕ್ಷಾತ್ಕಾರದೆಡೆಗೆ ಸಾಗುವವರೆಂಬ ಕಲ್ಪನೆಯನ್ನು ತೊಡೆದುಹಾಕಿದವರು ಸ್ವಾಮಿ ವಿವೇಕಾನಂದರು. ಆತ್ಮೋದ್ಧಾರಕ್ಕಿಂತ ಹೆಚ್ಚಾಗಿ ದೀನ ದುರ್ಬಲರ ಸೇವೆ ಮಾಡುತ್ತಾ ಸರ್ವರ ಆತ್ಮೋದ್ಧಾರಕ್ಕೆ ಶ್ರಮಿಸುವವನೇ ನಿಜವಾದ ಸನ್ಯಾಸಿ ಎಂದು ಸನ್ಯಾಸತ್ವಕ್ಕೆ ಹೊಸ ಭಾಷ್ಯ ಬರೆದವರು ಅವರು.

ಜನರ ನಡುವೆಯೇ ಇದ್ದು ತ್ಯಾಗ, ವೈರಾಗ್ಯ ಭಾವಗಳಿಂದ ಆಧ್ಯಾತ್ಮಿಕ ಸಾಧನೆ ಮಾಡುತ್ತಾ, ಜನರಲ್ಲಿ ಮನೆಮಾಡಿದ್ದ ಜಡತ್ವ ತೊಡೆದುಹಾಕಿ ತಮ್ಮ ಧೀರವಾಣಿಯಿಂದ ವಿಶ್ವದ ಜನರನ್ನು ಜಾಗೃತಗೊಳಿಸಿದವರು. 'ವ್ಯಕ್ತಿಯ ಮೋಕ್ಷ ನಿಜವಾದ ಪರಿಪೂರ್ಣವಾದ ಮೋಕ್ಷವಲ್ಲ. ಮೋಕ್ಷದಲ್ಲಿ ಸಾರ್ವತ್ರಿಕ ಮೋಕ್ಷವೇ ನಿಜವಾದ ಮುಕ್ತಿ' ಎನ್ನುತ್ತಾ ಸರ್ವರನ್ನೂ ಮುಕ್ತಿ ಮಾರ್ಗದೆಡೆಗೆ ಕೊಂಡೊಯ್ಯುವುದರ ಪ್ರಾಮುಖ್ಯತೆಯನ್ನು ತಿಳಿಸಿದವರು.

ಅಮೆರಿಕದ ಷಿಕಾಗೊದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಅವರನ್ನು ಪ್ರಥಮ ಬಾರಿ ನೋಡಿದ ಆ್ಯನಿಬೆಸೆಂಟರು ಅವರ ನಿಲುವು, ಭಾವ ಭಂಗಿಗಳನ್ನು ವರ್ಣಿಸುತ್ತಾ, 'ಅವರನ್ನು ಸನ್ಯಾಸಿ ಎನ್ನುವುದಕ್ಕಿಂತ ಯೋಧ ಎನ್ನುವುದು ಯೋಗ್ಯ ಎಂದುಕೊಂಡೆ. ಅಂತೂ ಕಡೆಗೆ ಯೋಧಸನ್ಯಾಸಿಯಾದರು' ಎನ್ನುತ್ತಾರೆ.


ಧ್ಯಾನ, ಆಧ್ಯಾತ್ಮಿಕ ಸಾಧನೆಗಳ ಜೊತೆ ಜೊತೆಗೆ ಕಾಯಕನಿಷ್ಠೆ, ಜನರ ಸೇವೆ ಮಾಡುತ್ತಾ ದೇಶ, ವಿಶ್ವದ ಜನರನ್ನು ಉದ್ಧರಿಸಲು ಸನ್ಯಾಸಿ, ಗೃಹಸ್ಥರೆಲ್ಲರೂ ಶ್ರಮಿಸಬೇಕೆಂದು ಕರೆ ನೀಡುತ್ತಾರೆ. ಅವರು 'ತಪಸ್ಸಿನ ಫಲದಿಂದ ಶಕ್ತಿ ಬರುತ್ತದೆ. ಅದರಂತೆ ಸೇವಾಭಾವದಿಂದ ಕರ್ಮ ಮಾಡಿದರೂ ಅದು ತಪಸ್ಸಾಗುತ್ತದೆ. ಪರಾರ್ಥವಾಗಿ ಕರ್ಮ ಮಾಡುತ್ತಿದ್ದರೆ ಚಿತ್ತಶುದ್ಧಿಯೂ ಪರಮಾತ್ಮನ ದರ್ಶನವೂ ಲಭಿಸುತ್ತದೆ' ಎಂದು ಪ್ರತಿಪಾದಿಸುತ್ತಾರೆ.

ಸ್ವಾಮಿ ವಿವೇಕಾನಂದರು ಬಹುಮುಖ ಪ್ರತಿಭೆಯುಳ್ಳವರಾಗಿದ್ದರು. ಅವರೊಬ್ಬ ಅದ್ಭುತವಾದ ಗಾಯಕರಾಗಿದ್ದರು ಸಹ. ಗಾಯನದ ಜೊತೆಗೆ ಮೃದಂಗ, ತಂಬೂರಿಗಳನ್ನೂ ನುಡಿಸಬಲ್ಲವರಾಗಿದ್ದರು. ಕೆಲವೊಮ್ಮೆ ಉತ್ತಮವಾಗಿ ಅಡುಗೆ ಮಾಡಿ ಭಕ್ತರಿಗೆ, ದೀನ ದುರ್ಬಲರಿಗೆ ಉಣಬಡಿಸುತ್ತಿದ್ದರು. 'ಯಾರು ಚೆನ್ನಾಗಿ ಅಡುಗೆ ಮಾಡಲಾರರೋ ಅವರು ಉತ್ತಮ ಸಾಧುವಾಗಲಾರರು. ಮನಸ್ಸು ಶುದ್ಧವಾಗಿಲ್ಲದೇ ಇದ್ದರೆ ರುಚಿಕರ ಅಡುಗೆ ಮಾಡಲು ಸಾಧ್ಯವಿಲ್ಲ' ಎನ್ನುತ್ತಾರೆ.

ತಮ್ಮ ಆಳವಾದ ಅಧ್ಯಯನದ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಪ್ರಕಾಂಡ ಪಾಂಡಿತ್ಯವನ್ನು ಸಂಪಾದಿಸಿದ್ದರು. ಅವರು ಪ್ರಖರ ಅಧ್ಯಾತ್ಮ, ಪ್ರಚಂಡ ವೈಚಾರಿಕತೆ ಹಾಗೂ ವೈಜ್ಞಾನಿಕ ಮನೋಭಾವಗಳ ಹದವಾದ ಸಮ್ಮಿಳನದಂತಿದ್ದರು. ಮನಸ್ಸಿನ ಏಕಾಗ್ರತೆಯ ಮೂಲಕ ಬೃಹತ್ ಗ್ರಂಥಗಳನ್ನು ಕೆಲವೇ ಗಂಟೆಗಳೊಳಗೆ ಓದಿ, ಅವುಗಳಲ್ಲಿರುವ ವಿಷಯಗಳನ್ನು ನೆನಪಿನಲ್ಲಿ ಇರಿಸಿಕೊಳ್ಳುವ ಅಗಾಧ ಮಾನಸಿಕ ಸಾಮರ್ಥ್ಯ ಅವರಲ್ಲಿತ್ತು. ವೇದ, ಉಪನಿಷತ್‌ಗಳ ಸಾರಗಳ ಜೊತೆ ಜಗತ್ತಿನ ಎಲ್ಲ ಧರ್ಮಗಳನ್ನೂ ಆಳವಾಗಿ ಅಧ್ಯಯನ ಮಾಡಿದ್ದರು.

ಸ್ವಾಮಿ ವಿವೇಕಾನಂದರು ಹಿಂದೂ ಧರ್ಮದಲ್ಲಿದ್ದ ಜಾತೀಯತೆ, ಮಡಿ, ಮೈಲಿಗೆಗಳ ಬಗ್ಗೆ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸುತ್ತಲೇ ಹಿಂದೂ ಧರ್ಮದ ಸುಧಾರಣೆಗೆ ಜಾಗೃತಿ ಮೂಡಿಸುವ ಕೆಲಸ ಮಾಡುವುದರ ಜೊತೆಗೆ ಧರ್ಮದಲ್ಲಿನ ಹಿರಿಮೆಯನ್ನು ಜಗತ್ತಿಗೆ ಸಾರಿದರು. ಜಗತ್ತಿನ ಎಲ್ಲಾ ಧರ್ಮಗಳ ಸಾರವು ಮಾನವಕುಲದ ಸೇವೆ, ಸಹಾಯ, ಉದ್ಧಾರಕ್ಕೆ ಇರಬೇಕು ಎಂಬ ಅಂಶವನ್ನು ಅವರು ಬಲವಾಗಿ ಪ್ರತಿಪಾದಿಸುತ್ತಾರೆ.

ತಮ್ಮ ಅದ್ಭುತವಾದ ಮಾತುಗಳ ಮೂಲಕ ವಿಶ್ವದ ಕೋಟ್ಯಂತರ ಜನರನ್ನು ಅಧ್ಯಾತ್ಮ ಹಾಗೂ ಜನಸೇವೆಗೆ ಪ್ರೇರೇಪಿಸಿದ ಧೀಮಂತರಾಗಿದ್ದರು. ಅವರ ಪ್ರವಚನಗಳು ಜನರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಿದ್ದವು. ಷಿಕಾಗೊದಲ್ಲಿ ಅವರು ಮಾಡಿದ ಐತಿಹಾಸಿಕ ಭಾಷಣದ ನಂತರ ಎರಡು ವರ್ಷಗಳಿಗೂ ಅಧಿಕ ಕಾಲ ಅಮೆರಿಕ, ಇಂಗ್ಲೆಂಡ್ ದೇಶಗಳಲ್ಲಿ ಉಳಿದು ನೂರಾರು ಉಪನ್ಯಾಸಗಳ ಮೂಲಕ ದೇಶ, ವಿದೇಶಗಳಲ್ಲಿ ಮನೆಮಾತಾದರು.



ಅವರನ್ನು ಅನೇಕರು 'ವಿದ್ಯುತ್ ವಾಗ್ಮಿ' ಎಂದು ಕರೆದರು. ಅವರು ಮಾತನಾಡುತ್ತಿದ್ದ ಸಭೆಯಲ್ಲಿ ವಿದ್ಯುತ್ ಸಂಚಾರವಾಗುತ್ತಿತ್ತು. ತಮ್ಮ ಅಮೋಘ ಮಾತುಗಳಿಂದ ಜನರನ್ನು ಜಾಗೃತಗೊಳಿಸುವ ಕಾರ್ಯವನ್ನು ವಿವೇಕಾನಂದರು ಮಾಡಿದರು. ಅವರ ನಡೆ, ನುಡಿಗಳಿಂದ ಪ್ರೇರಿತರಾದ ಸಾವಿರಾರು ವಿದೇಶಿಯರೂ ಇವರ ಅನುಯಾಯಿಗಳಾದರು. ಅದರಲ್ಲೂ ಇಂಗ್ಲೆಂಡ್ ದೇಶದ, ಮಕ್ಕಳಿಲ್ಲದ ಸೇವಿಯರ್ಸ್ ದಂಪತಿ ತಮ್ಮ ಸರ್ವಸ್ವವನ್ನೂ ಸ್ವಾಮಿಗೆ ಅರ್ಪಿಸಿ, ಅವರ ಜೊತೆ ಭಾರತಕ್ಕೆ ಬಂದು ಭಾರತದಲ್ಲಿಯೇ ಕಾಲವಾಗುತ್ತಾರೆ.

ಜನವರಿ 12, ಸ್ವಾಮಿ ವಿವೇಕಾನಂದರ ಜನ್ಮದಿನ. ಈ ದಿನದಂದು ಅವರು ಲಾಹೋರಿನ ಕಾಲೇಜೊಂದರಲ್ಲಿ ಮಾಡಿದ ಭಾಷಣದ ವಿಶ್ವವಿಖ್ಯಾತ ಸಾಲುಗಳು, 'ಏದ್ದೇಳಿ! ಎಚ್ಚರಗೊಳ್ಳಿ! ಗುರಿ ಮುಟ್ಟುವವರೆಗೆ ಮುನ್ನುಗ್ಗಿ. ನಿಲ್ಲದಿರಿ! ಸಮಯ ಕಳೆಯುತ್ತಿದೆ. ನಮ್ಮ ಶಕ್ತಿಯೆಲ್ಲಾ ಬರೀ ಕಾಡುಹರಟೆಯಲ್ಲಿ ವ್ಯಕ್ತವಾಗುತ್ತಿದೆ. ಸಣ್ಣಪುಟ್ಟ ಜಗಳಗಳೂ ವಾದಗಳೂ ಕೊನೆಗಾಣಲಿ. ಏಕೆಂದರೆ ನಮ್ಮ ಮುಂದೆ ಒಂದು ಮಹಾಕಾರ್ಯ ನಿಂತಿದೆ. ಲಕ್ಷೋಪಲಕ್ಷ ಜನರನ್ನು ಮೇಲೆತ್ತಿ ಉದ್ಧಾರ ಮಾಡುವ ಮಹಾಸೇವಾ ಕಾರ್ಯ ನಮ್ಮ ಮುಂದಿದೆ'.

ಈ ಮಾತುಗಳು ನಮ್ಮನ್ನು ನಿರಂತರ ಜಾಗೃತಿಯಲ್ಲಿಟ್ಟು ದೇಶ ಮುನ್ನಡೆಯಲು ಪ್ರೇರೇಪಣೆ ನೀಡಲಿ.

## ವಾಚಕರ ವಾಣಿ

### ಲಾಕ್‌ಡೌನ್ ಅಂತಿಮ ಆಯ್ಕೆಯಾಗಲಿ

ನಾನು ಒಬ್ಬ ಟ್ಯಾಕ್ಸಿ ಚಾಲಕ. ಆರು ವರ್ಷಗಳ ಕಾಲ ಅವರಿವರ ಬಳಿ ಬಾಡಿಗೆಗೆ ಗಾಡಿ ಓಡಿಸುತ್ತಾ ನೊಂದು-ಬೆಂದು ಸ್ವಲ್ಪ ಹಣ ಗಳಿಸಿ, ಮಹದಾಸೆಯಿಂದ ಸಾಲದಲ್ಲಿ ಟ್ಯಾಕ್ಸಿಯನ್ನು ಕೊಂಡುಕೊಂಡೆ. ಆದರೆ ಸ್ವಲ್ಪ ದಿನಗಳಲ್ಲೇ ಕೋವಿಡ್ ಎಂಬ ಬರಸಿಡಿಲಿನಿಂದ ಬಂದ ಲಾಕ್‌ಡೌನ್‌ನಿಂದ 8 ತಿಂಗಳು ಟ್ಯಾಕ್ಸಿ ಚಾಲನೆ ಸಾಧ್ಯವಾಗಲಿಲ್ಲ. ಸರ್ಕಾರದಿಂದ ಯಾವುದೇ ಭರವಸೆಯ ಯೋಜನೆ ಸಿಗದೆ, ಬ್ಯಾಂಕಿನ ಬಡ್ಡಿ ಹಣದ ಚಕ್ರ ನಿಲ್ಲಲಿಲ್ಲ. ಲಾಕ್‌ಡೌನ್ ಮುಗಿದ ಬಳಿಕ ಟ್ಯಾಕ್ಸಿ ರಿಪೇರಿ, ವಾಹನಕ್ಕೆ ಸಂಬಂಧಿಸಿದ ವಿವಿಧ ತೆರಿಗೆಗಳು ಹೆಗಲೇರಿದವು.

ಹೇಗೋ ಆ ಭಾರ ಇಳಿಸಿಕೊಳ್ಳುವಷ್ಟರಲ್ಲಿ ಎರಡನೇ ಅಲೆಯ ಲಾಕ್‌ಡೌನ್. ಹೀಗೇ ಎರಡು ವರ್ಷ ನೊಂದು ವಾಹನ ಮಾರಲು ಮುಂದಾದರೆ ಕೊಳ್ಳುವವರ ಕೊರತೆ. ಇದು ನನ್ನೊಬ್ಬನ ಕಥೆಯಲ್ಲ. ಎಲ್ಲ ಆಟೊ ಮತ್ತು ಟ್ಯಾಕ್ಸಿ ಚಾಲಕರ ವೇದನೆ. ಕೊರೊನಾ ನಿಯಂತ್ರಣಕ್ಕೆ ಲಾಕ್‌ಡೌನ್ ಒಂದೇ ಮಾರ್ಗವಲ್ಲ. ಒಂದು ವೇಳೆ ಲಾಕ್‌ಡೌನ್ ಮಾಡಲೇಬೇಕಾದ ಸಂದರ್ಭ ಎದುರಾದರೆ ವಾಹನಕ್ಕೆ ಸಂಬಂಧಿಸಿದ ತೆರಿಗೆ, ವಾಹನ ವಿಮೆ ಹಾಗೂ ಬ್ಯಾಂಕ್ ಸಾಲದ ಕಂತು ಪಾವತಿಯಲ್ಲಿ ರಿಯಾಯಿತಿ ತಂದು ಸಹಕರಿಸಿ. ಕಾಯಿಲೆಯಿಂದ ಸತ್ತವರು ಕೆಲವು ಮಂದಿ. ಆದರೆ ಹಸಿವಿನಿಂದ ಸಾಯುತ್ತಿರುವವರು ಹಲವು ಮಂದಿ ಎಂಬುದನ್ನು ಸರ್ಕಾರ ಮನಗಾಣಲಿ.

**ಬಸವರಾಜ್,** ಹೊಸದುರ್ಗ

### ಯುವ ಪ್ರತಿಭಾವಂತರಿಗೆ ಸಿಗಲಿ ಆದ್ಯತೆ

ನಿರುದ್ಯೋಗ ಸಮಸ್ಯೆ ಉಲ್ಬಣಗೊಂಡು ಯುವಕರು ಪರಿತಪಿಸುತ್ತಿರುವ ಈ ದುರ್ಭರ ಕಾಲದಲ್ಲಿ ಕೆಲವು ಇಲಾಖೆಗಳಲ್ಲಿ ಅನುಭವದ ನೆಪವೊಡ್ಡಿ ನಿವೃತ್ತ ನೌಕರರನ್ನು, ವಿಶೇಷವಾಗಿ ಅಧಿಕಾರಿಗಳನ್ನು ಅವರ ಅರವತ್ತೈದನೇ ವಯಸ್ಸಿನವರೆಗೆ ತುಸು ಕಡಿಮೆ ಸಂಬಳ ನೀಡಿ ನೇಮಿಸಿಕೊಳ್ಳಲಾಗಿದೆ. ಉದಾಹರಣೆಗೆ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಿವೃತ್ತ ನೌಕರರಿಗೆ ಪಿಂಚಣಿಯ ಜೊತೆ ಇದೊಂದು ವರದಾನವೇ ಆಗಿದೆ. ಅದೇ ಸಂಬಳ ನೀಡಿ ಯುವ ಪ್ರತಿಭಾವಂತರನ್ನು ಆಯ್ಕೆ ಮಾಡಿಕೊಂಡರೆ ನಿರುದ್ಯೋಗ ಸಮಸ್ಯೆ ಪರಿಹರಿಸಿದಂತಾಗುತ್ತದೆ. ನಮ್ಮ ಜನನಾಯಕರಿಗೆ ಇಂತಹ ಸೂಕ್ಷ್ಮ ವಿಚಾರಗಳತ್ತ ಗಮನಹರಿಯುವುದಿಲ್ಲವೇಕೆ?

ಯುವ ಪ್ರತಿಭಾವಂತರನ್ನು ಅಪಹಾಸ್ಯ ಮಾಡುವಂತೆ ಆಂಧ್ರಪ್ರದೇಶ ಸರ್ಕಾರ ತನ್ನ ಉದ್ಯೋಗಿಗಳ ನಿವೃತ್ತಿ ವಯಸ್ಸನ್ನು ಏರಿಕೆ ಮಾಡ ಹೊರಟಿರುವುದು ಸಖೇದಾಶ್ಚರ್ಯ ಉಂಟು ಮಾಡುತ್ತಿದೆ. ಹಾಗೆ ನೋಡಿದರೆ ಜನಪರ ಕಾಳಜಿಯುಳ್ಳ ಸರ್ಕಾರ ನಿವೃತ್ತಿ ವಯಸ್ಸನ್ನು ಕಡಿತಗೊಳಿಸಿ ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ. ಈ ಕುರಿತು ನ್ಯಾಯಾಲಯ ಮಧ್ಯ ಪ್ರವೇಶಿಸಿ, ಸರ್ಕಾರ ಮನಸ್ಸಿಗೆ ಬಂದಂತೆ ತೆಗೆದುಕೊಳ್ಳುವ ರಾಜಕೀಯ ಇಚ್ಛಾಶಕ್ತಿಯ ನಿರ್ಧಾರಗಳಿಗೆ ಕಡಿವಾಣ ಹಾಕಬೇಕು.

**ಪ್ರಕಾಶ್ ಮಲ್ಕಿಒಡೆಯರ್,** ಹೂವಿನಹಡಗಲಿ

### ದಾ(ಘಾ)ಟು!

ಎಲೆಲೆ ಬಡ ಮೇಕೆ,
ನಿನಗಿಷ್ಟು ಸದ್ದು
ಏಕೆ?
ಆನೆ, ಹುಲಿ ಮುಂತಾದುವೆಲ್ಲ
ಸುಮ್ಮನಿವೆ; ನಿನಗೇಕೆ
ಈ ಸುಮ್ಮಾನ?
ಒಟ್ಟಿನಲ್ಲಿ ನಿನ್ನ 'ದಾಟು'
ತಮಿಳುನಾಡು, ಕರ್ನಾಟಕಗಳ
ಕಾಂಗ್ರೆಸ್, ಬಿಜೆಪಿ ಮಧ್ಯದ
ರಾಜಕೀಯ ಘಾಟು?!

**ಸಿ.ಪಿ.ಕೆ.,** ಮೈಸೂರು

### ಸ್ಥಳೀಯ ಭಾಷೆ ಕಲಿಯುವುದು ಒಳಿತಲ್ಲವೇ?

ಕೇಂದ್ರ ಸರ್ಕಾರ ಇತ್ತೀಚೆಗೆ ಹಲವು ಬ್ಯಾಂಕುಗಳನ್ನು ಕೆಲವೇ ಕೆಲವು ಬ್ಯಾಂಕುಗಳ ಅಡಿ ತಂದು ಸಂಯೋಜಿಸಿತು. ಇದಕ್ಕೆ ಹಲವು ಬ್ಯಾಂಕುಗಳ ಆಡಳಿತ ಮಂಡಳಿಗಳು ಅಂದೇ ವಿರೋಧ ವ್ಯಕ್ತಪಡಿಸಿದ್ದವು. ಅಲ್ಲದೆ ಇದರಿಂದ ಜನಸಾಮಾನ್ಯರು ಸಹ ತೊಂದರೆ ಅನುಭವಿಸುವಂತಾಗಿದೆ. ಉದಾಹರಣೆಗೆ: ಹಿಂದೆ ಸಿಂಡಿಕೇಟ್ ಬ್ಯಾಂಕ್ ಇದ್ದಾಗ ಸ್ಥಳೀಯ ಭಾಷೆ ಬರುವವರನ್ನೇ ವ್ಯವಸ್ಥಾಪಕರನ್ನಾಗಿ ಮಾಡುತ್ತಿದ್ದರು. ಈಗ ಅದು ಕೆನರಾ ಬ್ಯಾಂಕಿಗೆ ಸೇರಿದೆ.

ಕೆನರಾ ಬ್ಯಾಂಕಿನ ಬೆಂಗಳೂರು ಮಲ್ಲತ್ತಹಳ್ಳಿಯ ಶಾಖೆಗೆ ಇತ್ತೀಚೆಗೆ ಉತ್ತರ ಭಾರತದ ಹೆಣ್ಣು ಮಗಳನ್ನು ವ್ಯವಸ್ಥಾಪಕರನ್ನಾಗಿ ನಿಯೋಜಿಸಲಾಗಿದೆ. ಅವರಿಗೆ ನಮ್ಮ ಸ್ಥಳೀಯ ಭಾಷೆಯ ಜ್ಞಾನವೇ ಇಲ್ಲ. ಹೆಚ್ಚಿನ ಗ್ರಾಹಕರಿಗೆ ಸ್ಥಳೀಯ ಭಾಷೆ ಬಿಟ್ಟರೆ ಬೇರೆ ಭಾಷೆ ಬರುವುದಿಲ್ಲ. ಸಾಮಾನ್ಯ ಜನರು ಅವರ ಬಳಿ ಹೇಗೆ ಕಷ್ಟ ಹೇಳಿಕೊಳ್ಳುವುದು, ಮಾಹಿತಿ ಪಡೆಯುವುದು? ಸ್ಥಳೀಯ ಭಾಷೆ ಅರಿಯದ ಅವರು ಸ್ಥಳೀಯ ಜನರೊಂದಿಗೆ ವ್ಯವಹರಿಸುವುದಾದರೂ ಹೇಗೆ? ಕಡೇಪಕ್ಷ ಅವರು ಇಲ್ಲಿಯ ಭಾಷೆಯನ್ನಾದರೂ ಕಲಿಯಲಿ, ಇಲ್ಲವಾದರೆ ಸ್ಥಳೀಯ ಭಾಷೆ ಗೊತ್ತಿರುವವರು ವ್ಯವಸ್ಥಾಪಕರಾಗಿ ನೇಮಕಗೊಳ್ಳಲಿ.

**ಮಲ್ಲತ್ತಹಳ್ಳಿ ಡಾ. ಎಚ್.ತುಕಾರಾಂ,** ಬೆಂಗಳೂರು

### ಭಕ್ತಿಯಿಂದ ಬಂದ ಹಣ ಸೇವೆಗೆ ವಿನಿಯೋಗವಾಗಲಿ

ಶ್ರೀಕ್ಷೇತ್ರ ಸಿಗಂದೂರು ದೇವಸ್ಥಾನದ ವತಿಯಿಂದ ಕೆಲವು ಸರ್ಕಾರಿ ಶಾಲೆಗಳು ಸುಣ್ಣ, ಬಣ್ಣದ ಜೊತೆ ಸ್ವಚ್ಛತೆಯಿಂದ ಕಂಗೊಳಿಸುವ ಚಿತ್ರ ನೋಡಿ (ಪ್ರ.ವಾ., ಜ. 11) ಸಂತಸವಾಯಿತು. ದೇವಾಲಯ ಮಂಡಳಿಯ ಈ ಸಾಮಾಜಿಕ ಕಳಕಳಿಯ ಬಗ್ಗೆ ಅಲ್ಲಿನ ಜನರು ಹರ್ಷ ಪಟ್ಟಿದ್ದಾರೆ. ಇಂತಹ ಸಾಮಾಜಿಕ ಸೇವೆಯು ಖಾಸಗಿ ಮಂಡಳಿಯ ಅಧೀನದಲ್ಲಿ ಇರುವ ದೇವಸ್ಥಾನಗಳ ವತಿಯಿಂದ ಆಗಾಗ್ಗೆ ನಡೆಯುವುದನ್ನು ಮಾಧ್ಯಮಗಳಲ್ಲಿ ನೋಡುತ್ತಿರುತ್ತೇವೆ. ಆದರೆ ಸರ್ಕಾರದ ಆಡಳಿತಕ್ಕೆ ಒಳಪಟ್ಟ ದೇವಾಲಯಗಳಿಂದ ಇಂತಹ ಜನಪರ ಕೆಲಸ ನಡೆಯುವುದನ್ನು ಇದುವರೆಗೂ ನೋಡಿಲ್ಲ ಎಂಬುದು ವಿಪರ್ಯಾಸ.

ಮುಜರಾಯಿ ಇಲಾಖೆಯ ದೇವಾಲಯಗಳ ಹುಂಡಿಗಳಲ್ಲಿ ಭಕ್ತರು ಅರ್ಪಿಸುವ ಸಾವಿರಾರು ಕೋಟಿ ರೂಪಾಯಿ ಜನರಿಗೆ ಉಪಯೋಗ ಆಗುತ್ತಿಲ್ಲ. ಜನರಿಂದ ಭಕ್ತಿ ರೂಪದಲ್ಲಿ ಬಂದ ಹಣ ಮತ್ತೆ ಜನರಿಗೆ ಸೇವೆ ರೂಪದಲ್ಲಿ ವಿನಿಯೋಗವಾಗುವುದು ಒಳಿತಲ್ಲವೇ? ಕೆರೆಯ ನೀರನು ಕೆರೆಗೆ ಚೆಲ್ಲಿ... ಎಂಬ ದಾಸವಾಣಿ ಸರ್ಕಾರದ ಕಿವಿಗೆ ಬೀಳಲಿ.

**ವಿ.ತಿಪ್ಪೇಸ್ವಾಮಿ,** ಹಿರಿಯೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಗೋವಾ ಚುನಾವಣಾ ಕಣ

# ಸಾಲು ಸಾಲು ಪಕ್ಷಗಳ ಸವಾಲು

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

**ಗೋವಾದಲ್ಲಿ** 2017ರ ವಿಧಾನಸಭಾ ಚುನಾವಣೆ ಹಾಗೂ 2022ರ ಚುನಾವಣೆ ನಡುವೆ ಸಾಕಷ್ಟು ರಾಜಕೀಯ ಪಲ್ಲಟಗಳು ಸಂಭವಿಸಿವೆ. 40 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಚಿಕ್ಕ ರಾಜ್ಯವಾದರೂ, ಇಲ್ಲಿಯ ರಾಜಕಾರಣ ಮಾತ್ರ ದೇಶದಲ್ಲಿ ಸದ್ದು ಮಾಡಿದೆ. ರಾಜ್ಯದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಪ್ರಮುಖ ಪಕ್ಷಗಳು. ಇವುಗಳ ಜೊತೆಗೆ ಗೋವಾ ಫಾರ್ವರ್ಡ್ ಪಕ್ಷ (ಜಿಎಫ್‌ಪಿ), ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷ (ಎಂಜಿಪಿ), ಎನ್‌ಸಿಪಿ, ಯುನೈಟೆಡ್ ಗೋವನ್ಸ್ ಡೆಮಾಕ್ರಟಿಕ್ ಪಾರ್ಟಿಗಳು ಕಣದಲ್ಲಿವೆ. ಈ ಬಾರಿ ಆಮ್ ಆದ್ಮಿ ಪಕ್ಷ (ಎಎಪಿ) ಹಾಗೂ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಗಳು ಛಾಪು ಒತ್ತಲು ತುದಿಗಾಲಲ್ಲಿ ನಿಂತಿರುವುದು ಕುತೂಹಲ ಮೂಡಿಸಿದೆ. ಹೀಗಾಗಿ ಗೋವಾ ಚುನಾವಣಾ ಕಣವು ಹಲವು ಪಕ್ಷಗಳಿಂದ ಮೇಳೈಸಿದೆ.

2017ರಲ್ಲಿ 13 ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿಯು ಸರ್ಕಾರ ರಚಿಸಿದ್ದು ಅಚ್ಚರಿಯ ವಿದ್ಯಮಾನ. ಅಂದು, ಕೇಂದ್ರದಲ್ಲಿ ರಕ್ಷಣಾ ಸಚಿವರಾಗಿದ್ದ ಮನೋಹರ್ ಪರಿಕ್ಕರ್ ಅವರು ರಾಜ್ಯದ ಚುಕ್ಕಾಣಿ ಹಿಡಿಯುವುದಾದರೆ, ಬಿಜೆಪಿಗೆ ಬೆಂಬಲ ನೀಡಲು ಸಿದ್ಧ ಎಂದು ಎಂಜಿಪಿ ಹಾಗೂ ಜಿಎಫ್‌ಪಿ ಷರತ್ತು ಹಾಕಿದ್ದವು. ಕೆಲವು ಪಕ್ಷೇತರರ ಬೆಂಬಲದೊಂದಿಗೆ ಪರಿಕ್ಕರ್ ಗದ್ದುಗೆ ಏರಿದರು. 2019ರಲ್ಲಿ ಅವರ ನಿಧನದಿಂದ ತೆರವಾದ ಮುಖ್ಯಮಂತ್ರಿ ಸ್ಥಾನಕ್ಕೆ ಪ್ರಮೋದ್ ಸಾವಂತ್ ಬಂದರು. ಪಕ್ಷದ ನೆಲೆ ಗಟ್ಟಿ ಮಾಡಿಕೊಳ್ಳಲು ಮುಂದಾದ ಬಿಜೆಪಿ, ಕಾಂಗ್ರೆಸ್‌ನಿಂದ 10 ಶಾಸಕರನ್ನು ಪಕ್ಷಕ್ಕೆ ಸೆಳೆದುಕೊಂಡಿತು. ಎಂಜಿಪಿ, ಜಿಎಫ್‌ಪಿ ಶಾಸಕರು ಬಿಜೆಪಿ ಪಾಳಯ ಸೇರಿದ್ದರಿಂದ ಪಕ್ಷದ ಶಾಸಕರ ಬಲವು 27ಕ್ಕೆ ಏರಿತು. ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲು ಬಿಜೆಪಿ ಮುಂದಾಗಿದ್ದು, ಸ್ಥಳೀಯ ಪಕ್ಷಗಳನ್ನು ಕೈಬಿಟ್ಟಿದೆ. ಹೀಗಾಗಿ ಬಿಜೆಪಿಗೆ ಪಾಠ ಕಲಿಸಲು ಈ ಪಕ್ಷಗಳು ನಿರ್ಧರಿಸಿವೆ.

ಪರಿಕ್ಕರ್ ಸರ್ಕಾರವನ್ನು ಬೆಂಬಲಿಸಿದ್ದ ಎಂಜಿಪಿ ಜತೆ ಈ ಬಾರಿ ಟಿಎಂಸಿ ಮೈತ್ರಿ ಮಾಡಿಕೊಂಡಿದೆ. 'ಹೊರಗಿನವರು' ಎಂಬ ಹಣೆಪಟ್ಟಿ ಕಳಚಲು ಯತ್ನಿಸುತ್ತಿರುವ ಟಿಎಂಸಿಯು ಉದ್ಯಮ, ಫುಟ್‌ಬಾಲ್, ಮೀನು ಸೇರಿದಂತೆ, ಪಶ್ಚಿಮ ಬಂಗಾಳ ಹಾಗೂ ಗೋವಾ ನಡುವೆ ಹಲವು ವಿಚಾರ, ಸಂಸ್ಕೃತಿಗಳಲ್ಲಿ ಸಾಮ್ಯಗಳಿವೆ ಎಂದು ಪಕ್ಷ ಪ್ರತಿಪಾದಿಸುತ್ತಿದೆ. ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರ ಐಪ್ಯಾಕ್ ತಂಡವು ಗೋವಾದಲ್ಲಿ ಬೀಡುಬಿಟ್ಟಿದ್ದು, ಪ್ರಚಾರ, ಸಂಘಟನೆಯಲ್ಲಿ ಪಕ್ಷಕ್ಕೆ ನೆರವು ನೀಡುತ್ತಿದೆ. ಖ್ಯಾತ ಟೆನಿಸ್ ಪಟು ಲಿಯಾಂಡರ್ ಪೇಸ್ ಹಾಗೂ ಕಾಂಗ್ರೆಸ್ ಹಿರಿಯ ಮುಖಂಡ ಲುಯಿಝಿನೊ ಫೆಲೆರೊ ಅವರು ಟಿಎಂಸಿ ಬಲ ವೃದ್ಧಿಸಿದ್ದಾರೆ. ಪ್ರಭಾವಿ ಸಂಸದರಾದ ಡೆರೆಕ್ ಒಬ್ರಿಯಾನ್ ಮತ್ತು ಮಹುವಾ ಮೊಯಿತ್ರಾ ಅವರು ಚುನಾವಣೆಯ ಉಸ್ತುವಾರಿ ವಹಿಸಿದ್ದಾರೆ. ಎನ್‌ಸಿಪಿಯ ಏಕೈಕ ಶಾಸಕ ಚರ್ಚಿಲ್ ಅಲೆಮಾವೊ ಅವರೂ ಟಿಎಂಸಿ ಪಾಳಯ ಸೇರಿದ್ದಾರೆ.

ಈ ಹಿಂದಿನ ಚುನಾವಣೆಯಲ್ಲಿ ಕಣಕ್ಕೆ ಧುಮುಕಿದ್ದ ಎಎಪಿ ಈ ಬಾರಿ ಇನ್ನಷ್ಟು ಛಾಪು ಮೂಡಿಸಲು ಸಜ್ಜಾಗಿದೆ. ಕಳೆದ ವರ್ಷ ಗೋವಾದ ಒಂದು ಜಿಲ್ಲಾ ಪಂಚಾಯಿತಿಯನ್ನು ಆಮ್ ಆದ್ಮಿ ತೆಕ್ಕೆಗೆ ತೆಗೆದುಕೊಂಡಿತ್ತು. ಕೋವಿಡ್ ಸಮಯದಲ್ಲಿ ಪಕ್ಷದ ಕಾರ್ಯಕರ್ತರು ಆಹಾರ ಧಾನ್ಯ, ಔಷಧ ಪೂರೈಸಿ ಹೆಸರು ಗಳಿಸಿದ್ದರು. ಯಶಸ್ವಿ ಕಾರ್ಯಕ್ರಮಗಳ ದೆಹಲಿ ಮಾದರಿಯನ್ನು ಗೋವಾದಲ್ಲಿ ಅಳವಡಿಸುವುದಾಗಿ ಅರವಿಂದ ಕೇಜ್ರಿವಾಲ್ ಭರವಸೆ ನೀಡಿದ್ದಾರೆ. ಉಚಿತ ವಿದ್ಯುತ್, ನಿರುದ್ಯೋಗ ಭತ್ಯೆ, ಉಚಿತ ತೀರ್ಥಯಾತ್ರೆ ಘೋಷಣೆ ಮಾಡಿದ್ದಾರೆ.

ಮತಗಳು ವಿಭಜನೆಯಾಗುವುದನ್ನು ತಡೆಯಲು ಬಿಜೆಪಿಯೇತರ ಪಕ್ಷಗಳನ್ನು ಒಗ್ಗೂಡಿಸಿ ಮಹಾಮೈತ್ರಿಕೂಟ ಕಟ್ಟುವ ಕಾಂಗ್ರೆಸ್ ಯತ್ನವು ಅಷ್ಟಾಗಿ ಫಲ ನೀಡಿಲ್ಲ. ಜಿಎಫ್‌ಪಿ ಮಾತ್ರ ಕಾಂಗ್ರೆಸ್ ಜೊತೆ ಈ ಬಾರಿ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದೆ. ಸದ್ಯದ ಪ್ರಕಾರ, ಬಿಜೆಪಿ ಸರ್ಕಾರ ಭದ್ರವಾಗಿರುವುದೇನೋ ನಿಜ. ಆದರೆ, ಆಡಳಿತ ವಿರೋಧಿ ಅಲೆಯ ಭೀತಿಯಲ್ಲಿ ಕಮಲ ಪಾಳಯ ಇದೆ. ಕೇಂದ್ರದಲ್ಲೂ ಬಿಜೆಪಿ ಸರ್ಕಾರ ಇರುವುದರಿಂದ ರಾಜ್ಯದಲ್ಲಿ ತಮ್ಮದೇ ಸರ್ಕಾರವಿದ್ದರೆ ಅಭಿವೃದ್ಧಿ ಚುರುಕಾಗುತ್ತದೆ ಎಂದು ಬಿಜೆಪಿ ಪ್ರತಿಪಾದಿಸುತ್ತಿದೆ. ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಜಯಭೇರಿ ಬಾರಿಸಿರುವುದು ಪಕ್ಷದ ಹುರುಪು ಹೆಚ್ಚಿಸಿದೆ.


ಗೋವಾ ವಿಮೋಚನಾ ದಿನದಂದು (2021ರ ಡಿಸೆಂಬರ್ 19) ವಯೋವೃದ್ಧೆಯ ಆಶೀರ್ವಾದ ಪಡೆದುಕೊಂಡ ಪ್ರಧಾನಿ ನರೇಂದ್ರ ಮೋದಿ



ಟೆನಿಸ್ ಆಟಗಾರ ಲಿಯಾಂಡರ್ ಪೇಸ್ ಅವರನ್ನು ಟಿಎಂಸಿಗೆ ಬರಮಾಡಿಕೊಂಡ ಮಮತಾ ಬ್ಯಾನರ್ಜಿ


ಗೋವಾದ ಪ್ರಸಿದ್ಧ ಜನಪದ ನೃತ್ಯಗಾರ್ತಿ ಎಲಿಮಿಯಾ ಫರ್ನಾಂಡಿಸ್ ಜತೆಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ

## ಕಾಂಗ್ರೆಸ್: ಪಕ್ಷಾಂತರದ ಸಂತ್ರಸ್ತ

**2017ರ ಗೋವಾ** ವಿಧಾನಸಭೆ ಅವಧಿಯು ಕಾಂಗ್ರೆಸ್ ಪಾಲಿಗೆ ಕರಾಳ. ಪಕ್ಷಾಂತರವು ತುತ್ತತುದಿ ಮುಟ್ಟಿದ್ದು ಈ ಅವಧಿಯಲ್ಲಿ. ಚುನಾವಣೆಯಲ್ಲಿ ಕಾಂಗ್ರೆಸ್ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ, ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ 10 ಶಾಸಕರು ಒಂದೇ ಬಾರಿಗೆ ಬಿಜೆಪಿಗೆ ವಲಸೆ ಹೋದರು. ಅತಿದೊಡ್ಡ ಪಕ್ಷವಾಗಿದ್ದ ಕಾಂಗ್ರೆಸ್ 17 ಶಾಸಕರನ್ನು ಹೊಂದಿದ್ದರೂ, ಬಹುಮತಕ್ಕೆ ಬೇಕಿದ್ದ 21 ಶಾಸಕರನ್ನು ಸೇರಿಸಲು ವಿಫಲವಾಗಿದ್ದೇ ಬಿಜೆಪಿ ಹಾದಿಯನ್ನು ಸುಗಮವಾಗಿಸಿತು. ಸಣ್ಣ ಪಕ್ಷಗಳು ಹಾಗೂ ಪಕ್ಷೇತರರ ಜೊತೆ ತಕ್ಷಣಕ್ಕೆ ಮಾತುಕತೆಗೆ ಮುಂದಾಗದ ಕಾರಣ, ಸನಿಹಕ್ಕೆ ಬಂದಿದ್ದ ಅಧಿಕಾರವನ್ನು ಕೈಚೆಲ್ಲಿತ್ತು. ವಿಶ್ವಜಿತ್ ರಾಣೆ ಅವರು ಫಲಿತಾಂಶ ಬಂದ ತಕ್ಷಣವೇ ರಾಜೀನಾಮೆ ನೀಡಿ ಬಿಜೆಪಿಗೆ ಹೋದರು. ಅವರು ಮತ್ತೆ ಬಿಜೆಪಿಯಿಂದ ಆರಿಸಿಬಂದರು.

ಬಿಜೆಪಿ 13 ಸ್ಥಾನಗಳನ್ನು ಗಳಿಸಿದ್ದರೂ, ಸ್ಥಳೀಯ ಪಕ್ಷಗಳು ಹಾಗೂ ಪಕ್ಷೇತರರ ಜೊತೆಗೂಡಿ ಸರ್ಕಾರ ರಚಿಸಿತು. ಕಾಂಗ್ರೆಸ್‌ನ 10 ಶಾಸಕರು ಮನೋಹರ್ ಪರಿಕ್ಕರ್ ನೇತೃತ್ವದ ಬಿಜೆಪಿಯನ್ನು ಬೆಂಬಲಿಸಿದರು. ಈ ನಾಲ್ಕು ವರ್ಷಗಳಲ್ಲಿ ಮಾಜಿ ಮುಖ್ಯಮಂತ್ರಿ ರವಿ ನಾಯಕ್ ಸೇರಿದಂತೆ ಕಾಂಗ್ರೆಸ್‌ನ ಬಹುತೇಕ ಶಾಸಕರು ಬಿಜೆಪಿ ಸೇರಿದ್ದಾರೆ. ಫಲಿರೋ ಮತ್ತು ಅಲೆಕ್ಸಿಯೊ ರೆಜಿನಾಲ್ಡೊ ಲೌರೆಂಕೊ ಅವರು ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಸೇರಿದ್ದು, ಕಾಂಗ್ರೆಸ್ ಬುಡವನ್ನು ಅಲುಗಾಡಿಸಿದ್ದಾರೆ. 17 ಶಾಸಕರು ಆರಿಸಿಬಂದಿದ್ದ ಪಕ್ಷದಲ್ಲಿ ಈಗ ಇರುವ ಶಾಸಕರ ಸಂಖ್ಯೆ 2 ಮಾತ್ರ.

ಗೋವಾದಲ್ಲಿ ಪಕ್ಷಾಂತರದ ಪರ್ವ 1967ರಲ್ಲೇ ಶುರುವಾಗಿತ್ತು. 1999ರಲ್ಲಿ ಲುಯಿಝಿನೊ ಫಲಿರೋ ನೇತೃತ್ವದಲ್ಲಿ ಕಾಂಗ್ರೆಸ್‌ಗೆ 21 ಸ್ಥಾನಗಳ ಸ್ಪಷ್ಟ ಬಹುಮತ ಸಿಕ್ಕಿತ್ತು. ಆದರೆ ಐದು ತಿಂಗಳಲ್ಲೇ ಈ ಸರ್ಕಾರ ಉರುಳಿಬಿದ್ದಿತು. ಫ್ರಾನ್ಸಿಸ್ ಸಾರ್ಡಿನಾ ಅವರು 10 ಶಾಸಕರ ಜೊತೆ ಹೊರಬಂದು, ಪ್ರತ್ಯೇಕ ಪಕ್ಷವನ್ನು ಕಟ್ಟಿ ಬಿಜೆಪಿ ಜೊತೆ ಸೇರಿ ಸರ್ಕಾರ ರಚಿಸಿದ್ದರು.

ಪ್ರತಿಪಕ್ಷದ ನಾಯಕರಾಗಿದ್ದ ರವಿ ನಾಯಕ್ ಅವರು ಒಂಬತ್ತು ಶಾಸಕರ ಜೊತೆ ಕಾಂಗ್ರೆಸ್‌ನಿಂದ ಹೊರಬಂದು ಬಿಜೆಪಿಯನ್ನು ಬೆಂಬಲಿಸಿದ್ದರು. ನಾಯಕ್ ಅವರಿಗೆ ಮನೋಹರ್ ಪರಿಕ್ಕರ್ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಹುದ್ದೆ ನೀಡಲಾಗಿತ್ತು. ಸಾರ್ಡಿನಾ ಅವರು 2017ರಲ್ಲಿ ವಾಪಸ್ ಕಾಂಗ್ರೆಸ್ ತೆಕ್ಕೆಗೆ ಬಂದು, ಶಾಸಕರಾಗಿ ಆಯ್ಕೆಯಾಗಿದ್ದರು. ಆದರೆ ಮತ್ತೆ ರಾಜೀನಾಮೆ ನೀಡಿ ಬಿಜೆಪಿ ಜೊತೆ ಕೈ ಜೋಡಿಸಿದ್ದಾರೆ.

## ನಾವಿಕನಿಲ್ಲದ ದೋಣಿ ಬಿಜೆಪಿ

**ಗೋವಾ ಬಿಜೆಪಿ** ಘಟಕಕ್ಕೇ ಈಗ ಪ್ರಬಲ ನಾಯಕತ್ವವೇ ಇಲ್ಲದಂತೆ ಆಗಿದೆ. ಗೋವಾದಲ್ಲಿ ಬಿಜೆಪಿಯನ್ನು ಈ ಹಿಂದೆ ಎರಡು ಬಾರಿಯೂ ಅಧಿಕಾರಕ್ಕೆ ತಂದ ಶ್ರೇಯ ಮನೋಹರ್ ಪರಿಕ್ಕರ್ ಅವರಿಗೆ ಸಲ್ಲುತ್ತದೆ. 2012ರ ವಿಧಾನಸಭಾ ಚುನಾವಣೆಗೂ ಮುನ್ನ ಗೋವಾದ ಮನೆಮನೆಗೂ ಭೇಟಿ ನೀಡಿದ್ದ ಪರಿಕ್ಕರ್ ಅವರು, ಚುನಾವಣೆಯಲ್ಲಿ ಸರಳ ಬಹುಮತ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಈ ಕಾರಣದಿಂದ ಬಿಜೆಪಿ ಸರ್ಕಾರ ರಚಿಸಲು ಸಾಧ್ಯವಾಗಿತ್ತು. ಬಿಜೆಪಿಯ ಇಂದಿನ ಸ್ಥಿತಿಯನ್ನು ಪರಿಕ್ಕರ್ ಅವರ ಅವಧಿಯ ಬಿಜೆಪಿ ಜತೆಗೆ ಹೋಲಿಸಿಯೇ ನೋಡಬೇಕಾಗುತ್ತದೆ.

ಗೋವಾದ ಕೆಲವು ಪ್ರದೇಶಗಳಲ್ಲಿ ಕ್ಯಾಥೊಲಿಕ್ ಕ್ರಿಶ್ಚಿಯನ್ನರ ಪ್ರಾಬಲ್ಯವಿದೆ. ಇದನ್ನು ಸರಿಯಾಗಿ ಅರಿತಿದ್ದ ಪರಿಕ್ಕರ್ ಅವರು, ಅಂತಹ ಕ್ಷೇತ್ರಗಳಲ್ಲಿ ಕ್ಯಾಥೊಲಿಕ್ ಅಭ್ಯರ್ಥಿಗಳನ್ನೇ ಕಣಕ್ಕೆ ಇಳಿಸಿದ್ದರು. ಕ್ಯಾಥೊಲಿಕ್ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದ್ದರು ಎಂದು ಸರಳವಾಗಿ ಹೇಳಿದರೆ, ಅವರ ತಂತ್ರಗಾರಿಕೆ ಅರ್ಥವಾಗುವುದಿಲ್ಲ. ಬದಲಿಗೆ ಆ ಪಂಥದ ನಾಯಕರು ಮತ್ತು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರು. ಆ ಪಂಥದ ಜನರ ಪ್ರತಿ ಮನೆಗೂ ಭೇಟಿ ನೀಡಿ, ಮತ ನೀಡುವಂತೆ ಮನವಿ ಮಾಡಿಕೊಂಡಿದ್ದರು. ವಿಶ್ವಾಸದ ಮಾತುಗಳನ್ನಾಡಿದ್ದರು. ಎಲ್ಲಿಯೂ ಬಿಜೆಪಿಯ ಹಿಂದುತ್ವದ ಮಾತುಗಳು ಚುನಾವಣಾ ಕಣದಲ್ಲಿ ಕೇಳದಂತೆ ನೋಡಿಕೊಂಡಿದ್ದರು. ಧಾರ್ಮಿಕ ಧ್ರುವೀಕರಣದ ತಂತ್ರಗಳನ್ನು ದೂರವಿಟ್ಟಿದ್ದರು. ಹೀಗಾಗಿ ಬಿಜೆಪಿಯಿಂದ ಕಣಕ್ಕೆ ಇಳಿದಿದ್ದ ಕ್ಯಾಥೊಲಿಕ್ ಪಂಗಡದ ಏಳೂ ಅಭ್ಯರ್ಥಿಗಳು ವಿಧಾನಸಭೆಗೆ ಆರಿಸಿ ಬಂದರು.


ಉಳಿದೆಡೆ ಸ್ಪರ್ಧಿಸಿದ್ದ ಬಿಜೆಪಿಯ ಹಿಂದೂ ಅಭ್ಯರ್ಥಿಗಳಿಗೆ ಕ್ಯಾಥೊಲಿಕ್ ಪಂಥದ ಜನರೂ ಮತ ಹಾಕುವಂತೆ, ಅವರಲ್ಲಿ ವಿಶ್ವಾಸ ಮೂಡಿಸಿದ್ದರು. ಈ ಕಾರಣದಿಂದ 2012ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು 21 ಕ್ಷೇತ್ರಗಳಲ್ಲಿ ಆರಿಸಿ ಬಂದರು. ಹೀಗಿದ್ದೂ, ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದ್ದ ಎಂಜಿಪಿ ಜತೆ ಸೇರಿಕೊಂಡೇ ಸರ್ಕಾರ ರಚಿಸಿದರು. ಸಂಪುಟದಲ್ಲಿ ಎಂಜಿಪಿಗೂ ಸ್ಥಾನ ನೀಡಿದರು. ಬಿಜೆಪಿಯನ್ನಲ್ಲ, ಪರಿಕ್ಕರ್ ಅವರ ಸಲುವಾಗಿ ಬಿಜೆಪಿಗೆ ಮತ ನೀಡುತ್ತಿದ್ದೇವೆ ಎಂದು ಮತದಾರರು ಆಗ ಹೇಳಿದ್ದರು.

ಆದರೆ ಪರಿಕ್ಕರ್ ಅವರು ರಾಷ್ಟ್ರ ರಾಜಕಾರಣಕ್ಕೆ ತೆರಳಿದ ನಂತರ ಬಿಜೆಪಿಯ ಅವನತಿ ಆರಂಭವಾಯಿತು. ಸೂಕ್ತ ನಾಯಕನ ಮುಂದಾಳತ್ವ ಇಲ್ಲದ ಕಾರಣ, ಬಿಜೆಪಿ ಚುನಾವಣೆಗೂ ಮುನ್ನ ನೀಡಿದ್ದ ಭರವಸೆಗಳನ್ನು ಈಡೇರಿಸಲು ಸಾಧ್ಯವಾಗಲಿಲ್ಲ. 2017ರ ಚುನಾವಣೆ ವೇಳೆಗೆ ಪಕ್ಷಕ್ಕೆ ಆಗಿದ್ದ ಹಾನಿಯನ್ನು ಸರಿಪಡಿಸಲು, ಪರಿಕ್ಕರ್ ಅವರಿಗೇ ಮುಂದಾಳತ್ವ ನೀಡಲಾಯಿತು. ಆದರೆ, ಪಕ್ಷವು ನಿರೀಕ್ಷಿತ ಮಟ್ಟದಲ್ಲಿ ಗೆಲುವು ಸಾಧಿಸಲಿಲ್ಲ. 13 ಸ್ಥಾನಗಳಿಗಷ್ಟೇ ಪಕ್ಷವು ತೃಪ್ತಿಪಟ್ಟುಕೊಳ್ಳಬೇಕಾಯಿತು. ಹೀಗಿದ್ದೂ, ಬಿಜೆಪಿ ತನ್ನ ಎಂದಿನ 'ಆಪರೇಷನ್ ಕಮಲ'ದ ಮೂಲಕ ಗೋವಾದಲ್ಲಿ ಮತ್ತೆ ಸರ್ಕಾರ ರಚಿಸಿತು. 'ಐದು ವರ್ಷದುದ್ದಕ್ಕೂ ವಿಪಕ್ಷಗಳ ನಾಯಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದರಲ್ಲೇ ಬಿಜೆಪಿ ನಾಯಕರು ಹೆಚ್ಚು ಸಮಯ ಕಳೆದರು. ಪರಿಕ್ಕರ್ ನಿಧನದಿಂದ ತೆರವಾದ ಸ್ಥಾನವನ್ನು ತುಂಬಬಲ್ಲ ಒಬ್ಬ ಸಮರ್ಥ ನಾಯಕನನ್ನು ಬೆಳೆಸುವಲ್ಲಿ ಅಥವಾ ರೂಪಿಸುವಲ್ಲಿ ಬಿಜೆಪಿ ಆಸಕ್ತಿ ತೋರಲಿಲ್ಲ' ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಪಕ್ಷಾಂತರಿಗಳಿಂದಲೇ ತುಂಬಿಹೋದ ಪಕ್ಷದಲ್ಲಿ ಈಗ ಒಳಜಗಳಗಳಿವೆ. ಮೂಲ ಬಿಜೆಪಿಗರು ಮತ್ತು ವಲಸೆ ಬಿಜೆಪಿಗರ ನಡುವೆ ವೈಮನಸ್ಸಿದೆ. ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರ ನಾಯಕತ್ವದಲ್ಲಿ ನಂಬಿಕೆ ಇಲ್ಲ ಎಂಬುದನ್ನು ಹಲವರು ಬಹಿರಂಗವಾಗಿಯೇ ಹೇಳಿದ್ದಾರೆ. ಧಾರ್ಮಿಕ ಧ್ರುವೀಕರಣಕ್ಕೆ ಕೆಲವು ಬಿಜೆಪಿ ನಾಯಕರು ಮುಂದಾಗಿದ್ದು ಪ್ರತಿಕೂಲ ಪರಿಣಾಮ ಬೀರಿದೆ. ಗೋವಾದ ಸಂಸ್ಕೃತಿಗೆ ವ್ಯತಿರಿಕ್ತವಾದ ಇಂತಹ ಬೆಳವಣಿಗೆಗಳ ಬಗ್ಗೆ ಅಸಹನೆ ಹೊರಹಾಕಿ, ಹಲವು ನಾಯಕರು ಪಕ್ಷದಿಂದ ಹೊರಬಿದ್ದಿದ್ದಾರೆ. ಜನರಲ್ಲೂ ಆಡಳಿತ ವಿರೋಧಿ ಅಲೆ ಕಾಣುತ್ತಿದೆ ಎಂಬುದು ಪರಿಣಿತರ ಅಭಿಪ್ರಾಯ.

ಗೋವಾಗೆ ಒಗ್ಗದ ತಂತ್ರಗಾರಿಕೆಗಳು, ಧಾರ್ಮಿಕ ಧ್ರುವೀಕರಣ ಮತ್ತು ಸೂಕ್ತ ನಾಯಕನಿಲ್ಲದೆ ಬಿಜೆಪಿ ಚುನಾವಣಾ ಕಣಕ್ಕೆ ಧುಮುಕಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಹೇಳಿಕೊಂಡೇ ಮತ ಕೇಳಬೇಕು. ಬೇರೆ ಆಯ್ಕೆಯೇ ಗೋವಾ ಬಿಜೆಪಿ ಎದುರು ಇಲ್ಲದಂತಾಗಿದೆ ಎಂದು ವಿರೋಧ ಪಕ್ಷಗಳು ಲೇವಡಿ ಮಾಡುತ್ತಿವೆ.

ಆಧಾರ: ಪಿಟಿಐ


ಪರಿಕ್ಕರ್




ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 17

## ಜನರಿಗೆ ಸದ್ಬುದ್ಧಿ ಕೊಡುವ ಶಿವಪುರಾಣ

**ಪ್ರಯಾಗದ** ಋಷಿ-ಮುನಿಗಳು ಹೇಳಿದ ಮಾತನ್ನು ಕೇಳಿದ ಸೂತಪುರಾಣಿಕರು, ಮೊದಲಿಗೆ ತಮ್ಮ ಮನಸ್ಸಿನಲ್ಲಿ ಪರಮೇಶ್ವರನನ್ನು, ತಮ್ಮ ಗುರು ವೇದವ್ಯಾಸರನ್ನು ಧ್ಯಾನಿಸುತ್ತಾರೆ. ನಂತರ ಋಷಿಮುನಿಗಳನ್ನುದ್ದೇಶಿಸಿ 'ಎಲೈ ಸಾಧುಗಳಾದ ಮುನಿಗಳೇ, ನೀವು ಕೇಳಿದ ಪ್ರಶ್ನೆ ಒಳ್ಳೆಯದು. ನಿಮ್ಮ ಪ್ರಶ್ನೆಗಳು ಮೂರು ಲೋಕಕ್ಕೂ ಹಿತವನ್ನುಂಟುಮಾಡುವುದಾಗಿವೆ. ನಿಮ್ಮ ಮೇಲಿನ ವಿಶ್ವಾಸದಿಂದ ನನ್ನ ಗುರುವಾದ ವ್ಯಾಸಮಹರ್ಷಿಯ ಆಜ್ಞೆ ಅನುಸಾರ, ನೀವು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವೆ. ವಿಶ್ವಾಸದಿಂದ ಕೇಳಿರಿ' ಎನ್ನುತ್ತಾನೆ.

ಸಮಸ್ತ ವೇದಾಂತ ಸಿದ್ಧಾಂತಗಳ ಸಾರಭೂತವಾಗಿರುವ, ಸಮಸ್ತ ಪಾಪಗಳನ್ನು ನಾಶಮಾಡುವ, ಪರಲೋಕದಲ್ಲಿ ಉತ್ತಮಗತಿ ಕೊಡುವ, ಕಲಿಗಾಲದ ಪಾಪಗಳನ್ನೆಲ್ಲ ನಾಶಮಾಡುವ ಅತ್ಯುತ್ತಮವಾದ ಸಾಧನ ಎಂದರೆ ಶಿವಪುರಾಣ. ಶಿವನಿಂದ ಸನತ್ಕುಮಾರ ದೇವನಿಗೆ, ಸನತ್ಕುಮಾರನಿಂದ ವೇದವ್ಯಾಸರಿಗೆ, ವ್ಯಾಸರಿಂದ ನನಗೆ ತಿಳಿದ ಶಿವಪುರಾಣದಿಂದ ಕಲಿಕಾಲದಲ್ಲಿ ಜನರು ಮಾಡುತ್ತಿರುವ ದುರಾಚಾರಗಳು ತೊಲಗಿ, ಸದಾಚಾರ ಗುಣಗಳು ಮೂಡುತ್ತವೆ. ಅದರಲ್ಲಿ ವರ್ಣಿತವಾಗಿರುವ ಪರಮೇಶ್ವರನ ಮಹಾತ್ಮೆ ಕೇಳಿದ ಸತ್ಪುರುಷರು ಉತ್ಕರ್ಷರಾಗುವರು. ಇದು ಚತುರ್ವಿಧ ಪುರುಷಾರ್ಥಗಳನ್ನು ಕೊಡುವುದು. ಅಂತಹ ಶಿವಪುರಾಣವನ್ನು ನಿಮಗೆ ಹೇಳುವೆನು ಕೇಳಿ' ಅಂತ ಸೂತಮುನಿ ಶಿವಮಹಾಪುರಾಣವನ್ನು ಹೇಳುತ್ತಾನೆ.

'ಜಗತ್ತಿನಲ್ಲಿ ಶಿವಪುರಾಣವು ಉದಯಿಸುವವರೆಗೂ ಕಲಿಕಾಲ ಸಂಬಂಧವಾದ ಮಹೋತ್ಪಾತಗಳು ನಿರ್ಭಯವಾಗಿ ಸಂಭವಿಸುವವು. ಸಮಸ್ತ ಶಾಸ್ತ್ರಗಳೂ ಒಂದಕ್ಕೊಂದು ವಿರುದ್ಧವಾಗಿ ವರ್ತಿಸುತಾ, ಬ್ರಹ್ಮವಿದ್ಯೆಯನ್ನು ಯಥಾವತ್ತಾಗಿ ವಿವರಿಸಲಾರದೆ ಇರುವವು. ಹಾಗೆಯೇ ಶಿವಪುರಾಣ ಪ್ರಪಂಚಕ್ಕೆ ಬರದಿದ್ದರೆ, ಜ್ಞಾನಿಗಳಿಗೂ ಶಿವನ ಪರಸ್ವರೂಪ ತಿಳಿಯಲು ಸಾಧ್ಯವಾಗುವುದಿಲ್ಲ. ಶಿವಪುರಾಣವು ಪ್ರಪಂಚಕ್ಕೆ ಬರುವವವರೆಗೂ ಯಮಭಟರು ನಿರ್ಭಯರಾಗಿ ಸಂಚರಿಸುವರು. ಜನರು ಮುಕ್ತಿಮಾರ್ಗವನ್ನು ಕಾಣದೆ ಪಾಪ ಮಾಡುತ್ತಿರುತ್ತಾರೆ. ಇಂಥ ಪಾಪಿಷ್ಠರನ್ನು ಕ್ರೂರರಾದ ಯಮಕಿಂಕರರು ನರಕಕ್ಕೆ ಒಯ್ದು ಚಿತ್ರಹಿಂಸೆ ನೀಡುವರು.

ಶಿವಪುರಾಣ ಪ್ರಪಂಚಕ್ಕೆ ಬರುವವವರೆಗೂ ಯಾವುದು ಒಳ್ಳೆಯದು-ಯಾವುದು ಕೆಟ್ಟದ್ದು ಎಂಬ ನಿರ್ಣಯಿಸುವ ಬುದ್ಧಿಶಕ್ತಿಯೂ ಜನರಲ್ಲಿರುವುದಿಲ್ಲ. ಶಿವಪುರಾಣದಿಂದ ಜ್ಞಾನವಂತರಾದ ಜನ ಪುನೀತರಾಗುವರು. ಶಿವಪುರಾಣ ಎಲ್ಲೆಡೆ ಮೊಳಗುವುದರಿಂದ ಪುಣ್ಯ ಎಲ್ಲೆಡೆ ವ್ಯಾಪಿಸಿ, ಯಮಕಿಂಕರರು ಭೂಮಿಗೆ ಬರುವುದು ಕಡಿಮೆಯಾಗುತ್ತದೆ. ಜನರಿಗೆಲ್ಲಾ ದುಃಖ ಕಳೆದು, ಸರ್ವಸುಖ ಮಾತ್ರವೇ ಲಭಿಸುತ್ತದೆ. ಶಿವಪುರಾಣ ಪ್ರಪಂಚದಲ್ಲಿ ಉದಯಿಸುವವರೆಗೆ ಸಮಸ್ತ ತೀರ್ಥಗಳೂ, ನಾನು ಹೆಚ್ಚು ತಾನು ಹೆಚ್ಚೆಂದು ತಮ್ಮತಮ್ಮಲ್ಲಿ ವಾದವಿವಾದ ಮಾಡುತ್ತವೆ. ಸಮಸ್ತ ಮಂತ್ರಗಳೂ ಕ್ಷೇತ್ರಗಳೂ ಪೀಠಗಳೂ ದಾನಗಳೂ ದೇವತೆಗಳೂ ಶಾಸ್ತ್ರ-ಸಿದ್ಧಾಂತಗಳೆಲ್ಲವೂ, ತಮ್ಮ ತಮ್ಮಲ್ಲೇ ಉತ್ತಮಸ್ಥಾನಕ್ಕಾಗಿ ವಾದವಿವಾದ ಸೃಷ್ಟಿ ಮಾಡುತ್ತವೆ. ಆದರೆ ಶಿವಪುರಾಣವು ಪ್ರಕಾಶವಾದ ಮೇಲೆ ಉತ್ತಮಸ್ಥಾನ ಶಿವಪುರಾಣಕ್ಕೆ ಮಾತ್ರ ಲಭಿಸಿ, ಎಲ್ಲಾ ವಾದವಿವಾದಗಳು ನಿಂತುಹೋಗುತ್ತವೆ.

ಜನರು ತಮಗೆ ಇಷ್ಟವಾದ ನದಿಯ ತೀರ್ಥ ಶ್ರೇಷ್ಠವಾದದ್ದು ಅಂತ ವಾದ ಮಾಡುತ್ತಾರೆ. ದಾನದ ವಿಷಯಗಳಲ್ಲೂ ಹಾಗೆಯೇ, ತಮಗೆ ಇಂತಹ ದಾನ ಪುಣ್ಯಪ್ರದ ಅಂತ ಭ್ರಮಿಸಿದ್ದನ್ನ ನಂಬಿ, ಇತರೆ ದಾನ ವ್ಯರ್ಥ ಅಂತ ವಾದವಿವಾದದ ಅಶಾಂತಿ ಸೃಷ್ಟಿಸುತ್ತಾರೆ. ಪುಣ್ಯಕ್ಷೇತ್ರಗಳಲ್ಲೂ ಭೇದಭಾವ ಮಾಡಿ, ತಮಗೆ ಅನುಕೂಲವಾಗುವ ಕ್ಷೇತ್ರ ಪುಣ್ಯವೆಂದು ಜನರನ್ನು ದಿಕ್ಕು ತಪ್ಪಿಸುತ್ತಾರೆ. ಇಂಥ ಚಿತ್ತಭ್ರಾಂತಿ, ಸ್ವಾರ್ಥಬುದ್ಧಿಯಿಂದ ಜನ ಆಚಾರ-ವಿಚಾರಗಳಲ್ಲಿ ವಿವಾದ ಸೃಷ್ಟಿಸಿ, ಜನರ ಮಧ್ಯೆ ಭೇದಭಾವ ತೋರಿಸುತ್ತಾರೆ. ಆದರೆ ಈ ಭಾವಗಳು ಶಿವಪುರಾಣ ಪ್ರಚಾರವಾದನಂತರ ನಾಶವಾಗುತ್ತವೆ. ಶಿವಮಹಾತ್ಮೆಯ ಶ್ರೇಷ್ಠತೆಯನ್ನು ತಿಳಿದ ಜನ ಶಿವಪುರಾಣಕ್ಕೆ ಶ್ರೇಷ್ಠ ಸ್ಥಾನ ನೀಡುತ್ತಾರೆ. ಶಿವಪುರಾಣಕ್ಕಿಂತ ಮತ್ತೊಂದು ಪುರಾಣ ಮತ್ತೊಂದಿಲ್ಲ ಅಂತ ಜನ ಆತ್ಮಸಂತೋಷದಿಂದ ಸಂಭ್ರಮಿಸುತ್ತಾರೆ. ಪುಣ್ಯತೀರ್ಥ, ಪುಣ್ಯಕ್ಷೇತ್ರ ಮತ್ತು ಸಕಲ ದಾನಗಳಲ್ಲೂ ಶಿವಪುರಾಣವೇ ಶ್ರೇಷ್ಠ. ಜೀವನ್ಮುಕ್ತಿಗೆ ಶಿವಪುರಾಣ ಕೇಳುವುದೇ ಸರಿಯಾದ ಮಾರ್ಗ' – ಎಂಬ ದೃಢ ನಿರ್ಧಾರಕ್ಕೆ ಬರುತ್ತಾರೆ ಅಂತ ತಿಳಿಸುತ್ತಾನೆ, ಸೂತಮುನಿ.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ಮಾಜಿ ಪ್ರಧಾನಿ** ರಾಜೀವ್ ಗಾಂಧಿ ಅವರು 1986ರಲ್ಲಿ ರಾಜ್‌ಘಾಟ್‌ಗೆ ಹೋಗಿದ್ದಾಗ ನಡೆದಿದ್ದ ಘಟನೆಯ ವಿಡಿಯೊ ಈಗ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ರಾಜೀವ್ ಗಾಂಧಿ ಅವರು ರಾಜ್‌ಘಾಟ್‌ಗೆ ತೆರಳಿದ್ದ ವೇಳೆ ಅವರ ಹಿಂಬದಿಯಲ್ಲಿದ್ದ ಪೊದೆ ಅಲುಗಾಡಿದ ಕಾರಣ ವಿಶೇಷ ರಕ್ಷಣಾ ದಳ(ಎಸ್‌ಪಿಜಿ) ಗುಂಡಿನ ದಾಳಿ ನಡೆಸಿತು. ಆ ದಾಳಿಯಲ್ಲಿ ಅಮಾಯಕ ಭಿಕ್ಷುಕನೊಬ್ಬ ಮೃತನಾದ ಎಂದು ಈ ವಿಡಿಯೊವನ್ನು ಬಿಂಬಿಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗಷ್ಟೇ ಪಂಜಾಬ್‌ಗೆ ತೆರಳಿದ್ದ ವೇಳೆ ಭದ್ರತಾ ವೈಫಲ್ಯ ಉಂಟಾಯಿತು ಎಂಬುದರ ಕುರಿತು ಚರ್ಚೆ ನಡೆಯುತ್ತಿರುವ ಕಾರಣ ಈ ವಿಡಿಯೊ ಹರಿಬಿಡಲಾಗಿದೆ.

**ರಾಜೀವ್ ಗಾಂಧಿ** ಅವರು ರಾಜ್‌ಘಾಟ್‌ಗೆ ತೆರಳಿದ್ದ ವೇಳೆ, ರಾಜ್‌ಘಾಟ್‌ನ ಗೋಡೆಯೊಂದರ ಹಿಂದೆ ಅಡಗಿದ್ದ ವ್ಯಕ್ತಿ ರಾಜೀವ್ ಅವರತ್ತ ಗುಂಡಿನ ದಾಳಿ ನಡೆಸಿದ್ದ. ಎಸ್‌ಪಿಜಿ ಸಿಬ್ಬಂದಿ ಆತನನ್ನು ವಶಕ್ಕೆ ತೆಗೆದುಕೊಂಡರು. ಆ ವ್ಯಕ್ತಿಯನ್ನು ಕೊಂದಿಲ್ಲ. ಈ ವೇಳೆ ಯಾರೂ ಮೃತಪಟ್ಟಿರಲಿಲ್ಲ. ಆರು ಜನರಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು. ರಾಜೀವ್ ಗಾಂಧಿ ಅವರನ್ನು ಹತ್ಯೆಗೈಯುವ ಉದ್ದೇಶದಿಂದ ಆತ ದಾಳಿ ನಡೆಸಿದ್ದ. ಆತನ ಹೆಸರು ಕರಮ್‌ಜಿತ್ ಸಿಂಗ್ ಎಂದು ವಿಚಾರಣೆ ಬಳಿಕ ಎಸ್‌ಪಿಜಿ ಹೇಳಿತ್ತು. ಈ ಕುರಿತು ಇಂಡಿಯಾ ಟುಡೆ ಸೇರಿ ಅಂದಿನ ಹಲವು ಪತ್ರಿಕೆಗಳು ವರದಿ ಮಾಡಿದ್ದವು ಎಂದು ಆಲ್ಟ್‌ನ್ಯೂಸ್ ಹೇಳಿದೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ

### ತತ್ವದ ಸ್ಫುರಣೆ

**ಬರಿಯ ಬುದ್ಧಿವಿಮರ್ಶೆಗರಿದು ಜೀವನತತ್ತ್ವ |**
**ಪರಿಶೋಧಿಸುವರಾರು ಬುದ್ಧಿ ಋಜುತೆಯನು? ||**
**ಸ್ಫುರಿಸುವುದದೆಂದೊ ತಾನೆ ಮಿಂಚುಬಳ್ಳಿವೊಲು |**
**ಪರಸತ್ತ್ವ ಮನದೊಳಗೆ – ಮಂಕುತಿಮ್ಮ || 539 ||**

**ಪದ-ಅರ್ಥ:** ಬುದ್ಧಿವಿಮರ್ಶೆಗರಿದು = ಬುದ್ಧಿ + ವಿಮರ್ಶೆಗೆ + ಅರಿದು(ತಿಳಿಯದು), ಪರಿಶೋಧಿಸುವರಾರು = ಪರಿಶೋಧಿಸುವರು-(ವಿಶ್ಲೇಷಣೆ ಮಾಡಿದವರು) + ಆರು(ಯಾರು), ಋಜುತೆಯನ್ನು = ಪ್ರಾಮಾಣಿಕತೆಯನ್ನು, ಸ್ಫುರಿಸುವುದದೆಂದೊ = ಸ್ಫುರಿಸುವುದು + ಅದು + ಎಂದೊ, ಮಿಂಚುಬಳ್ಳಿವೊಲು = ಮಿಂಚುಬಳ್ಳಿ(ಮಿಂಚಿನ ಸೆಳಕು) + ವೊಲು.

**ವಾಚ್ಯಾರ್ಥ:** ಜೀವನದ ತತ್ವ ಕೇವಲ ಬುದ್ಧಿಗೆ, ವಿಮರ್ಶೆಗೆ ನಿಲುಕದು. ಬುದ್ಧಿಯ ಪ್ರಾಮಾಣಿಕತೆಯನ್ನು ಪರೀಕ್ಷಿಸುವರಾರು? ಆ ತತ್ವ ತಾನೆ ಎಂದಿಗೋ ಒಂದು ಮಿಂಚಿನ ಸೆಳಕಿನಂತೆ ಒಂದು ಕ್ಷಣದಲ್ಲಿ ಮನದಲ್ಲಿ ಹೊಳೆಯುತ್ತದೆ.

**ವಿವರಣೆ:** ಶಿಷ್ಯನೊಬ್ಬ ಝೆನ್ ಗುರುವಿನ ಬಳಿಗೆ ಹೋದ. ಅವನಿಗೆ ಜೀವನದ ಮತ್ತು ಝೆನ್ ತತ್ವಗಳನ್ನು ತಿಳಿದುಕೊಳ್ಳುವ ಆಸೆ. ಅವನ ಮುಂದೆ ಕುಳಿತು ತನಗಿರುವ ಸಮಸ್ಯೆಗಳು, ತಾನು ತತ್ವಗಳೆಂದು ತಿಳಿದುಕೊಂಡ ವಿಷಯಗಳನ್ನು ದೀರ್ಘವಾಗಿ ವಿವರಿಸಿದ. ತಾನು ತರ್ಕದ ಮೂಲಕ ಅದನ್ನು ತಿಳಿಯಲು ಮಾಡಿದ ವ್ಯರ್ಥ ಪ್ರಯತ್ನಗಳ ಬಗ್ಗೆ ಹೇಳಿದ. ಗುರು ನಕ್ಕು ಶಿಷ್ಯನನ್ನು ಕರೆದು ಕುಳ್ಳರಿಸಿದ. ಅವನಿಗೋಸ್ಕರ ಚಹಾ ತಯಾರು ಮಾಡಿದ. ಶಿಷ್ಯನ ಮುಂದೆ ಕಪ್ಪು ಬಸಿಗಳನ್ನಿಟ್ಟು, ಕಪ್‌ನಲ್ಲಿ ಚಹಾ ಸುರಿಯತೊಡಗಿದ. ಶಿಷ್ಯ ನೋಡುತ್ತಿದ್ದ. ಗುರು ಶಿಷ್ಯನ ಮುಖ ನೋಡುತ್ತ ಚಹಾ ಹಾಕುತ್ತಲೇ ಹೋದ. ಕಪ್ ತುಂಬಿತು. ಗುರು ಹಾಕುವುದನ್ನು ನಿಲ್ಲಿಸಲಿಲ್ಲ. ಚಹಾ ಬಸಿಯಲ್ಲಿ ಬೀಳತೊಡಗಿತು. ಶಿಷ್ಯ ಆತುರದಲ್ಲಿ ಹೇಳಿದ. 'ಗುರುಗಳೇ ಕಪ್ ತುಂಬಿ ಹೋಗಿದೆ'. ಗುರು ಮತ್ತೆ ನಕ್ಕು ಚಹಾ ಸುರಿಯುವುದನ್ನು ಮುಂದುವರೆಸಿದ. ಈಗ ಚಹಾ ಬಸಿ ತುಂಬಿ ಮೇಜಿನ ಮೇಲೆ ಹರಿಯತೊಡಗಿತು. ಶಿಷ್ಯ ಕೂಗಿದ, 'ಗುರುಗಳೇ ಕಪ್ ತುಂಬಿ ಹರಿಯತೊಡಗಿದೆ'. ಗುರು ಶಿಷ್ಯನನ್ನೇ ನೋಡುತ್ತ 'ಅದು ಕಾಣುತ್ತಿದೆ' ಎಂದ. 'ಕಪ್ ತುಂಬಿದ್ದು ಕಾಣುತ್ತಿದೆ ಆದರೆ ನಿನ್ನ ಮನಸ್ಸು ಹಾಗೆಯೇ ತರ್ಕದಿಂದ ತುಂಬಿದೆ. ಅದನ್ನು ಖಾಲಿ ಮಾಡಿ ಬಾ. ಆಗ ನಾನೇನಾದರೂ ಹೇಳಬಹುದು' ಎಂದ. ಬರಿಯ ತರ್ಕದಿಂದ, ಬುದ್ಧಿಯಿಂದ ಜೀವನದ ತತ್ವಗಳು ತಿಳಿಯುವುದು ಸಾಧ್ಯವಿಲ್ಲ. ಎಲ್ಲ ಚಿಂತನೆಗಳೂ ಬುದ್ಧಿಯ ಚಮತ್ಕಾರಗಳು.

ಮನುಷ್ಯನ ಬುದ್ಧಿಯ ಸ್ವರೂಪವೇ ವಿಚಿತ್ರವಾದದ್ದು. ಕಂಡದ್ದನ್ನೆಲ್ಲ ತಿಳಿಯಬಯಸುತ್ತದೆ. ಹೊಸ ವಿಷಯ ಬಂದಾಗ ತನಗೆ ಹಿಂದೆ ತಿಳಿದದ್ದರ ಆಧಾರದ ಮೇಲೆ ತರ್ಕವನ್ನು ಕಟ್ಟುತ್ತದೆ. ಅದೇ ಸರಿಯೆಂದು ನಂಬತೊಡಗುತ್ತದೆ. ಒಮ್ಮೆ ನಂಬಿಕೆ ಸ್ಥಿರವಾದರೆ, ಉಳಿದ ಚಿಂತನೆಗಳನ್ನು ನಿರಾಕರಿಸುತ್ತದೆ. ಇಂಥ ಬುದ್ಧಿಯ ಪ್ರಾಮಾಣಿಕತೆಯನ್ನು ಪರೀಕ್ಷಿಸುವುದು ಹೇಗೆ? ಕಗ್ಗ ಹೇಳುತ್ತದೆ, ಬುದ್ಧಿಯಿಂದ, ತರ್ಕದಿಂದ ತತ್ವವನ್ನು ತಿಳಿಯುವುದು ಸಾಧ್ಯವಿಲ್ಲ. ಅದು ಸಾಧಕನಿಗೆ ಅವನ ಭಾವದ ಉತ್ಕಟತೆಯಲ್ಲಿ ಮಿಂಚಿನಂತೆ ಹೊಳೆದು ಪರಿವರ್ತನೆಯನ್ನು ಮಾಡಿಬಿಡುತ್ತದೆ. ಆಗ ತತ್ವ ಅವನಿಗೆ ಅರಿವಾಗದಂತೆ ಮನದಲ್ಲಿ ಇಳಿಯುತ್ತದೆ. ಶ್ರೀ ರಾಮಕೃಷ್ಣರ ಒಂದು ಸ್ಪರ್ಶ ನರೇಂದ್ರನನ್ನು ವಿವೇಕಾನಂದರನ್ನಾಗಿಸಿದರೆ, ವಿವೇಕಾನಂದರ ಪ್ರಭಾವಶಾಲೀ ಕಣ್ಣುಗಳನ್ನು ಕಂಡ ಆಳ್ವಾರ್‌ದ ರೇಲ್ವೆ ಸ್ಟೇಶನ್‌ಮಾಸ್ಟರ್ ಅವರ ಮೊದಲ ಶಿಷ್ಯನಾಗಿದ್ದು ಒಂದೇ ಕ್ಷಣದಲ್ಲಿ. ಶ್ರೀಶಂಕರರ ಸನ್ಯಾಸ, ಅಣ್ಣಾ ಹಜಾರೆಯವರ ಸಮಾಜಮುಖಿಯಾಗುವ ತೀರ್ಮಾನ, ಸಿದ್ಧಾರ್ಥ ಬುದ್ಧನಾಗುವ ಕ್ಷಣ, ಇವೆಲ್ಲ ಸಿದ್ಧವಾದ ಅರಿವಿನಲ್ಲಿ ಹೊಳೆಯುವ ಮಿಂಚುಗಳು. ಅದರ ಸ್ಫುರಣೆಯಾಗಬೇಕಾದರೆ ಮನಸ್ಸು, ದೇಹಗಳು, ಎಣ್ಣೆ ತುಂಬಿದ ಹಣತೆಯಂತೆ ಕಿಡಿಗಾಗಿ ಕಾಯ್ದು ಕೂಡ್ರಬೇಕು. ಅಲ್ಲಿ ಬುದ್ಧಿಯ ಜಾಣಾಕ್ಷತೆಗೆ, ತರ್ಕಕ್ಕೆ ಯಾವ ಸ್ಥಾನವೂ ಇಲ್ಲ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ

ಬುಧವಾರ ಜನವರಿ 12, 2022

**ಶ್ರೀ ಪ್ಲವನಾಮ ಸಂವತ್ಸರ ದಕ್ಷಿಣಾಯಣ-ಹೇಮಂತ ಋತು ಧನುರ್ಮಾಸದ 27 ನೇ ದಿನ ತಿಥಿ:** (ಪೌಷ ಶುಕ್ಲ) ದಶಮಿ ಗಂ. 16-50 ನಕ್ಷತ್ರ: ಭರಣಿ ಗಂ. 14-00 ಯೋಗ: ಸಾಧ್ಯ ಗಂ. 11-37, ಕರಣ: ಗರಜೆ ಗಂ. 16-50. ರಾಹುಕಾಲ: ಮಧ್ಯಾಹ್ನ 12:00–01:30 ಸೂರ್ಯೋದಯ : 07-00 ಸೂರ್ಯಾಸ್ತ: 06-17 ಮುಸ್ಲಿಂ ದಿನಾಂಕ : 08 ಜುಮಾದುಸ್ಸಾನಿ ದಿನ ವಿಶೇಷ: ಸಾಂಬ ದಶಮಿ (ಒರಿಸ್ಸಾ) ಅದೃಷ್ಟ ಸಂಖ್ಯೆ: 2, 7

**ಮೇಷ:** ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವಂತಹ ಕಾಲವನ್ನು ನಿರೀಕ್ಷಿಸಬಹುದು. ಧನಾಗಮನ ಹೆಚ್ಚಿದ್ದರೂ ಬಹುಪಾಲು ಖರ್ಚಿನ ಪಟ್ಟಿಯಲ್ಲಿ ಇರಲಿದೆ. ಹಿತಶತ್ರುಗಳ, ಪ್ರತಿಸ್ಪರ್ಧಿಗಳ ವಿದ್ರೋಹ ಅನುಭವಕ್ಕೆ ಬಂದೀತು.

**ವೃಷಭ:** ಹೋಟೆಲ್ ಉದ್ಯಮಿಗಳಿಗೆ ಸುತ್ತಮುತ್ತಲಿನ ಸಮಾಜದಲ್ಲಿ ಗೌರವ ಹೆಚ್ಚಲಿದೆ. ವಿವಾಹ ಪ್ರಸ್ತಾಪಗಳು ಬಲಗೊಂಡು ಕಂಕಣಭಾಗ್ಯದ ಸಾಧ್ಯತೆ. ಎಲ್ಲಾ ವಿಚಾರದಲ್ಲೂ ಸಾವಧಾನವಾಗಿ ಮುಂದುವರಿಯಿರಿ.

**ಮಿಥುನ:** ಗ್ರಹಗಳ ಚಲನೆಯು ಸುಖಮಯವಾಗಿ ಜೀವನ ನಡೆಸಲು ಅನುಕೂಲವಾಗಿದೆ. ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರಿ. ಶುಭಕಾರ್ಯಗಳ ಸಂಭ್ರಮ ಹಿರಿಯರ ಮನಸ್ಸಿಗೆ ನೆಮ್ಮದಿ.

**ಕರ್ಕಾಟಕ:** ವೃತ್ತಿರಂಗದಲ್ಲಿ ತಮ್ಮತನ ಕಾಯ್ದುಕೊಳ್ಳುವುದರಿಂದ ಮುಂದಿನ ಅಭಿವೃದ್ಧಿಗೆ ಪೂರಕವಾಗಲಿದೆ. ರಕ್ತ ಸಂಬಂಧಿ ಕಾಯಿಲೆ ಹೊಂದಿದವರು, ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು.

**ಸಿಂಹ:** ಬಹುಕಾಲದಿಂದ ಅನುಭವಿಸುತ್ತಿರುವ ರೋಗಬಾಧೆಯು ಹಂತಹಂತವಾಗಿ ಚೇತರಿಕೆಯಾಗಲಿದೆ. ದಲ್ಲಾಳಿಗಳಿಗೆ ಮತ್ತು ವೃತ್ತಿವ್ಯಾಪಾರಗಳಲ್ಲಿ ಮುನ್ನುಗ್ಗಿ ಕೆಲಸ ಮಾಡುವವರಿಗೆ ಕನಸುಗಳು ನನಸಾಗಲಿದೆ.

**ಕನ್ಯಾ:** ಏನನ್ನಾದರೂ ಸಾಧಿಸಲೇಬೇಕೆಂದಿರುವ ನಿಮಗೆ ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅನಿವಾರ್ಯ.

**ತುಲಾ:** ಪಶುಸಂಗೋಪನೆ ಮಾಡುವವರಿಗೆ, ಜೇನುಕೃಷಿ ಮಾಡುವವರಿಗೆ ಮತ್ತು ಪಾನೀಯ ಮಾರಾಟಗಾರರಿಗೆ ಮಹಾಲಕ್ಷ್ಮಿಯ ಅನುಗ್ರಹವು ಸಿಗಲಿದೆ. ಮನೆಯಲ್ಲಿ ಶಾಂತ ವಾತಾವರಣವಿದ್ದು ಮನಸ್ಸಿಗೆ ತುಸು ನೆಮ್ಮದಿ.

**ವೃಶ್ಚಿಕ:** ಮಗಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಸಿನಿಮಾರಂಗದವರಿಗೆ ಹೆಚ್ಚಿನ ಅವಕಾಶ. ನಿಮ್ಮ ಒಡನಾಡಿಗಳ ಪ್ರೀತಿ ವಿಶ್ವಾಸ ಸಹಕಾರದಿಂದ ಈ ದಿನದಲ್ಲಿ ಕೆಲಸಕಾರ್ಯಗಳನ್ನು ಸುಲಭದಲ್ಲಿ ಸಾಧಿಸುವಿರಿ.

**ಧನು:** ಮನೆ ಬದಲಾಯಿಸುವ ಯೋಚನೆ ಮಾಡಬೇಕಾಗಲಿದೆ. ಬ್ಯಾಂಕ್ ಅಧಿಕಾರಿಗಳಿಗೆ ವರ್ಗಾವಣೆ ಸಂಭವವಿರುವುದು. ತಾಂತ್ರಿಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ಹುಡುಕಿಕೊಂಡು ಬರಲಿದೆ.

**ಮಕರ:** ಯಾವುದೇ ಅಡಚಣೆಗಳಿಲ್ಲದೆ, ಅಪಾರವಾದ ಜನಬಲ ದೊರೆತು ದೊಡ್ಡ ಕಾರ್ಯಗಳನ್ನು ಸಾಧಿಸುವಿರಿ. ನಿಮ್ಮ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆನಿಸಿದ್ದರೂ ಅದು ಅಷ್ಟು ಸುಲಭವಲ್ಲ.

**ಕುಂಭ:** ಸಂದರ್ಭಕ್ಕನುಗುಣವಾಗಿ ವರ್ತಿಸುವ ತೀರ್ಮಾನ ಕೈಗೊಳ್ಳುವಿರಿ. ಮಕ್ಕಳ ವಿದ್ಯಾಭ್ಯಾಸದತ್ತ ಗಮನ ಹರಿಸಿ. ಇಂದಿನ ನಿಮ್ಮ ಮೃದು ಧೋರಣೆ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯವೆನಿಸುವುದು.

**ಮೀನ:** ಕೆಲಸ-ಕಾರ್ಯಗಳು ವಿಳಂಬಗತಿಯಲ್ಲಿ ನಡೆದರೂ ಪೂರ್ಣಗೊಳ್ಳಲಿವೆ. ನಿಮ್ಮ ಮನೋಭಿಲಾಷೆಗಳು ಈಡೇರಿ ಮನಸ್ಸಿಗೆ ಸಂತಸ. ದಿನ ನಿತ್ಯದ ವ್ಯವಹಾರಗಳಲ್ಲಿ ಯಾವುದೇ ರೀತಿಯ ಬದಲಾವಣೆಗಳಿರುವುದಿಲ್ಲ.

## ಪದಬಂಧ 4836


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ನಿರಂಕುಶವಾದ ನಡವಳಿಕೆ (6)
4.ಕನ್ನಡಿಗನು ಪಡೆದುಕೊಂಡಿರುವ ಟ್ರೈನಿಂಗ್ (4)
5.ಹರುಷದಿಂದ ನೋಡುತ್ತಿರುವ ಪಟ್ಟಣ (3)
7.ಮೌರ್ಯ ವಂಶದ ಪ್ರಸಿದ್ಧ ರಾಜ (3)
9.ಇದು ನಿಶ್ಚಯವಾದುದು (3)
12.ವನದಲ್ಲಿ ಕಾಣುವ ಅಭಿವೃದ್ಧಿ (3)
13.ಮುಕ್ತಾಯ ಸಮಾರಂಭವಿದು (4)
15.ಹಾರ ಕೊನೆಗಿದ್ದಾಗ ಕಾಣಿಸಿದ ಜನರ ನಡತೆ (6)

**ಮೇಲಿಂದ ಕೆಳಕ್ಕೆ**

1.ದೂಷಣೆ ಯಾಕೆ? ಹಾಸ್ಯಗಾರ ಇಲ್ಲಿದ್ದಾನಲ್ಲಾ! (4)
2.ಅತ್ತಿತ್ತ ನೋಡುವಾಗ ಅಂಡ ತಿರುವು ಮುರುವಾಗಿದೆ (2)
3.ಅಚ್ಚ ಕನ್ನಡಿಗನ ಟ್ಯಾಲೆಂಟ್! (3)
6.ಆಸ್ಪತ್ರೆಯನ್ನು ಹೀಗೂ ಕರೆವರು (4)
7.ಅರ್ಥವಲ್ಲದುದು ಇದು! (3)
8.ಮಧುರವಾದ ಧ್ವನಿ (4)
10.ವರವನ್ನು ಪಡೆದಿರುವ ಬೇಡನಿವನು (4)
11.ಮಣ್ಣು ಮಿಶ್ರಿತ ನೀರು (3)
14.ಕುಂದು ಇಲ್ಲಿ ಉಲ್ಟಾ ಪಲ್ಟಾ ಕಾಣುತ್ತಿದೆಯಲ್ಲಾ? (2)



**4835ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:** 1.ಬಳಸುದಾರಿ 4.ವಾಙ್ಮಯ 5.ವಾಯಸ 6.ನೆಗೆಣ್ಣಿ 8.ದಾರ 9.ಹಸು 11.ಸುದಿನ 14.ವಿನೋದ 15.ಅಮಲು 16.ವಿಧಾನಸೌಧ
**ಮೇಲಿಂದ ಕೆಳಕ್ಕೆ:** 1.ಬಹುಶ್ರುತ 2.ಸುಮನೋಹರ 3.ರಿವಾಜು 4.ವಾಸನೆ 7.ಗೆಣಸು 8.ದಾಯಾದಿ 9.ಹಯವದನ 10.ಅನುಬಂಧ 12.ನವಿಲು 13.ಪದವಿ

## ಸುಡೊಕು 5222

| | | | | | | | | |
|---|---|---|---|---|---|---|---|---|
| 4 | | | 3 | | 8 | | | 2 |
| | | 1 | | 6 | | 3 | 8 | |
| 9 | | | | | 2 | | | 6 |
| | | | | | | | 6 | |
| | 2 | 6 | 9 | 4 | 7 | | | |
| | 4 | | 6 | | 1 | | 7 | 5 |
| | | | 1 | | 9 | 8 | | |
| 8 | | 7 | | | | | 9 | |
| 1 | 9 | | 8 | | 6 | 4 | | 3 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

**5221 ಸುಡೊಕು**

| | | | | | | | | |
|---|---|---|---|---|---|---|---|---|
| 1 | 5 | 8 | 4 | 3 | 2 | 9 | 7 | 6 |
| 3 | 7 | 6 | 9 | 8 | 1 | 2 | 4 | 5 |
| 9 | 2 | 4 | 6 | 5 | 7 | 1 | 8 | 3 |
| 8 | 9 | 5 | 2 | 7 | 4 | 6 | 3 | 1 |
| 4 | 6 | 1 | 5 | 9 | 3 | 7 | 2 | 8 |
| 7 | 3 | 2 | 1 | 6 | 8 | 5 | 9 | 4 |
| 5 | 4 | 9 | 3 | 2 | 6 | 8 | 1 | 7 |
| 2 | 1 | 7 | 8 | 4 | 5 | 3 | 6 | 9 |
| 6 | 8 | 3 | 7 | 1 | 9 | 4 | 5 | 2 |

## ರಾಜ್ಯದ ವಿವಿಧೆಡೆ..

- ಚಾಮರಾಜನಗರ ಜಿಲ್ಲೆಯಲ್ಲಿ 10 ಪೊಲೀಸ್ ಸಿಬ್ಬಂದಿಗೆ ಕೋವಿಡ್ ದೃಢಪಟ್ಟಿದೆ. ಹನೂರು ತಾಲ್ಲೂಕಿನ ಒಡೆಯರಪಾಳ್ಯ ಬಳಿಯಿರುವ ಟಿಬೆಟಿಯನ್ ನಿರಾಶ್ರಿತರ ಶಿಬಿರದಲ್ಲಿ 22 ಮಂದಿಗೆ ಕೋವಿಡ್ ದೃಢಪಟ್ಟಿದೆ.
- ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಮಾವಿನಹೊಳೆ ಗ್ರಾಮದ ಇಂದಿರಾ ಗಾಂಧಿ ವಸತಿಶಾಲೆಯ ಪ್ರಾಂಶುಪಾಲ ಹಾಗೂ 45 ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದೆ. ಸೋಂಕಿತ ವಿದ್ಯಾರ್ಥಿಗಳು 6ರಿಂದ 10ನೇ ತರಗತಿಯವರಾಗಿದ್ದಾರೆ.
- ಜಗಳೂರಿನ ಖಾಸಗಿ ಪ್ರೌಢಶಾಲೆಯೊಂದರ 6 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ಇರುವುದು ಮಂಗಳವಾರ ದೃಢಪಟ್ಟಿದೆ
- ಹಾಸನ ನಗರದ ಮಲೆನಾಡು ಎಂಜಿನಿಯರಿಂಗ್ ಕಾಲೇಜಿನಲ್ಲಿ ವಿಭಾಗವೊಂದರ ಮುಖ್ಯಸ್ಥರು ಹಾಗೂ ಒಂಬತ್ತು ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದೆ. ಎಲ್ಲರೂ ಪ್ರತ್ಯೇಕ ವಾಸದಲ್ಲಿದ್ದಾರೆ.
- ಶ್ರೀರಂಗಪಟ್ಟಣದಿಂದ ಓಂಶಕ್ತಿ ಯಾತ್ರೆಗೆ ತೆರಳಿ ವಾಪಸ್ಸಾದ ತಾಲ್ಲೂಕಿನ ಚಂದಗಾಲು ಗ್ರಾಮದ 48 ಯಾತ್ರಾರ್ಥಿಗಳ ಪೈಕಿ 12 ಮಂದಿಗೆ ಸೋಂಕು ತಗುಲಿದೆ.
- ಪಾಂಡವಪುರ: ಶಾಸಕ ಸಿ.ಎಸ್. ಪುಟ್ಟರಾಜು ಮಾಲೀಕತ್ವದ, ಚಿನಕುರಳಿ ಗ್ರಾಮದ ಎಸ್.ಟಿ.ಜಿ ಶಿಕ್ಷಣ ಸಂಸ್ಥೆಯ ಪಿಯು ಕಾಲೇಜಿನ 36 ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದ್ದು, ಕಾಲೇಜಿಗೆ ಜ.17ರವರೆಗೆ ರಜೆ ನೀಡಲಾಗಿದೆ.

## ತಜ್ಞ ವೈದ್ಯರೊಂದಿಗೆ ಸಂವಾದ

ನವದೆಹಲಿ: ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ದೇಶದ ವಿವಿಧ ಭಾಗಗಳ ತಜ್ಞವೈದ್ಯರೊಂದಿಗೆ ಮಂಗಳವಾರ ವರ್ಚುವಲ್ ಆಗಿ ಸಂವಾದ ನಡೆಸಿ, ಕೋವಿಡ್ ಸ್ಥಿತಿ ಕುರಿತು ಚರ್ಚಿಸಿದರು. 'ದೇಶದಲ್ಲಿನ ಕೋವಿಡ್ ಸ್ಥಿತಿ ಕುರಿತು 120 ತಜ್ಞವೈದ್ಯರೊಂದಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಚರ್ಚೆ ನಡೆಸಿದೆ. ಅವರ ಸಲಹೆಗಳನ್ನು ಆಲಿಸಿದ್ದು, ಸೂಕ್ತ ಸೂಚನೆಗಳನ್ನು ನೀಡಲಾಯಿತು' ಎಂದು ಅವರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

### 20 ದಿನಗಳಲ್ಲಿ 20ರಿಂದ 40 ವರ್ಷದೊಳಗಿನ 30,602 ಮಂದಿಗೆ ಸೋಂಕು

# ಸೋಂಕಿತರಲ್ಲಿ ವಯಸ್ಕರೇ ಅಧಿಕ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕಿತರಾಗುತ್ತಿರುವವರಲ್ಲಿ ಶೇ 50ಕ್ಕೂ ಅಧಿಕ ಮಂದಿ ಯುವಜನರು ಮತ್ತು ಮಧ್ಯಮ ವಯಸ್ಕರೇ ಆಗಿದ್ದಾರೆ.

2020ರ ಮಾರ್ಚ್ ಬಳಿಕ ಕಾಣಿಸಿಕೊಂಡಿದ್ದ ಕೋವಿಡ್ ಮೊದಲನೇ ಅಲೆಯಲ್ಲಿ ಹಿರಿಯ ನಾಗರಿಕರು ಸೋಂಕಿನ ತೀವ್ರತೆಗೆ ಹೆಚ್ಚಿನ ಪ್ರಮಾಣದಲ್ಲಿ ಅಸ್ವಸ್ಥರಾಗಿದ್ದರು. 2021ರ ಮಾರ್ಚ್ ಮೂರನೇ ವಾರದ ಬಳಿಕ ಎರಡನೇ ಅಲೆ ಕಾಣಿಸಿಕೊಂಡಿತ್ತು. ಆ ವೇಳೆ ವೈರಾಣು ವೇಗವಾಗಿ ರಾಜ್ಯದಾದ್ಯಂತ ವ್ಯಾಪಿಸಿಕೊಂಡಿತ್ತು. ಮೇ ತಿಂಗಳಲ್ಲಿ ದಿನವೊಂದಕ್ಕೆ 50 ಸಾವಿರ ದಾಟಿದ್ದ ಹೊಸ ಪ್ರಕರಣಗಳ ಸಂಖ್ಯೆ, ಜುಲೈ ಬಳಿಕ ಇಳಿಮುಖ ಮಾಡಿತ್ತು.

2021ರ ವರ್ಷಾಂತ್ಯದಿಂದ ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ರಾಜ್ಯದಲ್ಲಿ ವರದಿಯಾದ ಕೋವಿಡ್ ಪ್ರಕರಣಗಳನ್ನು ತಜ್ಞರ ನೆರವಿನಿಂದ ಕೋವಿಡ್ ವಾರ್ ರೂಮ್ ವಿಶ್ಲೇಷಣೆ ಮಾಡಿದೆ. ಆ ಪ್ರಕಾರ ಕಳೆದ 20 ದಿನಗಳಲ್ಲಿ ದೃಢಪಟ್ಟ ಕೋವಿಡ್ ಪ್ರಕರಣಗಳಲ್ಲಿ 16,432 ಮಂದಿ 20ರಿಂದ 29 ವರ್ಷದವರು ಹಾಗೂ 14,170 ಮಂದಿ 30ರಿಂದ 39 ವರ್ಷದವರಾಗಿದ್ದಾರೆ. ಕೋವಿಡ್ ಕಾಣಿಸಿಕೊಂಡಾಗಿನಿಂದ ಈವರೆಗೆ ಸೋಂಕಿತರಾದ ಈ ವಯೋಮಾನದವರ ಸಂಖ್ಯೆ ಕ್ರಮವಾಗಿ 6.54 ಲಕ್ಷ, 7.01 ಲಕ್ಷಕ್ಕೆ ಏರಿಕೆಯಾಗಿದೆ. 'ಸಾರ್ವಜನಿಕ ಪ್ರದೇಶಗಳಲ್ಲಿ ಹೆಚ್ಚಾಗಿ ಓಡಾಟ, ಕ್ಷೇತ್ರಕಾರ್ಯ, ತಡವಾಗಿ ಪರೀಕ್ಷೆ ಮಾಡಿಸಿಕೊಳ್ಳುತ್ತಿರುವುದರಿಂದಲೇ ಯುವಜನರು ಮತ್ತು ಮಧ್ಯ ವಯಸ್ಸಿನವರು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗಲು ಕಾರಣ' ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

**ಚಿಕ್ಕ ಮಕ್ಕಳ ಸಂಖ್ಯೆ ಕಡಿಮೆ:** ಕೋವಿಡ್ ಮೂರನೇ ಅಲೆಯಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುವ ಬಗ್ಗೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರು ಕಳವಳ ವ್ಯಕ್ತಪಡಿಸಿದ್ದರು. 10 ವರ್ಷದೊಳಗಿನ ಮಕ್ಕಳಲ್ಲಿ 1,671 ಹಾಗೂ 10ರಿಂದ 19 ವರ್ಷದವರೆಗಿನವರಲ್ಲಿ 7,253 ಮಂದಿಗೆ ಸೋಂಕು ದೃಢಪಟ್ಟಿದೆ. 40ರಿಂದ 60 ವರ್ಷದೊಳಗಿನವರಲ್ಲಿ 14,836 ಮತ್ತು 60ರಿಂದ 80 ವರ್ಷದೊಳಗಿನವರಲ್ಲಿ 5,709 ಮಂದಿ ಕಳೆದ 20 ದಿನಗಳ ಅವಧಿಯಲ್ಲಿ ಕೋವಿಡ್ ಪೀಡಿತರಾಗಿದ್ದಾರೆ.

80ರಿಂದ 89 ವರ್ಷದವರಲ್ಲಿ 488 ಮಂದಿ ಕೊರೊನಾ ಸೋಂಕಿತರಾಗಿದ್ದಾರೆ. 90ರಿಂದ 99 ವರ್ಷದವರಲ್ಲಿ 52 ಮಂದಿಗೆ ಸೋಂಕು ತಗುಲಿದೆ. 100 ವರ್ಷಗಳು ಮೇಲ್ಪಟ್ಟವರಲ್ಲಿ ಒಬ್ಬರು ಕೋವಿಡ್ ಪೀಡಿತರಾಗಿದ್ದಾರೆ. ಸೋಂಕಿತರಾದವರಲ್ಲಿ ಶೇ 90ಕ್ಕೂ ಅಧಿಕ ಮಂದಿ ಮನೆ ಆರೈಕೆಯಲ್ಲಿ ಚೇತರಿಸಿಕೊಂಡಿದ್ದಾರೆ.

**ವಯೋಮಿತಿ ಅನುಸಾರ ಕೋವಿಡ್ ವಿವರ***

| ವಯಸ್ಸು | ಸೋಂಕಿತರು | ಮೃತರು |
|---|---|---|
| 0–9 | 95,876 | 67 |
| 10–19 | 2,42,835 | 94 |
| 20–29 | 6,54,141 | 791 |
| 30–39 | 7,01,360 | 2,351 |
| 40–49 | 5,34,711 | 5,069 |
| 50–59 | 3,92,018 | 8,386 |
| 60–69 | 2,76,320 | 10,876 |
| 70–79 | 1,25,020 | 7,411 |
| 80–89 | 36,431 | 2,752 |
| 90–99 | 4,711 | 564 |
| 100 ಮೇಲ್ಪಟ್ಟು | 233 | 13 |

* ಕೋವಿಡ್ ಕಾಣಿಸಿಕೊಂಡಾಗಿನಿಂದ ವರದಿಯಾದ ಒಟ್ಟು ಪ್ರಕರಣಗಳನ್ನು ಆಧರಿಸಿ

### ಸೋಂಕಿನ ತೀವ್ರತೆ ಕಡಿಮೆ

ಕೋವಿಡ್ ಎರಡನೇ ಅಲೆಯಲ್ಲಿ ಸೋಂಕಿನ ತೀವ್ರತೆಗೆ ಯುವಜನರು ಹಾಗೂ ಮಧ್ಯಮ ವಯಸ್ಕರೂ ಹೆಚ್ಚಿನ ಸಂಖ್ಯೆಯಲ್ಲಿ ಮೃತಪಟ್ಟಿದ್ದರು. ಈಗ ಕಳೆದ 20 ದಿನಗಳಲ್ಲಿ 20ರಿಂದ 40 ವರ್ಷದೊಳಗಿನ 30 ಸಾವಿರಕ್ಕೂ ಅಧಿಕ ಮಂದಿ ಸೋಂಕಿತರಾಗಿದ್ದಾರೆ. ಇವರಲ್ಲಿ 30–40ರ ವಯಸ್ಸಿನವರ ಪೈಕಿ ಮೂವರು ಮೃತಪಟ್ಟಿದ್ದಾರೆ. 30 ವರ್ಷದೊಳಗಿನ ಸೋಂಕಿತರಲ್ಲಿ ಯಾವುದೇ ವ್ಯಕ್ತಿ ಮೃತಪಟ್ಟಿಲ್ಲ. 40ರಿಂದ 60 ವರ್ಷದೊಳಗಿನವರಲ್ಲಿ 56 ಮಂದಿ ಸಾವಿಗೀಡಾಗಿದ್ದಾರೆ. 60 ವರ್ಷಗಳು ಮೇಲ್ಪಟ್ಟವರಲ್ಲಿ 20 ಮಂದಿ ಸೋಂಕಿನಿಂದ ಮರಣ ಹೊಂದಿದ್ದಾರೆ.



**ಮಕ್ಕಳಲ್ಲಿ ಸೋಂಕು ಅಷ್ಟೊಂದು ತೀವ್ರ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಚಿಕಿತ್ಸೆಗೆ ಐಸಿಯು ಸಹಿತ ವಿವಿಧ ವ್ಯವಸ್ಥೆ ಮಾಡಿಕೊಳ್ಳಲಾಗಿದೆ**

**ಡಾ. ಸಂಜಯ್ ಕೆ.ಎಸ್,** ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ




**ಓಮೈಕ್ರಾನ್ ವೇಗವಾಗಿ ಹರಡಲಿದೆ. ಫೆಬ್ರವರಿ ತಿಂಗಳಲ್ಲಿ ಪ್ರಕರಣಗಳು ಗರಿಷ್ಠ ಸಂಖ್ಯೆಗೆ ತಲುಪಬಹುದು. ಸೋಂಕಿನ ತೀವ್ರತೆ ಕಡಿಮೆಯಿದೆ**

**ಡಾ.ಸಿ.ಎನ್. ಮಂಜುನಾಥ್,** ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

### ದೆಹಲಿ: ಕೋವಿಡ್– ಖಾಸಗಿ ಕಚೇರಿಗಳು ಪೂರ್ಣ ಬಂದ್

# ಮನೆಯಿಂದಲೇ ಕೆಲಸಕ್ಕೆ ಸೂಚನೆ

ನವದೆಹಲಿ (ಪಿಟಿಐ): ದೇಶದ ರಾಜಧಾನಿಯಲ್ಲಿ ಕೋವಿಡ್–19ರ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ಖಾಸಗಿ ಕಚೇರಿಗಳನ್ನು ಮುಚ್ಚುವಂತೆ ದೆಹಲಿ ಸರ್ಕಾರ ಮಂಗಳವಾರ ನಿರ್ದೇಶನ ನೀಡಿದೆ. ತುರ್ತು ಸೇವೆ ಮತ್ತು ಇತರ ಕೆಲ ವಿನಾಯಿತಿ ಪಡೆದಿರುವ ವರ್ಗಗಳನ್ನು ಹೊರತುಪಡಿಸಿ ಉಳಿದ ಎಲ್ಲ ಖಾಸಗಿ ಕಚೇರಿಗಳಿಗೆ ಈ ಆದೇಶ ಅನ್ವಯವಾಗಲಿದೆ.



ಇದುವರೆಗೆ ಶೇ 50ರಷ್ಟು ಸಿಬ್ಬಂದಿ ಜೊತೆಗೆ ಕಾರ್ಯನಿರ್ವಹಿಸುತ್ತಿದ್ದ ಖಾಸಗಿ ಕಚೇರಿಗಳು, ಇನ್ನು ಮುಂದೆ ಪೂರ್ಣ ಪ್ರಮಾಣದಲ್ಲಿ ಮನೆಯಿಂದಲೇ ಕೆಲಸ ಮಾಡುವ ಪದ್ಧತಿಯನ್ನು ಅನುಸರಿಸಬೇಕು ಎಂದು ಸರ್ಕಾರ ತಿಳಿಸಿದೆ.

ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರ (ಡಿಡಿಎಂಎ) ಆದೇಶ ಹೊರಡಿಸಿದ್ದು, ದೆಹಲಿಯಲ್ಲಿ ರೆಸ್ಟೋರೆಂಟ್‌ಗಳು ಮತ್ತು ಬಾರ್‌ಗಳನ್ನು ಮುಚ್ಚುವಂತೆ ಸೂಚಿಸಿದೆ. ಆದರೆ ರೆಸ್ಟೋರೆಂಟ್‌ಗಳಿಗೆ 'ಹೋಮ್ ಡೆಲಿವರಿ' ಸೇವೆ ಮತ್ತು ಆರ್ಡರ್‌ಗಳನ್ನು ತೆಗೆದುಕೊಳ್ಳಲು ಅನುಮತಿ ನೀಡಲಾಗಿದೆ.

ಹೊಸ ನಿರ್ಬಂಧಗಳು ತಕ್ಷಣದಿಂದ ಜಾರಿಗೆ ಬರಲಿದ್ದು, ಮುಂದಿನ ಆದೇಶದವರೆಗೆ ಜಾರಿಯಲ್ಲಿ ಇರುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೆಲ ದಿನಗಳಿಂದ ದೆಹಲಿಯಲ್ಲಿ ಕೋವಿಡ್–19 ಪ್ರಕರಣಗಳು (ಓಮೈಕ್ರಾನ್ ಒಳಗೊಂಡು) ವೇಗವಾಗಿ ಹೆಚ್ಚುತ್ತಿವೆ. ಪಾಸಿಟಿವಿಟಿ ದರ ಶೇ 23 ಅನ್ನು ದಾಟಿದೆ. ಹಾಗಾಗಿ ಹೆಚ್ಚುವರಿ ನಿರ್ಬಂಧಗಳನ್ನು ವಿಧಿಸುವ ಅಗತ್ಯವಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ದೆಹಲಿಯಲ್ಲಿನ ಕೋವಿಡ್–19ರ ಪರಿಸ್ಥಿತಿ ಕುರಿತು ಲೆಫ್ಟಿನೆಂಟ್ ಗವರ್ನರ್ ಅಧ್ಯಕ್ಷತೆಯಲ್ಲಿ ಸೋಮವಾರ ಡಿಡಿಎಂಎ ಸಭೆ ನಡೆಯಿತು. ಸಭೆಯಲ್ಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಸಹ ಉಪಸ್ಥಿತರಿದ್ದರು.

### ನಾಳೆ ಪ್ರಧಾನಿ ಸಭೆ ಸಾಧ್ಯತೆ

ನವದೆಹಲಿ (ಪಿಟಿಐ): ಕೋವಿಡ್–19 ಪರಿಸ್ಥಿತಿ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಇದೇ 13ರಂದು ಮುಖ್ಯಮಂತ್ರಿಗಳ ಜತೆ ಸಭೆ ನಡೆಸುವ ಸಾಧ್ಯತೆ ಇದೆ. ಓಮೈಕ್ರಾನ್‌ನಿಂದಾಗಿ ದೇಶದಾದ್ಯಂತ ಸೋಂಕು ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ದೇಶದ ವಿವಿಧ ಭಾಗಗಳಲ್ಲಿ ಹಲವು ನಿರ್ಬಂಧಗಳನ್ನು ವಿಧಿಸಲಾಗಿದೆ.

ಕೋವಿಡ್ ಪರಿಸ್ಥಿತಿ ಬಗ್ಗೆ ಪರಾಮರ್ಶೆಗಾಗಿ ಭಾನುವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಉನ್ನತ ಮಟ್ಟದ ಸಭೆ ನಡೆಸಿದ್ದ ಮೋದಿ, ಜಿಲ್ಲಾ ಮಟ್ಟದಲ್ಲಿ ಆರೋಗ್ಯ ಮೂಲಸೌಕರ್ಯವನ್ನು ಖಚಿತಪಡಿಸಿಕೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಿದ್ದರು. ಜತೆಗೆ, ಈ ವಿಚಾರದಲ್ಲಿ ರಾಜ್ಯಗಳೊಂದಿಗೆ ಸಮನ್ವಯವನ್ನು ಕಾಪಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು.

### ಲತಾ ಮಂಗೇಶ್ಕರ್‌ಗೆ ಕೋವಿಡ್

ಮುಂಬೈ: ಗಾಯಕಿ ಲತಾ ಮಂಗೇಶ್ಕರ್ (92) ಅವರಿಗೆ ಕೋವಿಡ್ ದೃಢಪಟ್ಟಿದ್ದು, ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರಿಗೆ ಕೊರೊನಾ ವೈರಸ್ ಸೋಂಕಿನ ಸೌಮ್ಯ ಲಕ್ಷಣಗಳು ಕಾಣಿಸಿಕೊಂಡಿದೆ. ಮುನ್ನೆಚ್ಚರಿಕೆಯ ಕಾರಣಗಳಿಂದ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

## ವಿದೇಶದಲ್ಲಿ ಕೋವಿಡ್

- ಓಮೈಕ್ರಾನ್ ವಿರುದ್ಧ ಹೋರಾಡುವ ಹಾಗೆ ಕೋವಿಡ್ ಲಸಿಕೆಯನ್ನು ಇನ್ನಷ್ಟು ಪರಿಣಾಮಕಾರಿಗೊಳಿಸುವ ಸಾಧ್ಯತೆ ಬರಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.
- ಅಮೆರಿಕದಲ್ಲಿ ಸೋಮವಾರ ಒಂದೇ ದಿನ ಹೊಸದಾಗಿ 13.5 ಲಕ್ಷ ಪ್ರಕರಣಗಳು ಪತ್ತೆಯಾಗಿವೆ. ಇವು ಇದುವರೆಗೆ 24 ಗಂಟೆಗಳಲ್ಲಿ ದಾಖಲಾದ ಅತಿ ಹೆಚ್ಚು ಪ್ರಕರಣಗಳಾಗಿವೆ.
- ಅಮೆರಿಕದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ, ಅಲ್ಲಿಂದ ಬರುವ 24ಕ್ಕೂ ಅಧಿಕ ವಿಮಾನಗಳ ಸಂಚಾರವನ್ನು ಚೀನಾ ನಿರ್ಬಂಧಿಸಿದೆ ಎಂದು ವರದಿಯಾಗಿದೆ.
- ಯೂರೋಪ್‌ನಲ್ಲಿ ಕಳೆದ ವಾರ 70 ಲಕ್ಷಕ್ಕೂ ಅಧಿಕ ಓಮೈಕ್ರಾನ್ ಪ್ರಕರಣಗಳು ದಾಖಲಾಗಿವೆ. ಎರಡು ವಾರಗಳಲ್ಲಿ ಓಮೈಕ್ರಾನ್ ಪ್ರಕರಣಗಳು ದ್ವಿಗುಣವಾಗಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.
- ಕೊರೊನಾ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ಚೀನಾದ ಅನ್ಯಾಂಗ್ ನಗರದಲ್ಲೂ ಲಾಕ್‌ಡೌನ್ ಜಾರಿ ಮಾಡಲಾಗಿದೆ. ಈಗಾಗಲೇ ಕ್ಸಿಯಾನ್ ಮತ್ತು ಟಿಯಾಂಜಿನ್‌ನಲ್ಲಿ ಲಾಕ್‌ಡೌನ್ ಜಾರಿಯಲ್ಲಿದೆ. ಚೀನಾದಲ್ಲಿ ಇದುವರೆಗೆ 1.34 ಲಕ್ಷಕ್ಕೂ ಅಧಿಕ ಪ್ರಕರಣಗಳು ದೃಢಪಟ್ಟಿವೆ.
- ಓಮೈಕ್ರಾನ್ ತಳಿಯ ಸೋಂಕು ಪತ್ತೆಯಾದ ಬಳಿಕ ದಕ್ಷಿಣ ಆಫ್ರಿಕಾದ ಭಾಗಗಳಿಂದ ಬರುವ ವಿಮಾನಗಳ ಸಂಚಾರದ ಮೇಲೆ ವಿಧಿಸಿದ್ದ ನಿರ್ಬಂಧವನ್ನು ಐರೋಪ್ಯ ಒಕ್ಕೂಟ ತೆರವುಗೊಳಿಸಿದೆ. ನಿರ್ಬಂಧ ತೆರವುಗೊಳಿಸುವ ನಿರ್ಧಾರವನ್ನು ಸೋಮವಾರ ತೆಗೆದುಕೊಳ್ಳಲಾಗಿದ್ದು, ಮೊದಲಿನ ಹಾಗೆ ವಿಮಾನಗಳು ಸಂಚರಿಸಬಹುದಾಗಿದೆ
- ಪೋಲೆಂಡ್‌ನಲ್ಲಿ ಕೋವಿಡ್‌ನಿಂದ ಸತ್ತವರ ಸಂಖ್ಯೆ ಒಂದು ಲಕ್ಷಕ್ಕೆ ಏರಿದೆ.

## ಮಾನವನಿಗೆ ಹಂದಿ ಹೃದಯ ಕಸಿ

ಬಾಲ್ಟಿಮೋರ್ (ಎಪಿ): ಅಮೆರಿಕದ ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜಿನ ತಜ್ಞವೈದ್ಯರು 57 ವರ್ಷದ ಹೃದ್ರೋಗಿಗೆ ಹಂದಿಯ ಹೃದಯವನ್ನು ಕಸಿ ಮಾಡಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ಮೊದಲ ಬಾರಿಗೆ ಇಂಥ ಪ್ರಯತ್ನ ನಡೆದಿದೆ.

'ಹೃದಯ ಕಸಿ ಶಸ್ತ್ರಚಿಕಿತ್ಸೆ ನೆರವೇರಿಸಿ ಮೂರು ದಿನಗಳಾಗಿದ್ದು, ರೋಗಿಯು ಚೇತರಿಸಿಕೊಳ್ಳುತ್ತಿದ್ದಾನೆ' ಎಂದು ವೈದ್ಯರು ಹೇಳಿದ್ದಾರೆ.

ಈ ಶಸ್ತ್ರಚಿಕಿತ್ಸೆ ಫಲ ನೀಡುವುದೇ ಎಂದು ಈಗಲೇ ಹೇಳಲಾಗದು. ಮಾನವನ ಜೀವ ಉಳಿಸಲು ಪ್ರಾಣಿಗಳ ಅಂಗಾಂಗಗಳ ಕಸಿ ಮಾಡಬಹುದೇ ಎಂಬ ನಿಟ್ಟಿನಲ್ಲಿ ಹಲವು ದಶಕಗಳಿಂದ ವೈದ್ಯಲೋಕ ಸಂಶೋಧನೆ ನಡೆಸುತ್ತಿದ್ದು, ಅಮೆರಿಕದ ವೈದ್ಯರ ಈ ಪ್ರಯತ್ನ ಹೊಸ ಆಶಾಭಾವ ಮೂಡಿಸಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ವಂಶವಾಹಿಗಳ ರಚನೆಯಲ್ಲಿ ಮಾರ್ಪಾಡು ಮಾಡಲಾದ ಪ್ರಾಣಿಯೊಂದರ ಹೃದಯವನ್ನು ಕಸಿ ಮಾಡಿದಾಗ, ಅದನ್ನು ಮನುಷ್ಯನ ದೇಹ ತಕ್ಷಣ ತಿರಸ್ಕರಿಸುವುದಿಲ್ಲ ಹಾಗೂ ಸಹಜ ಕ್ರಿಯೆ ನಡೆಸುತ್ತದೆ ಎಂಬುದನ್ನು ಈ ಶಸ್ತ್ರಚಿಕಿತ್ಸೆ ತೋರಿಸಿದೆ ಎಂದೂ ವೈದ್ಯರು ಹೇಳಿದ್ದಾರೆ.

ಶ್ವಾಸಕೋಶ ಹಾಗೂ ಹೃದಯ ರೋಗದಿಂದ ಬಳಲುತ್ತಿದ್ದ ಮೇರಿಲ್ಯಾಂಡ್‌ನ ಡೇವಿಡ್ ಬೆನೆಟ್ ಎಂಬುವವರಿಗೆ ಈ ಶಸ್ತ್ರಚಿಕಿತ್ಸೆಯನ್ನು ನೆರವೇರಿಸಲಾಗಿದೆ.




With profound grief
we inform the sad demise of
Ms. Uma Ganjam
who passed away on 11th January 2022.

The Ganjam family, staff & friends
deeply mourn her loss.
May her soul Rest In Peace.

ನಿಧನ



ಶ್ರೀ ವಿ. ನಾಗರಾಜು
BE, ME (WRD), MIE,
Executive Engineer (Retd) PWD,
Registered Valuer
(25.12.1930 - 04.01.2022)
ಇಂತಿ ದುಃಖತಪ್ತರು: ಕುಟುಂಬವರ್ಗದವರು.
9880574661, 9845379043, 9845221762.

ಸವಿನೆನಪು



ಶ್ರೀಮತಿ ಹೆಚ್.ಸಿ. ಸುಧಾಕುಮಾರಿ
ದಿನಾಂಕ : 12.01.2005
ನೀವು ನಮ್ಮನ್ನು ಅಗಲಿ ಇಂದಿಗೆ 17 ವರ್ಷಗಳು ಕಳೆದರೂ ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲೆಂದು ಸದಾ ಪ್ರಾರ್ಥಿಸುವ.
ಇಂತಿ ದುಃಖತಪ್ತರು: ಪತಿ ಶ್ರೀ V. N. ಗಂಗಾಧರ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಸೊಸೆ.

LOOKING TO BUILD, BUY OR SELL A PROPERTY
Please refer Classifieds on Sunday

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಅಡುಗೆಯವರು ಬೇಕಾಗಿದ್ದಾರೆ. ಮನೆಗೆ, ದಕ್ಷಿಣ ಭಾರತದ ಅಡುಗೆ ಪುರುಷರು ಮಾತ್ರ. ಕನ್ನಡ ಭಾಷೆ, ಸ್ಥಳ ತಾತಗುಣಿ, ಬೆಂಗಳೂರು ದಕ್ಷಿಣ ಸಂಬಳ : 20,000/- ತಿಂಗಳಿಗೆ ಮೊ. 9606956502

General

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 9742260055, 9538133533

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

OPPORTUNITY BANKING, office, Field work, Telecalling, Salary 16000/- - 24000/- SSLC, PUC Degree Pass/Fail. 7619689177.

ಬೇಕಾಗಿದ್ದಾರೆ:ಚಿಕ್ಕಮಂಗಳೂರಿನ ಪ್ರಖ್ಯಾತ ರೆಸಾರ್ಟ್ ಗೆ ಆಲ್ ರೌಂಡ್ ಕುಕ್, ಕಿಚನ್ ಹೆಲ್ಪರ್ಸ್, ಸರ್ವಿಸ್ ಬಾಯ್ಸ್, ಮೆಂಟೆನೆನ್ಸ್ ಗೆ ಜನ ಬೇಕಾಗಿದ್ದಾರೆ.ಊಟ ವಸತಿಯೊಂದಿಗೆ ಉತ್ತಮವೇತನ ನೀಡಲಾಗುವುದು. ಸಂಪರ್ಕಿಸಿರಿ:9370999855

TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್ರ, ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ಬೇಕಾಗಿದ್ದಾರೆ : ಟಾಟಾ ಮೋಟಾರ್ರ, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC,PUC,Degree ಡಿಪ್ಲೋಮಾದವರು 18,000-62,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ 8197650569, 7204396011

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

Hospital & Medical Jobs

WANTED D PHARMA completed candidates (both male and female) for outlet incharge In RR Nagar Bangalore Contact :- Goutham kumar ,7338133755, 7829689303

WANTED Lab analysists and lab technician (for diagnostics) (both male and female) location RR Nagar Bangalore contact :-7338133755, 7829689303

Multiple Vacancy

ಬೆಂಗಳೂರಿನ ಹೊಸಕೋಟೆಯ ಹೋಟಲ್/ಮೊಬೈಲ್ ಕ್ಯಾಂಟೀನ್ ಗೆ ಅನುಭವವಿರುವ ದೋಸಾ ಮಾಸ್ಟರ್ ಮತ್ತು ಡ್ರೈವರ್, ಹೆಲ್ಪರ್ ಬೇಕಾಗಿದ್ದಾರೆ. ಉತ್ತಮ ಸಂಬಳ. 7411444075

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ವಯಸ್ಸಾದವರನ್ನು ನೂಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18ವರ್ಷ ಮೆಲ್ಪಟ್ಟವರಿಗೆ ಉಚಿತ ಊಟ ವಸತಿಯೋಂದಿಗೆ 12000 ರಿಂದ 16000ವರೆಗೆ ಸಂಬಳ. ಫೋ: 8139962883

Teachers/ Professors

ರೆಸುರೆಕ್ಷನ್ ಪ್ರೌಡಶಾಲೆಯಲ್ಲಿ ಖಾಲಿಯಿರುವ ಸಹಶಿಕ್ಷಕರು, ಪಿ.ಸಿ.ಎಂ (ಗಣಿತ) ಅನುದಾನ ರಹಿತ, ಕನ್ನಡ ಮಾಧ್ಯಮ ಹುದ್ದೆಗೆ ಸಹಶಿಕ್ಷಕರು ಬೇಕಾಗಿದ್ದಾರೆ. ಆಸಕ್ತಿಯಿರುವ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ದಾಖಲೆಗಳೊಂದಿಗೆ ಮುಖ್ಯೋಪಾಧ್ಯಾಯರು ರೆಸುರೆಕ್ಷನ್ ಪ್ರೌಡಶಾಲೆ ಮೊದಲನೇ ಹಂತ, ಮೊದಲನೇ ಅಡ್ಡರಸ್ತೆ, ಇಂದಿರಾನಗರ, ಬೆಂಗಳೂರು-560 038 ಅಥವಾ ಮೊಬೈಲ್: 9008478575 ಸಂಪರ್ಕಿಸಲು ಕೋರಿದೆ.

ರಿಯಲ್ ಎಸ್ಟೇಟ್ ಸೆಲ್ಲಿಂಗ್

DUPLEX FLAT For Sale In Tata Silk Farm, Thyagarajanagar, Bengaluru. Contact : 8971660799.

ವ್ಯಾಪಾರ

Business Offers

Business For Sale

ಹಾಲಿ ಪ್ರಾವಿಷನ್ ಸ್ಟೋರ್ ಮಾರಾಟಕ್ಕಿದೆ. ಬೆಂಗಳೂರಿನ ಶ್ರೀ ರಾಮಾಂಜನೇಯ ಮುಖ್ಯರಸ್ತೆ, ಹನುಮಂತನಗರ, ಬೆಲೆ ರೂ. 3,20,000. ಸಂಪರ್ಕಿಸಿ : 9008151027

ಭವಿಷ್ಯ

Astrology

ಸ್ತ್ರೀವಶೀಕರಣ, ಪುರುಷ ವಶೀಕರಣ, ಪ್ರೀತಿ ಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11 ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ 9845544363 .

ವಶೀಕರಣ ಸ್ಪೆಷಲಿಸ್ಟ್ ಪ್ರೀತಿ, ಸ್ತ್ರೀ ವಶೀಕರಣ, ದಾಂಪತ್ಯ, ಕುಟುಂಬ ಕಲಹ, ಯಾವುದೇ ಗುಪ್ತ ಸಮಸ್ಯೆಗಳಿಗೆ ಖಚಿತಪರಿಹಾರ 9902157331, A.R.Ganachari

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★॥ಶ್ರೀಹುಲಿಗೆಮ್ಮ ಚೌಡೇಶ್ವರಿದೇವಿ॥★ ಆರಾಧನೆಯಿಂದ ಸ್ತ್ರೀಪುರುಷ_ವಶೀಕರಣ, ಸಂಭೋಗ_ವಶೀಕರಣ, ಸಾಲದಬಾದೆ,ಶತ್ರುನಾಶ ಇನ್ನಯಾವುದೇ ಘೋರ,ನಿಗೂಢ ಗುಪ್ತ,ಕಠಿಣ ಸಮಸ್ಯೆಗಳಿದ್ದರೂ 24ಗಂಟೆಗಳಲ್ಲಿ ಶಾಶ್ವತಪರಿಹಾರ. ವಶಿಕರಣ_ಸ್ಪೆಷಲಿಸ್ಟ್ ಶ್ರೀದೇವಿಭಟ್ 9606735267

ನಂ. 1, ವಶೀಕರಣ ಮಾಂತ್ರಿಕ ನೂರ್ ಖಾನ್, ಯಾವುದೇ ಸಮಸ್ಯೆ ಇರಲಿ ಮೂರು ಗಂಟೆಗಳಲ್ಲಿ ಶಾಶ್ವತ ಪರಿಹಾರ. ಸಂಪರ್ಕಿಸಿ: 7892651684

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಪ್ರವಾಸ

Travel

21-1-2022 ಕಾಶಿ, ಗಯಾ, ಅಯೋಧ್ಯ 8ದಿನ. 2-2-2022 ಕಾಶಿ, ಆಗ್ರ, ದೆಹಲಿ 13ದಿನ. 25-3-2022 ಗ್ಯಾಂಗ್ಟಾಕ್, ಡಾರ್ಜಿಲಿಂಗ್, ಕಲ್ಕತ್ತಾ, ಭುವನೇಶ್ವರ 12ದಿನ. ನಂದಿನಿ ಟೂರಿಸ್ಟ್ 9916574089.

10.02.2022/ 10.03.2022- 11/15 ದಿನಗಳು ಕಾಶಿಯಾತ್ರ, ದೆಹಲಿ, ಆಗ್ರ, ಅಲಹಾಬದ್, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ.ಜನವರಿ, ಪೆಬ್ರವರಿ, ಮಾರ್ಚನಲ್ಲಿ ಅಂಡಮಾನ್ ಹವಳದ್ವೀಪ Royal Package- 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

| Per word | Ordinary | Bold | Ordinary Semi Display | Bold Semi Display |
|---|---|---|---|---|
| | 60 | 85 | 70 | 115 |

| CD Per Sqcm | Single Col | Double Col | Multi Col |
|---|---|---|---|
| | 430 | 450 | 475 |

SPECIAL OFFER

| | | | | | |
|---|---|---|---|---|---|
| PAY | 2 | And | GET | 1 | Free |
| PAY | 3 | And | GET | 2 | Free |
| PAY | 5 | And | GET | 5 | Free |

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ– 571 401
(Autonomous Medical Institution, Government of Karnataka)
Phone: 08232-231003, 222086, 231197, 224040, Fax: 08232-231001
E-Mail Address: mimsmandyaoffice@gmail.com , mimsmandya@gmail.com
ಸಂಖ್ಯೆ: 1. ಮಿಮ್ಸ್/ಸರಬ(2)/ಕೋವಿಡ್/ಕನ್ಸುಮಬಲ್ಸ್/ಇ–ಟೆಂ/11/2021–22, ದಿ:13.09.2021
2. ಮಿಮ್ಸ್/ಸರಬ(2)/ಕೋವಿಡ್/ಡ್ರಗ್ಸ್/ಇ–ಟೆಂ/12/2021–22, ದಿ:13.09.2021
ಇ–ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ)
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಈ ಕೆಳಕಂಡಂತೆ ವಿವರಿಸಲಾಗಿರುವಂತೆ ಅವಶ್ಯವಿರುವ ಡ್ರಗ್ಸ್, ಕನ್ಸುಮಬಲ್ಸ್ ಹಾಗೂ ಇತ್ಯಾಧಿ ಐಟಂಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ ಇ–ಟೆಂಡರ್ ಅರ್ಜಿ ಸಲ್ಲಿಸುವ ದಿನಾಂಕ, ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ ಹಾಗೂ ಟೆಂಡರ್ ಪ್ರಕ್ರಿಯೆ ದಿನಾಂಕ ಮತ್ತಿತ್ತರ ವಿವರಗಳನ್ನು ಜಿಓಕೆ ಇ–ಪ್ರ್ಯೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ www.eproc.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು. ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿ ಅಥವಾ ಸ್ಪಷ್ಟೀಕರಣಕ್ಕಾಗಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಮಿಮ್ಸ್ ನಿರ್ದೇಶಕರವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

| ಕ್ರ.ಸಂ | ವಿವರಗಳು | ಟೆಂಡರ್‌ನ ಅಂದಾಜು ಮೊತ್ತ | ಇ.ಎಂ.ಡಿ |
|---|---|---|---|
| 01. | ಡ್ರಗ್ಸ್ (ಇಂಜೆಕ್ಷನ್ & ಟ್ಯಾಬ್ಲೆಟ್ಸ್) | 150.00 ಲಕ್ಷಗಳು | 1..50 ಲಕ್ಷಗಳು |
| 02. | ಕನ್ಸುಮಬಲ್ಸ್ | 150.00 ಲಕ್ಷಗಳು | 1.50 ಲಕ್ಷಗಳು |

ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ: 07.01.2022 ಅರ್ಜಿ ಸಲ್ಲಿಕೆ ಅಂತಿಮ ದಿನಾಂಕ: 24.01.2022
ಸಹಿ/– ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
DIPR/AD/MDY/MCA/513/2021-22

### ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಎವ್ಜೀನಿಯಾಗೆ ಅಸ್ಮಿತಾ ಚಾಲಿಹಾ ಆಘಾತ

# ಕಿದಂಬಿ ಶ್ರೀಕಾಂತ್, ಸಿಂಧು ಶುಭಾರಂಭ

ನವದೆಹಲಿ (ಪಿಟಿಐ): ಅಗ್ರಶ್ರೇಯಾಂಕದ ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಪಿ.ವಿ.ಸಿಂಧು ಅವರು ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ.

ಮಂಗಳವಾರ ನಡೆದ ಪುರುಷರ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಶ್ರೀಕಾಂತ್ ಜೂನಿಯರ್ ವಿಭಾಗದ ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಕ್ಕೇರಿದ್ದ ಸಿರಿಲ್ ವರ್ಮಾ ಎದುರು 21-17, 21-10ರಲ್ಲಿ ಜಯ ಗಳಿಸಿದರು. ಸಿಂಧು ಭಾರತದವರೇ ಆದ ಶ್ರೀಕೃಷ್ಣಪ್ರಿಯ ಕುದರವಲ್ಲಿ ಅವರನ್ನು 21-5, 21-16ರಲ್ಲಿ ಮಣಿಸಿದರು.

ಸಿಂಧು ಮುಂದಿನ ಪಂದ್ಯದಲ್ಲಿ ಈಜಿಪ್ಟ್‌ನ ಹ್ಯಾನಿ ದೋಹಾ ವಿರುದ್ಧ ಕಣಕ್ಕೆ ಇಳಿಯಲಿದ್ದು ಶ್ರೀಕಾಂತ್‌ಗೆ ಡೆನ್ಮಾರ್ಕ್‌ನ ಕಿಮ್ ಬ್ರುನ್ ಎದುರಾಳಿ. ಮೊದಲ ಸುತ್ತಿನಲ್ಲಿ ಕಿಮ್ ಭಾರತದ ಶುಭಂಕರ್ ವಿರುದ್ಧ 21-19, 18-21, 21-14ರಲ್ಲಿ ಗೆದ್ದರು.

ಪುರುಷರ ವಿಭಾಗದ ಹಾಲಿ ವಿಶ್ವ ಚಾಂಪಿಯನ್ ಲೊಹ್ ಕೀನ್ ಮೂರು ಗೇಮ್‌ಗಳ ಹಣಾಹಣಿಯಲ್ಲಿ ಕೆನಡಾದ ಕ್ಸಿಯಾಡಾಂಗ್ ಶೆಂಗ್ ಎದುರು 16-21, 21-4, 21-13 ಗೆಲುವು ದಾಖಲಿಸಿದರು.



ಎವ್ಜೀನಿಯಾ ಎದುರು ಅಸ್ಮಿತಾ ಚಾಲಿಹಾ ಆಡಿದ ರೀತಿ –ಪಿಟಿಐ ಚಿತ್ರ

ಚಿರಾಗ್ ಸೇನ್ 8-21, 7-21ರಲ್ಲಿ ಮಲೇಷ್ಯಾದ ಸೂಂಗ್ ಜೂ ವೆನ್ ಎದುರು ಸೋತು ಹೊರಬಿದ್ದರು. ಮಿಶ್ರ ಡಬಲ್ಸ್‌ನಲ್ಲಿ ಕೆ.ಸಾಯಿ ಪ್ರಣೀತ್ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಇಶಾನ್ ಭಟ್ನಾಗರ್ ಮತ್ತು ತನಿಶಾ ಕ್ಯಾಸ್ಟ್ರೊ ವಿರುದ್ಧ 21-16, 16-21, 21-17ರಲ್ಲಿ ಜಯ ಸಾಧಿಸಿದರು. ಪುರುಷರ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಇಂಡೊನೇಷ್ಯಾ ಜೋಡಿ ಮೊಹಮ್ಮದ್ ಅಹ್ಸಾನ್ ಮತ್ತು ಹೇಂದ್ರ ಸೇತ್ಯವನ್ 21-18, 21-10ರಲ್ಲಿ ಭಾರತದ ಪ್ರೇಮ್ ಸಿಂಗ್ ಚೌಹಾಣ್ ಮತ್ತು ರಾಜೇಶ್ ವರ್ಮಾ ಅವರನ್ನು ಮಣಿಸಿದರು.

> **ಕೆಲವು ವರ್ಷಗಳಿಂದ ಹೆಚ್ಚು ಪಂದ್ಯಗಳನ್ನು ಆಡಿರಲಿಲ್ಲ. ಆದ್ದರಿಂದ ಒಂದು ಹಂತದಲ್ಲಿ ಆತಂಕದಲ್ಲಿದ್ದೆ. ಆದರೆ ಈ ಪಂದ್ಯದ ಮೊದಲ ಗೇಮ್ ಗೆದ್ದ ನಂತರ ಭರವಸೆ ಮೂಡಿತು.**
> **ಅಸ್ಮಿತಾ ಚಾಲಿಹಾ** ಭಾರತದ ಆಟಗಾರ್ತಿ

**ಎವ್ಜೀನಿಯಾಗೆ ಅಸ್ಮಿತಾ ಚಾಲಿಹಾ ಆಘಾತ:** ಗುವಾಹಟಿಯ ಅಸ್ಮಿತಾ ಚಾಲಿಹಾ ಐದನೇ ಶ್ರೇಯಾಂಕದ ರಷ್ಯಾ ಆಟಗಾರ್ತಿ ಎವ್ಜೀನಿಯಾ ಕೊತೆಸ್ಕಾಯ ವಿರುದ್ಧ 24-22, 21-16ರಲ್ಲಿ ಜಯ ಸಾಧಿಸಿದರು. ವಿಶ್ವ ಕ್ರಮಾಂಕದಲ್ಲಿ 28ನೇ ಸ್ಥಾನದಲ್ಲಿರುವ ಎವ್ಜೀನಿಯಾ ಕೇವಲ 31 ನಿಮಿಷಗಳಲ್ಲಿ ಭಾರತದ ಆಟಗಾರ್ತಿಗೆ ಮಣಿದರು.

ಆರಂಭದಲ್ಲಿ ಪಾರಮ್ಯ ಮೆರೆದ ಅಸ್ಮಿತಾ 11-5ರ ಮುನ್ನಡೆ ಸಾಧಿಸಿದರು. ವಿರಾಮದ ನಂತರ ಸ್ವಯಂ ತಪ್ಪುಗಳನ್ನು ಎಸಗಿ ಪಾಯಿಂಟ್‌ಗಳನ್ನು ಕಳೆದುಕೊಂಡರು. ಹೀಗಾಗಿ 14-14ರಲ್ಲಿ ಸಮಬಲ ಸಾಧಿಸಲು ಎದುರಾಳಿಗೆ ಸಾಧ್ಯವಾಯಿತು. ಆ ಮೇಲೆ 16-19ರ ಮುನ್ನಡೆಯೊಂದಿಗೆ ಗೇಮ್ ಪಾಯಿಂಟ್ ನತ್ತ ಹೆಜ್ಜೆ ಹಾಕಿದರು. ಆದರೆ ಪಟ್ಟು ಬಿಡದೆ ಆಡಿದ ಅಸ್ಮಿತಾ ತಿರುಗೇಟು ನೀಡಿದರು. ಭರ್ಜರಿ ಸ್ಮ್ಯಾಷ್ ಮೂಲಕ ಗೇಮ್ ತಮ್ಮದಾಗಿಸಿಕೊಂಡರು.

ಎರಡನೇ ಗೇಮ್‌ನಲ್ಲೂ ಅಸ್ಮಿತಾ 11-4ರ ಮುನ್ನಡೆಯೊಂದಿಗೆ ಮುನ್ನುಗ್ಗಿದರು. ಗೇಮ್‌ನ ಕೊನೆಯ ಹಂತದಲ್ಲಿ ರಷ್ಯಾ ಆಟಗಾರ್ತಿ 19-16ರಲ್ಲಿ ಮುನ್ನಡೆದು ಆತಂಕ ಸೃಷ್ಟಿಸಿದರು. ಅದರೆ ತಾಳ್ಮೆಯಿಂದ ಆಡಿದ ಅಸ್ಮಿತಾ ಗೆಲುವು ತಮ್ಮದಾಗಿಸಿಕೊಂಡರು. ಮುಂದಿನ ಪಂದ್ಯದಲ್ಲಿ ಅವರು ಫ್ರಾನ್ಸ್‌ನ ಯೆಲ್ಲಿ ಹೊಯಾಕ್ಸ್ ವಿರುದ್ಧ ಆಡಲಿದ್ದಾರೆ. ರಿಯಾ ಮುಖರ್ಜಿ ಅವರನ್ನು ಯೆಲ್ಲಿ 14-21,13-21ರಲ್ಲಿ ಸೋಲಿಸಿದರು.

# ಐಪಿಎಲ್: ಟಾಟಾ ಪ್ರಾಯೋಜಕತ್ವ

ನವದೆಹಲಿ (ಪಿಟಿಐ): ಭಾರತದ ಪ್ರತಿಷ್ಠಿತ ಉದ್ಯಮ ಸಂಸ್ಥೆ ಟಾಟಾ ಸಮೂಹವು ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಗೆ ಟೈಟಲ್ ಪ್ರಾಯೋಜಕತ್ವ ನೀಡಲಿದೆ.

ಚೀನಾ ಮೂಲದ ವಿವೊ ಮೊಬೈಲ್ ಕಂಪೆನಿಯ ಬದಲಿಗೆ ಟಾಟಾ ಸಮೂಹವು ಪ್ರಾಯೋಜಕತ್ವದ ಹಕ್ಕುಗಳನ್ನು ಪಡೆದುಕೊಂಡಿದೆ. ಎರಡು ವರ್ಷಗಳ (2022, 2023) ಅವಧಿಗೆ ಟಾಟಾ ಪ್ರಾಯೋಜಕತ್ವ ನೀಡಲಿದ್ದು ಬಿಸಿಸಿಐಗೆ ₹ 670 ಕೋಟಿ ನೀಡಲಿದೆ. ಒಪ್ಪಂದದಿಂದ ಹಿಂದೆ ಸರಿದ ಕಾರಣಕ್ಕೆ ವಿವೊ ₹454 ಕೋಟಿಯನ್ನೂ ಪಾವತಸಲಿದೆ. ಒಟ್ಟು ₹ 1124 ಕೋಟಿಯು ಮಂಡಳಿಯ ಖಜಾನೆಗೆ ಭರ್ತಿಯಾಗಲಿದೆ ಎಂದು ಮೂಲಗಳು ತಿಳಿಸಿವೆ.

ಮಂಗಳವಾರ ನಡೆದ ಐಪಿಎಲ್ ಆಡಳಿತ ಸಮಿತಿ ಸಭೆಯಲ್ಲಿ ಟಾಟಾ ಸಮೂಹಕ್ಕೆ ಪ್ರಾಯೋಜಕತ್ವ ಹಕ್ಕುಗಳನ್ನು ನೀಡಲು ನಿರ್ಧರಿಸಲಾಯಿತು.

'ಐಪಿಎಲ್ ಟೂರ್ನಿಯಲ್ಲಿ ಟಾಟಾ ಸಮೂಹವು ಟೈಟಲ್ ಪ್ರಾಯೋಜಕತ್ವ ನೀಡಲಿದೆ' ಎಂದು ಐಪಿಎಲ್ ಮುಖ್ಯಸ್ಥ ಬ್ರಿಜೇಶ್ ಪಟೇಲ್ ಖಚಿತಪಡಿಸಿದ್ದಾರೆ.

2018 ರಿಂದ 2022ರವರೆಗೆ ಅವಧಿಗೆ ಐಪಿಎಲ್ ಪ್ರಾಯೋಜಕತ್ವದ ಹಕ್ಕುಗಳನ್ನು ₹ 2200 ಕೋಟಿ ಮೌಲ್ಯಕ್ಕೆ ವಿವೊ ಪಡೆದುಕೊಂಡಿತ್ತು. 2020ರಲ್ಲಿ ಗಾಲ್ವನ್ ಕಣಿವೆಯಲ್ಲಿ ಭಾರತದ ಮತ್ತು ಚೀನಾ ಸೇನೆಗಳ ನಡುವಿನ ಸಂಘರ್ಷದ ಪರಿಣಾಮವಾಗಿ ಚೀನಾ ವಸ್ತುಗಳ ಬಹಿಷ್ಕಾರ ಅಭಿಯಾನ ನಡೆದಿತ್ತು. ಆ ವರ್ಷ ವಿವೊ ಪ್ರಾಯೋಜಕತ್ವದಿಂದ ಹಿಂದೆ ಸರಿದಿದ್ದರಿಂದ ಡ್ರೀಮ್ ಇಲೆವನ್ ಹಕ್ಕು ಪಡೆದಿತ್ತು. ಆದರೆ 2021ರ ಐಪಿಎಲ್‌ನಲ್ಲಿ ವಿವೊ ಮರಳಿ ಪ್ರಾಯೋಜಕತ್ವ ನೀಡಿತ್ತು.

ಆದರೆ 2022ರ ಟೂರ್ನಿಯ ಪ್ರಾಯೋಜಕತ್ವದ ಹಕ್ಕುಗಳನ್ನು ವರ್ಗಾಯಿಸಲು ವಿವೊ ಒಲವು ತೋರಿದೆಯೆಂಬ ಸುದ್ದಿಗಳು ಕೆಲವು ದಿನಗಳ ಹಿಂದೆ ಕೇಳಿಬಂದಿದ್ದವು. ಇದೀಗ ಟಾಟಾ ಸಮೂಹಕ್ಕೆ ಹಕ್ಕುಗಳು ಲಭಿಸಿದ್ದು, ಬಿಸಿಸಿಐ ಕೂಡ ಒಪ್ಪಿಗೆ ನೀಡಿದೆ.

> **ಶತಮಾನದ ಇತಿಹಾಸವಿರುವ ಪ್ರತಿಷ್ಠಿತ ಟಾಟಾ ಸಮೂಹವು ಕೈಜೋಡಿಸಿರುವುದು ಸ್ವಾಗತಾರ್ಹ. ಇದೊಂದು ಅವಿಸ್ಮರಣೀಯ ಸಮಯ.**
> **ಜಯ್ ಶಾ** ಬಿಸಿಸಿಐ ಕಾರ್ಯದರ್ಶಿ

## ಹರಾಜು: ತಂಡಗಳಿಗೆ ಸಮ್ಮತಿ

ಇದೇ ವರ್ಷದಿಂದ ಐಪಿಎಲ್ ಟೂರ್ನಿಯಲ್ಲಿ ಸೇರ್ಪಡೆಗೊಳ್ಳಲಿರುವ ಎರಡು ಹೊಸ ಫ್ರ್ಯಾಂಚೈಸಿಗಳಿಗೆ ಆಟಗಾರರನ್ನು ಬಿಡ್ ಮಾಡಲು ಸಮ್ಮತಿ ನೀಡಲಾಗಿದೆ. ಶೀಘ್ರದಲ್ಲಿಯೇ ಈ ತಂಡಗಳಿಗೆ ಮಾನ್ಯತಾ ಪತ್ರವನ್ನೂ ನೀಡಲಾಗುವುದು ಎಂದು ಐಪಿಎಲ್ ಆಡಳಿತ ಸಮಿತಿ ಮುಖ್ಯಸ್ಥ ಬ್ರಿಜೇಶ್ ಪಟೇಲ್ ಹೇಳಿದ್ದಾರೆ.

ಮಂಗಳವಾರ ನಡೆದ ಸಮಿತಿ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಯಿತು. ಆರ್‌ಪಿಸಿಜಿ ಗ್ರೂಪ್‌ನ ಲಖನೌ ಮತ್ತು ಸಿವಿಸಿ ಇನ್ವೆಸ್ಟ್‌ಮೆಂಟ್ಸ್ ಒಡೆತನದ ಅಹಮದಾಬಾದ್ ಫ್ರ್ಯಾಂಚೈಸಿಗಳನ್ನು ಕಳೆದ ಅಕ್ಟೋಬರ್‌ನಲ್ಲಿ ಸೇರ್ಪಡೆ ಮಾಡಲಾಗಿದೆ.

ಆದರೆ, ಸಿವಿಸಿಯು ಭಾರತದ ಹೊರಗೆ ಕಾರ್ಯಾಚರಣೆ ಮಾಡುವ ಬೆಟ್ಟಿಂಗ್ ಕಂಪನಿಗಳಲ್ಲಿ ಹೂಡಿಕೆ ಹೊಂದಿದೆ ಎಂಬ ಆರೋಪ ಕೇಳಿಬಂದಿತ್ತು. ಈ ಕುರಿತು ತನ್ನ ಕಾನೂನು ಸಲಹಾ ತಂಡದೊಂದಿಗೆ ಚರ್ಚೆ ನಡೆಸಿದ ನಂತರ ಬಿಸಿಸಿಐ ನಿರ್ಧಾರಕ್ಕೆ ಬಂದಿದೆ. ಫೆಬ್ರುವರಿ 12 ಮತ್ತು 13ರಂದು ಬೆಂಗಳೂರಿನಲ್ಲಿ ಮೆಗಾ ಹರಾಜು ಪ್ರಕ್ರಿಯೆ ನಡೆಯಲಿದೆ. ಉಭಯ ತಂಡಗಳೂ ಈಗಾಗಲೇ ತಮ್ಮ ತಂಡಕ್ಕೆ ಕೋಚ್ ಮತ್ತು ನೆರವು ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿವೆ. ಲಖನೌ ತಂಡಕ್ಕೆ ಕೆ.ಎಲ್. ರಾಹುಲ್ ಮತ್ತು ಅಹಮದಾಬಾದ್ ತಂಡಕ್ಕೆ ಹಾರ್ದಿಕ್ ಪಾಂಡ್ಯ ನಾಯಕರಾಗುವ ಸಾಧ್ಯತೆ ಇದೆ ಎಂಬ ಮಾತುಗಳು ಕೇಳಿಬಂದಿವೆ.

'ತಮ್ಮ ತಂಡಗಳಿಗೆ ಆಟಗಾರರನ್ನು ಆಯ್ಕೆ ಮಾಡಿಕೊಳ್ಳಲು ಎರಡೂ ತಂಡಗಳಿಗೆ 10 ದಿನಗಳು ಅಥವಾ ಎರಡು ವಾರಗಳ ಸಮಯ ನೀಡುವ ಯೋಚನೆ ಇದೆ. ಈ ಕುರಿತು ತಂಡಗಳೊಂದಿಗೆ ಮಾತುಕತೆ ನಡೆಯುತ್ತಿದೆ' ಎಂದು ಬ್ರಿಜೇಶ್ ತಿಳಿಸಿದ್ದಾರೆ.

# ಟೇಲರ್ ವಿದಾಯಕ್ಕೆ ಗೆಲುವಿನ ಕಾಣಿಕೆ

ಕ್ರೈಸ್ಟ್‌ಚರ್ಚ್ (ಎಪಿ): ನ್ಯೂಜಿಲೆಂಡ್ ಕ್ರಿಕೆಟ್ ತಂಡದ ತಾರಾ ಆಟಗಾರ ರಾಸ್ ಟೇಲರ್ ಅವರಿಗೆ ಸಹ ಆಟಗಾರರು ಗೆಲುವಿನ ಕಾಣಿಕೆ ನೀಡಿದರು.

ಮಂಗಳವಾರ ಇಲ್ಲಿ ಮುಕ್ತಾಯವಾದ ಬಾಂಗ್ಲಾದೇಶ ಎದುರಿನ ಟೆಸ್ಟ್‌ನಲ್ಲಿ ಕಿವೀಸ್ ಬಳಗವು ಇನಿಂಗ್ಸ್ ಮತ್ತು 117 ರನ್‌ಗಳ ಭರ್ಜರಿ ಜಯ ದಾಖಲಿಸಿತು. ಇದರೊಂದಿಗೆ ಸರಣಿಯನ್ನು 1-1ರಿಂದ ಡ್ರಾ ಮಾಡಿಕೊಂಡಿತು.

ಅಬ್ಬರದ ಬ್ಯಾಟಿಂಗ್ ಮೂಲಕ ರಂಜಿಸಿದ್ದ ಟೇಲರ್ ಮಂಗಳವಾರ ಇಬಾದತ್ ಹುಸೇನ್ ವಿಕೆಟ್ ಗಳಿಸಿ, ಪಂದ್ಯಕ್ಕೆ ತೆರೆಯೆಳೆದರು.

ಲಿಟನ್ ದಾಸ್ ಶತಕ ಗಳಿಸಿ ದರೂ ಬಾಂಗ್ಲಾದೇಶ ತಂಡದ ಸೋಲು ತಪ್ಪಲಿಲ್ಲ. ನ್ಯೂಜಿಲೆಂಡ್ ತಂಡದ ಕೈಲ್ ಜಮಿಸನ್ ಮತ್ತು ನೀಲ್ ವಾಗ್ನರ್ (77ಕ್ಕೆ3) ಅವರ ಬೌಲಿಂಗ್ ಮುಂದೆ ಬಾಂಗ್ಲಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ 79.3 ಓವರ್‌ಗಳಲ್ಲಿ 278 ರನ್ ಗಳಿಸಿ ಆಲೌಟ್ ಆಯಿತು.

ಕಿವೀಸ್ ತಂಡ ಮೊದಲ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗಳಿಗೆ 521 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು. ಬಾಂಗ್ಲಾದೇಶ 126 ರನ್‌ಗಳಿಗೆ ಕುಸಿದು ಫಾಲೋ ಆನ್‌ಗೆ ಒಳಗಾಗಿತ್ತು.




ರಾಸ್ ಟೇಲರ್ ಮತ್ತು ಅವರ ಕುಟುಂಬದೊಂದಿಗೆ ನ್ಯೂಜಿಲೆಂಡ್ ತಂಡದ ಆಟಗಾರರು –ಎಪಿ/ಪಿಟಿಐ ಚಿತ್ರ

ಮೂರು ಪಂದ್ಯಗಳ ಸರಣಿಯ ಎರಡನೇ ಪಂದ್ಯದಲ್ಲಿ ಬಾಂಗ್ಲಾ ತಂಡವು ಭರ್ಜರಿ ಜಯ ಸಾಧಿಸಿ ದಾಖಲೆ ಮಾಡಿತ್ತು. ಆದರೆ, ಕೊನೆಯ ಪಂದ್ಯದಲ್ಲಿ ಕಿವೀಸ್ ಬಳಗವು ಪಾರಮ್ಯ ಮೆರೆಯಿತು. ಎರಡನೇ ಇನಿಂಗ್ಸ್‌ನಲ್ಲಿ ಬಾಂಗ್ಲಾ ತಂಡದ ಲಿಟನ್ ದಾಸ್ (102; 114ಎ,4X14, 6X1) ಶತಕ ಹೊಡೆದಿದ್ದು ಬಿಟ್ಟರೆ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಆಟ ಹೊರಹೊಮ್ಮಲಿಲ್ಲ. ಇದರಿಂದಾಗಿ ಮೂರನೇ ದಿನವೇ ಪಂದ್ಯಕ್ಕೆ ತೆರೆಬಿತ್ತು. ಟಾಮ್ ಲಥಾಮ್ ಪಂದ್ಯ ಶ್ರೇಷ್ಠ ಮತ್ತು ಡೆವೊನ್ ಕಾನ್ವೆ ಸರಣಿಶ್ರೇಷ್ಠ ಗೌರವಕ್ಕೆ ಪಾತ್ರರಾದರು. 37 ವರ್ಷದ ಟೇಲರ್ 112 ಟೆಸ್ಟ್‌ಗಳನ್ನು ಆಡಿ 7684 ರನ್‌ಗಳನ್ನು ಗಳಿಸಿದ್ದಾರೆ. ಪಂದ್ಯದ ನಂತರ ಟೇಲರ್ ಮತ್ತು ಕುಟುಂಬವನ್ನು ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿ ಅಭಿನಂದಿಸಿತು.

**ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್:** 6ಕ್ಕೆ521, **ಬಾಂಗ್ಲಾದೇಶ:** 126. **ಎರಡನೇ ಇನಿಂಗ್ಸ್: ಬಾಂಗ್ಲಾದೇಶ:** ಫಾಲೋ ಆನ್: 79.3 ಓವರ್‌ಗಳಲ್ಲಿ 278 (ಶಾದ್ಮನ್ ಇಸ್ಲಾಂ 21, ಮೊಹಮ್ಮದ್ ನೈಮ್ 24, ನಜ್ಮುಲ್ ಹುಸೇನ್ ಶಾಂತೊ 29, ಮೊಮಿನುಲ್ ಹಕ್ 37, ಲಿಟನ್ ದಾಸ್ 102, ನೂರುಲ್ ಹಸನ್ 36, ಕೈಲ್ ಜೆಮಿಸ್ 82ಕ್ಕೆ4, ನೀಲ್ ವಾಗ್ನರ್ 77ಕ್ಕೆ3) **ಫಲಿತಾಂಶ:** ನ್ಯೂಜಿಲೆಂಡ್ ತಂಡಕ್ಕೆ ಇನಿಂಗ್ಸ್ ಮತ್ತು 117 ರನ್‌ಗಳ ಜಯ. 1-1ರಿಂದ ಸರಣಿ ಸಮ.

## ಜೊಕೊವಿಚ್‌ಗೆ ಅಗ್ರ ಶ್ರೇಯಾಂಕ

ಮೆಲ್ಬರ್ನ್ (ಎಪಿ): ಕೋವಿಡ್ ಲಸಿಕೆ ವಿಷಯದಲ್ಲಿ ವಿವಾದಕ್ಕೆ ಈಡಾಗಿದ್ದ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರಿಗೆ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದಲ್ಲಿ ಅಗ್ರ ಶ್ರೇಯಾಂಕ ನೀಡಲಾಗಿದೆ. ಮಹಿಳೆಯರ ವಿಭಾಗದಲ್ಲಿ ಆ್ಯಶ್ಲಿ ಬಾರ್ಟಿ ಅಗ್ರ ಶ್ರೇಯಾಂಕ ಗಳಿಸಿದ್ದಾರೆ.



ನೊವಾಕ್ ಜೊಕೊವಿಚ್

ಲಸಿಕೆ ಹಾಕಿಸಿಕೊಳ್ಳದೆ ದೇಶ ಪ್ರವೇಶಿಸಿದ್ದ ಜೊಕೊವಿಚ್ ಅವರನ್ನು ವಶಕ್ಕೆ ಪಡೆದುಕೊಂಡಿದ್ದ ಆಸ್ಟ್ರೇಲಿಯಾ ಅಧಿಕಾರಿಗಳು ಹೋಟೆಲ್‌ನಲ್ಲಿ ಇರಿಸಿದ್ದರು.

ನ್ಯಾಯಾಲಯದ ಆದೇಶದ ನಂತರ ಸೋಮವಾರ ಬಿಡುಗಡೆ ಮಾಡಲಾಗಿತ್ತು. ಸೋಮವಾರ ಅಭ್ಯಾಸಕ್ಕೆ ತೆರಳಿದ್ದ ಅವರು ಮಂಗಳವಾರವೂ ಅಭ್ಯಾಸ ಮುಂದುವರಿಸಿದ್ದರು. ಅವರ ವಿಸಾವನ್ನು ಎರಡನೇ ಬಾರಿ ರದ್ದುಗೊಳಿಸುವ ಸಾಧ್ಯತೆ ಇರುವುದರಿಂದ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡುವುದು ಅನುಮಾನ. ಅದರೂ ಸಂಘಟಕರು ಅವರಿಗೆ ಅಗ್ರ ಶ್ರೇಯಾಂಕದ ಗೌರವ ನೀಡಿದ್ದಾರೆ.

# ಟೆನಿಸ್: ಎರಡನೇ ಸುತ್ತಿಗೆ ಯೂಕಿ ಬಾಂಭ್ರಿ

ಮೆಲ್ಬರ್ನ್ (ಪಿಟಿಐ): ದೀರ್ಘ ಕಾಲದ ನಂತರ ಗ್ರ್ಯಾನ್‌ಸ್ಲಾಂ ಕಣಕ್ಕೆ ಮರಳಿರುವ ಯೂಕಿ ಬಾಂಭ್ರಿ ಶುಭಾರಂಭ ಮಾಡಿದರು.

ಮಂಗಳವಾರ ನಡೆದ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಕ್ವಾಲಿಫೈಯರ್ಸ್‌ನ ಮೊದಲ ಪಂದ್ಯದಲ್ಲಿ ಯೂಕಿ 6-4, 6-2ರಿಂದ ಪೋರ್ಚುಗಲ್‌ನ ಜೊವಾ ಡಾಮಿಂಗೀಸ್ ವಿರುದ್ಧ ಜಯಿಸಿ ಎರಡನೇ ಸುತ್ತಿಗೆ ಪ್ರವೇಶಿಸಿದರು.

2018ರಲ್ಲಿ ಅಮೆರಿಕ ಓಪನ್ ನಲ್ಲಿ ಭಾಗವಹಿಸಿದ ನಂತರ ಗಾಯಗೊಂಡಿದ್ದ ಯೂಕಿ ಗ್ರ್ಯಾನ್‌ಸ್ಲಾಂ ಟೂರ್ನಿಗಳಿಂದ ದೂರ ಉಳಿದಿದ್ದರು. ಇಲ್ಲಿ ನಡೆದ 68 ನಿಮಿಷಗಳ ಹೋರಾಟದಲ್ಲಿ ಯೂಕಿ ಮೇಲುಗೈ ಸಾಧಿಸಿದರು. 29 ವರ್ಷದ ಯೂಕಿಯ ಪರಿಣಾಮಕಾರಿ ರಿಟರ್ನ್ ಮತ್ತು ನೆಟ್ ಸಮೀಪದ ಆಟದ ಮುಂದೆ 248ನೇ ರ‍್ಯಾಂಕ್‌ನ ಜಾವೊ ಶರಣಾದರು. ಯೂಕಿ ಮಾಡಿದ ಚೆಂದದ ಸರ್ವ್‌ಗಳು ಗಮನ ಸೆಳೆದವು.

**ರಾಮಕುಮಾರ್, ಅಂಕಿತಾಗೆ ನಿರಾಶೆ:** ಪುರುಷರ ಸಿಂಗಲ್ಸ್‌ನಲ್ಲಿ ರಾಮಕುಮಾರ್ ರಾಮನಾಥನ್ ನಿರಾಶೆ ಅನುಭವಿಸಿದರು. ದಿಟ್ಟ ಹೋರಾಟ ಮಾಡಿದರೂ ರಾಮಕುಮಾರ್‌ಗೆ ಜಯ ಒಲಿಯಲಿಲ್ಲ. ಮೊದಲ ಸುತ್ತಿನ ಪಂದ್ಯದಲ್ಲಿ ರಾಮಕುಮಾರ್ 3-6, 5-7ರಿಂದ ಇಟಲಿಯ ಜಿಯಾನ್ ಮೊರೊನಿ ವಿರುದ್ಧ ಸೋತರು.



ಯೂಕಿ ಬಾಂಭ್ರಿ

ಮಹಿಳೆಯರ ಸಿಂಗಲ್ಸ್‌ನಲ್ಲಿ 203ನೇ ಶ್ರೇಯಾಂಕದ ಅಂಕಿತಾ 1-6, 0-6 ರಿಂದ 120ನೇ ರ‍್ಯಾಂಕ್‌ನ ಉಕ್ರೇನಿನ ಲಿಸಿಯಾ ಸುರೆಂಕೊ ವಿರುದ್ಧ ಸೋತರು. ಕೇವ 50 ನಿಮಿಷಗಳಲ್ಲಿ ಪಂದ್ಯ ಮುಗಿಯಿತು. ಈ ಟೂರ್ನಿಗೆ ಬರುವ ಮುನ್ನ ಅಂಕಿತಾ ಅವರು ಕೋವಿಡ್ ಕಾಡಿತ್ತು. ದೀರ್ಘ ಚಿಕಿತ್ಸೆ ಮತ್ತು ವಿಶ್ರಾಂತಿಯ ನಂತರ ಕಣಕ್ಕೆ ಮರಳಿದ್ದಾರೆ.


'ಕಳೆದ 14 ರಿಂದ 16 ದಿನಗಳಲ್ಲಿ ಒಂದು ದಿನವೂ ರೆಕೆಟ್ ಮುಟ್ಟಿಲ್ಲ. ಬೇರೆ ಯಾವ ಚಟುವಟಿಕೆಗಳನ್ನೂ ಮಾಡಿಲ್ಲ' ಎಂದು ಪಂದ್ಯದ ನಂತರ ಅಂಕಿತಾ ಹೇಳಿದರು.

### ಸಾನಿಯಾ, ರೋಹನ್‌ಗೆ ನಿರಾಶೆ

ಅಡಿಲೇಡ್ (ಪಿಟಿಐ): ಸಾನಿಯಾ ಮಿರ್ಜಾ ಮತ್ತು ರೋಹನ್ ಬೋಪಣ್ಣ ಅವರು ಅಡಿಲೇಡ್ -2 ಡಬ್ಲ್ಯುಟಿ2 ಮತ್ತು ಎಟಿಪಿ ಟೂರ್ನಿಗಳಲ್ಲಿ ಸೋತಿದ್ದಾರೆ.

ಸಾನಿಯಾ ಮತ್ತು ಉಕ್ರೇನಿನ ನಾದಿಯಾ ಕಿಚೆನೊಕ್ ಜೋಡಿ 3-6, 3-6ರಿಂದ ಜೆಕ್ ಗಣರಾಜ್ಯದ ತೆರೆಸಾ ಮಾರ್ಟಿನ್‌ಕೊವಾ ಮತ್ತು ಮಾರ್ಕೆಟಾ ವಂಡರೊಸೊವಾ ವಿರುದ್ಧ ಸೋತರು. ರೋಹನ್-ಎಡ್ವರ್ಡ್ 4-6, 6-3, 3-10ರಿಂದ ಸ್ಟೀವ್ ಜಾನ್ಸನ್ ಹಾಗೂ ಆಸ್ಟಿನ್ ಕ್ರಾಜಿಸೆಕ್ ವಿರುದ್ಧ ಪರಾಭವ ಗೊಂಡರು.

### ಷೇರುಪೇಟೆ ವಹಿವಾಟು





### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 18,003 |
| ಇಂದಿನ ಅಂತ್ಯ | 18,055 |
| ▲ | 52 |
| ದಿನದ ಗರಿಷ್ಠ | 18,081 |

### ವಿನಿಮಯ ದರ

| | |
|---|---|
| $ ಡಾಲರ್ | 73.94 |
| £ ಪೌಂಡ್ | 100.59 |
| € ಯುರೊ | 83.77 |
| ¥ ಯೆನ್ (100ಕ್ಕೆ) | 63.88 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹470 |
| 12 ಮೊಟ್ಟೆಗೆ | ₹63 |
| ಮೈಸೂರು | |
| 100 ಮೊಟ್ಟೆಗೆ | ₹465 |

### ಖಾದ್ಯ ತೈಲ ಮುಂಬೈ



(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1330 (1310) |
| ಸೋಯಾ (ರಿಫೈನ್ಡ್) | ₹1205 (1205) |
| ಸೂರ್ಯಕಾಂತಿ (ರಿಫೈನ್ಡ್) | ₹1240 (1240) |
| ಪಾಮೋಲಿನ್ | ₹1165 (1167) |

### ಕೊಬ್ಬರಿ ಧಾರಣೆ



| | |
|---|---|
| ಬೆಂಗಳೂರು | ₹18500-21000 |
| ತುರುವೇಕೆರೆ | ₹16500-16700 |

### ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹18000-20000
2ನೇ ದರ್ಜೆ ₹10000-16000

### ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

| | |
|---|---|
| ದೊಡ್ಡ | ₹1800-2400 |
| ಮಧ್ಯಮ | ₹1200-1800 |
| ಸಣ್ಣ | ₹500-1200 |

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

**ಏಲಕ್ಕಿ ಧಾರಣೆ**
**ಸಕಲೇಶಪುರ**
ಕೂಳೆ 450- 500
ನಡುಗೋಲು 550-600
ರಾಶಿ 650-700
ರಾಶಿ ಉತ್ತಮ 800-850
ಜರಡಿ 900 -950
ಹರಕಿದ್ದು 1100-1200
ಹಸಿರು ಸಾಧಾರಣ 750-800
ಹಸಿರು ಉತ್ತಮ 900-1000
ಹಸಿರು ಅತಿ ಉತ್ತಮ 1300-1450
ಕಾಳು ಮೆಣಸು - 500

**ಅಡಿಕೆ**
**ಬಂಟ್ವಾಳ**
ಕೋಕ 12500-25000
ಹೊಸತು 27500-45000
ಹಳತು 46000-53000
**ಚನ್ನಗಿರಿ**
ರಾಶಿ 44029-46400
**ಕಾರ್ಕಳ**
ಹೊಸತು 40000-45000
ಹಳತು 46000-53000
**ಕುಂದಾಪುರ**
ಹಳೆಚಾಲಿ 51500-52500
ಹೊಸಚಾಲಿ 43500-44500
**ಮಂಗಳೂರು**
ಕೋಕ 26000-34000
**ಪುತ್ತೂರು**
ಕೋಕ 11000-26000
ಹೊಸತು 27500-45000
**ಸಾಗರ**
ಬಿಳಿಗೋಟು 18289-20786
ಚಾಲಿ 41699-41699
ಕೋಕ 17699-17899
ಕೆಂಪುಗೋಟು 34269-38369
ರಾಶಿ 37689-46199
ಸಿಪ್ಪೆಗೋಟು 16599-24050
**ಶಿವಮೊಗ್ಗ**
ಬೆಟ್ಟೆ 48099-52200
ಗೊರಬಲು 17040-34289
ರಾಶಿ 43299-46010
ಸರಕು 54009-75066
**ಸಿದ್ದಾಪುರ**
ಬಿಳಿಗೋಟು 28689-39169
ಚಾಲಿ 47399-48755
ಕೋಕ 23699-36699
ಹೊಸಚಾಲಿ 32089-38699
ಕೆಂಪುಗೋಟು 23699-35019
ರಾಶಿ 42099-48099
ತಟ್ಟಿಬೆಟ್ಟೆ 36869-44609
**ಶಿರಸಿ**
ಬೆಟ್ಟೆ 30999-45618
ಬಿಳಿಗೋಟು 24699-41693
ಚಾಲಿ 31299-49240
ರಾಶಿ 31899-48561
**ತುಮಕೂರು**
ರಾಶಿ 45100-46200
**ಯಲ್ಲಾಪುರ**
ಅಪಿ 53300-55695
ಬಿಳಿಗೋಟು 27369-33611
ಚಾಲಿ 36899-49021
ಕೋಕ 21899-31099
ಕೆಂಪುಗೋಟು 28899-36799
ರಾಶಿ 45369-51559
ತಟ್ಟಿಬೆಟ್ಟೆ 37677-44700

**ರಾಮನಗರ ರೇಷ್ಮೆ**

| | |
|---|---|
| ಮಿಶ್ರತಳಿ | 375-540 |
| ದ್ವಿತಳಿ | 350-725 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 15500 | 15550 | 15600 | 234.90ಸೆಂಟ್ಸ್ |
| ಎಸಿ | 7140 | 6900 | 6800 | |
| ಆರ್‌ಪಿ | 6500 | 6900 | 7000 | ಲಂಡನ್ |
| ಆರ್‌ಸಿ | 3820 | 4000 | 3900 | 2260 ಡಾಲರ್ಸ್ |

### ಮುಂಬೈ ಧಾರಣೆ

**ಶೇಂಗಾ**

11-1-2022

| | |
|---|---|
| ಜಾವಾ 70/80(ಹೊಸ) | 10550-10600 |
| ಜಾವಾ 80/90(ಹೊಸ) | 10450-10500 |
| ದಪ್ಪ ಮಧ್ಯಪ್ರದೇಶ(ಹೊಸ) | 9900-9950 |
| ದಪ್ಪ ಗುಜರಾತ್(ಹೊಸ) | 9000-9050 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1340 (1320) |
| ಒಂದು ವಾರದ ಡೆಲಿವರಿ | 1335 (1315) |
| ಸೋಯಾ ಕಚ್ಚಾ | 1150 (1150) |
| ಪಾಮ್ ವಾರದ ಡೆಲಿವರಿ | 1163 (1165) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1180 (1180) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

| | |
|---|---|
| ಅಪರಂಜಿ ಚಿನ್ನ 10ಗ್ರಾಂ | 47,550 (47,350) |
| ಬೆಳ್ಳಿ ಕೆ.ಜಿ | 60,450 (60,300) |

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

### ಬಡ್ಡಿ ಮೊತ್ತದ ಬದಲು ಷೇರುಗಳನ್ನು ನೀಡಲು ತೀರ್ಮಾನ

# ವಿಐಎಲ್‌ನ ಅತಿದೊಡ್ಡ ಷೇರುಪಾಲು ಕೇಂದ್ರಕ್ಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರಕ್ಕೆ ತಾನು ಬಡ್ಡಿಯ ರೂಪದಲ್ಲಿ ಪಾವತಿ ಮಾಡಬೇಕಿರುವ ಅಂದಾಜು ₹ 16 ಸಾವಿರ ಕೋಟಿ ಮೊತ್ತವನ್ನು ಕಂಪನಿಯ ಷೇರುಗಳನ್ನಾಗಿ ಪರಿವರ್ತಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ನೀಡಲು ವೊಡಾಫೋನ್ ಐಡಿಯಾ ಲಿಮಿಟೆಡ್ (ವಿಐಎಲ್) ತೀರ್ಮಾನಿಸಿದೆ.

ಇಷ್ಟು ಮೊತ್ತಕ್ಕೆ ಪ್ರತಿಯಾಗಿ ಕೇಂದ್ರ ಸರ್ಕಾರವು ಕಂಪನಿಯ ಷೇರುಗಳನ್ನು ಪಡೆದಾಗ, ಕಂಪನಿಯ ಒಟ್ಟು ಷೇರುಗಳಲ್ಲಿ ಶೇಕಡ 35.8ರಷ್ಟು ಬಂಡವಾಳವನ್ನು ಹೊಂದಿದಂತೆ ಆಗಲಿದೆ. ಆಗ ವಿಐಎಲ್‌ನಲ್ಲಿ ಕೇಂದ್ರವು ಅತಿದೊಡ್ಡ ಷೇರುದಾರ ಆಗಲಿದೆ. ವಿಐಎಲ್ ಕಂಪನಿಯು ಪ್ರಸ್ತುತ ಅಂದಾಜು ₹ 1.95 ಲಕ್ಷ ಕೋಟಿ ಸಾಲವನ್ನು ಹೊತ್ತುಕೊಂಡಿದೆ.

ತರಂಗಾಂತರ ಹರಾಜು ಕಂತುಗಳ ಮೇಲಿನ ಬಡ್ಡಿ ಹಾಗೂ ಹೊಂದಾಣಿಕೆ ಮಾಡಿದ ಒಟ್ಟು ಆದಾಯದ ಬಾಕಿ ಮೇಲಿನ ಬಡ್ಡಿಯ ಮೊತ್ತವನ್ನು ಷೇರುಗಳನ್ನಾಗಿ ಪರಿವರ್ತಿಸಲು ಕಂಪನಿಯ ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ವಿಐಎಲ್ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಕೇಂದ್ರಕ್ಕೆ ಪಾವತಿ ಮಾಡಬೇಕಿರುವ ತರಂಗಾಂತರ ಕಂತುಗಳ ಬಡ್ಡಿ ಹಾಗೂ ಎಜಿಆರ್ ಬಾಕಿಯ ಬಡ್ಡಿಯನ್ನು ಷೇರುಗಳನ್ನಾಗಿ ಪರಿವರ್ತಿಸಲು ದೂರಸಂಪರ್ಕ ಸೇವಾ ಕಂಪನಿಗಳಿಗೆ ಅವಕಾಶ ನೀಡಲಾಗಿದೆ.

ಕೇಂದ್ರ ಸರ್ಕಾರಕ್ಕೆ ಶೇ 35.8ರಷ್ಟು ಷೇರುಗಳನ್ನು ನೀಡಿದ ಬಳಿಕ, ಪ್ರವರ್ತಕರಾದ ವೊಡಾಫೋನ್ ಸಮೂಹದ ಬಳಿ ಶೇ 28.5ರಷ್ಟು, ಆದಿತ್ಯ ಬಿರ್ಲಾ ಸಮೂಹದ ಬಳಿ ಶೇ 17.8ರಷ್ಟು ಷೇರುಗಳು ಉಳಿಯಲಿವೆ. ಕನಿಷ್ಠ ಶೇ 21ರಷ್ಟು ಷೇರುಗಳನ್ನು ಹೊಂದಿರುವವರು ಕಂಪನಿಯ ಆಡಳಿತ ನಿರ್ವಹಣೆಯಲ್ಲಿ ತೊಡಗಿಕೊಳ್ಳಬಹುದು.

ಆದರೆ, ವಿಐಎಲ್ ಕಂಪನಿಯು ಈಗ, ಕನಿಷ್ಠ ಶೇ 13ರಷ್ಟು ಷೇರುಗಳನ್ನು ಹೊಂದಿದವರು ಆಡಳಿತ ನಿರ್ವಹಿಸಬಹುದು ಎಂದು ನಿಯಮಗಳಿಗೆ ಬದಲಾವಣೆ ತರಲಿದೆ.

### ವಿಐಎಲ್ ಹಾದಿ ಹಿಡಿದ ಟಾಟಾ ಟೆಲಿಸರ್ವಿಸಸ್

ನವದೆಹಲಿ (ಪಿಟಿಐ): ಎಜಿಆರ್ ಬಾಕಿ ಮೊತ್ತದ ಮೇಲಿನ ಬಡ್ಡಿಯನ್ನು ಷೇರುಗಳನ್ನಾಗಿ ಪರಿವರ್ತಿಸಲು ಟಾಟಾ ಟೆಲಿಸರ್ವಿಸಸ್ (ಮಹಾರಾಷ್ಟ್ರ) ಕಂಪನಿ ಕೂಡ ತೀರ್ಮಾನಿಸಿದೆ. ಬಡ್ಡಿ ಮೊತ್ತವನ್ನು ಷೇರುಗಳನ್ನಾಗಿ ಪರಿವರ್ತಿಸಿ ಸರ್ಕಾರಕ್ಕೆ ಹಸ್ತಾಂತರಿಸಿದ ನಂತರದಲ್ಲಿ, ಕೇಂದ್ರ ಸರ್ಕಾರದ ಪಾಲು ಕಂಪನಿಯಲ್ಲಿ ಶೇಕಡ 9.5ರಷ್ಟು ಆಗಲಿದೆ.

ವೊಡಾಫೋನ್ ಐಡಿಯಾ ಲಿಮಿಟೆಡ್ ಕಂಪನಿಯು ಕೇಂದ್ರಕ್ಕೆ ಬಡ್ಡಿಯ ಬದಲು ಷೇರುಗಳನ್ನು ನೀಡುವ ಘೋಷಣೆ ಮಾಡಿದ ಕೆಲವೇ ಗಂಟೆಗಳಲ್ಲಿ ಟಾಟಾ ಟೆಲಿಸರ್ವಿಸಸ್ (ಮಹಾರಾಷ್ಟ್ರ) ಕೂಡ ಈ ತೀರ್ಮಾನ ಕೈಗೊಂಡಿದೆ. ಬಡ್ಡಿಯ ಇಂದಿನ ಮೊತ್ತವು ₹ 850 ಕೋಟಿ ಆಗಲಿದೆ. ಈ ಮೊತ್ತವನ್ನು ಷೇರುಗಳನ್ನಾಗಿ ಪರಿವರ್ತಿಸಿ ಸರ್ಕಾರಕ್ಕೆ ನೀಡಲು ತೀರ್ಮಾನಿಸಲಾಗಿದೆ ಎಂದು ಅದು ಷೇರುಪೇಟೆಗೆ ಮಾಹಿತಿ ನೀಡಿದೆ.

### ಕುಸಿದ ಷೇರುಮೌಲ್ಯ

ನವದೆಹಲಿ (ಪಿಟಿಐ): ಕೇಂದ್ರಕ್ಕೆ ಪಾವತಿಸಬೇಕಿರುವ ಮೊತ್ತದ ಬದಲಿಗೆ ಷೇರುಗಳನ್ನು ನೀಡುವ ತೀರ್ಮಾನವನ್ನು ವಿಐಎಲ್ ಪ್ರಕಟಿಸಿದ ನಂತರ ಕಂಪನಿಯ ಷೇರು ಮೌಲ್ಯವು ಶೇಕಡ 20ರಷ್ಟು ಕುಸಿತ ಕಂಡಿತು.

ಮುಂಬೈ ಷೇರುಪೇಟೆಯಲ್ಲಿ ವಿಐಎಲ್ ಷೇರು ಮೌಲ್ಯವು ಶೇ 20.54ರಷ್ಟು ಇಳಿಕೆ ಕಂಡು ₹ 11.80ಕ್ಕೆ ತಲುಪಿತು. ವಹಿವಾಟಿನ ನಡುವಿನಲ್ಲಿ ಷೇರು ಮೌಲ್ಯವು ಶೇ 22.55ರವರೆಗೂ ಇಳಿಕೆಯಾಗಿತ್ತು. ರಾಷ್ಟ್ರೀಯ ಷೇರುಪೇಟೆಯಲ್ಲಿ ವಿಐಎಲ್ ಷೇರು ಮೌಲ್ಯವು ಶೇ 20.87ರಷ್ಟು ಕುಸಿಯಿತು ಇದರ ಪರಿಣಾಮ ಮುಂಬೈ ಷೇರುಪೇಟೆಯಲ್ಲಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 8,764 ಕೋಟಿಯಷ್ಟು ಇಳಿಕೆಯಾಗಿ ₹ 33,907 ಕೋಟಿಗೆ ತಲುಪಿತು.

ಪ್ರಶ್ನೋತ್ತರ ಅಂಕಣ ಈ ವಾರ ಪ್ರಕಟ ಆಗುತ್ತಿಲ್ಲ –ಸಂ.

## ಆದಾಯ ತೆರಿಗೆ ವಿವರ ಸಲ್ಲಿಕೆ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): 2021ರ ಮಾ. 31ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಆದಾಯ ತೆರಿಗೆ ವಿವರಗಳನ್ನು ಸಲ್ಲಿಸಲು ಕಾರ್ಪೊರೇಟ್ ಸಂಸ್ಥೆಗಳಿಗೆ ಇದ್ದ ಗಡುವನ್ನು ಕೇಂದ್ರ ಸರ್ಕಾರವು ಮಾ. 15ರವರೆಗೆ ವಿಸ್ತರಣೆ ಮಾಡಿದೆ. ಕಾರ್ಪೊರೇಟ್ ಸಂಸ್ಥೆಗಳಿಗೆ ಆದಾಯ ತೆರಿಗೆ ವಿವರ ಸಲ್ಲಿಸುವ ಗಡುವನ್ನು ವಿಸ್ತರಿಸುತ್ತಿರುವುದು ಇದು ಮೂರನೆಯ ಬಾರಿ. ಕಾರ್ಪೊರೇಟ್ ಸಂಸ್ಥೆಗಳು ಅಕ್ಟೋಬರ್ 31ಕ್ಕೂ ಮೊದಲು ವಿವರ ಸಲ್ಲಿಸಬೇಕಿತ್ತು.

ಕೋವಿಡ್‌ನ ಕಾರಣದಿಂದಾಗಿ ತೆರಿಗೆ ಪಾವತಿದಾರರಿಗೆ ಆದ ತೊಂದರೆಗಳನ್ನು ಗಮನದಲ್ಲಿ ಇರಿಸಿಕೊಂಡು ದಿನಾಂಕ ವಿಸ್ತರಣೆ ಮಾಡಲಾಗಿದೆ ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಪ್ರಕಟಣೆ ಹೇಳಿದೆ.

# ದಾಖಲೆಯ ಮಟ್ಟಕ್ಕೆ ಬಿಎಸ್‌ಇ ಕಂಪನಿಗಳ ಬಂಡವಾಳ ಮೌಲ್ಯ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ಮಂಗಳವಾರ ₹ 275.20 ಲಕ್ಷ ಕೋಟಿಗೆ ಏರಿಕೆ ಆಗಿದೆ. ಇದು ಈವರೆಗಿನ ದಾಖಲೆಯ ಮೊತ್ತ.

ಸತತ ಮೂರನೆಯ ದಿನವೂ ಗಳಿಕೆಯ ಓಟವನ್ನು ಮುಂದುವರಿಸಿದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮಂಗಳವಾರ 221 ಅಂಶ ಏರಿಕೆ ಕಂಡು, 60,616 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ಮೂರು ವಹಿವಾಟು ದಿನಗಳಲ್ಲಿ ಸೆನ್ಸೆಕ್ಸ್ ಒಟ್ಟು 1,015 ಅಂಶ ಏರಿಕೆ ದಾಖಲಿಸಿದೆ.

ಮೂರು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 4.05 ಲಕ್ಷ ಕೋಟಿಯಷ್ಟು ಹೆಚ್ಚಳ ಆಗಿದೆ. ಮಂಗಳವಾರದ ವಹಿವಾಟಿನಲ್ಲಿ ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 52 ಅಂಶ ಏರಿಕೆ ಕಂಡು 18,055 ಅಂಶಗಳನ್ನು ತಲುಪಿತು.

ಬಿಎಸ್‌ಇ ಇಂಧನ, ಐ.ಟಿ., ರಿಯಾಲ್ಟಿ ವಲಯಗಳಲ್ಲಿ ಏರಿಕೆ ಕಂಡುಬಂತು. ಲೋಹ ವಲಯದ ಸೂಚ್ಯಂಕವು ಶೇ 2ಕ್ಕಿಂತ ಹೆಚ್ಚು ಕುಸಿಯಿತು. ಎಫ್‌ಎಂಸಿಜಿ ಮತ್ತು ಆರೋಗ್ಯಸೇವಾ ವಲಯದ ಸೂಚ್ಯಂಕಗಳು ಕೂಡ ಇಳಿಕೆ ಕಂಡವು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 11 ಪೈಸೆಯಷ್ಟು ಹೆಚ್ಚಳ ಆಗಿ ₹ 73.94ರಂತೆ ವಿನಿಮಯಗೊಂಡಿತು.

## ತೈವಾನ್: ತರಬೇತಿ ವೇಳೆ ಯುದ್ಧವಿಮಾನ ಕಣ್ಮರೆ, ಪತನ ಶಂಕೆ

ತೈಪೆ (ರಾಯಿಟರ್ಸ್): ದ್ವೀಪ ರಾಷ್ಟ್ರ ತೈವಾನ್‌ನ ವಾಯುಪಡೆ ಮಂಗಳವಾರ ಸಮುದ್ರದಲ್ಲಿ ನಡೆಸಿದ ತರಬೇತಿ ಕಾರ್ಯಾಚರಣೆಯೊಂದರ ವೇಳೆ ಸಂಭವಿಸಿದ ಅಪಘಾತದಲ್ಲಿ ಎಫ್-16 ಯುದ್ಧ ವಿಮಾನವೊಂದು ಕಣ್ಮರೆಯಾಗಿದೆ.

ಯುದ್ಧವಿಮಾನವು ಪತನಗೊಂಡಿರುವುದಾಗಿ ಶಂಕಿಸಲಾಗಿದೆ. ವಿಮಾನ ಮತ್ತು ಪೈಲಟ್ ಪತ್ತೆಗೆ ಶೋಧ ಕಾರ್ಯ ಮುಂದುವರಿದಿದೆ ಎಂದು ಸರ್ಕಾರ ಹೇಳಿದೆ. ತೈವಾನ್ ಯುದ್ಧ ವಿಮಾನಗಳಲ್ಲಿ ಎಫ್-16ವಿ ಅತ್ಯಾಧುನಿಕ ಮಾದರಿಯದ್ದಾಗಿದೆ.

## ಭಾರತ–ಅಮೆರಿಕ ಜಂಟಿ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಣೆ

ವಾಷಿಂಗ್ಟನ್ (ಪಿಟಿಐ): ಹವಾಮಾನ ಬದಲಾವಣೆ, ಸಾಂಕ್ರಾಮಿಕ ವಿರುದ್ಧದ ಹೋರಾಟ, ಕ್ವಾಡ್ ಮತ್ತು ನೂತನ ತಂತ್ರಜ್ಞಾನ ಯೋಜನೆಗಳನ್ನು ನಿಭಾಯಿಸುವುದು ಮೊದಲಾದ ವಿಷಯಗಳಲ್ಲಿ ಭಾರತ ಮತ್ತು ಅಮೆರಿಕ ಜಂಟಿಯಾಗಿ ಕಾರ್ಯನಿರ್ವಹಿಸುವ ಸಾಧ್ಯತೆಯಿದೆ ಎಂದು ಶ್ವೇತ ಭವನ ಸೋಮವಾರ ಹೇಳಿದೆ.

## ಉದ್ಯೋಗ ವಾಣಿ


ರಕ್ಷಣಾ ವಿದ್ಯುನ್ಮಾನ ಮತ್ತು ಅದಕ್ಕೂ ಮೀರಿದ



ಭಾರತ್ ಎಲೆಕ್ಟ್ರಾನಿಕ್ಸ್ / भारत इलेक्ट्रॉनिक्स / BHARAT ELECTRONICS
QUALITY, TECHNOLOGY, INNOVATION

**ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್**
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಹಾಗೂ ಭಾರತದ ಪ್ರಮುಖ ವೃತ್ತಿಪರ ಕಂಪನಿಗೆ ಖಾಯಂ ಆಧಾರದ ಮೇಲೆ ಈ ಕೆಳಕಂಡ ಸಿಬ್ಬಂದಿಗಳ ಆವಶ್ಯಕತೆ ಇದೆ.

| ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ | ಕಾರ್ಯ ಸ್ಥಳ |
|---|---|---|
| ಸಹಾಯಕ ಕಂಪನಿ ಕಾರ್ಯದರ್ಶಿ ಇ-III ಶ್ರೇಣಿ | 01 | ಬೆಂಗಳೂರು |
| ಸಹಾಯಕ ವ್ಯವಸ್ಥಾಪಕ (ಕಾನೂನು) ಇ-III ಶ್ರೇಣಿ | 02 | ಬೆಂಗಳೂರು, ಗಾಜಿಯಾಬಾದ್ |

ಆಸಕ್ತ ಅಭ್ಯರ್ಥಿಗಳು ವಿಸ್ತೃತ ಜಾಹೀರಾತಿಗಾಗಿ ದಯವಿಟ್ಟು **www.bel-india.in** ವೆಬ್‌ಸೈಟ್ ನೋಡಿ ಅರ್ಜಿ ಸಲ್ಲಿಸುವುದು.
ಬಿಇಎಲ್‌ನ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಅಧಿಕೃತ ಮಾಹಿತಿಯನ್ನು, ದಯವಿಟ್ಟು ಅಧಿಕೃತ ಬಿಇಎಲ್ ವೆಬ್‌ಸೈಟ್ **www.bel-india.in** ನಲ್ಲಿ ಒದಗಿಸಲಾದ ಲಿಂಕ್‌ನ ಮೂಲಕ ಪಡೆಯತಕ್ಕದ್ದು.
'ಹರ್ ಏಕ್ ಕಾಮ್ ದೇಶ್ ಕೆ ನಾಮ್'

**NMDC Limited**
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad-500 028
CIN : L13100TG1958GOI001674

**Employment No. 03/2022** | **Dated : 11.01.2022**

NMDC Ltd. a **Navaratna** Public Sector Enterprise under the Ministry of Steel, Government of India and a multi locational, multi product and consistently profit-making Mining & Mineral Exploration Organization is in the process of expansion and diversification activities both in India and abroad. NMDC is also setting up an Integrated Steel Plant at Nagarnar near Jagdalpur, Bastar District, Chhattisgarh State. The Steel Plant is going to be commissioned shortly.

2.0 For commissioning and subsequent operation & maintenance of NMDC's Integrated Steel Plant (NISP) at Nagarnar, NMDC needs to engage persons having experience in **Safety/Gas Safety disciplines** in Steel Plant, Power Plant, Cement Plant, Chemical Plant etc. will be engaged on contract basis in NISP, Jagdalpur initially for a term upto 3 years, which is renewable on mutual consent basis.

2.1 Minimum Eligibility Criteria will be as follows:

| Sl. No. | POST | Post Qualification Experience | ESSENTIAL QUALIFICATION |
|---|---|---|---|
| 01 | Executive-I (a) (Contract) | Minimum 4 years of relevant post qualification experience in Safety/ Gas Safety in Steel Plant, Power Plant, Cement Plant, Chemical Plant etc. | Degree in any branch of Engineering or Technology along with Degree or Diploma in Industrial Safety as per factories Act/Rules |
| 02 | Executive-I (b) (Contract) | | |
| 03 | Executive-III (Contract) | Minimum 18 years' of relevant post qualification experience in Safety/ Gas Safety in Steel Plant, Power Plant, Cement Plant, Chemical Plant etc. | |

For further details regarding age, qualification, experience, salary to be paid etc. and apply online interested candidates may visit **"Careers"** page on NMDC website, **www.nmdc.co.in**

हर एक काम देश के नाम

### ಸಾಧಾರಣ ಮೊತ್ತಕ್ಕೆ ಕುಸಿದ ಭಾರತ ತಂಡ; ರಬಾಡ, ಮಾರ್ಕೊ ಮಿಂಚು

# ಲಯಕ್ಕೆ ಮರಳಿದ ವಿರಾಟ್ ಕೊಹ್ಲಿ

**ಕೇಪ್‌ಟೌನ್ (ರಾಯಿಟರ್ಸ್):** ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಅಂತೂ ಇಂತೂ ತಮ್ಮ ಲಯಕ್ಕೆ ಮರಳಿದರು.

ನ್ಯೂಲ್ಯಾಂಡ್ಸ್‌ನಲ್ಲಿ ಮಂಗಳವಾರ ಆರಂಭವಾದ ದಕ್ಷಿಣ ಅಫ್ರಿಕಾ ಎದುರಿನ ಮೂರನೇ ಮತ್ತು ಅಂತಿಮ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಭಾರತ ತಂಡವು 77.3 ಓವರ್‌ಗಳಲ್ಲಿ 223 ರನ್ ಗಳಿಸಿ ಆಲೌಟ್ ಆಯಿತು.

ಕಗಿಸೊ ರಬಾಡ ಮತ್ತು ಮಾರ್ಕೊ ಜ್ಯಾನ್ಸನ್ ಅವರ ಬಿಗಿ ದಾಳಿಯ ಮುಂದೆ ಪ್ರವಾಸಿ ಬ್ಯಾಟಿಂಗ್ ಪಡೆ ಪರದಾಡಿತು. ಐದು ಕ್ಯಾಚ್ ಪಡೆದ ಕೈಲ್ ವೆರಯೆನ್ ಅವರೂ ಬೌಲರ್‌ಗಳ ಯಶಸ್ಸಿಗೆ ಪ್ರಮುಖ ಕಾರಣರಾದರು.

ಬ್ಯಾಟಿಂಗ್ ಆರಂಭಿಸಿರುವ ದಕ್ಷಿಣ ಆಫ್ರಿಕಾ ತಂಡವು ದಿನದಾಟದ ಮುಕ್ತಾಯಕ್ಕೆ 8 ಓವರ್‌ಗಳಲ್ಲಿ 1 ವಿಕೆಟ್‌ಗೆ 17 ರನ್ ಗಳಿಸಿತು. ಜಸ್‌ಪ್ರೀತ್ ಬೂಮ್ರಾ ಐದನೇ ಓವರ್‌ನಲ್ಲಿಯೇ ನಾಯಕ ಡೀನ್ ಎಲ್ಗರ್ ವಿಕೆಟ್ ಗಳಿಸಿದರು. ಏಡನ್ ಮರ್ಕರಂ ಮತ್ತು ಕೇಶವ್ ಮಹಾರಾಜ್ ಕ್ರೀಸ್‌ನಲ್ಲಿದ್ದಾರೆ. ಮೊದಲ ದಿನ 11 ವಿಕೆಟ್‌ಗಳು ಪತನವಾದವು.

ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ, ಆರಂಭಿಕ ಜೋಡಿ ಮಯಂಕ್ ಅಗರವಾಲ್ ಮತ್ತು ಕೆ.ಎಲ್. ರಾಹುಲ್ ಇಬ್ಬರೂ ವೈಫಲ್ಯ ಅನುಭವಿಸಿದರು. ಈ ಹಂತದಲ್ಲಿ ತಾಳ್ಮೆಯ ಬ್ಯಾಟಿಂಗ್ ಮೂಲಕ ಅವರು ಗಳಿಸಿದ 79 ರನ್‌ಗಳಿಂದಾಗಿ ತಂಡವು ಸಾಧಾರಣ ಮೊತ್ತ-ವನ್ನಾದರೂ ಗಳಿಸಲು ಸಾಧ್ಯವಾಯಿತು. ಚೇತೇಶ್ವರ್ ಪೂಜಾರ ಮತ್ತು ಕೊಹ್ಲಿ ಮೂರನೇ ವಿಕೆಟ್ ಜೊತೆಯಾಟದಲ್ಲಿ 62 ರನ್‌ಗಳನ್ನು ಸೇರಿಸಿದರು.

ಅದರಲ್ಲೂ ಕೊಹ್ಲಿ ತಮ್ಮ ಆಕ್ರಮಣಕಾರಿ ಶೈಲಿಯನ್ನು ಕೈಬಿಟ್ಟು ಅಪಾರ ಸಹನೆಯಿಂದ ಬ್ಯಾಟ್ ಬೀಸಿದರು. ಏಕಾಗ್ರತೆಯನ್ನು ಸಾಧಿಸಲು ಹೆಚ್ಚು ಎಸೆತಗಳನ್ನು ಆಡಿದರು. ಅವರು ತಮ್ಮ ಖಾತೆಯನ್ನು ತೆರೆಯಲು 34 ಎಸೆತಗಳನ್ನು ತೆಗೆದುಕೊಂಡರು. 13ನೇ ಓವರ್‌ನಲ್ಲಿ ಕ್ರೀಸ್‌ಗೆ ಬಂದ ಅವರು 19ನೇ ಓವರ್‌ನಲ್ಲಿ ಮಾರ್ಕೊ ಎಸೆತವನ್ನು ಬೌಂಡರಿಗಟ್ಟಿ ಖಾತೆ ತೆರೆದರು.

ಅದರ ನಂತರವೂ ಅವರು ಅವಸರ ಮಾಡಲಿಲ್ಲ. ಡ್ರೆಸ್ಸಿಂಗ್ ರೂಮ್‌ನಲ್ಲಿ ಕುಳಿತಿದ್ದ 'ಬರ್ತಡೇ ಮ್ಯಾನ್' ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರ ಆಟದ ಶೈಲಿಯನ್ನು ಕೊಹ್ಲಿ ನೆನಪಿಸಿದರು.

ಆದರೆ ತಂಡದ ಮೊತ್ತ 100ರ ಗಡಿ ದಾಟುವ ಮುನ್ನವೇ ಈ ಜೊತೆಯಾಟವನ್ನು ಮಾರ್ಕೊ ಮುರಿದರು. ಪೂಜಾರ ವಿಕೆಟ್ ಗಳಿಸಿದ ಅವರು ಸಂಭ್ರಮಿಸಿದರು.


ವಿರಾಟ್ ಕೊಹ್ಲಿ –ಎಪಿ/ಪಿಟಿಐ ಚಿತ್ರ

ಕಳೆದ ಪಂದ್ಯದಲ್ಲಿ ಅರ್ಧಶತಕ ಹೊಡೆದಿದ್ದ ಅಜಿಂಕ್ಯ ರಹಾನೆ ಇಲ್ಲಿ ಕೇವಲ 9 ರನ್ ಗಳಿಸಿ ನಿರ್ಗಮಿಸಿದರು. ನಾಯಕನೊಂದಿಗೆ ಜೊತೆಯಾಟವು ಕುದುರಿಸಿದ್ದ ರಿಷಭ್ ಪಂತ್ (27; 50ಎ) ಮತ್ತೊಮ್ಮೆ ಗಡಿಬಿಡಿ ಮಾಡಿಕೊಂಡರು. ಮಾರ್ಕೊ ಎಸೆತವನ್ನು ತಪ್ಪಾಗಿ ಅಂದಾಜಿಸಿ ಆಡಿದರು. ಕೀಗನ್ ಪೀಟರ್ಸನ್ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು.

ಈ ಹಂತದಲ್ಲಿ ಕೊಹ್ಲಿ ತಮ್ಮ ಆಟದ ವೇಗವನ್ನು ಹೆಚ್ಚು ಮಾಡಿಕೊಂಡರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಕೊಹ್ಲಿ ರನ್ ಗಳಿಕೆಯತ್ತ ಚಿತ್ತ ನೆಟ್ಟಿದ್ದರಿಂದ ಮೊತ್ತವು ಇನ್ನೂರರ ಗಡಿ ದಾಟಲು ಸಾಧ್ಯವಾಯಿತು.

### ಸ್ಕೋರ್ ಕಾರ್ಡ್

**ಭಾರತ, ಮೊದಲ ಇನಿಂಗ್ಸ್ 223 (77.3 ಓವರ್)**

ರಾಹುಲ್ ಸಿ ವೆರೆಯನ್ ಬಿ ಒಲಿವಿಯರ್ 12 (35ಎ, 4X1), ಮಯಂಕ್ ಸಿ ಮರ್ಕರಂ ಬಿ ರಬಾಡ 15 (35ಎ, 4X3), ಪೂಜಾರ ಸಿ ವೆರೆಯನ್ ಬಿ ಜ್ಯಾನ್ಸೆನ್ 43 (77ಎ, 4X7), ವಿರಾಟ್ ಸಿ ವೆರೆಯನ್ ಬಿ ರಬಾಡ 79 (201ಎ, 4X12, 6X1), ರಹಾನೆ ಸಿ ವೆರೆಯನ್ 9 (12ಎ, 4X2), ರಿಷಭ್ ಸಿ ಪೀಟರ್ಸನ್ ಬಿ ಜ್ಯಾನ್ಸೆನ್ 27 (50ಎ, 4X4), ಅಶ್ವಿನ್ ಸಿ ವೆರೆಯನ್ ಬಿ ಜ್ಯಾನ್ಸೆನ್ 2 (10ಎ), ಶಾರ್ದೂಲ್ ಸಿ ಪೀಟರ್ಸನ್ ಬಿ ಮಹಾರಾಜ್ 12 (9ಎ, 4X1, 6X1), ಬೂಮ್ರಾ ಸಿ ಎಲ್ಗರ್ ಬಿ ರಬಾಡ 0 (9ಎ), ಉಮೇಶ್ ಔಟಾಗದೆ 4 (14ಎ), ಶಮಿ ಸಿ ಬವುಮಾ ಬಿ ಲುಂಗಿ 7 (20ಎ, 4X1)

**ಇತರೆ** (ಬೈ 5, ಲೆಗ್‌ಬೈ 1, ನೋಬಾಲ್ 7) 13

**ವಿಕೆಟ್ ಪತನ:** 1–31 (ರಾಹುಲ್; 11.2), 2–33 (ಮಯಂಕ್ ಅಗರವಾಲ್; 12.2), 3–95 (ಚೇತೇಶ್ವರ್ ಪೂಜಾರ; 37.3), 4–116 (ಅಜಿಂಕ್ಯ ರಹಾನೆ; 42.1), 5–167 (ರಿಷಭ್ ಪಂತ್; 60.3), 6–175 (ಅಶ್ವಿನ್; 62.5), 7–205 (ಶಾರ್ದೂಲ್ ಠಾಕೂರ್; 67.4), 8–210 (ಜಸ್‌ಪ್ರೀತ್ ಬೂಮ್ರಾ, 70.5), 9–211 (ವಿರಾಟ್ ಕೊಹ್ಲಿ; 72.3), 10–223 (ಶಮಿ;77.3)

**ಬೌಲಿಂಗ್:** ಕಗಿಸೊ ರಬಾಡ 22–4–73–4, ಡುಯೆನ್ ಒಲಿವಿಯರ್ 18–5–42–1, ಮಾರ್ಕೊ ಜ್ಯಾನ್ಸೆನ್ 18–6–55–3, ಲುಂಗಿ ಗಿಡಿ 14.3–7–33–1, ಕೇಶವ್ ಮಹಾರಾಜ್ 5–2–14–1

**ದಕ್ಷಿಣ ಆಫ್ರಿಕಾ ಕ್ಕೆ 1 ವಿಕೆಟ್‌ಗೆ 17 (8 ಓವರ್)**

ಎಲ್ಗರ್ ಸಿ ಪೂಜಾರ ಬಿ ಬೂಮ್ರಾ 3 (16 ಎ), ಮರ್ಕರಮ್ ಬ್ಯಾಟಿಂಗ್ 8 (20 ಎ, 4X1), ಮಹಾರಾಜ್ ಬ್ಯಾಟಿಂಗ್ 6 (12ಎ, 4X1)

**ವಿಕೆಟ್ ಪತನ:** 1–10 (ಡೀನ್ ಎಲ್ಗರ್, 4.4)

**ಬೌಲಿಂಗ್:** ಜಸ್‌ಪ್ರೀತ್ ಬೂಮ್ರಾ 4–4–0–1, ಉಮೇಶ್ ಯಾದವ್ 2–0–10–0, ಮೊಹಮ್ಮದ್ ಶಮಿ 2–0–7–0

## ವಾಷಿಂಗ್ಟನ್ ಸುಂದರ್‌ಗೆ ಕೋವಿಡ್ ಸೋಂಕು

**ಚೆನ್ನೈ (ಪಿಟಿಐ):** ಭಾರತದ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ. ಇದರಿಂದಾಗಿ ಅವರು ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡುವುದು ಅನುಮಾನವಾಗಿದೆ.

22 ವರ್ಷದ ವಾಷಿಂಗ್ಟನ್ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಪೂರ್ವಸಿದ್ಧತಾ ಶಿಬಿರದಲ್ಲಿದ್ದರು. ಇಲ್ಲಿ ತಪಾಸಣೆ ಮಾಡಿಸಿಕೊಂಡಾಗ ಕೋವಿಡ್ ಇರುವುದು ಖಚಿತವಾಗಿದೆ. ಅವರು ಮುಂಬೈನಲ್ಲಿರುವ ತಂಡವನ್ನು ಸೇರಿಕೊ-ಳ್ಳಬೇಕಿತ್ತು. ಇದೇ ವಾರದಲ್ಲಿ ತಂಡವು ದಕ್ಷಿಣ ಆಫ್ರಿಕಾಕ್ಕೆ ತೆರಳುವುದು.

ವಾಷಿಂಗ್ಟನ್ ಆಡದಿದ್ದರೆ ಈಗಾಗಲೇ ದಕ್ಷಿಣ ಆಫ್ರಿಕಾದಲ್ಲಿರುವ ಆಲ್‌ರೌಂಡರ್ ಜಯಂತ್ ಯಾದವ್ ಅವರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

## ರಾಕೇಶ್ ಆನಂದ್ ಚೆಫ್ ಡಿ ಮಿಷನ್

**ಕೇಪ್‌ಟೌನ್ (ಪಿಟಿಐ):** ಭಾರತ ಒಲಿಂಪಿಕ್ ಸಂಸ್ಥೆಯ ಸೀನಿಯರ್ ಉಪಾಧ್ಯಕ್ಷ ರಾಕೇಶ್ ಆನಂದ್ ಅವರನ್ನು ಕಾಮನ್‌ವೆಲ್ ಗೇಮ್ಸ್‌ನಲ್ಲಿ ಭಾಗವಹಿಸುವ ಭಾರತ ತಂಡಕ್ಕೆ ಚೆಫ್ ಡಿ ಮಿಷನ್ ಆಗಿ ನೇಮಕ ಮಾಡಲಾಗಿದೆ.

ಜುಲೈ 28 ರಿಂದ ಆಗಸ್ಟ್ 8ರವರೆಗೆ ಬರ್ಮಿಂಗ್‌ಹ್ಯಾಮ್‌ನಲ್ಲಿ ಕಾಮನ್‌ವೆಲ್ತ್ ಕೂಟವು ನಡೆಯಲಿದೆ.

ಸೆಪ್ಟೆಂಬರ್ 10ರಿಂದ 25ರವರೆಗೆ ಚೀನಾದಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ಭಾರತ ತಂಡಕ್ಕೆ ರಾಷ್ಟ್ರೀಯ ವುಷು ಸಂಸ್ಥೆ ಅಧ್ಯಕ್ಷ ಭೂಪೇಂದ್ರಸಿಂಗ್ ಬಜ್ವಾ ಅವರನ್ನು ಚೆಫ್ ಡಿ ಮಿಷನ್ ಸ್ಥಾನಕ್ಕೆ ನೇಮಕ ಮಾಡಿ ಐಒಎ ಆದೇಶ ಹೊರಡಿಸಿದೆ.

### ಐಎಸ್‌ಎಲ್: ಇಶಾನ್ ಪಂಡಿತ ಮಿಂಚು

# ಜೆಮ್ಶೆಡ್‌ಪುರ್ ಜಯಭೇರಿ

**ಬ್ಯಾಂಬೊಲಿಮ್, ಗೋವಾ (ಪಿಟಿಐ):** ಪಂದ್ಯದ ಕೊನೆಯ ಹಂತದಲ್ಲಿ ಇಶಾನ್ ಪಂಡಿತ ಗಳಿಸಿದ ಗೋಲಿನ ನೆರವಿನಿಂದ ಜೆಮ್ಶೆಡ್‌ಪುರ್ ಎಫ್‌ಸಿ ತಂಡ ಎಸ್‌ಸಿ ಈಸ್ಟ್ ಬೆಂಗಾಲ್ ತಂಡವನ್ನು ಮಣಿಸಿತು. ಮಂಗಳವಾರ ರಾತ್ರಿ ಇಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಜಿದ್ದಾಜಿದ್ದಿಯ ಹಣಾಹಣಿಯಲ್ಲಿ ಜೆಮ್ಶೆಡ್‌ಪುರ್ 1–0ಯಿಂದ ಜಯ ಗಳಿಸಿ ಪಾಯಿಂಟ್ ಪಟ್ಟಿಯ ಅಗ್ರಸ್ಥಾನಕ್ಕೇರಿತು.

88ನೇ ನಿಮಿಷದಲ್ಲಿ ಇಶಾನ್ ಪಂಡಿತ ಗೆಲುವಿನ ಗೋಲು ಗಳಿಸಿ ಸಂಭ್ರಮಿಸಿದರು.

**ಕೇರಳ ಬ್ಲಾಸ್ಟರ್ಸ್‌ಗೆ ಅಗ್ರಸ್ಥಾನದ ಮೇಲೆ ಕಣ್ಣು:** ವಾಸ್ಕೊದಲ್ಲಿ ಬುಧವಾರ ನಡೆಯಲಿರುವ ಪಂದ್ಯದಲ್ಲಿ ಒಡಿಶಾ ಎಫ್‌ಸಿ ಮತ್ತು ಕೇರಳ ಬ್ಲಾಸ್ಟರ್ಸ್ ಎಫ್‌ಸಿ ತಂಡಗಳು ಸೆಣಸಲಿವೆ. ಹಿಂದಿನ ಪಂದ್ಯದಲ್ಲಿ ಒಡಿಶಾ ತಂಡ ಬಲಿಷ್ಠ ಮುಂಬೈ ಎಫ್‌ಸಿಯನ್ನು ಮಣಿಸಿ ಗೆಲುವಿನ ಲಯಕ್ಕೆ ಮರಳಿತ್ತು. ಕಿಕೊ ರಮಿರೆಜ್ ಕೋಚ್ ಆಗಿರುವ ತಂಡದ ಆಕ್ರಮಣ ವಿಭಾಗ ಉತ್ತಮ ಸಾಮರ್ಥ್ಯ ತೋರುತ್ತಿದ್ದು ರಕ್ಷಣೆಯಲ್ಲಿ ಎಡವುತ್ತಿದೆ.

ಬ್ಲಾಸ್ಟರ್ಸ್ ಈ ಬಾರಿ ಅಮೋಘ ಲಯದಲ್ಲಿದೆ. ಏಳು ವರ್ಷಗಳಲ್ಲಿ ಇದೇ ಮೊದಲ ಬಾರಿ ಪಾಯಿಂಟ್ ಪಟ್ಟಿಯ ಅಗ್ರಸ್ಥಾನಕ್ಕೇರಿತ್ತು. ಈಗ ಮತ್ತೊಮ್ಮೆ ಅಗ್ರಸ್ಥಾನದ ಮೇಲೆ ಕಣ್ಣಿಟ್ಟಿದೆ. ಹಿಂದಿನ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿಯನ್ನು ಮಣಿಸುವ ಮೂಲಕ ಸತತ 9 ಪಂದ್ಯಗಳಲ್ಲಿ ಗೆದ್ದ ಸಾಧನೆ ಮಾಡಿದೆ.

### ಬೆಂಗಳೂರು ರೇಸ್

## ಆಂಟಿಸ್ ಗೆಲ್ಲುವ ನಿರೀಕ್ಷೆ

ಬೈರ್ಲಿ ಟರ್ಕ್ ಸ್ಟೇಕ್ಸ್ ಬುಧವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಆಂಟಿಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸರ್ ಜೆರ್ಸಿ 2, ನಿಷ್ ಹೆಂಪ್ 3, ಪ್ರೈಮ್ ಸ್ಟಾರ್ 12
2ನೇ ರೇಸ್: ಲಕ್ಕಿ ಚಾನ್ಸ್ 1, ಜೆನೆರಲ್ ಪ್ಯಾಟನ್ 2, ಸ್ಮಿತ್‌ಸೋನಿಯನ್ 5
3ನೇ ರೇಸ್: ಅರೇಕಾ ಏಂಜೆಲ್ 1, ಲೈಟ್ನಿಂಗ್ ಚಾರ್ಲಿ 2, ಎಸ್ಟೆಲ್ಲಾ 4
4ನೇ ರೇಸ್: ಸೆಟಾರೆ 1, ಲಿಮಿಟೆಡ್ ಎಡಿಷನ್ 3, ರಾಯಲ್ ಥಂಡರ್ 4
5ನೇ ರೇಸ್: ಶೆಬೆಲ್ 8, ರ್‍ಯಾವಿಷಿಂಗ್ ಫಾರ್ಮ್ 4, ಮೈಟಿ ಜೊ 3
6ನೇ ರೇಸ್: ಆಂಟಿಸ್ 5, ಗ್ಯಾರಮಾಂಡ್ 7, ಟವರಿಂಗ್ ಪ್ರೆಸೆನ್ಸ್ 4
7ನೇ ರೇಸ್: ಬಾಲ್ಟಿಮೋರ್ 3, ಚೆರೋಕಿ ಮೂನ್ 2, ಎಂಬೋಸಮ್ 10
8ನೇ ರೇಸ್: ಚಿಸಾರ್ಕ್ಸ್ 12, ಕೋಡ್ ಆಫ್ ಹಾನರ್ 11, ಲೈಟ್ ಆಫ್ ಲವ್ 8

**ಉತ್ತಮ ಬೆಟ್: ಸೆಟಾರೆ**

| ಜಾಕ್‌ಪಾಟ್ | ಮಿನಿ ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|---|
| 4,5,6,7,8 | 5,6,7,8 | 3,4,5 | 6,7,8 |

# ಪ್ರೊ ಕಬಡ್ಡಿ: ನೀರಜ್ ಆಟಕ್ಕೆ ಒಲಿದ ಜಯ

**ಬೆಂಗಳೂರು:** ಪಟ್ನಾ ಪೈರೆಟ್ಸ್ ತಂಡದ ರಕ್ಷಣಾ ವಿಭಾಗದಲ್ಲಿ ಮಿಂಚಿದ ನೀರಜ್ ಕುಮಾರ್ ಮತ್ತು ಪ್ರಶಾಂತ್ ಕುಮಾರ್ ಶರವೇಗದ ದಾಳಿಯ ಮುಂದೆ ಯು ಮುಂಬಾ ಮಣಿಯಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಪಟ್ನಾ ತಂಡವು 43–23ರಿಂದ ಯು ಮುಂಬಾ ಎದುರು ಜಯಭೇರಿ ಬಾರಿಸಿತು.

ಆರಂಭದಿಂದಲೇ ಪಂದ್ಯದ ಮೇಲೆ ಪಟ್ನಾ ತಂಡವು ಹಿಡಿತ ಸಾಧಿಸಿತು. ಎಲ್ಲ ವಿಭಾಗಗಳಲ್ಲಿಯೂ ಮೇಲುಗೈ ಸಾಧಿಸಿತು. ಅರ್ಧವಿರಾಮದ ವೇಳೆಗೆ ಪಟ್ನಾ ತಂಡವು 19–9ರಿಂದ ಮುನ್ನಡೆ ಸಾಧಿಸಿತು.

ವಿರಾಮದ ನಂತರವೂ ಮೇಲುಗೈ ಸಾಧಿಸಿದ ಪಟ್ನಾ ಒಟ್ಟು 20 ಪಾಯಿಂಟ್‌ಗಳ ಅಂತರದಲ್ಲಿ ಗೆದ್ದಿತು. ನಿರಜ್ ಕುಮಾರ್ ಎಂಟು ಅಂಕಗಳನ್ನು ಗಳಿಸಿದರು.

ರೇಡಿಂಗ್‌ನಲ್ಲಿ ನಾಯಕ ಪ್ರಶಾಂತ್ ಮತ್ತು ಸಚಿನ್ ತಲಾ ಏಳು ಅಂಕಗಳನ್ನು ಗಳಿಸಿ ತಂಡವನ್ನು ಜಯದತ್ತ ಮುನ್ನಡೆಸಿದರು. ಯು ಮುಂಬಾ ತಂಡದ ರೇಡರ್ ಅಭಿಷೇಕ್ ಕುಮಾರ್ ಎಂಟು ಅಂಕಗಳನ್ನು ಗಳಿಸಿದರು.

**ಗುಜರಾತ್ ಜಯಭೇರಿ:** ಆಲ್‌ರೌಂಡರ್ ರಾಕೇಶ್ ಕುಮಾರ್ ಮಿಂಚಿನ ಆಟದ ಬಲದಿಂದ ಗುಜರಾತ್ ಜೈಂಟ್ಸ್ ತಂಡವು ಜಯಭೇರಿ ಮೊಳಗಿಸಿತು.

ರಾತ್ರಿ ನಡೆದ ಮತ್ತೊಂದು ಪಂದ್ಯದಲ್ಲಿ ಗುಜರಾತ್ 40–22 ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು.

ರಾಕೇಶ್ ಗಳಿಸಿದ 16 ಪಾಯಿಂಟ್‌ಗಳು ಗುಜರಾತ್ ತಂಡದ ಈ ಅಮೋಘ ಸಾಧನೆಗೆ ನೆರವಾಯಿತು. ತೆಲುಗು ಟೈಟನ್ಸ್ ತಂಡದ ರಜನೀಶ್ 12 ಪಾಯಿಂಟ್ಸ್ ಗಳಿಸಿದರು.


ಗುಜರಾತ್ ಜೈಂಟ್ಸ್ ತಂಡದ ರಾಕೇಶ್ ಸಂಗ್ರೋಯ ತೆಲುಗು ಟೈಟನ್ಸ್ ತಂಡದ ಆವರಣದಿಂದ ಪಾಯಿಂಟ್ಸ್ ಗಳಿಸಿದ ವಾಪಸಾಗಲು ಪ್ರಯತ್ನಿಸಿದ ಸಂದರ್ಭ –ಪ್ರೊ ಕಬಡ್ಡಿ ಮೀಡಿಯಾ ಚಿತ್ರ

**ಇಂದಿನ ಪಂದ್ಯ (ರಾತ್ರಿ)**

ಹರಿಯಾಣ ಸ್ಟೀಲರ್ಸ್ Vs ಯು.ಪಿ ಯೋಧಾ 7.30
ಬೆಂಗಳೂರು ಬುಲ್ಸ್ Vs ದಬಂಗ್ ಡೆಲ್ಲಿ 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

**ಪಾಯಿಂಟ್ಸ್ ಪಟ್ಟಿ**

| ತಂಡ | ಪಂದ್ಯ | ಜಯ | ಸೋಲು | ಟೈ | ಪಾಯಿಂಟ್ಸ್ |
|---|---|---|---|---|---|
| ಪಟ್ನಾ ಪೈರೇಟ್ಸ್ | 8 | 6 | 1 | 1 | 34 |
| ದಬಂಗ್ ಡೆಲ್ಲಿ | 8 | 5 | 1 | 2 | 32 |
| ಬೆಂಗಳೂರು ಬುಲ್ಸ್ | 8 | 5 | 2 | 1 | 28 |
| ತಮಿಳ್ ತಲೈವಾಸ್ | 8 | 3 | 1 | 4 | 27 |
| ಯು ಮುಂಬಾ | 8 | 3 | 2 | 3 | 25 |
| ಜೈಪುರ್ ಪಿಂಕ್ ಪ್ಯಾಂಥರ್ಸ್ | 8 | 4 | 4 | - | 23 |
| ಗುಜರಾತ್ ಜೈಂಟ್ಸ್ | 8 | 2 | 4 | 2 | 20 |
| ಯುಪಿ ಯೋಧಾ | 8 | 2 | 4 | 2 | 20 |
| ಹರಿಯಾಣ ಸ್ಟೀಲರ್ಸ್ | 8 | 3 | 4 | 1 | 20 |
| ಬೆಂಗಾಲ್ ವಾರಿಯರ್ಸ್ | 8 | 3 | 5 | - | 17 |
| ಪುಣೇರಿ ಪಲ್ಟನ್ | 8 | 3 | 5 | - | 16 |
| ತೆಲುಗು ಟೈಟನ್ಸ್ | 8 | - | 6 | 2 | 10 |

(ಮಂಗಳವಾರದ ಪಂದ್ಯಗಳ ಅಂತ್ಯಕ್ಕೆ)

## ಬೆಂಗಳೂರು ವಿವಿ ಜಯಭೇರಿ

**ಬೆಂಗಳೂರು:** ಹೈದರಾಬಾದ್‌ನ ಜೆಎನ್‌ಟಿಯು ಎದುರು ಜಯ ಸಾಧಿಸಿದ ಬೆಂಗಳೂರು ವಿವಿ ತಂಡ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಪುರುಷರ ಟೆನಿಸ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಹಂತ ಪ್ರವೇಶಿಸಿದೆ. ಚೆನ್ನೈಯಲ್ಲಿ ನಡೆಯುತ್ತಿರುವ ಟೂರ್ನಿಯ ಎರಡನೇ ಸುತ್ತಿನಲ್ಲಿ ಬೆಂಗಳೂರು ತಂಡ 3–0ಯಿಂದ ಜೆಎನ್‌ಟಿಯು ವಿರುದ್ಧ ಜಯ ಗಳಿಸಿತು.


ಮೊದಲ ಸಿಂಗಲ್ಸ್‌ನಲ್ಲಿ ಸುರಾನ ಕಾಲೇಜಿನ ರಾಘವೇಂದ್ರ ಶಿಂಧೆ ಬೃಹತ್ ಕಳೇರು ವಿರುದ್ಧ 9–7ರಲ್ಲಿ ಜಯ ಗಳಿಸಿದರು. ಎರಡನೇ ಸಿಂಗಲ್ಸ್‌ನಲ್ಲಿ ಸುರಾನ ಕಾಲೇಜಿನ ನಿನಾದ್ ರವಿ 8–4ರಲ್ಲಿ ಸೈಯದ್ ಕರೀಮ್ ವಿರುದ್ಧ ಗೆದ್ದರು. ಡಬಲ್ಸ್‌ನಲ್ಲಿ ನಿನಾದ್ ರವಿ ಮತ್ತು ಸುರಾನ ಕಾಲೇಜಿನವರೇ ಆದ ನಿಶಿತ್ ನವೀನ್ ಜೋಡಿ ಸೈಯದ್ ಕರೀಂ ಮತ್ತು ಬೃಹತ್ ಕಳೇರು ಅವರನ್ನು ಮಣಿಸಿದರು.

ಮೊದಲ ಸುತ್ತಿನಲ್ಲಿ ಆಂಧ್ರಪ್ರದೇಶದ ಎಸ್‌ಆರ್‌ಎಂ ವಿವಿಯನ್ನು ಬೆಂಗಳೂರು ತಂಡ 3–1ರಲ್ಲಿ ಜಯ ಗಳಿಸಿದರು. ಮೊದಲ ಸಿಂಗಲ್ಸ್‌ನಲ್ಲಿ ನಿಶಿತ್ ನವೀನ್ ಅವರು ಪ್ರೀತಂ ವಿರುದ್ಧ ಸೋತರು. ಎರಡನೇ ಸಿಂಗಲ್ಸ್‌ನಲ್ಲಿ ನಿನಾದ್ ರವಿ ಅವರು ಜಿಕೆವಿ ಮಣಿಕಂಠ ವಿರುದ್ಧ ಗೆದ್ದರು. ಡಬಲ್ಸ್‌ನಲ್ಲಿ ನಿನಾದ್ ರವಿ ಮತ್ತು ಆರ್ಯ ಆರ್.ಆರ್ ಜೋಡಿ ವಿ.ಪ್ರೀತಂ ಮತ್ತು ಮಣಿಕಂಠ ವಿರುದ್ಧ ಜಯ ಗಳಿಸಿದರು. ರಿವರ್ಸ್ ಸಿಂಗಲ್ಸ್‌ನಲ್ಲಿ ಪ್ರೀತಂ ವಿರುದ್ಧ ನಿನಾದ್ ರವಿ ಜಯ ಗಳಿಸಿದರು.



ಹೊಟ್ಟೆನೋವು, ಗ್ಯಾಸ್ ಟ್ರಬಲ್, ಆ್ಯಸಿಡಿಟಿ, ಅಜೀರ್ಣ, ವಾಂತಿ, ಎದೆ ಉರಿ, ಹುಳಿತೇಗು, ಹಸಿವಿಲ್ಲದಿರುವುದು, ನಿದ್ರಾಹೀನತೆ, ಬೆನ್ನುನೋವು, ಕೆಲಸದಲ್ಲಿ ನಿರಾಸಕ್ತಿ ಎಲ್ಲ ತರದ ಉದರ ವ್ಯಾದಿ ಸಮಸ್ಯೆಗಳಿಗೆ ಕೇರಳದ ಶಂಕರ ಫಾರ್ಮಸಿಯವರಿಂದ ತಯಾರಿಸಲ್ಪಟ್ಟ 150 ವರ್ಷಗಳ ಆಯುರ್ವೇದ ಸಂಪ್ರದಾಯ ಕುಟುಂಬದ ಪರಿಣಾಮಕಾರಿ ದಿವ್ಯ ಔಷಧಿ ಅಮೃತ ಬಿಂದು. ಅಮೃತ ಬಿಂದುವಿನಿಂದ ಗರಿಷ್ಠ ಪೈಲೋರಿಯನ್ನು ಪರಿಣಾಮಕಾರಿಯಾಗಿ ಹತೋಟಿಗೆ ತರಬಹುದೆಂದು ಸಂಶೋಧನೆಯಿಂದ ಸಾಬೀತಾಗಿದೆ.

ದೂ. 8762226000
aj_healthcare@yahoo.co.in
ಎಲ್ಲಾ ಮೆಡಿಕಲ್ ಅಂಗಡಿಗಳಲ್ಲಿ ದೊರೆಯುತ್ತದೆ.



Range starts at ₹10.99 lakhs* | Special Benefit for Corporate/Govt. Institutions - ₹15 000 OR Loyalty Bonus - ₹15 000 | Exchange Benefit - ₹25 000*
Available in 1.0 TSI & 1.5 TSI engines | 25.4 Infotainment System | Full LED Bi Module Headlamps | Ventilated Front Seats | Electric Sunroof
Simplify your ownership with the MyŠKODA App | MyŠKODA
Toll-free 1800 2700 260
www.skoda-auto.co.in
MyŠKODA CONNECT | ŠKODA Certified Pre-Owned | POWERED BY TSI

**Showrooms: Bengaluru** (Jakkur): PPS Motors: 8800776947; **Bengaluru** (HSR Layout): TAFE Access: 7874223333; **Bengaluru** (St. Marks Road): TAFE Access: 7874223333; **Bengaluru** (Sadashivanagar): PPS Motors: 8800776947; **Bengaluru** (Mahadevpura): Raja Motors: 18003091099; **Mangalore:** TAFE Access: 7874334444; **Hubli:** Priti Cars: 7518701229/9902056184; **Mysore:** Palace ŠKODA: 0821-6615555
**Branches: Bengaluru** (Mysore Road): PPS Motors: 8800776947; **JP Nagar:** TAFE Access: 080-41000032; **Belgaum:** Priti Cars: 7518701222/9902056184; **Tumkur:** PPS Motors: 8800776947; **Mysore:** Palace ŠKODA: 0821-6615555/6366955730; **Udupi:** TAFE Access: 7874334444; **Shimoga:** TAFE Access: 7874334444; **Bellary:** PPS Motors: 8800776947
**Service Centres: Bengaluru** (Hennur Road): PPS Motors: 8800776947; **Bengaluru** (Off Hosur Road): TAFE Access: 9591998570; **Bengaluru** (Sreerampura Okhlipuram): PPS Motors: 8800776947; **Bengaluru** (Mahadevpura): Raja Motors: 18003092099; **Mangalore:** TAFE Access: 9384822472; **Hubli:** Priti Cars: 9686205095; **Mysore:** Palace ŠKODA: 0821-6615555
**Compact Workshop:** Tumkur: PPS Motors: 8800776947

Book your ŠKODA KUSHAQ

*Credit at the sole discretion of the financer. EMI starting from ₹100/ Lac EMI for first 3 months & from 4th EMI ₹2 145/ Lac till the end of the tenor of 60 months. All offers are from the dealer. Corporate and loyalty offers cannot be clubbed. Exchange offer mentioned is for ŠKODA to ŠKODA exchange, a non-ŠKODA car may get lower exchange amount. All finance offers available are subject to fulfilment of eligibility criteria laid down by the respective finance company/bank. Delivery of the car is subject to stock availability. Specifications given differ from model to model. Accessories shown may not be a part of standard equipment. Always insist on ŠKODA parts and accessories available at authorised sales and service centres. Information relating to colours, prices, construction, technical details and equipment was valid at the time of issuance and these are subject to changes without any prior notice. All disputes are subject to Mumbai courts only. Terms & conditions apply.